ಭಾನುವಾರ, ಜನವರಿ 7, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಮಯ
ನವದೆಹಲಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ನಟಿ ಕತ್ರಿನಾ ಕೈಫ್ ಸೆಲ್ಫಿ ತೆಗೆದುಕೊಂಡರು



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟ

ಜಾತಿಗಣತಿ ವರದಿ ಸ್ವೀಕಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆ (ಜಾತಿಗಣತಿ) ವರದಿಯನ್ನು ತ್ವರಿತವಾಗಿ ಸ್ವೀಕರಿಸುವಂತೆ ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿತು.

ಒಕ್ಕೂಟದ ಅಧ್ಯಕ್ಷರೂ ಆಗಿರುವ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದ ನಿಯೋಗ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿತು. ನಿಯೋಗದಲ್ಲಿ ಹರಿಹರದ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಮಾದಾರ ಚನ್ನಯ್ಯ ಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ನಿಯೋಗದಲ್ಲಿದ್ದರು.

'ಬಲಾಢ್ಯ ಜಾತಿಗಳ ನಾಯಕರು ಜಾತಿ ಜನಗಣತಿ ವರದಿ ಸಲ್ಲಿಕೆಯಾಗದಂತೆ ಅಡ್ಡಿಪಡಿಸಲು ಯತ್ನಿಸುತ್ತಿದ್ದಾರೆ. ಅದಕ್ಕೆ ಅವಕಾಶ ನೀಡಬಾರದು. ಹಿಂದುಳಿದ ವರ್ಗಗಳ ಆಯೋಗದಿಂದ ವರದಿಯನ್ನು ಸ್ವೀಕರಿಸಿ, ಅದರಲ್ಲಿನ ಶಿಫಾರಸುಗಳನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕು' ಎಂದು ನಿಯೋಗ ಒತ್ತಾಯಿಸಿತು.

'ಎಚ್. ಕಾಂತರಾಜ ನೇತೃತ್ವದ ಆಯೋಗ ನಡೆಸಿರುವ ಸಮೀಕ್ಷೆ ಸರಿ ಇದ್ದರೂ ದುರುದ್ದೇಶದಿಂದ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದೆ. ಶೋಷಿತ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾದ ಸಾಮಾಜಿಕ ನ್ಯಾಯ ದೊರಕುತ್ತದೆ ಎಂಬ ಅಸೂಯೆ ಬಲಾಢ್ಯ ಸಮುದಾಯಗಳಲ್ಲಿರುವುದೇ ಇದಕ್ಕೆ ಕಾರಣ' ಎಂದು ಮಠಾಧೀಶರು ದೂರಿದರು.

ಬೇಡಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗದ ಅವಧಿಯನ್ನು ವಿಸ್ತರಿಸಲಾಗಿದೆ. ಕಾಂತರಾಜ ನೇತೃತ್ವದ ಆಯೋಗದ ವರದಿಯನ್ನೇ ಈಗ ಸಲ್ಲಿಸಲಾಗುವುದು ಎಂದು ಈಗಿನ ಆಯೋಗ ತಿಳಿಸಿದೆ. ಕಾನೂನು ತಜ್ಞರ ಸಲಹೆ ಪಡೆದು ಮುಂದುವರಿಯಲಾಗುವುದು' ಎಂದರು.

ಹಿಂದುಳಿದ ಮತ್ತು ದಲಿತ ಸಮುದಾಯಗಳ ಮಠಗಳಿಗೆ ಬೆಂಗಳೂರಿನಲ್ಲಿ ಜಮೀನು ಮಂಜೂರು ಮಾಡುವಂತೆ ಮಠಾಧೀಶರು ಮನವಿ ಮಾಡಿದರು. ಈ ಸಂಬಂಧ ತಹಶೀಲ್ದಾರ್‌ಗಳಿಂದ ವರದಿ ಪಡೆದು ಪರಿಶೀಲಿಸುವಂತೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗೆ ಮುಖ್ಯಮಂತ್ರಿಯವರು ದೂರವಾಣಿ ಮೂಲಕ ನಿರ್ದೇಶನ ನೀಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ. ದಯಾನಂದ ಭೇಟಿ ವೇಳೆ ಉಪಸ್ಥಿತರಿದ್ದರು.



ಹಿಂದುಳಿದ, ದಲಿತ ಮಠಾಧೀಶರ ಒಕ್ಕೂಟದ ಅಧ್ಯಕ್ಷರೂ ಆಗಿರುವ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿ ಮನವಿ ಸಲ್ಲಿಸಿತು. ವಿವಿಧ ಮಠಾಧೀಶರು ಹಾಗೂ ಶಾಸಕ ಈ. ತುಕಾರಾಂ ಈ ಸಂದರ್ಭದಲ್ಲಿ ಹಾಜರಿದ್ದರು

ಸುದ್ದಿ 2 ನಿಮಿಷ

ಭೂಮಿ ಬರೆಸಿಕೊಂಡ ರೇವಣ್ಣ ಕುಟುಂಬ: ಚಾಲಕ ಆರೋಪ

ಹಾಸನ: 'ಸಂಸದ ಪ್ರಜ್ವಲ್ ರೇವಣ್ಣ, ಭವಾನಿ ರೇವಣ್ಣ ಮತ್ತು ಶಾಸಕ ಎಚ್.ಡಿ.ರೇವಣ್ಣ ಅವರು ನನ್ನ ಹಾಗೂ ನನ್ನ ಪತ್ನಿ ಮೇಲೆ ಹಲ್ಲೆ ಮಾಡಿದ್ದಾರೆ. ನನ್ನನ್ನು ಮತ್ತು ಪತ್ನಿಯನ್ನು ಪೊಲೀಸರ ಸಹಾಯದಿಂದ ಅಕ್ರಮವಾಗಿ ಕೂಡಿ ಹಾಕಿ, ನನ್ನ 13 ಎಕರೆ ಭೂಮಿಯನ್ನು ಒತ್ತಾಯದಿಂದ ಬರೆಸಿಕೊಂಡಿದ್ದಾರೆ' ಎಂದು ಪ್ರಜ್ವಲ್ ರೇವಣ್ಣ ಅವರ ಕಾರು ಚಾಲಕರಾಗಿದ್ದ ಕಾರ್ತಿಕ್ ಆರೋಪಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಬೆದರಿಕೆಯೊಡ್ಡಿ, ನನ್ನ ಖಾಲಿ ಚೆಕ್‌ಗಳಿಗೆ ಸಹಿ ಹಾಕಿಸಿಕೊಂಡಿದ್ದಾರೆ. ಪತ್ನಿ ಮೇಲೆ ನಡೆದ ಹಲ್ಲೆಯಿಂದಾಗಿ ಗರ್ಭಪಾತವಾಗಿದೆ. ಭವಾನಿ ರೇವಣ್ಣ ಅವರೇ ನನ್ನ ಪತ್ನಿ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಬಗ್ಗೆ ನ್ಯಾಯ ದೊರಕಿಸಿಕೊಡಿ ಎಂದರೂ ಪೊಲೀಸರು ಕಿವಿಗೊಡುತ್ತಿಲ್ಲ' ಎಂದು ದೂರಿದರು.

'ನನ್ನನ್ನು ಮತ್ತು ನನ್ನ ಪತ್ನಿಯನ್ನು ಹೊಳೆನರಸೀಪುರ ಪ್ರವಾಸಿ ಮಂದಿರದಲ್ಲಿ ಅಕ್ರಮವಾಗಿ, ಪೊಲೀಸರೇ ಬೆಂಗಾವಲಿನಲ್ಲಿ ನಿಂತು ಎರಡು ದಿನಗಳು ಕೂಡಿಟ್ಟಿದ್ದರು. ಬಳಿಕ ಪತ್ನಿಯನ್ನು ಕೂಡಿ ಹಾಕಿ, ನನ್ನನ್ನು ಮಾತ್ರ ಉಪ ನೋಂದಣಾಧಿಕಾರಿ ಕಚೇರಿಗೆ ಕರೆದುಕೊಂಡು ಬಂದು ಜಮೀನು ಬರೆಸಿಕೊಂಡಿದ್ದಾರೆ' ಎಂದು ದೂರಿದರು.

'ಗರ್ಭಪಾತದ ಕುರಿತು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ತನಿಖೆ ನಡೆಸುತ್ತಿದೆ. ಅವರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆದರೆ, ಹಾಸನ ಪೊಲೀಸರು ಪ್ರಕರಣ ದಾಖಲಿಸಲು ಮುಂದಾಗುತ್ತಿಲ್ಲ' ಎಂದರು.

'ದೂರು ನೀಡಿರುವ ಕಾರ್ತಿಕ್ ಪತ್ನಿ ಶಿಲ್ಪಾ ಅವರಿಗೆ ಶಿಕ್ಷಣ ಸೇರಿದಂತೆ ಎಲ್ಲ ರೀತಿಯಿಂದಲೂ ಭವಾನಿ ಸಹಾಯ ಮಾಡಿದ್ದಾರೆ. ಇದನ್ನು ಸ್ಮರಿಸದೇ ಈಗ ಆರೋಪ ಮಾಡುತ್ತಿರುವುದರ ಹಿಂದೆ ರಾಜಕೀಯವಲ್ಲದೇ ಮತ್ತೇನೂ ರಾಣವಿಲ್ಲ' ಎಂದು ಎಚ್.ಡಿ. ರೇವಣ್ಣ ಪ್ರತಿಕ್ರಿಯಿಸಿದರು.

ದೇವೇಗೌಡರಿಗೆ ಸೋಕಿದ ಬಿಜೆಪಿ ಗಾಳಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವ ರಾಜಕೀಯ ಪಕ್ಷ ಕೂಡಾ ಮತ್ತೊಂದು ರಾಜಕೀಯ ಪಕ್ಷದ ಅಂತ್ಯವನ್ನು ಬಯಸಬಾರದು. 'ದೇಶವನ್ನು ಕಾಂಗ್ರೆಸ್ ಮುಕ್ತ ಮಾಡುತ್ತೇವೆ' ಎಂಬ ಸೊಕ್ಕಿನ ಮಾತುಗಳನ್ನು ಆಡುತ್ತಿರುವ ಬಿಜೆಪಿಯ ಗಾಳಿ ದೇವೇಗೌಡರಿಗೂ ಸೋಕಿದಂತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಕಿದ್ದಾರೆ.

'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಾಯಕತ್ವದಲ್ಲೇ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಂತ್ಯ ಕಾಣಲಿದೆ' ಎಂಬ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಮಾತಿಗೆ 'ಎಕ್ಸ್' ಮೂಲಕ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ಇದು ಸಂಗ ದೋಷದ ಫಲ' ಎಂದಿದ್ದಾರೆ.

'ವಯಸ್ಸಿನಲ್ಲಿ ದೊಡ್ಡವರಾದ ದೇವೇಗೌಡರ ಈ ಶಾಪವನ್ನು ಆಶೀರ್ವಾದ ಎಂದೇ ಸ್ವೀಕರಿಸಿದ್ದೇನೆ. ಅವರಿಗೆ, ಅವರ ಪಕ್ಷಕ್ಕೆ ದೀರ್ಘ ಕಾಲ ಆಯುರಾರೋಗ್ಯವನ್ನು ಪರಮಾತ್ಮ ಕರುಣಿಸಲಿ ಎಂದು ಹಾರೈಸುತ್ತೇನೆ' ಎಂದಿದ್ದಾರೆ.

'ರಾಜಕೀಯ ಭಿನ್ನಾಭಿಪ್ರಾಯ ಏನೇ ಇರಲಿ, ಹಿರಿಯರು ಕಿರಿಯರಿಗೆ ಆಶೀರ್ವಾದ ಮಾಡಬೇಕು, ಶಾಪ ಕೊಡಬಾರದು. ದಶಕಗಳ ಕಾಲ ಜಾತ್ಯತೀತತೆಯ ಕಿರೀಟ ಧರಿಸಿಕೊಂಡು ಬಂದಿದ್ದ ಗೌಡರು, ಇಳಿಗಾಲದಲ್ಲಿ ಅದನ್ನು ಕಳಗೆಸೆದು ಕೋಮುವಾದಿ ಕಿರೀಟ ಧರಿಸಿಕೊಳ್ಳಬೇಕಾಗಿ ಬಂದಿರುವುದರಿಂದ ನೊಂದು ಹತಾಶೆಯಿಂದ ಇಂತಹ ಹೇಳಿಕೆ ನೀಡಿರಬಹುದೆಂದು ಭಾವಿಸಿದ್ದೇನೆ. ತಾವು ಹೇಳಿದ್ದು ತಪ್ಪು ಎಂದು ಅವರಿಗೆ ಪ್ರಾಮಾಣಿಕವಾಗಿ ಅನಿಸಿದರೆ ತಮ್ಮ ಹೇಳಿಕೆಯನ್ನು ಹಿಂದಕ್ಕೆ ಪಡೆಯಬಹುದು' ಎಂದೂ ಹೇಳಿದ್ದಾರೆ.

'ಜೆಡಿಎಸ್ 'ಬಿಜೆಪಿಯ ಬಿ ಟೀಮ್' ಎಂದು ಹಿಂದಿನಿಂದಲೇ ಹೇಳಿಕೊಂಡು ಬಂದಿದ್ದೇನೆ. ನನ್ನ ಮಾತು ಒಪ್ಪಿಕೊಂಡು ತಮ್ಮ ಸೈದ್ಧಾಂತಿಕ ನಿಲುವು ಸ್ಪಷ್ಟಪಡಿಸಿದ್ದಕ್ಕೆ ಜೆಡಿಎಸ್ ಪಕ್ಷವನ್ನು ಅಭಿನಂದಿಸುತ್ತೇನೆ. ಈ ಪಕ್ಷದ ಜಾತ್ಯತೀತ ಮುಖವನ್ನು ನಿಜ ಎಂದು ನಂಬಿ ಒಂದಷ್ಟು ಜಾತ್ಯತೀತ ಮತದಾರರು ದಾರಿ ತಪ್ಪುವುದನ್ನು ಜೆಡಿಎಸ್ ಪಕ್ಷದ ಈ ನಿಲುವು ತಪ್ಪಿಸಿದೆ. ಇದು ಮುಂದಿನ ಚುನಾವಣೆಯನ್ನು ಜಾತ್ಯತೀತ ಮತ್ತು ಕೋಮುವಾದಿ ಶಕ್ತಿಗಳ ನಡುವಿನ ನೇರ ಸಂಘರ್ಷವಾಗಿ ಪರಿವರ್ತಿಸಿದೆ' ಎಂದೂ ಅಭಿಪ್ರಾಯಪಟ್ಟಿದ್ದಾರೆ.

'ಡಿಸಿಎಂ: ಹೈಕಮಾಂಡ್‌ನಿಂದ ಉತ್ತರ'

ನಾನು ಯಾವುದೇ ಉತ್ತರ ನೀಡುವುದಿಲ್ಲ: ಡಿ.ಕೆ. ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಚ್ಚುವರಿ ಉಪ ಮುಖ್ಯಮಂತ್ರಿ (ಡಿಸಿಎಂ) ಹುದ್ದೆ ವಿಚಾರವಾಗಿ ಹೈಕಮಾಂಡ್ ನಾಯಕರು ಉತ್ತರ ನೀಡುತ್ತಾರೆ. ಆ ಬಗ್ಗೆ ನಾನು ಉತ್ತರ ನೀಡುವುದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮೂರು ಡಿಸಿಎಂ ಹುದ್ದೆ ಸೃಷ್ಟಿಸಬೇಕೆಂಬ ವಿಚಾರವಾಗಿ ನಡೆಯುತ್ತಿರುವ ಚರ್ಚೆಯ ಬಗ್ಗೆ ಸುದ್ದಿಗಾರರು ಶನಿವಾರ ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಲೋಕಸಭೆ ಚುನಾವಣೆ ಗೆಲ್ಲುವುದು ಗುರಿ. ಅದಕ್ಕಾಗಿ ಎಲ್ಲರೂ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ' ಎಂದಷ್ಟೇ ಹೇಳಿದರು.

'ಮೂವರಿಗೆ ಡಿಸಿಎಂ ಹುದ್ದೆ ನೀಡುವಂತೆ ಮನವರಿಕೆ ಮಾಡಲು ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ನಿರ್ಧರಿಸಿದ್ದೇವೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಶುಕ್ರವಾರ ಹೇಳಿದ್ದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗುರುವಾರ ರಾತ್ರಿ ನಡೆದ ಭೋಜನ ಕೂಟದಲ್ಲಿ ಸಚಿವರಾದ ಜಿ. ಪರಮೇಶ್ವರ, ಎಚ್.ಸಿ. ಮಹದೇವಪ್ಪ ಮತ್ತು ರಾಜಣ್ಣ ಈ ಬಗ್ಗೆ ಚರ್ಚೆ ನಡೆಸಿದ್ದರು.

ರಾಜಣ್ಣ ನೀಡಿರುವ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಮೂವರು ಡಿಸಿಎಂ ನೇಮಕ ವಿಚಾರ ಗಾಳಿ ಸುದ್ದಿ. ಈ ಕುರಿತು ಎಲ್ಲಿಯೂ ಚರ್ಚೆ ನಡೆದಿಲ್ಲ' ಎಂದರು.

'ಡಿಸಿಎಂ ನೇಮಕದ ಬಗ್ಗೆ ಸಚಿವರು ವೈಯಕ್ತಿಕ ಅಭಿಪ್ರಾಯ ಹೇಳಿರುತ್ತಾರೆ. ರಾಜಣ್ಣ ಅವರ ಹೇಳಿಕೆಯೂ ಅಷ್ಟೆ. ಅವರ ದೃಷ್ಟಿಯಲ್ಲಿ ಒಳ್ಳೆಯದೂ ಇರಬಹುದು, ಹೀಗಾಗಿ ಹೇಳಿರುತ್ತಾರೆ. ಈ ಬಗ್ಗೆ ಹೈಕಮಾಂಡ್ ನಿರ್ಧಾರವೇ ನನ್ನ ನಿರ್ಧಾರ' ಎಂದರು.

ಸಚಿವರ ದೆಹಲಿ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಒಬ್ಬೊಬ್ಬರು ಒಂದೊಂದು ಕಾರಣ ಇಟ್ಟುಕೊಂಡು ದೆಹಲಿಗೆ ಹೋಗುತ್ತಾರೆ. ಈ ವೇಳೆ ಪಕ್ಷದ ಕೇಂದ್ರ ಕಚೇರಿಗೆ ತೆರಳಿ ರಾಜ್ಯ ಉಸ್ತುವಾರಿಯನ್ನು ಭೇಟಿ ಮಾಡುವುದು, ಸಾಧ್ಯವಾದರೆ ಅಧ್ಯಕ್ಷರ ಜೊತೆ ಚರ್ಚಿಸುತ್ತಾರೆ' ಎಂದರು.

ಕೇಳುವುದರಲ್ಲಿ ತಪ್ಪೇನೂ ಇಲ್ಲ: ಸಚಿವ ಮಹದೇವಪ್ಪ

'ಎಲ್ಲ ಸಮುದಾಯಗಳಿಗೆ ಅವಕಾಶ ಸಿಗಬೇಕೆಂಬ ಕಾರಣಕ್ಕೆ ಹೆಚ್ಚುವರಿ ಡಿಸಿಎಂ ಕೇಳುವುದರಲ್ಲಿ ತಪ್ಪೇನೂ ಇಲ್ಲ' ಎಂದು ಎಚ್.ಸಿ. ಮಹದೇವಪ್ಪ ತಿಳಿಸಿದರು.

'ಕೆ.ಎನ್. ರಾಜಣ್ಣ ಒಬ್ಬ ಹಿರಿಯ ನಾಯಕ. ರಾಜಕೀಯ ವಿಶ್ಲೇಷಿಸಿ ಹೇಳಿದ್ದಾರೆ. ಆದರೆ, ತೀರ್ಮಾನ ಮಾಡುವುದು ಹೈಕಮಾಂಡ್' ಎಂದರು.

'ಲೋಕಸಭೆ ಚುನಾವಣೆಗೆ ಸಚಿವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ಆಗಿಲ್ಲ. ಹೆಚ್ಚು ಸ್ಥಾನ ಗೆಲ್ಲಬೇಕಲ್ಲವೇ? ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೋ ನೋಡಬೇಕು. ಈ ಬಗ್ಗೆ ಚರ್ಚಿಸಲು ಎಐಸಿಸಿ ವೀಕ್ಷಕರು ಇದೇ 10ರಂದು ರಾಜ್ಯಕ್ಕೆ ಬರಲಿದ್ದಾರೆ' ಎಂದರು.

'ಯಾರೋ ಹೇಳಿಕೊಟ್ಟು ಮಾತನಾಡಿಸುತ್ತಿಲ್ಲ'

ಹಾಸನ: 'ಮೂವರು ಡಿಸಿಎಂ ಮಾಡುವಂತೆ ನಾನು ಹೇಳಿರುವುದು ಯಾರ ಪರ, ವಿರುದ್ಧ ಅಲ್ಲ ಅಥವಾ ಯಾರೋ ಹೇಳಿಕೊಟ್ಟು ಮಾತಾಡಿಸುತ್ತಿದ್ದಾರೆಂದೂ ಅಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಶನಿವಾರ ಹೇಳಿದರು.

ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಮೂವರು ಡಿಸಿಎಂ ಮಾಡಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸಹಾಯವಾಗಲಿದೆ ಎಂಬ ದೃಷ್ಟಿಯಿಂದ ಹೇಳಿದ್ದೇನೆ. ಮಾಡುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟಿದ್ದು, ನಾನು ಹೇಳಿದಾಕ್ಷಣ ಆಗಿ ಬಿಡುತ್ತಾ' ಎಂದು ಪ್ರಶ್ನಿಸಿದರು.

'ಛತ್ತೀಸಗಢ, ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂತು. ಅಲ್ಲಿ ಮೂವರು ಡಿಸಿಎಂ ಮಾಡಿದ್ದಾರೆ. ನಮ್ಮಲ್ಲೂ ಮಾಡಿ ಎಂದು ಸಲಹೆ ನೀಡಿದ್ದೇನಷ್ಟೆ' ಎಂದರು.

ಡಿಸಿಎಂ ಆರಾಗಲಿ, ಸಮಸ್ಯೆ ಏನಿದೆ: ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಹಿರಿಯ ನಾಯಕರು ಪ್ರಸ್ತಾಪಿಸಿದ ಮೂವರು ಉಪ ಮುಖ್ಯಮಂತ್ರಿ ಹುದ್ದೆ ಅವರ ವೈಯಕ್ತಿಕ ಅಭಿಪ್ರಾಯ. ಹೈಕಮಾಂಡ್ ಮೂರಲ್ಲ (ಡಿಸಿಎಂ ಹುದ್ದೆಗಳು) ಆರು ಎಂದರೆ ಆರೂ ಆಗುತ್ತದೆ. ಅದರಲ್ಲಿ ಸಮಸ್ಯೆ ಏನಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಇಲ್ಲಿ ಶನಿವಾರ ಮಾಧ್ಯಮದವರು ಕೇಳಿದ ಮೂರು ಡಿಸಿಎಂ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ವರಿಷ್ಠರು ಎಲ್ಲರಿಗೂ ಅಚ್ಚುಕಟ್ಟಾದ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದಾರೆ. ಹೆಚ್ಚಿನ ಹೊಣೆಗಾರಿಕೆ ಹಂಚಿಕೆಯಾಗಬೇಕಾದರೆ ಹೈಕಮಾಂಡ್ ನಿರ್ಧರಿಸಲಿದೆ. ಹೈಕಮಾಂಡ್ ಹೇಳಿದರೆ ಸಚಿವ ಸಂಪುಟದ ಎಲ್ಲ ಸಚಿವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವರು' ಎಂದರು.

'ಡಿಕೆಶಿ ಕಟ್ಟಿಹಾಕಲು ಸಿ.ಎಂ ಚಿತಾವಣೆ'

ಉಡುಪಿ: 'ಡಿ.ಕೆ.ಶಿವಕುಮಾರ್ ಅವರನ್ನು ಕಟ್ಟಿಹಾಕಲು ಸಿದ್ದರಾಮಯ್ಯ ಚಿತಾವಣೆ ನಡೆಸಿದ್ದು, ಮೂವರು ಉಪ ಮುಖ್ಯಮಂತ್ರಿಗಳ ನೇಮಕ ವಿಚಾರ ಮುನ್ನೆಲೆಗೆ ತಂದಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಶನಿವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಡಿಕೆಶಿ ಅವರನ್ನು ನಿಯಂತ್ರಣದಲ್ಲಿರಿಸುವ ಬಗ್ಗೆ ಶುಕ್ರವಾರ ದಲಿತ ಮುಖಂಡರೆಲ್ಲ ಒಟ್ಟಾಗಿ ಸಭೆ ನಡೆಸಿದ್ದಾರೆ. ಮುಂದೆ ಡಿಕೆಶಿಗೆ ರಾಜಕೀಯ ಹಿನ್ನಡೆಯಾದರೆ ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗರು ನೇರ ಕಾರಣ ಎಂದರು

ಮೋದಿ ಸಂಪುಟಕ್ಕೆ ಎಚ್‌ಡಿಕೆ?

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟಕ್ಕೆ ಸೇರುವ ಸಾಧ್ಯತೆ ದಟ್ಟವಾಗಿದೆ.

ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್‌ಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವ ಮೂಲಕ ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಇರಾದೆ ಬಿಜೆಪಿ ವರಿಷ್ಠರದ್ದಾಗಿದೆ. ರಾಮಮಂದಿರ ಉದ್ಘಾಟನೆ ಬಳಿಕ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ಐವರು ಹೊಸದಾಗಿ ಸೇರ್ಪಡೆಯಾಗಲಿದ್ದಾರೆ ಎಂದು ಮೂಲಗಳು ಹೇಳಿವೆ.

ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ ನರೇಂದ್ರ ಸಿಂಗ್ ತೋಮರ್, ಗೆದ್ದ ಬಳಿಕ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆ ಬಳಿಕ, ಸಂಪುಟ ದರ್ಜೆಯ ಖಾತೆ ಖಾಲಿ ಇದೆ. ಕೃಷಿ ಖಾತೆಯ ಬಗ್ಗೆ ಕುಮಾರಸ್ವಾಮಿ ಒಲವು ಹೊಂದಿದ್ದು, ಸಂಪುಟಕ್ಕೆ ಸೇರಿದರೆ ಅದೇ ಖಾತೆ ಸಿಗುವ ಸಂಭವ ಇದೆ ಎಂಬ ಚರ್ಚೆಯೂ ನಡೆದಿದೆ. ಕೃಷಿ ಖಾತೆ ರಾಜ್ಯ ಸಚಿವರಾಗಿ ರಾಜ್ಯದವರೇ ಆದ ಶೋಭಾ ಕರಂದ್ಲಾಜೆ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಕುಮಾರಸ್ವಾಮಿ ಕೃಷಿ ಸಚಿವರಾದರೆ, ಶೋಭಾ ಖಾತೆ ಬದಲಾಗುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.

ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ಬಳಿಕ ಬಿಜೆಪಿ–ಜೆಡಿಎಸ್ ಮೈತ್ರಿಯ ಬಗ್ಗೆ ಚರ್ಚೆ ಜೋರಾಗಿ ನಡೆದಿತ್ತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಕುಮಾರಸ್ವಾಮಿ ಅವರನ್ನು ಕೂರಿಸುವ ಇಂಗಿತ ಪ್ರಧಾನಿ ಮೋದಿ ಅವರದ್ದಾಗಿತ್ತು. 'ಎರಡು ಬಾರಿ ಮುಖ್ಯಮಂತ್ರಿ, ಒಮ್ಮೆ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮತ್ತೆ ವಿರೋಧ ಪಕ್ಷದ ನಾಯಕ ಸ್ಥಾನ ಬೇಡ. ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳಿ' ಎಂದು ಕುಮಾರಸ್ವಾಮಿ, ಬಿಜೆಪಿ ವರಿಷ್ಠರಿಗೆ ಹೇಳಿದ್ದರು. ಆಗ ಬಿಜೆಪಿ ನಾಯಕರು ಅದಕ್ಕೆ ಒಪ್ಪಿಗೆ ಸೂಚಿಸಿರಲಿಲ್ಲ.

ನಂತರದ ಬೆಳವಣಿಗೆಯಲ್ಲಿ, ಎನ್‌ಡಿಎ ಮೈತ್ರಿಕೂಟದ ಭಾಗವಾಗಿರಲು ಜೆಡಿಎಸ್ ನಿರ್ಣಯ ಕೈಗೊಂಡಿತ್ತು. ಎಚ್.ಡಿ. ದೇವೇಗೌಡರು ಕುಟುಂಬ ಸಮೇತರಾಗಿ ಪ್ರಧಾನಿ ಮೋದಿ ಅವರನ್ನು ಇತ್ತೀಚೆಗೆ ಭೇಟಿಯಾಗಿದ್ದರು. ಅದಾದ ಬಳಿಕ, ಹೊಸ ರಾಜಕೀಯ ಬೆಳವಣಿಗೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.


ಮಹಿಳೆ ವಿವಸ್ತ್ರ ಘಟನೆ: ಜಾಮೀನು ತಿರಸ್ಕೃತ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿನಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ ಪ್ರಕರಣದಲ್ಲಿ ಆರೋಪಿಯಾದ 33 ವರ್ಷದ ಮಹಿಳೆಯ ಜಾಮೀನು ಅರ್ಜಿಯನ್ನು ಇಲ್ಲಿನ 11ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿದೆ.

ಡಿ.11ರಂದು ಪ್ರೇಮಿಗಳಿಬ್ಬರು ಮನೆ ಬಿಟ್ಟು ಹೋದರು ಎಂಬ ಕಾರಣಕ್ಕೆ ಯುವತಿ ಮನೆಯವರು ಯುವಕನ ತಾಯಿಯನ್ನು ಬೆತ್ತಲೆ ಮಾಡಿ, ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ್ದರು. ಎಲ್ಲ 13 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಇದರಲ್ಲಿ 11ನೇ ಆರೋಪಿಯಾದ ಮಹಿಳೆಯೊಬ್ಬರು ಶನಿವಾರ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯ ತಿರಸ್ಕರಿಸಿದೆ. ಪ್ರಕರಣ ಸಿಐಡಿ ತನಿಖೆಯಲ್ಲಿದೆ.

'ಚುನಾವಣೆಯ ಸೋಲಿಗೆ ಪಕ್ಷದ ನಾಯಕರು ಕಾರಣ'

ಪ್ರಜಾವಾಣಿ ವಾರ್ತೆ



ವಿಜಯೇಂದ್ರ

ಚಾಮರಾಜನಗರ: '2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರದಿಂದ ದೂರ ಉಳಿಯಲು ಪಕ್ಷ ಅಥವಾ ಕಾರ್ಯಕರ್ತರು ಕಾರಣವಲ್ಲ. ನಾಯಕರು ಕಾರಣ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಶನಿವಾರ ಹೇಳಿದರು.

ಅಧ್ಯಕ್ಷರಾದ ಬಳಿಕ ಇದೇ ಮೊದಲ ಬಾರಿಗೆ ಜಿಲ್ಲೆಗೆ ಭೇಟಿ ನೀಡಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಗೆಲ್ಲುವುದಕ್ಕೆ ಮುಂಚೆ 'ನಮ್ಮ ಕಾರ್ಯಕರ್ತ', 'ನಾವು', 'ನಾವು' ಎಂದು ಮಾತನಾಡುತ್ತಿದ್ದ ಪಕ್ಷದ ಹಿರಿಯರು, ಗೆದ್ದ ನಂತರ 'ನಾನು', 'ನಾನು' ಎಂದು ಹೇಳಿಕೊಂಡು ಓಡಾಡಲು ಶುರುಮಾಡಿದರು. ಅಂದಿನಿಂದ ಪಕ್ಷಕ್ಕೆ ಹಿನ್ನಡೆಯಾಯಿತು' ಎಂದು ವಿಶ್ಲೇಷಿಸಿದರು.

'ನಮ್ಮದೇ ತಪ್ಪು ಮತ್ತು ಪಕ್ಷದಲ್ಲಾದ ವ್ಯತ್ಯಾಸಗಳಿಂದ ನಾವು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾಯಿತು' ಎಂದು ಹೇಳಿದರು.

'ಬಿಜೆಪಿ ವಿರೋಧ ಪಕ್ಷ ಆಗಿದ್ದಾಗಲೇ ಚೆನ್ನಾಗಿತ್ತೇನೋ' ಎಂದ ಅವರು, 'ಆಗ ಮುಖಂಡರು– ಕಾರ್ಯಕರ್ತರ ನಡುವಿನ ಸಂಬಂಧ ಚೆನ್ನಾಗಿತ್ತು. ಅಧಿಕಾರ ಸಿಕ್ಕ ಬಳಿಕ ಮುಖಂಡರು–ಕಾರ್ಯಕರ್ತರ ಮಧ್ಯೆ ಸಂಬಂಧ ಹಳಸಲು ಶುರುವಾಯಿತು' ಎಂದರು. 'ಇದು ಹೌದು ತಾನೇ' ಎಂಬ ಪ್ರಶ್ನೆಗೆ, ನೆರೆದಿದ್ದವರು 'ಹೌದು' ಎಂದರು.

'ಕ್ರಮವಾಗದಿದ್ದರೆ ಸಿಡಿದೇಳುವೆ'

ಪ್ರಜಾವಾಣಿ ವಾರ್ತೆ



ಸೋಮಣ್ಣ

ಬೆಂಗಳೂರು: 'ನನ್ನ ಸೋಲಿಗೆ ಕಾರಣವಾದವರ ವಿರುದ್ಧ ಕ್ರಮ ಜರುಗಿಸುವುದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಕರ್ತವ್ಯ. ಆ ಕೆಲಸ ಮಾಡದಿದ್ದರೆ ಸಿಡಿದೇಳುವೆ' ಎಂದು ಮಾಜಿ ಸಚಿವ ವಿ. ಸೋಮಣ್ಣ ಹೇಳಿದರು.

ವಿಜಯೇಂದ್ರ ಅವರು ಚಾಮರಾಜನಗರ ಜಿಲ್ಲಾ ಪ್ರವಾಸ ಕೈಗೊಂಡಿರುವ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಅಪ್ಪ (ಬಿ.ಎಸ್. ಯಡಿಯೂರಪ್ಪ), ಮಗನ (ವಿಜಯೇಂದ್ರ) ಹೆಸರು ಹೇಳಿಕೊಂಡು ಊರೆಲ್ಲ ತಿರುಗಿದ ಕೆಲವರು ನನ್ನ ಸೋಲಿಗೆ ಕಾರಣರಾದರು. ನನ್ನ ಸೋಲಿಗೆ ಕಾರಣವಾದವರು ಯಾರು ಎಂಬುದು ವಿಜಯೇಂದ್ರ ಅವರಿಗೆ ಗೊತ್ತಿದೆ. ಅಂತಹವರನ್ನೇ ಜತೆಗಿಟ್ಟುಕೊಂಡು ತಿರುಗುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ವಿಜಯೇಂದ್ರ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ. ಆತ ಎಲ್ಲಿ ಬೇಕಾದರೂ ಹೋಗಲಿ. ಅದು ನನಗೆ ಸಂಬಂಧಿಸಿದ ವಿಷಯವಲ್ಲ. ಆತ ಇನ್ನೂ ಯುವಕನಿದ್ದಾನೆ. ಚಿಕ್ಕ ವಯಸ್ಸಿನಲ್ಲಿ ಅವಕಾಶ ಸಿಕ್ಕಿದೆ. ಅದನ್ನು ಬಳಸಿಕೊಂಡು ನಮ್ಮಂತಹವರ ವಿರುದ್ಧ ಗದಾಪ್ರಹಾರ ನಡೆಸಲು ಮುಂದಾಗಬಾರದು. ಮನೆಹಾಳರು, ಅಯೋಗ್ಯರನ್ನು ಜತೆಗಿಟ್ಟುಕೊಂಡು ತಿರುಗುವುದನ್ನು ಬಿಟ್ಟರೆ ಒಳ್ಳೆಯದಾಗುತ್ತದೆ' ಎಂದು ಹೇಳಿದರು.

'ಆಗಿರುವ ಸಮಸ್ಯೆಗಳನ್ನು ಸರಿಪಡಿಸುವುದು ಅಥವಾ ಹಾಗೆಯೇ ಬಿಡುವುದು ಅವರಿಗೇ ಬಿಟ್ಟದ್ದು. ಯಾರು ತಪ್ಪು ಮಾಡಿದ್ದಾರೋ ಅವರನ್ನೇ ಜತೆಗಿಟ್ಟುಕೊಂಡು ಹೋಗುತ್ತೇನೆ ಎಂದರೆ ಅದಕ್ಕೆ ಅವಕಾಶ ನೀಡುವುದಿಲ್ಲ. ಆಗ ನಾನು ಕೂಡ ಬೇರೆ ಮಾತನಾಡಬೇಕಾಗುತ್ತದೆ. ಅವರು ಹಟ ಹಿಡಿದರೆ ಸಿಡಿದೇಳುವುದು ನನಗೂ ಗೊತ್ತಿದೆ' ಎಂದರು.

'ಗೌಡರು ಸಮಾಧಾನ ಹೇಳಿದ್ದಾರೆ': 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಜತೆ 28 ವರ್ಷ ಇದ್ದೆ. ಅವರಿಗೂ ನನಗೂ ಹಳೆಯ ನಂಟು. ಗೌರವದಿಂದ ಅವರನ್ನು ಭೇಟಿಮಾಡಿದ್ದೆ. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿ ಆಗಬೇಕಿರುವುದರಿಂದ ಬಿಜೆಪಿಯಲ್ಲಿಯೇ ಮುಂದುವರಿಯುವಂತೆ ಸಮಾಧಾನ ಹೇಳಿದ್ದಾರೆ. ನನಗೆ ಆಗಿರುವ ತೊಂದರೆ, ನೋವನ್ನು ಅವರಿಗೂ ವಿವರಿಸಿದ್ದೇನೆ' ಎಂದು ಸೋಮಣ್ಣ ತಿಳಿಸಿದರು.

ಗೊಲ್ಲರಹಟ್ಟಿಗೆ ಅಧಿಕಾರಿಗಳ ದಂಡು



ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಗೇರುಮರಡಿ ಗ್ರಾಮಕ್ಕೆ ಶನಿವಾರ ಜಿಲ್ಲಾಡಳಿತದ ಅಧಿಕಾರಿಗಳು ಭೇಟಿ ನೀಡಿ ಗೊಲ್ಲರಹಟ್ಟಿ ನಿವಾಸಿಗಳಿಗೆ ತಿಳಿವಳಿಕೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಯೋಗೇಶ್, ಉಪವಿಭಾಗಾಧಿಕಾರಿ ಕೆ.ಜಿ.ಕಾಂತರಾಜ್, ತಹಶೀಲ್ದಾರ್ ರಾಜೀವ್, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಎಸ್.ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಗೋವಿಂದಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಟಿ.ಎಸ್.ಗಣೇಶ್ ಅವರು ಗ್ರಾಮದ ಗೊಲ್ಲರಹಟ್ಟಿ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮಸ್ಥರಿಂದ ತಮ್ಮ ಆಚರಣೆಗಳ ಬಗ್ಗೆ ಮಾಹಿತಿ ಪಡೆದ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಯೋಗೇಶ್, 'ಅಸ್ಪೃಶ್ಯತೆ ಆಚರಣೆ ಕಾನೂನಿಗೆ ವಿರುದ್ಧವಾಗಿದೆ' ಎಂದು ತಿಳಿ ಹೇಳಿದರು.

ದಲಿತ ಯುವಕ ಗೊಲ್ಲರಹಟ್ಟಿ ಪ್ರವೇಶ ಮಾಡಿದ ಬಳಿಕ ದೇಗುಲಕ್ಕೆ ಬೀಗ ಹಾಕಿರುವ ಪ್ರಕರಣ ಮತ್ತು 'ದಂಡ ಭೀತಿ: ಶೂ ಧರಿಸದ ಮಕ್ಕಳು' ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಗೆ ಪ್ರತಿಕ್ರಿಯಿಸಿರುವ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್, 'ಗೊಲ್ಲರಹಟ್ಟಿ ಸಮಸ್ಯೆಗಳ ಬಗ್ಗೆ ಗಮನಕ್ಕೆ ಬಂದಿದೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಸ್ಥಳಕ್ಕೆ ಭೇಟಿ ನೀಡಲು ತಿಳಿಸಿದ್ದೇವೆ. ಸಮಸ್ಯೆ ಬಗೆಹರಿಸುವ ವಿಶ್ವಾಸವಿದೆ' ಎಂದಿದ್ದಾರೆ.

ಅಪಘಾತ: ನಾಲ್ವರು ಸಾವು

ಕುಂದಗೋಳ (ಧಾರವಾಡ ಜಿಲ್ಲೆ): ತಾಲ್ಲೂಕಿನ ಬೆಳ್ಳಿಗಟ್ಟಿ ಗ್ರಾಮದ ಸೇತುವೆ ಬಳಿಯಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ನಸುಕಿನಲ್ಲಿ ಅಪಘಾತಕ್ಕೀಡಾದ ಎರಡು ಕಾರುಗಳಲ್ಲಿದ್ದ ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿ, ಅಲ್ಲೇ ನಿಂತವರ ಮೇಲೆ ಲಾರಿ ಹರಿದ ಪರಿಣಾಮ ನಾಲ್ವರು ಮೃತಪಟ್ಟಿದ್ದಾರೆ.

'ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಹೆತ್ತಗೌಡನಹಳ್ಳಿಯ ಮಣಿಕಂಠ (26), ಪವನ (23), ಚಂದನಗೌಡ (31), ಬೆಂಗಳೂರಿನ ರಾಮಮೂರ್ತಿ ನಗರದ ಹರೀಶ್‌ಕುಮಾರ್ (40) ಮೃತರು. ಹೆತ್ತಗೌಡನಹಳ್ಳಿಯ ಎಚ್.ಬಿ.ಕಿಶನ್‌ಕುಮಾರ್ (23), ನಂದನಕುಮಾರ್ (27), ಬೆಂಗಳೂರಿನ ವಿದ್ಯಾರಣ್ಯಪುರದ ಪ್ರಭು (34), ಬಾಣಸವಾಡಿಯ ಹರಿಕುಮಾರ್ (28), ಶ್ರೀರಾಂಪುರದ ರವಿಶೆಟ್ಟಿ ಗಾಯಗೊಂಡವರು' ಎಂದು ಕುಂದಗೋಳ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪ್ರೊ. ಅಮೃತ ಸೋಮೇಶ್ವರ ನಿಧನ

ಪ್ರಜಾವಾಣಿ ವಾರ್ತೆ



ಉಳ್ಳಾಲ (ದಕ್ಷಿಣ ಕನ್ನಡ): ಕನ್ನಡ ಮತ್ತು ತುಳು ಭಾಷೆಯ ಉನ್ನತಿಗಾಗಿ ಶ್ರಮಿಸಿದ ವಿದ್ವಾಂಸ ಪ್ರೊ.ಅಮೃತ ಸೋಮೇಶ್ವರ (88) ವಯೋಸಹಜ ಅನಾರೋಗ್ಯದಿಂದ ಶನಿವಾರ ಬೆಳಿಗ್ಗೆ ಸೋಮೇಶ್ವರದ ತಮ್ಮ ಮನೆ 'ಒಲುಮೆ'ಯಲ್ಲಿ ನಿಧನರಾದರು.

ಮಾತೃಭಾಷೆ ಮಲಯಾಳ ಆಗಿದ್ದರೂ ಕನ್ನಡ ಮತ್ತು ತುಳುವಿನ ಮೇಲೆ ಅಮೃತ ಅವರು ಹೆಚ್ಚು ಒಲವು ಹೊಂದಿದ್ದರು. ಯಕ್ಷಗಾನ, ತುಳು ಜಾನಪದ ಮತ್ತು ಭೂತಾರಾಧನೆ ವಿಷಯಗಳಿಗೆ ಸಂಬಂಧಿಸಿದ ಅಧ್ಯಯನದಲ್ಲಿ ಸಾಂಸ್ಕೃತಿಕ ಲೋಕಕ್ಕೆ ಅವರು ಅಮೋಘ ಕಾಣಿಕೆ ನೀಡಿದ್ದಾರೆ. ಕಥೆ, ಕಾವ್ಯ, ಸಣ್ಣ ಕಥೆ, ಕಾದಂಬರಿ, ನಾಟಕ, ರೇಡಿಯೊ ರೂಪಕ, ನೃತ್ಯ ರೂಪಕ, ನಿಘಂಟು, ವಚನ ಸಾಹಿತ್ಯ, ಯಕ್ಷಗಾನ ಪ್ರಸಂಗ, ಭಕ್ತಿಗೀತೆಗಳ ಮೂಲಕ ಅವರು ಪ್ರಸಿದ್ಧರಾಗಿದ್ದರು. ಅವರು ಮಲಯಾಳ–ಕನ್ನಡ ನಿಘಂಟು ಕರ್ತೃ ಕೂಡ ಆಗಿದ್ದಾರೆ.

ತುಳು ಭಾಷೆ ಹಾಗೂ ಸಾಹಿತ್ಯಕ್ಕೆ ನೀಡಿದ ಕೊಡುಗೆ ಪರಿಗಣಿಸಿ 2016ನೇ ಸಾಲಿನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಕರ್ನಾಟಕ ರಾಜ್ಯೋತ್ಸವ ಸೇರಿ ಹಲವು ಪ್ರಶಸ್ತಿಗಳು ಸಂದಿವೆ.

ಕೋಟೆಕಾರ್‌ನ ಸ್ಟೆಲ್ಲಾ ಮೇರಿ ಕಾನ್ವೆಂಟ್‌ನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಅವರು ಆನಂದಾಶ್ರಮದಲ್ಲಿ ಹೈಸ್ಕೂಲ್ ಮತ್ತು ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದರು. ಛಂದಶಾಸ್ತ್ರ ಪಂಡಿತ ಸೇಡಿಯಾಪು ಕೃಷ್ಣ ಭಟ್ ಅವರು ಅಮೃತ ಸೋಮೇಶ್ವರರ ಗುರುಗಳಾಗಿದ್ದರು. ಮಂಗಳೂರಿನ ಸೇಂಟ್ ಅಲೋಶಿಯಸ್, ಪುತ್ತೂರಿನ ಸೇಂಟ್ ಫಿಲೋಮಿನಾ ಮತ್ತು ವಿವೇಕಾನಂದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.

ಇವರಿಗೆ ಪತ್ನಿ ನರ್ಮದಾ, ಇಬ್ಬರು ಪುತ್ರರು ಇದ್ದಾರೆ. ಸೋಮೇಶ್ವರ ಪುರಸಭೆ ಕಚೇರಿ ಬಳಿಯ ಅವರ ಸ್ವಗೃಹದಲ್ಲಿ ಮೃತದೇಹದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಭಾನುವಾರ ಬೆಳಿಗ್ಗೆ 11ಕ್ಕೆ ಮಾಡೂರು ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ರಾಮನ ಚಿತ್ರ ನೀಡಿ, ಹೂಮಾಲೆ ಹಾಕಿದ ಶಾಸಕ ಮಹೇಶ ಟೆಂಗಿನಕಾಯಿ

ಶ್ರೀಕಾಂತ ಬಿಡುಗಡೆ, ಬಿಜೆಪಿ ಸಂಭ್ರಮ


ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 1992ರ ಗಲಭೆ ಪ್ರಕರಣದ ಆರೋಪಿ, ನಗರದ ಚನ್ನಪೇಟೆ ನಿವಾಸಿ ಶ್ರೀಕಾಂತ ಪೂಜಾರಿ ಶನಿವಾರ ಜಾಮೀನಿನ ಮೇಲೆ ಇಲ್ಲಿನ ವಿಶ್ವೇಶ್ವರನಗರದ ಉಪ ಕಾರಾಗೃಹದಿಂದ ಬಿಡುಗಡೆಯಾದರು. ಅವರು ಹೊರಬರುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು 'ಜೈ ಶ್ರೀರಾಮ' ಘೋಷಣೆ ಹಾಕಿದರು.

ಶ್ರೀಕಾಂತ ಪೂಜಾರಿ ಅವರಿಗೆ ಶಾಸಕ ಮಹೇಶ ಟೆಂಗಿನಕಾಯಿ ಅವರು ಶ್ರೀರಾಮನ ಚಿತ್ರವನ್ನು ನೀಡಿ, ಹೂಮಾಲೆ ಹಾಕಿ, ಸಿಹಿ ತಿನ್ನಿಸಿ ಸ್ವಾಗತಿಸಿದರು.

ಸುದ್ದಿಗಾರರೊಂದಿಗೆ ಶ್ರೀಕಾಂತ ಮಾತನಾಡಿ, 'ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಮ್ಮೆಯೂ ಪೊಲೀಸರು ನನ್ನನ್ನು ವಿಚಾರಣೆಗೆ ಕರೆದಿರಲಿಲ್ಲ. ಆದರೆ, ಕಳೆದ ಡಿಸೆಂಬರ್ 29ರಂದು ಪ್ರಯಾಣಿಕರ ಸೋಗಿನಲ್ಲಿ ಬಂದ ಪೊಲೀಸರು, ದಿನಸಿ ಸಾಮಗ್ರಿ ತರುವುದಿದೆ ಎಂದು ಆಟೊ ಬಾಡಿಗೆ ಮಾಡಿಕೊಂಡು ಶಹರ ಠಾಣೆಗೆ ಕರೆದೊಯ್ದರು. ನನ್ನ ಮೇಲೆ ಪ್ರಕರಣವಿದೆ ಎಂದು ಹೇಳಲಿಲ್ಲ. ನೋಟಿಸ್, ವಾರಂಟ್ ನೀಡದೆ ಬಂಧಿಸಿದರು' ಎಂದು ಆರೋಪಿಸಿದರು.

'ಹಳೇಹುಬ್ಬಳ್ಳಿಯ ದುರ್ಗದಬೈಲಿನ ಸುತ್ತಮುತ್ತ ಆಟೊ ಚಲಾಯಿಸುತ್ತಿದ್ದೇನೆ. ಪೊಲೀಸರ ಸಂಪರ್ಕವೂ ಇದೆ. ಎಲ್ಲಿಯೂ ತಲೆಮರೆಸಿಕೊಂಡಿಲ್ಲ. ನನ್ನನ್ನು ಬಂಧಿಸುವ ಮೊದಲು ಪೊಲೀಸರು 15 ದಿನ ಮನೆಯ ಸುತ್ತಮುತ್ತ ಓಡಾಡಿದರು. ನಿಗಾ ವಹಿಸಿದರು' ಎಂದರು.



ಶಾಸಕ ಮಹೇಶ ಟೆಂಗಿನಕಾಯಿ ಶ್ರೀಕಾಂತ ಪೂಜಾರಿಗೆ ಸಿಹಿ ತಿನ್ನಿಸಿ ಸ್ವಾಗತಿಸಿದರು

ಶ್ರೀಕಾಂತ ಬಂಧನ ವಿರೋಧಿಸಿ ಬಿಜೆಪಿ ಪ್ರತಿಭಟನೆ ನಡೆಸಿತ್ತು. ಈಗ ಅವರು ಬಿಡುಗಡೆಯಾಗಿದ್ದಾರೆ. ನಾನು ಕರಸೇವಕ ಅಭಿಯಾನ ಮುಂದುವರಿಯಲಿದೆ
ಮಹೇಶ ಟೆಂಗಿನಕಾಯಿ, ಶಾಸಕ

ರಾಮನಿಗಾಗಿಯೇ ನನ್ನ ಜನ್ಮ ಮುಡಿಪಿಟ್ಟಿದ್ದೇನೆ. ಜನವರಿ 19ರಂದು ಅಯೋಧ್ಯೆಗೆ ತೆರಳಿ ರಾಮಮಂದಿರ ಉದ್ಘಾಟನೆಯಲ್ಲಿ ಪಾಲ್ಗೊಳ್ಳುತ್ತೇನೆ
ಶ್ರೀಕಾಂತ ಪೂಜಾರಿ, ಆಟೊ ಚಾಲಕ

43 ಮಂದಿ ವಿರುದ್ಧ ಪ್ರಕರಣ ದಾಖಲು

ಹುಬ್ಬಳ್ಳಿ: 1992ರ ಗಲಭೆ ಪ್ರಕರಣದ ಆರೋಪಿ ಶ್ರೀಕಾಂತ ಪೂಜಾರಿ ಬಂಧನ ಖಂಡಿಸಿ ನಗರದ ಶಹರ ಪೊಲೀಸ್ ಠಾಣೆ ಎದುರು ಜನವರಿ 3ರಂದು ಪ್ರತಿಭಟನೆ ನಡೆಸಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸೇರಿ 43 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. 'ಪ್ರತಿಭಟನೆ ವೇಳೆ ಮುಖ್ಯಮಂತ್ರಿ ವಿರುದ್ಧ ಅವಾಚ್ಯ ಪದಗಳನ್ನು ಬಳಸಿ ಘೋಷಣೆ ಕೂಗಿ, ಪ್ರಚೋದನಕಾರಿ ಭಾಷಣ ಮಾಡಿದ್ದಾರೆ' ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ್ ಹಳ್ಳೂರು ಜನವರಿ 5ರಂದು ದೂರು ನೀಡಿದ್ದರು.

'ಆರ್.ಅಶೋಕ, ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಎಂ.ಆರ್.ಪಾಟೀಲ, ವಿಧಾನಪರಿಷತ್ ಸದಸ್ಯ ಪ್ರದೀಪ ಶೆಟ್ಟರ್, ಪಾಲಿಕೆ ಸದಸ್ಯರಾದ ಸಂತೋಷ ಚವ್ಹಾಣ್, ಶಿವು ಮೆಣಸಿನಕಾಯಿ, ರೂಪಾ ಶೆಟ್ಟಿ, ಉಮೇಶಗೌಡ ಕೌಜಲಗಿ, ತಿಪ್ಪಣ್ಣ ಮಜ್ಜಗಿ ಸೇರಿ ಬಿಜೆಪಿಯ ಇತರ ನಾಯಕರ ವಿರುದ್ಧ ದೂರ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೋಮು ಗಲಭೆಗೆ ಬಿಜೆಪಿ ಫತ್ವಾ'

ಬೆಂಗಳೂರು: 'ಬಿಜೆಪಿಯಿಂದ ಕೋಮು ಗಲಬೆ ನಡೆಸುವ ಫತ್ವಾ ಬಂದಿದೆ ಎಂದು ರೌಡಿ ಶೀಟರ್ ಪುನೀತ್ ಕೆರೆಹಳ್ಳಿ ಎಂಬ ಮತಾಂಧ ತಾನೇ ಸೃಷ್ಟಿಸಿರುವ 'ರಾಷ್ಟ್ರ ರಕ್ಷಣಾ ಪಡೆ' ಎಂಬ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಹೇಳಿಕೊಂಡಿದ್ದಾನೆ. ಕೋಮು ಗಲಭೆ ನಡೆಸಿ 2024ಕ್ಕೆ 'ವಿಶ್ವಗುರು'ವನ್ನು ಮತ್ತೆ ಪ್ರಧಾನಿಯಾಗಿಸಬೇಕೆಂದು ಈ ಭಯೋತ್ಪಾದಕರ ತಂಡ ಕೆಲಸ ಮಾಡಲಿದೆಯಂತೆ' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆರೋಪಿಸಿದ್ದಾರೆ.

'ರಾಷ್ಟ್ರ ರಕ್ಷಣಾ ಪಡೆ' ಎಂಬ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿರುವ ಕೆರೆಹಳ್ಳಿಯ ಹೇಳಿಕೆ ಸಹಿತ 'ಎಕ್ಸ್' ಮಾಡಿರುವ ಹರಿಪ್ರಸಾದ್, 'ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಕೋಮು ಗಲಭೆ ಸೃಷ್ಟಿಸಿ, ಧರ್ಮ ಧರ್ಮಗಳ ನಡುವೆ ಬೆಂಕಿ ಹಚ್ಚುವ ಕೆಲಸಕ್ಕೆ ಬಿಜೆಪಿ ತನ್ನ ಸಹೋದರ ಸಂಘಟನೆಗಳನ್ನು ಅಣಿಗೊಳಿಸುತ್ತಿರುವುದು ಬಹಿರಂಗವಾಗುತ್ತಿದೆ' ಎಂದು ಟೀಕಿಸಿದ್ದಾರೆ.

'ರಾಜ್ಯದಲ್ಲಿ ಎಲ್ಲಿ, ಯಾವಾಗ, ಹೇಗಾದರೂ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಸಂಚು ನಡೆಯುತ್ತಿರುವುದು ಸ್ಪಷ್ಟವಾಗುತ್ತಿದೆ' ಎಂದೂ ಹೇಳಿದ್ದಾರೆ.

ಭಾನುವಾರ, ಜನವರಿ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 7 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಚಿತ್ರದುರ್ಗದ ಮನೆಯೊಂದರಲ್ಲಿ ಒಂದೇ ಕುಟುಂಬದ ಐವರ ಅಸ್ಥಿಪಂಜರಗಳು ಪತ್ತೆಯಾದ ಮೇಲೆ ಕಾಣುತ್ತಿರುವ ಒಂಟಿತನದ ಸಿಕ್ಕುಗಳು...



ಕಳೆದುಕೊಂಡಿದ್ದ ಏರ್‌ಪಾಡ್ 'ಎಕ್ಸ್' ಮೂಲಕ ಪತ್ತೆ 7
ಅಯೋಧ್ಯೆಯ ರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ: ಖರ್ಗೆ ಹೇಳಿಕೆ
ಜವಳಿ ಉದ್ಯಮಕ್ಕೆ ಸಂಕಷ್ಟ 13
ಕಾಂಗ್ರೆಸ್ ಭಾಗಿ: ಶೀಘ್ರವೇ ತೀರ್ಮಾನ 12

'ಗುಳೆ': ಗ್ರಾಮಗಳು ಖಾಲಿ ಖಾಲಿ...

• ಜಿ.ಬಿ.ನಾಗರಾಜ್

ಚಿತ್ರದುರ್ಗ: 'ಮಗ-ಸೊಸಿ ಕಾಫಿದೇಶಕ್ಕೆ ಹೋಗಿ ತಿಂಗ್ಳಾತು. ಓದೋ ಮೊಮ್ಮಕ್ಳನ್ನ ಸಾಲಿಗೆ ಕಳಿಸ್ಕಂಡು ಹಟ್ಟೀಲ್ಲಿದೇನಿ. ಮುಂದಿನ ತಿಂಗ್ಳು ಹಬ್ಬಕ್ಕೆ ಅವ್ರು ಊರಿಗೆ ಬರ್ತಾರೆ. ಇಲ್ಲೇ ಕೂಲಿ ಸಿಕ್ಕಿದ್ರೆ ದುಡಿಯೋಕೆ ಮಗ ಯಾಕೆ ದೂರ ಹೋಗ್ತಿದ್ದ...?'

ಮೊಳಕಾಲ್ಮುರು ತಾಲ್ಲೂಕಿನ ಸೂರಮ್ಮನ ಹಳ್ಳಿಯ ಸಣ್ಣಕ್ಕನ ಪ್ರಶ್ನೆಯಲ್ಲಿ ಬೇಸರವಿತ್ತು. ಮಾಗಿ ಚಳಿಯಲ್ಲಿ ಬೆಳಗಿನ ಬಿಸಿಲಿಗೆ ಮೈವೊಡ್ಡಿ ಕುಳಿತಿದ್ದ 75 ವರ್ಷದ ವೃದ್ಧೆ ನಿಧಾನವಾಗಿ ಮೇಲೆದ್ದರು. ಆಗಷ್ಟೇ ಅಡುಗೆ ಮುಗಿಸಿದ ಮೊಮ್ಮಗಳು ಪ್ರೌಢಶಾಲೆಗೆ ಹೊರಡಲು ಅಣಿಯಾದಳು. ತಡವರಿಸುತ್ತ ಅಜ್ಜಿ ಒಳಗೆ ಹೆಜ್ಜೆ ಇಡುವುದನ್ನು ಕಂಡು ಆಸರೆಯಾದಳು.

ಅರ್ಧ ಎಕರೆ ಭೂಮಿ ಹೊಂದಿರುವ ಸಣ್ಣಮ್ಮನ ಕುಟುಂಬಕ್ಕೆ ಕೂಲಿಯೇ ಆಧಾರ. ಸಕಾಲಕ್ಕೆ ಮಳೆ ಸುರಿಯದಿರುವುದರಿಂದ ಬಿತ್ತಿದ ಜೋಳ ಮೊಳಕೆಯಲ್ಲಿಯೇ ಕಮರಿದೆ. ಬಿ.ಜಿ.ಕೆರೆ ಸಮೀಪದ ತೆಂಗಿನ ತೋಟಗಳಲ್ಲಿ ಮಗ ರುದ್ರೇಶ ಒಂದಷ್ಟು ದಿನ ಕೆಲಸ ಮಾಡಿಕೊಂಡಿದ್ದ. ನಿರಂತರ ಕೂಲಿ ಅರಸಿ ನವೆಂಬರ್‌ನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಾಫಿತೋಟಕ್ಕೆ ಪತ್ನಿಯೊಂದಿಗೆ ತೆರಳಿದ್ದಾರೆ. ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳು ಈ ಭಾಗದಲ್ಲಿ ಕಾಫಿದೇಶವೆಂದು ಜನಜನಿತ.

ಸೂರಮ್ಮನಹಳ್ಳಿಯ ಪರಿಶಿಷ್ಟ ಜಾತಿ ಕಾಲೊನಿಯ ಬಹುತೇಕ ಕುಟುಂಬಗಳಿಗೆ ತುಂಡು ಭೂಮಿ ಇದೆ. ಆದರೂ, ಕೆಲಸ ಹುಡುಕಿಕೊಂಡು ಕಾಲೊನಿ ಜನರು ಗುಳೆ ಹೋಗಿದ್ದಾರೆ. ಬಿ.ಜಿ.ಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸಹೋದರ ಕೂಡ ಕೂಲಿ ಅರಸಿ 'ಕಾಫಿದೇಶ' ಸೇರಿದ್ದಾರೆ. ಶಿಕ್ಷಕರು, ಗ್ರಾಮದ ವಿದ್ಯಾವಂತ ಯುವಕರ ಮನವೊಲಿಕೆಯ ಪರಿಣಾಮವಾಗಿ ಶಾಲೆಗೆ ತೆರಳುವ ಮಕ್ಕಳು ಗ್ರಾಮದಲ್ಲಿ ಉಳಿಯುವಂತಾಗಿದೆ. ಈ ಮಕ್ಕಳ ಆರೈಕೆಯ ಹೊಣೆ ವೃದ್ಧರ ಹೆಗಲೇರಿದೆ.



ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜನರು ಬೆಂಗಳೂರು ಮತ್ತು ಪುಣೆ ನಗರಗಳಿಗೆ ಗುಳೆ ಹೋಗಲು ತಿಂಥಿಣಿ ಬ್ರಿಜ್ ಹತ್ತಿರ ಬಸ್‌ಗಾಗಿ ಕಾಯುತ್ತಿರುವುದು
– ಪ್ರಜಾವಾಣಿ ಚಿತ್ರ

ಒಳನೋಟ

ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಯಲ್ಲಿ ಗುಳೆ ಸಾಮಾನ್ಯ. ಕೂಲಿ ಕೆಲಸ ಅರಸಿ ಬೆಂಗಳೂರು, ಮಲೆನಾಡು ಹಾಗೂ ಕರಾವಳಿ ಭಾಗಕ್ಕೆ ವಲಸೆ ಹೋಗುತ್ತಾರೆ. ಮುಂಗಾರು ಹಾಗೂ ಹಿಂಗಾರು ಹಂಗಾಮು ಕೃಷಿ ಕಾರ್ಯ ಮುಗಿಸಿಕೊಂಡು ಜನವರಿ ವೇಳೆಗೆ ಗುಳೆ ಹೋಗುವ ವಾಡಿಕೆ ಹಲವೆಡೆ ಇದೆ. ಈ ವರ್ಷ ಮಳೆ ಕೈಕೊಟ್ಟು ಬರ ಪರಿಸ್ಥಿತಿ ಎದುರಾಗಿದ್ದರಿಂದ ಅಕ್ಟೋಬರ್ ತಿಂಗಳಿಂದಲೇ ಗುಳೆ ಶುರುವಾಗಿದೆ. ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಯ ಮೊಳಕಾಲ್ಮುರು, ಚಳ್ಳಕೆರೆ ತಾಲ್ಲೂಕಿನ ಗ್ರಾಮಗಳು ಬಹುತೇಕ ಖಾಲಿಯಾಗಿವೆ.

4ನೇ ಪುಟ ನೋಡಿ

ಅಂಕಿ-ಅಂಶಗಳು

27.87 ಲಕ್ಷ ರಾಜ್ಯದಲ್ಲಿರುವ ಉದ್ಯೋಗ ಖಾತರಿ ಯೋಜನೆ ಫಲಾಬುಭವಿ ಕುಟುಂಬಗಳು

31,247 ಆರ್ಥಿಕ ವರ್ಷದಲ್ಲಿ 100 ದಿನಗಳ ಕೆಲಸವನ್ನು ಪೂರ್ಣಗೊಳಿಸಿದವರು

ಮನರೇಗಾ: ಕೇಂದ್ರ, ರಾಜ್ಯದ ಜಟಾಪಟಿ

ಬೆಂಗಳೂರು: ಮನರೇಗಾ ಯೋಜನೆಯಡಿ ಕುಟುಂಬವೊಂದಕ್ಕೆ ನೀಡುತ್ತಿರುವ ಕೆಲಸದ ದಿನಗಳನ್ನು ವಾರ್ಷಿಕ 100ರಿಂದ 150ಕ್ಕೆ ಹೆಚ್ಚಿಸಬೇಕೆಂಬ ರಾಜ್ಯ ಸರ್ಕಾರದ ಬೇಡಿಕೆಗೆ ಕೇಂದ್ರ ಸರ್ಕಾರ ಮೂರು ತಿಂಗಳಾದರೂ ಸ್ಪಂದಿಸಿಲ್ಲ.

ರಾಜ್ಯದಲ್ಲಿ ತೀವ್ರ ಬರಗಾಲ ಇರುವ ಕಾರಣದಿಂದ ಪ್ರತಿ ಕುಟುಂಬಕ್ಕೆ 50 ದಿನಗಳ ಹೆಚ್ಚುವರಿ ಕೆಲಸದ ಅವಕಾಶ ಒದಗಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರಕ್ಕೆ ಮೂರು ಬಾರಿ ಪತ್ರ ಬರೆದಿದ್ದಾರೆ.

4ನೇ ಪುಟ ನೋಡಿ

ಭಾರತದ ಸೌರ ಸಂಶೋಧನೆಯ ಮೊದಲ ಉಪಗ್ರಹ ಯಶಸ್ವಿ

ಗಮ್ಯ ಸೇರಿದ ಆದಿತ್ಯ–ಎಲ್1

ಬೆಂಗಳೂರು (ಪಿಟಿಐ): ಭಾರತದ ಬಾಹ್ಯಾಕಾಶ ಸಂಶೋಧನೆಯಲ್ಲಿ ಮತ್ತೊಂದು ಮೈಲುಗಲ್ಲು ನಿರ್ಮಾಣವಾಗಿದೆ. ದೇಶದ ಮೊದಲ ಸೌರ ಅಧ್ಯಯನ ಯೋಜನೆಯ ಉಪಗ್ರಹ ಆದಿತ್ಯ ಎಲ್1 ತಾನು ಸೇರಬೇಕಿದ್ದ ಸ್ಥಾನವನ್ನು ಶನಿವಾರ ಸೇರಿದೆ. ಭೂಮಿಯಿಂದ 150 ಲಕ್ಷ ಕಿ.ಮೀ. ದೂರದಲ್ಲಿರುವ ಲಗ್ರಾಂಜಿಯನ್ ಬಿಂದುವನ್ನು (ಎಲ್1) ಆದಿತ್ಯ ಎಲ್1 ತಲುಪಿದೆ. ಇಲ್ಲಿಂದ ಅದು ಸೂರ್ಯನ ಸುತ್ತ ಸುತ್ತಲಿದೆ ಮತ್ತು ಸೂರ್ಯನ ಕೌತುಕಗಳನ್ನು ಅಧ್ಯಯನಕ್ಕೆ ಒಳಪಡಿಸಲಿದೆ.

ಚಂದ್ರನ ದಕ್ಷಿಣ ಭಾಗದಲ್ಲಿ ನೌಕೆಯನ್ನು ಸುರಕ್ಷಿತವಾಗಿ ಇಳಿಸಿದ ಹಿರಿಮೆ ಮೆರೆದ ಕೆಲವೇ ತಿಂಗಳ ಬಳಿಕ ಸೌರ ಅಧ್ಯಯನದ ಉಪಗ್ರಹವನ್ನು ಗುರಿ ಸೇರಿಸುವಲ್ಲಿಯೂ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ) ಯಶ ಗಳಿಸಿದೆ.



ಉಡಾವಣೆಯ ಸಂಗ್ರಹ ಚಿತ್ರ

ಈ ಅಸಾಧಾರಣ ಸಾಧನೆಯನ್ನು ದೇಶದ ಜನರ ಜೊತೆಗೆ ಕೊಂಡಾಡುತ್ತೇನೆ. ಮಾನವ ಕುಲದ ಅನುಕೂಲಕ್ಕಾಗಿ ವಿಜ್ಞಾನದ ಹೊಸ ದಿಗಂತಗಳ ಶೋಧ ಮುಂದುವರಿಯಲಿದೆ
ನರೇಂದ್ರ ಮೋದಿ, ಪ್ರಧಾನಿ

ಈ ಯಶಸ್ಸು ಇಂತಹ ಸಂಕೀರ್ಣ ಕಾರ್ಯಾಚರಣೆ ನಡೆಸುವ ತಾಕತ್ತು ಇಸ್ರೊಗೆ ಇದೆ ಎಂಬುದನ್ನು ತೋರಿಸುವುದರ ಜೊತೆಗೆ ಇನ್ನಷ್ಟು ಕಾರ್ಯಾಚರಣೆಗೆ ಆತ್ಮವಿಶ್ವಾಸ ತುಂಬುತ್ತದೆ
ಭಾರತೀಯ ಬಾಹ್ಯಾಕಾಶ ಸಂಸ್ಥೆ

12 ನೇ ಪುಟ ನೋಡಿ

ಮುಷ್ಕರ ಕೈಬಿಟ್ಟ ಅತಿಥಿ ಉಪನ್ಯಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವಧನದಲ್ಲಿ ಇನ್ನೂ ₹3,000 ವರೆಗೆ ಹೆಚ್ಚಳ ಹಾಗೂ ಮಹಿಳೆಯರಿಗೆ ಮಾತೃತ್ವ ರಜೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿಸಿದ್ದು, ಮುಷ್ಕರ ಕೈಬಿಟ್ಟು ಸೋಮವಾರದಿಂದ ಕರ್ತವ್ಯಕ್ಕೆ ಹಾಜರಾಗಲು ಅತಿಥಿ ಉಪನ್ಯಾಸಕರು ಒಪ್ಪಿಕೊಂಡಿದ್ದಾರೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಶನಿವಾರ ನಡೆದ ಸಭೆಯಲ್ಲಿ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿಯವರು ಸಭೆ ನಡೆಸಿದರು. ಅತಿಥಿ ಉಪನ್ಯಾಸಕರ ಗೌರವಧನವನ್ನು ₹5,000ದವರೆಗೆ ಹೆಚ್ಚಿಸಲು ಕಳೆದ ವಾರ ನಿರ್ಧರಿಸಲಾಗಿತ್ತು. ₹8,000ಗಳವರೆಗೆ ಹೆಚ್ಚಿಸುವುದಾಗಿ ಮುಖ್ಯಮಂತ್ರಿ ತಿಳಿಸಿದರು.

ಅತಿಥಿ ಉಪನ್ಯಾಸಕರ ಬೇಡಿಕೆ ಹಾಗೂ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ನಿಟ್ಟಿನಲ್ಲಿ ಸರ್ಕಾರವು ಇಚ್ಛಾಶಕ್ತಿ ತೋರಿದೆ. ಆ ಕಾರಣಕ್ಕಾಗಿಯೇ ಅವರ ಹೆಚ್ಚಿನ ಬೇಡಿಕೆಗಳನ್ನು ಈಡೇರಿಸಲು ಒಪ್ಪಿದ್ದೇವೆ
ಡಾ.ಎಂ.ಸಿ. ಸುಧಾಕರ್, ಉನ್ನತ ಶಿಕ್ಷಣ ಸಚಿವ

4ನೇ ಪುಟ ನೋಡಿ

ಮುಜರಾಯಿ ದೇಗುಲ: 22ರಂದು ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆ ರಾಮಮಂದಿರದಲ್ಲಿ ಶ್ರೀರಾಮನ ವಿಗ್ರಹ ಪ್ರತಿಷ್ಠಾನೆ ನಡೆಯಲಿರುವ ಜನವರಿ 22ರಂದು ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸುವಂತೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸೂಚನೆ ನೀಡಿದ್ದಾರೆ.

ಜ. 22ರಂದು ಮಧ್ಯಾಹ್ನ 12 ಗಂಟೆ 29 ನಿಮಿಷ 8 ಸೆಕೆಂಡ್‌ನಿಂದ 12.32ರವರೆಗೆ ಅಯೋಧ್ಯೆಯಲ್ಲಿ ಶ್ರೀರಾಮ ವಿಗ್ರಹದ ಪ್ರತಿಷ್ಠಾಪನೆ ನಡೆಯಲಿದೆ. ಅದೇ ಸಮಯದಲ್ಲಿ ಎಲ್ಲ ಮುಜರಾಯಿ ದೇವಸ್ಥಾನಗಳಲ್ಲಿ ಮಹಾಮಂಗಳಾರತಿ ಮತ್ತು ವಿಶೇಷ ಪೂಜೆ ನಡೆಸುವಂತೆ ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

'ಚರ್ಚೆಗೆ ಅವಕಾಶ ಸಿಗದಿದ್ದಕ್ಕೆ ಯಾತ್ರೆ'

ನವದೆಹಲಿ (ಪಿಟಿಐ): 'ಸಂಸತ್ತಿನಲ್ಲಿ ವಿಷಯಗಳನ್ನು ಪ್ರಸ್ತಾಪಿಸಲು ಕೇಂದ್ರ ಸರ್ಕಾರ ಅವಕಾಶ ನೀಡಲಿಲ್ಲ ಎಂಬ ಕಾರಣದಿಂದಲೇ ಕಾಂಗ್ರೆಸ್ ಪಕ್ಷವು ಈಗ ಭಾರತ್ ಜೋಡೊ ನ್ಯಾಯಯಾತ್ರೆ ಕೈಗೊಳ್ಳುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

12

ಜ್ಞಾನವಾಪಿ ಸಮೀಕ್ಷಾ ವರದಿ ಬಹಿರಂಗ: 24ರಂದು ನಿರ್ಧಾರ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಸಂಕೀರ್ಣಕ್ಕೆ ಸಂಬಂಧಿಸಿದಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ವರದಿಯನ್ನು ಬಹಿರಂಗಗೊಳಿಸುವ ಮತ್ತು ಪ್ರತಿಗಳನ್ನು ವಾದಿ- ಪ್ರತಿವಾದಿಗಳಿಗೆ ನೀಡುವ ಕುರಿತು ಇದೇ ತಿಂಗಳ 24ರಂದು ನಿರ್ಧರಿಸುವುದಾಗಿ ವಾರಾಣಸಿ ನ್ಯಾಯಾಲಯ ಹೇಳಿದೆ.

ವರದಿ ಬಹಿರಂಗಗೊಳಿಸುವುದನ್ನು ನಾಲ್ಕು ವಾರಗಳವರೆಗೆ ಮುಂದೂಡಬೇಕೆಂದು ಕೋರಿ ಎಎಸ್‌ಐ ಈಚೆಗೆ ಸಲ್ಲಿಸಿದ್ದ ಮನವಿಯನ್ನು ಜಿಲ್ಲಾ ನ್ಯಾಯಾಧೀಶ ಎ.ಕೆ. ವಿಶ್ವೇಶ್ ಪುರಸ್ಕರಿಸಿದರು. ಬಳಿಕ ಈ ಆದೇಶ ನೀಡಿದರು.

ಹಿಂದೂಗಳು ಮತ್ತು ಮುಸ್ಲಿಮರ ಪರ ವಕೀಲರು, ಎಎಸ್‌ಐ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದರು.

ವಾರಾಣಸಿಯಲ್ಲಿನ ತ್ವರಿತಗತಿ ನ್ಯಾಯಾಲಯದಲ್ಲಿರುವ ಅರ್ಜಿಯ ವಿಚಾರಣೆಯ ಬಳಿಕ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ಕೋರ್ಟ್ ಹೇಳಿದೆ. ತ್ವರಿತಗತಿ ನ್ಯಾಯಾಲಯವು ಈ ತಿಂಗಳ 19ರಂದು ಅರ್ಜಿಯ ವಿಚಾರಣೆ ನಡೆಸಲಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಾಂತಿ–ಭೇದಿ: 14 ಜನ ಆಸ್ಪತ್ರೆಗೆ

ಹೊಸಪೇಟೆ (ವಿಜಯನಗರ): ನಗರದ ಕಾರಿಗನೂರಿನ ಶಿಕಾರಿ ಕ್ಯಾಂಪ್ ಪ್ರದೇಶದಲ್ಲಿ ವಾಂತಿ ಭೇದಿ-ಕಾಣಿಸಿಕೊಂಡಿದ್ದು, 14 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ.

'ವಾಂತಿ ಭೇದಿಗೆ ನಿಖರ ಕಾರಣ ಗೊತ್ತಾಗಿಲ್ಲ. ಎರಡು ದಿನದಿಂದ ನಗರಸಭೆ ನೀರು ಪೂರೈಸಿರಲಿಲ್ಲ. ಜನರು ಹಳೆಯ ನೀರನ್ನು ಬಳಸಿರಬಹುದು. ಈ ನೀರನ್ನು ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯ ಅಧಿಕಾರಿ (ಡಿಎಚ್‌ಒ) ಡಾ.ಎಲ್.ಆರ್.ಶಂಕರ್ ನಾಯ್ಕ್ 'ಪ್ರಜಾವಾಣಿ'ಗೆ ತಿಳಿಸಿದರು.



FARNAZ

ಕರ್ನಾಟಕ ಚಿತ್ರಕಲಾ ಪರಿಷತ್ತಿನಿಂದ ಆಯೋಜನೆ

ಇಂದು ಕುಮಾರಕೃಪಾ ರಸ್ತೆಯಲ್ಲಿ ಚಿತ್ರಸಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವಿರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸುವ 21ನೇ 'ಚಿತ್ರಸಂತೆ'ಯನ್ನು ಕರ್ನಾಟಕ ಚಿತ್ರಕಲಾ ಪರಿಷತ್ತು ಭಾನುವಾರ ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಂಡಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮಾಡಿದ ಸಾಧನೆ ಹಾಗೂ ಚಂದ್ರಯಾನ–3ರ ಯಶಸ್ಸಿನಿಂದ ಈ ಬಾರಿಯ ಚಿತ್ರಸಂತೆಯನ್ನು ಭಾರತೀಯ ವಿಜ್ಞಾನಿಗಳಿಗೆ ಸಮರ್ಪಣೆ ಮಾಡಲಾಗಿದೆ. ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಿಗ್ಗೆ 9ಕ್ಕೆ ಪರಿಷತ್ತಿನ ಆವರಣದಲ್ಲಿ ಚಿತ್ರಸಂತೆ ಉದ್ಘಾಟಿಸು-ತ್ತಾರೆ. ಬೆಳಿಗ್ಗೆ 11ಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಕಲಾ ಪ್ರದರ್ಶನ'ಕ್ಕೆ ಚಾಲನೆ ನೀಡುತ್ತಾರೆ.

ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದ-ರ್ಶಿಸಲಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿದಂತೆ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ. 300ಕ್ಕೂ ಅಧಿಕ ಮಳಿಗೆಗಳು ಮೇಳದಲ್ಲಿ ಇರಲಿವೆ. ಪರಿಷತ್ತು ಸಂಗ್ರಹಿಸಿರುವ ತೊಗಲು ಗೊಂಬೆ ಹಾಗೂ ಮೈಸೂರಿನ ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ಪರಿಷತ್ತಿನ ಗ್ಯಾಲರಿಗಳಲ್ಲಿ ನಡೆಯಲಿವೆ.

'ಹಿರಿಯ ಕಲಾವಿದರು ಹಾಗೂ ಅಂಗವಿಕಲರಿಗೆ ಆಯ್ದ ಸ್ಥಳದಲ್ಲಿ ಅಗತ್ಯ ಸೌಲಭ್ಯ ಒದಗಿಸಿಕೊಡಲಾಗುವುದು. ಪರಿಷತ್ತಿನ ಆವರಣದ ಹೊರಗೆ ಕೆನರಾ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಚಾರಿ ಎಟಿಎಂ ಇರಲಿವೆ. ಈ ಚಿತ್ರಸಂತೆಯಲ್ಲಿ ₹ 100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಇರಲಿವೆ. ಕಲಾವಿದರಿಂದ ನೇರವಾಗಿ ಕಲಾಕೃತಿಗಳನ್ನು ಖರೀದಿಸಬಹುದು' ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದ್ದಾರೆ.



ಚಿತ್ರಸಂತೆ ಪ್ರಯುಕ್ತ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ನಿರ್ಮಿಸಿರುವ ಇಸ್ರೊದ ಚಂದ್ರಯಾನ–3ರ ಪ್ರತಿಕೃತಿಗೆ ಶನಿವಾರ ಅಂತಿಮ ಸ್ಪರ್ಶ ನೀಡಲಾಯಿತು
– ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

6 ಲಕ್ಷ ಮಂದಿ ನಿರೀಕ್ಷೆ

ಈ ಬಾರಿಯ ಚಿತ್ರಸಂತೆಗೆ ಐದು ಲಕ್ಷರಿಂದ ಆರು ಲಕ್ಷ ಮಂದಿ ಭೇಟಿ ನೀಡುವ ಸಂಭವವಿದೆ. ಚಿತ್ರಸಂತೆಯಲ್ಲಿ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಅವಕಾಶವಿದೆ. ಕುಂಚ ಅಥವಾ ಪೆನ್ಸಿಲ್‌ಗಳಿಂದ ಕಲಾರಸಿಕರ ಭಾವಚಿತ್ರಗಳನ್ನು ಸ್ಥಳದಲ್ಲಿಯೇ ರಚಿಸಿಕೊಡುವ ಕಲಾವಿದರು ಇರುತ್ತಾರೆ ಎಂದು ಪರಿಷತ್ತು ತಿಳಿಸಿದೆ.

ಬೆಳಿಗ್ಗೆ 6ರಿಂದ ರಾತ್ರಿ 9ರವರೆಗೆ ಕುಮಾರಕೃಪಾ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ ಭರವಸೆ • ಕಲಾ ಸಾಧಕರಿಗೆ 'ಚಿತ್ರಕಲಾ ಸಮ್ಮಾನ್' ಪ್ರಶಸ್ತಿ ಪ್ರದಾನ

ಕಲಾ ಪ್ರದರ್ಶನಕ್ಕೆ ಶಾಶ್ವತ ಗ್ಯಾಲರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶದಲ್ಲಿ ಚಿತ್ರಕಲೆ ಪ್ರದರ್ಶನಕ್ಕೆ ಶಾಶ್ವತ ಗ್ಯಾಲರಿಗಳಿದ್ದು, ಅವು ಪ್ರವಾಸಿ ತಾಣಗಳಾಗಿ ಮಾರ್ಪಟ್ಟಿವೆ. ಅಂತಹ ಗ್ಯಾಲರಿಗಳನ್ನು ಇಲ್ಲಿಯೂ ನಿರ್ಮಾಣ ಮಾಡಲು ಪ್ರಯತ್ನಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಭರವಸೆ ನೀಡಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಮಾರಂಭದಲ್ಲಿ ಕಲಾ ಸಾಧಕರಿಗೆ 'ಚಿತ್ರಕಲಾ ಸಮ್ಮಾನ್ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

ರಾಜ್ಯದ ವಿವಿಧೆಡೆ ಕಲಾ ಪ್ರದರ್ಶನಕ್ಕೆ ಗ್ಯಾಲರಿಗಳನ್ನು ನಿರ್ಮಾಣ ಮಾಡಬೇಕೆಂಬ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅವರ ಪ್ರಸ್ತಾವಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಪರಮೇಶ್ವರ, 'ಕಲಾ ಕ್ಷೇತ್ರದಲ್ಲಿ ಕರ್ನಾಟಕ ಐಶ್ವರ್ಯವಂತ ರಾಜ್ಯ. ಇಲ್ಲಿನ ಜಿಲ್ಲೆಗಳಲ್ಲಿನ ಕಲೆ ಮತ್ತು ಸಂಸ್ಕೃತಿಯಲ್ಲಿ ವೈವಿಧ್ಯತೆ ಕಾಣಬಹುದು. ಕಲೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಜಿಲ್ಲಾ ಮಟ್ಟದಲ್ಲಿ ಗ್ಯಾಲರಿ ಅಗತ್ಯ. ಪರಿಷತ್ತಿನ ಪ್ರಸ್ತಾವನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತರುತ್ತೇನೆ. ವಿದೇಶಕ್ಕೆ ಹೋದಾಗ ಅಲ್ಲಿ ಶಾಶ್ವತ ಗ್ಯಾಲರಿಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿ ಪ್ರವೇಶ ಶುಲ್ಕ ಪಾವತಿಸಿ, ಹೋಗಬೇಕಾಗುತ್ತದೆ. ಅಂತಹ ಗ್ಯಾಲರಿಗಳನ್ನು ಬೆಂಗಳೂರು ಅಥವಾ ರಾಜ್ಯದ ಬೇರೆಡೆಗೆ ನಿರ್ಮಿಸುವ ಪ್ರಯತ್ನ ಸರ್ಕಾರದಿಂದ ನಡೆಯಲಿದೆ' ಎಂದು ಹೇಳಿದರು.

'ಕಲೆ, ಸಂಗೀತ ಮತ್ತು ಸಂಸ್ಕೃತಿಯು ಜಾತಿ–ಧರ್ಮವನ್ನು ಮೀರಿರುವುದರಿಂದ ಸಮಾಜದಲ್ಲಿ ಉಳಿದುಕೊಂಡಿವೆ. ಕಲೆಯನ್ನು ಉಳಿಸುವ ಹಾಗೂ ಪ್ರೋತ್ಸಾಹಿಸುವ ಕೆಲಸಗಳು ಹೆಚ್ಚಬೇಕು. ಹಿಂದೆ ರಾಜ ಮಹಾರಾಜರು ಕಲೆಯನ್ನು ಪೋಷಿಸುತ್ತಿದ್ದರು. ಈಗ ಆ ಜವಾಬ್ದಾರಿ ಸರ್ಕಾರದ ಮೇಲಿದ್ದು, ಇದನ್ನು ಪ್ರಾಮಾಣಿಕವಾಗಿ ಸರ್ಕಾರಗಳು ಮಾಡಬೇಕು. ಆಧುನಿಕ ಜಗತ್ತಿನಲ್ಲಿ ಸಂಸ್ಕೃತಿ, ಸಂಗೀತ ನಾಶವಾಗುವ ಅಪಾಯ ಎದುರಿಸುತ್ತಿದ್ದೇವೆ' ಎಂದು ಕಳವಳ ವ್ಯಕ್ತಪಡಿಸಿದರು.

ಕಲಾ ಪ್ರದರ್ಶನಕ್ಕೆ ಸಮಸ್ಯೆ: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, 'ಕಲೆಯನ್ನು ಸಾಧ್ಯವಾದಷ್ಟು ಜನರಿಗೆ ತಲುಪಿಸಬೇಕೆಂಬ ಉದ್ದೇಶದಿಂದ ಚಿತ್ರಸಂತೆಯನ್ನು ಆಯೋಜಿಸಲಾಗುತ್ತಿದೆ. ಡಿಜಿಟಲ್ ತಂತ್ರಜ್ಞಾನದ ಯುಗದಲ್ಲಿ ಸಾಂಪ್ರದಾಯಿಕ ಕಲೆ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಬೆಂಗಳೂರಿನಲ್ಲಿ ಚಿತ್ರಕಲಾ ಪ್ರದರ್ಶನಕ್ಕೆ ಗ್ಯಾಲರಿಗಳ ಸಮಸ್ಯೆ ಕಾಡುತ್ತಿದೆ. ಆದ್ದರಿಂದ ನಗರದ ನಾಲ್ಕೂ ದಿಕ್ಕಿನಲ್ಲಿ ಸುಸಜ್ಜಿತ ಗ್ಯಾಲರಿಯನ್ನು ಸರ್ಕಾರ ನಿರ್ಮಾಣ ಮಾಡಬೇಕು' ಎಂದು ಆಗ್ರಹಿಸಿದರು.

'ರಾಜ್ಯದ ಜಿಲ್ಲೆಗಳಲ್ಲಿ ಅಲ್ಲಿನ ಇತಿಹಾಸ ಸೆರೆಹಿಡಿಯುವ ವ್ಯವಸ್ಥೆಯಿಲ್ಲ. ಬೇರೆ ಬೇರೆ ದೇಶಗಳಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಅಲ್ಲಿನ ವಿಶೇಷತೆ ಹಾಗೂ ಸಾಧಕರ ಮಾಹಿತಿ ಸಿಗುತ್ತದೆ. ಅದೇ ರೀತಿ, ಪ್ರತಿ ಜಿಲ್ಲಾ ಕೇಂದ್ರದಲ್ಲಿ ಸಾಧಕರನ್ನು ಪರಿಚಯಿಸುವ ಹಾಗೂ ವಿವಿಧ ಕ್ಷೇತ್ರಗಳ ಸಾಧಕರ ಮಾಹಿತಿಯನ್ನು ದಾಖಲಿಸುವ ಕೇಂದ್ರವನ್ನು ಪ್ರಾರಂಭಿಸಬೇಕು. ಅಲ್ಲಿ ಚಿತ್ರಕಲಾ ಗ್ಯಾಲರಿಯೂ ಇರಬೇಕು' ಎಂದು ಹೇಳಿದರು.



ಪ್ರೊ. ವಸುಧಾ ತೋಜುರ್, ಪ್ರೊ.ಬಿ.ವಿ. ಸುರೇಶ್, ಎಲ್.ಎನ್. ತಲ್ಲೂರ್ ಹಾಗೂ ಬಿ.ಬಿ. ರಾಘವೇಂದ್ರ ಅವರು 'ಚಿತ್ರಕಲಾ ಸಮ್ಮಾನ್ ಪ್ರಶಸ್ತಿ' ಸ್ವೀಕರಿಸಿದರು. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಶಿಧರ್ ಎಸ್.ಎನ್., ಬಿ.ಎಲ್. ಶಂಕರ್ ಹಾಗೂ ಜಿ. ಪರಮೇಶ್ವರ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ನಾಲ್ವರು ಕಲಾ ಸಾಧಕರಿಗೆ ಪ್ರಶಸ್ತಿ

ಕಲಾವಿದರಾದ ಪ್ರೊ. ವಸುಧಾ ತೋಜುರ್ ಅವರಿಗೆ 'ಎಚ್.ಕೆ. ಕೇಜ್ರಿವಾಲ್ ಪ್ರಶಸ್ತಿ', ಪ್ರೊ.ಬಿ.ವಿ. ಸುರೇಶ್ ಅವರಿಗೆ 'ಎಂ. ಆರ್ಯಮೂರ್ತಿ ಪ್ರಶಸ್ತಿ', ಎಲ್.ಎನ್. ತಲ್ಲೂರ್ ಅವರಿಗೆ 'ಡಿ. ದೇವರಾಜ ಅರಸು ಪ್ರಶಸ್ತಿ' ಹಾಗೂ ಬಿ.ಬಿ. ರಾಘವೇಂದ್ರ ಅವರಿಗೆ 'ವೈ. ಸುಬ್ರಮಣ್ಯರಾಜು ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು ಹಾಗೂ ಫಲಕಗಳನ್ನು ಒಳಗೊಂಡಿವೆ.

ವಿದ್ಯುತ್ ದರ ಏರಿಕೆ ಕೆಇಆರ್‌ಸಿಗೆ ಪ್ರಸ್ತಾವನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ) ಸೇರಿ ರಾಜ್ಯದ ಐದು ಎಸ್ಕಾಂಗಳು ವಿದ್ಯುತ್ ದರ ಏರಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ(ಕೆಇಆರ್‌ಸಿ) ಪ್ರಸ್ತಾವನೆ ಸಲ್ಲಿಸಿವೆ.

ಬೆಸ್ಕಾಂ, ಪ್ರತಿ ಯೂನಿಟ್‌ಗೆ 49 ಪೈಸೆ ಹೆಚ್ಚಿಸುವಂತೆ ಮನವಿ ಮಾಡಿದೆ. ಇದೇ ರೀತಿ ಮೆಸ್ಕಾಂ, ಜೆಸ್ಕಾಂ, ಸೆಸ್ಕ್, ಹೆಸ್ಕಾಂಗಳು 40 ರಿಂದ 60 ಪೈಸೆ ದರ ಪರಿಷ್ಕರಿಸುವಂತೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿದುಬಂದಿದೆ. ಏಪ್ರಿಲ್‌ನಿಂದ ದರ ಹೆಚ್ಚಿಸುವಂತೆ ಪ್ರಸ್ತಾವನೆಯಲ್ಲಿ ಮನವಿ ಮಾಡಲಾಗಿದೆ. ನಿಗದಿತ ಶುಲ್ಕದಲ್ಲಿ ಏರಿಕೆ ಇಲ್ಲ. ಕೈಗಾರಿಕೆ ಬಳಕೆದಾರರಿಗೆ ಮಾತ್ರ ಡಿಮ್ಯಾಂಡ್ ಶುಲ್ಕ ಮತ್ತು ವಿದ್ಯುತ್ ಬಳಕೆ ಶುಲ್ಕ ಎರಡನ್ನೂ ಹೆಚ್ಚಿಸಲು ಮನವಿ ಮಾಡಲಾಗಿದೆ.

ಪ್ರತಿ ವರ್ಷ ಡಿಸೆಂಬರ್ ಅಥವಾ ಜನವರಿಯಲ್ಲಿ ಎಸ್ಕಾಂಗಳು ವಿದ್ಯುತ್ ದರ ಪರಿಷ್ಕರಣೆಗೆ ಪ್ರಸ್ತಾವನೆ ಸಲ್ಲಿಸುತ್ತವೆ. ಪ್ರಸ್ತಾವನೆ ಸಲ್ಲಿಕೆ ನಂತರ, ಕೆಇಆರ್‌ಸಿ ಪ್ರತಿ ಕಂಪನಿಯ ಅರ್ಜಿ ಪರಿಶೀಲಿಸಿ ಸಾರ್ವಜನಿಕ ವಿಚಾರಣೆ ನಡೆಸಿ ದರ ಪರಿಷ್ಕರಣೆ ಮಾಡಲಿದ್ದು ಏಪ್ರಿಲ್‌ನಿಂದ ಹೊಸ ದರ ಜಾರಿಗೆ ಬರಲಿದೆ.

ಇಂಧನ ಹೊಂದಾಣಿಕೆ ವೆಚ್ಚ ಆಧರಿಸಿ ಇತ್ತೀಚೆಗಷ್ಟೇ ಪ್ರತಿ ಯೂನಿಟ್‌ಗೆ 37 ಪೈಸೆಯಿಂದ 51 ಪೈಸೆಯವರೆಗೆ ದರ ಕಡಿಮೆ ಮಾಡಿ ವಿದ್ಯುತ್ ಸರಬರಾಜು ಕಂಪನಿಗಳು ಆದೇಶ ಹೊರಡಿಸಿದ್ದವು.



ಕರ್ನಾಟಕ ರಾಜ್ಯ ವೃತ್ತಪತ್ರಿಕೆ ವಿತರಕರ ಕ್ಷೇಮಾಭಿವೃದ್ಧಿ ಸಮಿತಿ ಹಾಗೂ ಕಾರ್ಮಿಕ ಇಲಾಖೆಯ ಸಹಭಾಗಿತ್ವದಲ್ಲಿ ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ನೋಂದಣಿಯನ್ನು ನಗರದ ಎಸ್‌ಬಿಎಂ ಕಾಲೊನಿಯ ದಿನಪತ್ರಿಕೆ ವಿತರಣಾ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರಾದ ಶೇಖರ್ ನಾಯಕ್, ಸಮಿತಿಯ ರಾಜ್ಯಾಧ್ಯಕ್ಷ ಎಲ್. ಜೀವನ್, ಪತ್ರಿಕಾ ವಿತರಕ ಏಜೆಂಟರು ಹಾಗೂ ವಿತರಕರು ಭಾಗವಹಿಸಿದ್ದರು

'ಅಕ್ರಮದ ಪರ ಎಚ್‌ಡಿಕೆ ಮಾತನಾಡಿದ್ದೇಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಲೂರು ತಾಲ್ಲೂಕು ನಂದಗೋಡನಹಳ್ಳಿಯಲ್ಲಿ ಅಕ್ರಮವಾಗಿ ಮರಗಳ ಕಡಿತಲೆ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆದು, ತಪ್ಪಿತಸ್ಥರ ವಿರುದ್ಧ ಕ್ರಮ ಖಚಿತ. ಆದರೆ, ಅಕ್ರಮ ಮಾಡಿದವರ ಪರವಾಗಿ ಎಚ್.ಡಿ. ಕುಮಾರಸ್ವಾಮಿ ಯಾಕೆ ಮಾತನಾಡಿದ್ದಾರೋ ತಿಳಿಯುತ್ತಿಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಕ್ರಿಯಿಸಿದರು.

126 ಮರಗಳ ಅಕ್ರಮ ಕಡಿತಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಮಾರಸ್ವಾಮಿ ಅವರ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಖಂಡ್ರೆ, 'ಮಾಜಿ ಮುಖ್ಯಮಂತ್ರಿಗೆ ಮಾಹಿತಿ ಕೊರತೆ ಇದೆ ಅನಿಸುತ್ತಿದೆ. ಮರ ಕಡಿಸಿ ಪ್ರತಾಪಸಿಂಹ ಸಹೋದರನ ಜಾಗದಲ್ಲಿ ಹಾಕುವಂತೆ ಮುಖ್ಯಮಂತ್ರಿಯೇ ಹೇಳಿದ್ದಾರೆಂದು ಅವರು ಆರೋಪಿಸಿರುವುದು ಹಾಸ್ಯಾಸ್ಪದ' ಎಂದಿದ್ದಾರೆ.

'ಬಿಜೆಪಿಯವರೇ ಪ್ರತಾಪ ಸಿಂಹ ಪರ ನಿಲ್ಲದಿರುವಾಗ ಕುಮಾರಸ್ವಾಮಿ ಏಕೆ ಅವರ ಪರ ವಕಾಲತ್ತು ವಹಿಸುತ್ತಿದ್ದಾರೆ ಎನ್ನುವುದು ಅಚ್ಚರಿ ಉಂಟು ಮಾಡಿದೆ' ಎಂದಿದ್ದಾರೆ.

ನಿಧನವಾರ್ತೆ

ಎಚ್‌.ಟಿ.ರುದ್ರಣ್ಣ



ಬೆಂಗಳೂರು: ಜೆ.ಪಿ. ನಗರದ ನಿವಾಸಿ, ನಿವೃತ್ತ ಜಿಲ್ಲಾ ಸರ್ಜನ್ ಎಚ್.ಟಿ.ರುದ್ರಣ್ಣ (85) ಅವರು ಶನಿವಾರ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ. ರುದ್ರಣ್ಣ ಅವರು ಮೂಲತಃ ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆ ಗ್ರಾಮದವರು. ಮೃತರ ಇಚ್ಛೆಯಂತೆ ನಗರದ ಸೇಂಟ್‌ಜಾನ್ ಆಸ್ಪತ್ರೆಗೆ ಭಾನುವಾರ ದೇಹದಾನ ಮಾಡಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ರುದ್ರಣ್ಣ ಅವರು ವಿಕ್ಟೋರಿಯಾ ಹಾಗೂ ಚಿನ್ಮಯ ಆಸ್ಪತ್ರೆಯಲ್ಲಿ ಕೆಲಸ ಮಾಡಿದ್ದರು. ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಹಾಗೂ ಕೋಣನಕುಂಟೆ ಬೀರೇಶ್ವರ ಸ್ವಾಮಿ ಟ್ರಸ್ಟ್‌ನ ಧರ್ಮದರ್ಶಿ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದರು.

ಅನರ್ಹತೆಯಿಂದ ರಕ್ಷಿಸಲು ಸುಗ್ರೀವಾಜ್ಞೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಮತ್ತು ಸಲಹೆಗಾರ ಬಿ.ಆರ್. ಪಾಟೀಲ ಅವರನ್ನು ಅನರ್ಹತೆಯಿಂದ ರಕ್ಷಿಸಲು 'ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) ಕಾಯ್ದೆ'ಗೆ ತಿದ್ದುಪಡಿ ತರುವ ಮಸೂದೆಗೆ ಸಂಪುಟ ಒಪ್ಪಿಗೆ ನೀಡಿದೆ.

ವಿಧಾನಸಭೆ ಅಥವಾ ವಿಧಾನ ಪರಿಷತ್‌ನ ಸದಸ್ಯರು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಯಾಗಿ ನೇಮಕಗೊಂಡಾಗ ಅವರನ್ನು ಅನರ್ಹತೆಯಿಂದ ರಕ್ಷಿಸುವುದಕ್ಕಾಗಿ 'ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) ಕಾಯ್ದೆ'ಗೆ ತಿದ್ದುಪಡಿ ತರುವ ಮಸೂದೆಗೆ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಒಪ್ಪಿಗೆ ನೀಡಲಾಗಿತ್ತು. ಈಗ ದೇಶಪಾಂಡೆ, ರಾಯರಡ್ಡಿ ಮತ್ತು ಬಿ.ಆರ್. ಪಾಟೀಲ ಅವರನ್ನು ಅನರ್ಹತೆಯಿಂದ ರಕ್ಷಿಸುವುದಕ್ಕಾಗಿ ಪುನಃ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿದೆ. ಅದನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ನಿರ್ಧರಿಸಲಾಗಿದೆ.

ಬಿಐಎಎಲ್‌ನಲ್ಲಿ 'ಕಲಾಲೋಕ' ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸರ್ಕಾರಿ ಉದ್ದಿಮೆಗಳ ಉತ್ಪನ್ನಗಳ ಎರಡು ಮಾರಾಟ ಮಳಿಗೆಗಳು 'ಕಲಾಲೋಕ' ಹೆಸರಿನಲ್ಲಿ ಏಪ್ರಿಲ್ ವೇಳೆಗೆ ಆರಂಭವಾಗಲಿವೆ.

ಈ ಬಗ್ಗೆ ವಿಮಾನ ನಿಲ್ದಾಣದ ಅಧಿಕಾರಿಗಳ (ಬಿಐಎಎಲ್) ಜೊತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಶನಿವಾರ ಚರ್ಚೆ ನಡೆಸಿದರು.

'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್), ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕೆಎಸ್ಐಸಿ (ಕರ್ನಾಟಕ ರೇಷ್ಮೆ ಉದ್ಯಮ ನಿಗಮ), ಕಾಫಿ ಬೋರ್ಡ್ ಮತ್ತು ಲಿಡ್ಕರ್ ಸಂಸ್ಥೆಗಳ ಉತ್ಪನ್ನಗಳನ್ನು ಈ ಮಳಿಗೆಗಳಲ್ಲಿ ಮಾರಾಟ ಮಾಡಲಾಗುವುದು. ಜೊತೆಗೆ ಪಾರಂಪರಿಕ ಆಟಿಕೆಗಳಾದ ಚನ್ನಪಟ್ಟಣ ಆಟಿಕೆ, ಇಳಕಲ್ ಸೀರೆ, ಲಂಬಾಣಿ ಕಸೂತಿ ಇತ್ಯಾದಿ ಉತ್ಪನ್ನಗಳನ್ನು ಮಾರಾಟಕ್ಕೆ ಇಡಲಾಗುವುದು' ಎಂದು ಸಚಿವರು ತಿಳಿಸಿದರು.

'ಟರ್ಮಿನಲ್- 2ರ ದೇಶೀಯ ಮತ್ತು ಅಂತರರಾಷ್ಟ್ರೀಯ ನಿರ್ಗಮನ ವಲಯದಲ್ಲಿ ತಲಾ 180 ಚದರ ಮೀಟರ್ ಜಾಗದಲ್ಲಿ ವಿಭಿನ್ನ ಶೈಲಿಯಲ್ಲಿ ವಿನ್ಯಾಸಗೊಳಿಸಿದ ಆಕರ್ಷಕ ಮಳಿಗೆಗಳಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುವುದು. ನಾಡಿನ ಅಸ್ಮಿತೆ ಬಿಂಬಿಸುವ ಈ ಸಂಸ್ಥೆಗಳ ಉತ್ಪನ್ನಗಳನ್ನು ವಿಮಾನ ನಿಲ್ದಾಣದಲ್ಲಿನ ಗ್ರಾಹಕರಿಗೆ ಒಂದೇ ಸೂರಿನಡಿ ಸಿಗುವಂತೆ ಮಾಡುವುದು ಇದರ ಉದ್ದೇಶವಾಗಿದ್ದು, ಕೈಗಾರಿಕಾ ಇಲಾಖೆಯು ಇದರ ಉಸ್ತುವಾರಿ ವಹಿಸಲಿದೆ' ಎಂದು ತಿಳಿಸಿದರು.

'ಮಳಿಗೆಗಳಲ್ಲಿ ಕರ್ನಾಟಕ ಮೂಲದ ಕಾಫಿ ಸ್ವಾದಗಳು ಸೇವನೆಗೆ ಲಭ್ಯವಿರುತ್ತವೆ. ಜೊತೆಗೆ, ಇಲ್ಲಿನ ವಿವಿಧ ನಮೂನೆಯ ಕಾಫಿ ಪುಡಿಯನ್ನು ಗ್ರಾಹಕರು ಖರೀದಿಸಬಹುದು. ಗ್ರಾಹಕರನ್ನು ಗಮನದಲ್ಲಿ ಇರಿಸಿಕೊಂಡು ಅದಕ್ಕೆ ತಕ್ಕಂತೆ ಉತ್ಪನ್ನಗಳ ಬ್ರ್ಯಾಂಡಿಂಗ್ ಮಾಡಲು ಗಮನಹರಿಸಲಾಗುವುದು' ಎಂದು ಸಚಿವರು ತಿಳಿಸಿದರು.

PROPERTY CORNER
ಕ್ಲಾಸಿಫೈಡ್ಸ್

BUNGALOW FOR SALE
60x40 feet East facing Independent Bungalow for Sale 45 squares building, Ground Floor, 1st Floor and II Floor with 5 Bedrooms, built with teak wood, Italian Marble Tiles, located at BEML Layout, Basaveshwaranagar, Bangalore - 560 079. Clear Titles & 'A' Katha.
~ CONTACT ~
9845765559 / 9845043282

DH DECCAN HERALD | ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಯಲಹಂಕ
ಜಿಕೆವಿಕೆ ಹಿಂದಿನ ಗೇಟ್, ಅಟ್ಟೂರು, ವಿದ್ಯಾರಣ್ಯಪುರ
BBMP KHATA LAYOUT
Land Mark: 5mins from Yelahanka DMart
20 x 30 ನಿವೇಶನಗಳು @ 27 ಲಕ್ಷಗಳು
30 X 40 | 30 X 50 Sites Also available

ಬಾಗಲೂರು
SEZ Road
E KHATA LAYOUT
20 x 40 ನಿವೇಶನಗಳು @ 30 ಲಕ್ಷಗಳು
30 x 40 ನಿವೇಶನಗಳು @ 45 ಲಕ್ಷಗಳು
DC Conversion LAYOUT
Vidya Nagar Cross Venkateswara Engineering College
ನಿರ್ಮಾಣಕ್ಕೆ ಸಿದ್ಧವಾಗಿದೆ | ಬ್ಯಾಂಕ್ ಸಾಲ @ LIC HFL | ICICI Bank Home Loans
9880 149 159 | 9731 555 000

PROPERTIES FOR BUYING / SELLING / RENTING IN BANGALORE
Available For Rent / Sale Built To Suit Ground Rent Warehouse, Car Workshop, Godown, Hoskote and Budigere Cross, Jigani, Electronic City, White Field / Soukya Road, Peenya / Yelahanka / New Airport Road Surrounding Areas, 10,000 to 1,00,000 Sft High-end with good Heights.

WANTED
Urgently Required For Genuine Buyers Lands / Sites JD / JV Residential / Commercial, IT Parks / Industry / Warehouses / Star Hotels / Running, Schools / Colleges / Hospitals 1 to 100 Acres also Tenanted Property (ROI) 5 to 9 %, from M.G. Road, 77 Kms Radius.

CONTACT :
MR. SEVENRAJ
98450 20007 / 98457 17777
sevenraj@gmail.com

ಸೈಟುಗಳು ಮಾರಾಟಕ್ಕಿವೆ
ತುಮಕೂರು ರೋಡ್ ಮಾದನಾಯಕನಹಳ್ಳಿ ಹತ್ತಿರ
2600/- ಪ್ರತಿ ಅಡಿಗೆ.
APMC YARD ಪಿಲ್ಲಹಳ್ಳಿ ಹತ್ತಿರ | BMRDA & DC ಸೈಟ್‌ಗಳು ಮಾರಾಟಕ್ಕಿವೆ
ಬ್ಯಾಂಕ್ ಲೋನ್ ದೊರೆಯುತ್ತದೆ
ಸಂಪರ್ಕಿಸಿ: 8880660099

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura
SALE BDA SITE Anjanapura 3rd A Block near Mangalya Appartment, 30x40 South, 10,250/-Sqft. Negotiable. 9740148870.

Arkavathi Layout
SITE FOR SALE ARKAVATHI LAYOUT, 19TH BLOCK 30x40 GOOD LOCATION, Full Developed Immediately Construction CALL: 9108479949

ARKAVATHI LAYOUT 20x30 2nd Block BDA Sampegehalli East Facing Genuine Buyers Call- USR: 7019770736/ 8951614989.

Banashankari
"BANASHANKARI 6TH-STAGE BDA Sites sale 50x80 East facing 60feet Road 40x60 North facing 30x40 40feet Road.Contact: 9845146725/ 9741466369"

SALE BDA Site Banashankari 6th Stage 30X40 N/F opposite to road 4th Block, 12000 per sft. 9945282641.

Bannerghatta Road
30X40 EF, 30x50 EF 30x50 NF 45x55 SF 50x80 NF BBMP A Katha Akshayanagar: 9341238064

Basaweshwaranagar
BASVESHAWARA NAGAR 30×40 40×60 Sadashivanagar 89×132 Residential Rajajinagar 44×60 Commercial Dobaspet, Yeshwanthpur Industrial Site 8660075308

BASAVESHWARANAGAR 3RD-STAGE 3rd Block Good Location 40x60 BDA Site for sale. Contract: 9945079777

Chandapura
"CONTACT FOR SELLING/ BUYING SITES KHB SURYA CITY PHASE-2, BMRDA APPROVED SITES NEAR JIGANI. 9845178335"

Electronic City
GPR LAYOUT 1200 sq ft PLOT at Chandapura Near Electronics city for sale: Whatsapp+91-9150861568

Gnanabharathi
DIRECT OWNER 20X30 BDA SITE SALE Gnanabharathi 1st-Block Valagerahalli, Full Developed Area ₹51 Lakhs. 9742681666

Hanumanthnagar
"30X40 EAST-FACING Site-Sale BBMP 'A'.KATHA Nagendra_Block near_PES College, Hanumanthanagar 15,000/-P.Sft Negotiable. "AVM REAL ESTATE". 9513666788"

Indiranagar
INDIRANAGAR 60X90 East Facing Site With Building For Sale, Genuine Buyers Contact 9900001973 Brokers Excused

Jayanagar
JAYANAGAR 3RD Block Near South End Metro station 40x60 North facing BDA site8,50,00,000/- -9739995042

JAYANAGARA 4TH 'T' Block, 40x60, 27000/- 40x52, 30000/- AndJayanagara 9th Block, 30x40, 3Crores:9739662665

J P Nagar
"JP.NAGAR 6TH-PHASE 90x110_North facing,BBMP 'A'.Katha Site-sale, excellent location price 8,000/-p.sft negotiable "Sanjana Real Estate". 8431302028"

Kanakapura Road
SITE SALE 30×40 WEST FACING Balaji Layout, 35×45 Bikashipura. Good Location. Contact: 9448684258

NARAYANA NAGAR 1st Block 35x60 S/F 60ft Road 30x40 S/F Near Doddakalsandra Metro Station: 9964627255

30X40 WF, 40x60 EF, 50x80 60ft Road EF BDA Approved Sites Judicial Layout Talaghattapura: 9341238064

Kempegowda Layout
KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

COMMERCIAL SITEFOR Sale, Kempegowda Layout 8th Block,Size:163X100, West Face, BDA,NOC,NNA, Conversion Land, Leagal Documnents, Price:4500/- Sq.Ft.Ph:9448793428, 9632227878

Multiple Locations
REQUIRED KANAKAPURA Road, BCC Layout, Gubbalala Vajarahalli, BDA Anjanapura 30x40, 40x60, 50x80. Mob: 8660800061

REQUIRED BDA Anjanapura, BDA Banashankari 40x60, 50x80. Mob: 8660800061

Mysore
SITE FOR Sale 20x30, W/F near Bhogadi Main Road, next to SBM Layout, Mysore. Good locality, Contact: 8095502430/ 9449130300.

Nagarabhavi
EXCELLENT 12,500 sft Site for Sale at Nagarbhavi 1st Stage Very Close to Ring Road Ganesh: 9845028607

SALE RESIDENTIAL site 40X60 @ Nagarabhavi, ITI layout, Clear Title, BBMP A katha. Contact: 9880886474

Rajajinagar
EAST AND North Facing Commercial 4600 Sft Site for Sale at Rajajinagar, Industrial Town, 1st Main Road, (Opp National Public School) Clear Title Rate 25000 per Sft Ganesh: 9845028607

Tumkur
"TUMKUR 40'X40' Site for sale SIT Extension Good location, Genuine Buyers only Contact: 7760388034/ 9242135834"

Uttarahalli
SALE 30X40, JAYANAGARA HOUSING CO-OPERATIVE SOCIETY 1ST BLOCK, NEAR NPS SCHOOL,& SEVEN HILLS APARTMENT :9945835569

Vishweshwariah Layout
"28X40 WEST/SOUTH Corner Residential BDA Site Sale Kanakashree Layout. [Vishveshwaraiah Layout 1st Block]- 9845143579"

SMVLAYOUT BDA 5th Block 30x40 EF Near KLE LAW College Good Location Immediate Construction: 9980860138

VISVESWARAIAH LAYOUT 3rd Block BDA 40x60 on 40ft Road. 6th Block BDA 30x40 (East): 9964971895

AVAILABLE BDA Site Vishweshwariah Layout 2nd Block 40X60 East Facing 60feet Road Good Location: 9743381719

AVAILABLE SMV 4BL. 30x40 NEAR 100ft Road, EWF 2 Site Near KEB BackSide: 9380732662

Mysore
HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

Annapoorneshwari Nagar
SALE NO 491 North Facing 30×62 BDA Khatha 60' Road Annapurneshwari Nagar. 8217362589/ 7204061749

Kodigehalli
SALE OF open plot 40x60 (2400 Sq.ft), West facing, Site No. 317 at JRD TataNagar, Kodigehalli Village, Bangalore. Please contact: 9900933878/ 7702465533

House

J P Nagar
J.P.NAGAR 3RD, North facing old house 50x84 residential, Near Mini forest, 40' Road 10,50,00,000/- -9739995042

Bangalore North
3BHK + Study Independent house with garage, modern interiors. Tatanagar. Asking 6.35 Cr. Genuine buyers contact: nannamanae@gmail.com

Nagarabhavi
***NAGARBHAVI* BDA** 9th Block 30X40 E/F old House Sale 1,30,00000/- negotiable clear-tittle. ABHILASHA CONSULTANT. 9480565758

New BEL Road
SALE: 3BHK, 3BATHS HOUSE, 40x60, AGS LAYOUT, RMV EXTENTION, NEW BEL ROAD. CALL: 9901678035 AGENTS EXCUSE

Vijayanagar
BUILDING SALE Vijayanagar Pipe Line Road 55x62 Sqft 3 Floors Rental Income 1.45 Lakhs 'A' Khata 3.5Cr Call: 6361579235

Flat

Jakkur
WELL MAINTAINED 12yr Old 1206 Sft 2BHK Semi Furnished Flat with Covered Parking at Amruthahalli Near Tech Parks and Phoenix Mall of Asia: 9008943416

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Jayanagar
SEVENTH BLOCK1150,1900, 2200Sft,2/3BHK Flats1.38Cr/2.50Cr/2.75cr, JPN 1ST/7TH Phase 2200Sft,3BHK 1.80Cr,1.60Cr/30X40,4BHK Duplex 2.65cr:8904210201

Sultanpalya
NEAR DMART 3BR SALE, 1 Car Parking, balcony, utility, Pooja, 1256 Sqft Semifurnished, 17 yrs old, NO LIFT. Bharadwaj Estates 9845019934

Agricultural Land

Ramanagar
5 ACRES 27 GUNTAS DEVELOPED COCONUT FARM LAND SALE. NEAR CHENNAPATNA, BETWEEN BANGALORE- MYSORE. 9916551395

Commercial Building

Malleshwaram
FULLY FURNISHED 16,000Sft.A/C Showroom For Rent/Sale On Prime Busy Commercial Area,8th Cross, Malleshwaram. Contact: 9663001940/ 9845358544

Commercial Land

Mysore
FOR SALE ABOUT 86000 Sqft Prime Property on Nanjangud road close to Ganapathy Sachidananda Ashram, Mysore. Contact 9740907835

Out-Station
YERCAUD LAND for Sale: 19000 Sq Ft Land, 5 Minutes From Lake, Valley View, 80 Ft Road Facing for Sale. Suitable for Hotels, Resorts, Independent Bungalows. Whatsapp +91 9150861568

Commerical

Banashankari
KADHIRENAHALLI school building for sale 120x40 East Facing, rate 16000/ per sqft 9886425997

Bannerghatta Road
BANNERAGTTA ROAD Commercial site near DLF Road Krishna Layout Hulimavu 40' Road 70x110, 7,31,00,000/- 9739995042

J P Nagar
J.P. NAGAR 6TH PHASE 30×40 CORNER COMMERCIAL SITE FOR SALE. Good Location. CONTACT : 9448684258

General

Out-Station
GOA BEACH property for sale: South goa, 84300 sq ft, 100% settlement zone, 350 ft road facing, whatsapp+91-9150861568

South
FOR HOUSE Rent, Sale & Purchase of Property in & around BSK 2nd Stage, Jayanagar, JP Nagar, Basavangudi & surrounding areas contact 9535184028

Joint Development

Mysore Road
MADDUR MAIN Road MC Road 3200 sqft 80*40 vacant Land Opp Park, Central location available for Joint Venture. Suitable for Hospitals, Commercial Banks, Showrooms, Supermarkets. Contact: 91-9844648304/ 9980944275. naveen.thandavamurthy@gmail.com

Villas/Bunglows

Vijayanagar
FOR SALE FANCY LUXURIOUS ARCHITECT BUNGLOW SITE 50X80 BUILTUP 7000 SFT VIJAYA NAGAR OWNER: 9900180128

BUILDERS ESSENTIAL

Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

RENTAL PROPERTIES

Accommodation Available

Commercial
AVAILABLE FOR RENT: Ideal for Garments, Printing press, Cold storage, Cloud kitchen, Warehouse etc at Central location Adugodi, Subbana Garden, GF 2400 Sft, FF 3000 Sft, SF 3000Sft, total power available 37 KVA Approach road 20 feet Contact: 9845036560/ 7795099921

SHOP AVAILABLE for Rent. Approximate area 330sqft. in Malavalli Rama Rao lane Off Silver Jubilee Park Road Cross, Bangalore 560002. Interested persons may contact 7338203399, 9448071747

COMMERCIAL BUILDING available for Rent 1400 sqft, 4th Floor, 2AC at Goraguntepalya, Tumkur Road, Bengaluru. Mob-9448274566

OFFICE SPACE AVAILABLE in the heart of the city, 2000 Sq.ft, CSI Compound, behind Unity Building, Bangalore Contact: 9845036560/ 7795099921

COMMERCIAL BUILDING available for Rent 600 sqft, 3rd Floor at Goraguntepalya, Tumkur Road, Bengaluru. Mob-9448274566

MORE Classifieds Ads on Subsequent Pages

EDUCATION CORNER
ಕ್ಲಾಸಿಫೈಡ್ಸ್

ಮ್ಯಾಕ್ಸ್ ಮುಲ್ಲರ್ ಪಬ್ಲಿಕ್ ಸ್ಕೂಲ್
MAX MULLER PUBLIC SCHOOL Bangalore
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಇಂಗ್ಲಿಷ್ ನರ್ಸರಿ – ಪ್ರಾಥಮಿಕ ಮತ್ತು ಪ್ರೌಢಶಾಲೆ
ಪ್ರವೇಶ ಪ್ರಾರಂಭವಾಗಿದೆ
2024-2025 ಸೀಮಿತ ಸೀಟುಗಳು ಮಾತ್ರ
ನರ್ಸರಿ ಯಿಂದ 10ನೇ ತರಗತಿ
25ನೇ ವರ್ಷದ ವಾರ್ಷಿಕೋತ್ಸವ
ಪ್ರವೇಶ ಶುಲ್ಕವಿಲ್ಲ
ಮ್ಯಾಕ್ಸ್ ಮುಲ್ಲರ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ಗಳು ಜ್ಞಾನವುಳ್ಳ, ಪ್ರತಿಭಾವಂತ, ತರಬೇತಿ ಪಡೆದ, ಅರ್ಹ ಮತ್ತು ಅನುಭವಿ ಶಿಕ್ಷಕರೊಂದಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತದೆ
ಶಾಲೆಯು ತನ್ನ ಆರೈಕೆಯಲ್ಲಿರುವ ಚಿಕ್ಕ ಮಕ್ಕಳನ್ನು ಪ್ರೇರೇಪಿಸಲು ಮತ್ತು ಕಾಳಜಿಯುಳ್ಳ ಸಮಾಜವನ್ನು ನಿರ್ಮಿಸಲು ಕೊಡುಗೆ ನೀಡುವುದನ್ನು ಮುಂದುವರಿಸಲು ಇದು ಆಡಳಿತದ ಪ್ರಾರ್ಥನೆಯಾಗಿದೆ.



ನಂ. 158, 8ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್ ಲೇಔಟ್, ಬಸವೇಶ್ವರನಗರ, ಬೆಂಗಳೂರು– 560 079.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಸಮಯ ಬೆಳಿಗ್ಗೆ : 9.30 ರಿಂದ 3.30ರ ವರೆಗೂ 080 - 23233455

Flats
AVAILABLE 3 BHK Furnished Spacious Apartment Flat Mysore Road For Lease Rupees 25 Lakhs: 9738223432

House
RENT, SRINIVASANAGARA BSK 1st stage, 9th A main, 2 BHK, Ground floor. 'Vegetarians Only' 9448202817, 9141268617

REAL ESTATE BUYING

Sites

Anjanapura
WANTED BDA Site Anjanapura, Banashankari 6th Stage, Vishweshwaraiah layout & any BDA Katha, JPNagar 8 & 9 phase immediate settlement. genuine Sellers Contact: 9902038118, 9449060605

Banashankari
WANTED BANASHANKARI 6th Stage Anjanapura JP Nagar, Kanakapura Road Any Measurement Immediate Settlement: 9964627255

Multiple Locations
ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

MATRIMONIAL

Brides Wanted

Muslim
BRIDE WANTED
Matrimonial proposal invited for an educated IT professional US citizen man. Age : 44, born in 1979; height : 5 ft 10 inches tall (decent height); Muslim. Presently living in USA, but open to shifting. US educated (2 degrees) with employment experience in corporate America. Kindly submit a complete Bio-Data and 3-4 recent photos.
E-mail: SLASTYAED@gmail.com (preferred) or WhatsApp: 1-616-216-4297

MUSLIM HANDSOME Boy 1996 Born/ 5'10 M.S CS at Northwestern University (Chicago) Working as a Lead AI Software Researcher. Family well- settled in Bangalore is looking for a suitable match (080-69141304)

MUSLIM BOY 33 Year /6 Ft/ Doctor resident of USA Affluent family is looking for educated and doctor girl (080-69144008)

Grooms Wanted

Konkani
SUITABLE MATCH for Hindu girl, never married, Engineer, Senior Officer, 1981 born, pretty, from affluent family. Call/ WA +91 99235 47927

Muslim
MUSLIM BEAUTIFUL girl from Bangalore 1998 Born from a Royal Class family is looking for a suitable match (080-69144008)

EDUCATIONAL

Special Courses
DIPLOMA IN Student Counselling, 5th Batch, 6 months, ONLINE course, Starts:16-Jan. WhatsApp 9886044221. www.darwinpsychologycentre.com

ಪಿಎಚ್.ಡಿ ಪ್ರದಾನ
ಶ್ರೀಮತಿ ವಿನುತ ಹೆಚ್. ಇವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 18.12.2023 ರಿಂದ ಅನ್ವಯವಾಗುವಂತೆ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಗೆ ಅರ್ಹರೆಂದು ಘೋಷಿಸಿದೆ. ಇವರು ಡಾ.ತಿಪ್ಪೇಸ್ವಾಮಿ ಜಿ. ಮುಖ್ಯಸ್ಥರು ಕಂಪ್ಯೂಟರ್ ಸೈನ್ಸ್, ಇಂಜಿನಿಯರಿಂಗ್, ಬಿ.ಎಂ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು ಇವರ ಮಾರ್ಗದರ್ಶನದಲ್ಲಿ "ಎಫಿಶಿಯೆಂಟ್ ಅಲ್ಗೋರಿದಮಿಕ್ ಮಾಡೆಲ್ಸ್ ಫಾರ್ ಆಂಟಿ– ಸ್ಪೂಫಿಂಗ್ ಇನ್ ಫೇಶಿಯಲ್ ಬಯೋ–ಮೆಟ್ರಿಕ್ ಸಿಸ್ಟಮ್" ಎಂಬ ಮಹಾ ಪ್ರಬಂಧವನ್ನು ಸಲ್ಲಿಸಿದ್ದರು.



BUSINESS

Business to Business

Finance
LOAN AGAINST PROPERTY/ BUSINESS/ PROJECTS CONTACT : +91 8754809650

AUTOMOTIVE

Four Wheelers Selling

Tata
TATA HEXA HTA 2017 Model 46000 km. Excellent condition. Single Owner, white, 16 Lakhs. Contact: 9845885199.

PERSONAL

Change of Name

CHANGE OF NAME
I, B M PADMAVATHY is Legally Wedded spouse of No.14456580W Ex-HAV MARUTHY, Residing at # 30,2, D 2nd Main, 2nd Cross, Flour Mill Road, Aswath Nagar, Bengaluru-560094 have changed my name to **B M PADMAVATHI** vide affidavit dated 05-01-2024, before Notary Leela A, Bengaluru.

I, SUMIT SAHU, have changed my name to SUMIT KUMAR SAHU, Vide Affidavit dated 06.01.2024 sworn before advocate and notary Ambujakshi, Bangalore

I, PREETHI RAMYA N, have changed my name to KANIKSHA N. Vide Affidavit dated 06.01.2024 sworn before advocate and notary Ambujakshi, Bangalore

CHANGE OF NAME
I, S PRAVEENA KUMAR, Residing at # 214, 5th Main, 5th Cross, Gururaja Layout, Behind Vidyapeeta BSK 3rd Stage, Bengaluru- 560028 have changed my name to **S PRAVEEN KUMAR** vide affidavit dt:06-01-2024, before Notary Mamatha N K Bengaluru Henceforth I shall be called **S PRAVEEN KUMAR** only.

CHANGE OF NAME
I, SANTHA is legally Wedded spouse of No.1364274F, Rank: Ex-NK, Name: K. Sananda Ganesha Sanna Veerappa, Residing at # 16, Karjigi Nest, 2nd Cross, Venkatadri Garden, Chikkagubbi Village, Kannur Main Road, Dr. Shivaram Karanth Nagar Post, Bengaluru - 560077, have changed my name to **SHANTHA**, vide affidavit dated 05-01-2024, before Notary Gangaraju B N, Bengaluru.

CHANGE OF NAME
I, CHANDRAKANTH V, Residing at # 185, Kalappa Layout, Near Najareddy Colony, Konena Agrahara, Vimanapura Post, Bangalore- 17 have changed my minor daughter's name from CHUMUDVI C to **CHARUNYA C** vide affidavit dt:26-10-2023, before VIII Addl. Chief Metropolitan Magistrator, Bangalore

CHANGE OF NAME
I, PATEL IDREES SALIM Residing at No.32, 2nd Cross Road, Opp to Reva University, Kattiganahalli, Yelahanka, Bangalore North-560064 have changed my name to IDREES MOHAMMED SALEEM PATEL vide affidavit dated 03.01.2024 before notary H.K. Gopalagowda, Bangalore. Henceforth I shall be called **IDREES MOHAMMED SALEEM PATEL** only.

Lost
I, DR.ANURADHA.T.S D/O. Shashidhar.T.G R/O#1549, 2nd Stage, Chandra Layout,Bengaluru. Have lost Original BDA POSSESSION CERTIFICATE- Ref: PCR:118-2003-04 during travel on 04-01-2024 at Chandra Layout, Bengaluru. Lodged PoliceComplaint in this regard- Ref:0877160/2024 on 05-01-2024.

WEEKEND CORNER
ಕ್ಲಾಸಿಫೈಡ್ಸ್

NEW JERSEY CRASH BARRIER FOR SALE ALONG WITH ADVERTISEMENT BOARD
(2Mtr Per No's)

SIZE DETAILS
NEW JERSEY CRASH BARRIER: 2.78 FT *6.51 FT *1.14 FT THICK
ADVERTISEMENT BOARD: 3.93 FT *6.51 FT



VIJAY NIRMAN COMPANY PVT LTD
ENGINEERS CONSTRUCTORS
AN ISO 9001:2008 CERTIFIED COMPANY
VIJAY NIRMAN COMPANY PVT. LTD.
DEVANAHALLI, BANGALORE
7760525000 | 9740077980

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಘೋಷಣೆಗೆ ಆಗ್ರಹ

ಬೆಂಗಳೂರು: ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಣೆ ಮಾಡಬೇಕೆಂದು ಆಗ್ರಹಿಸಿ ಫೆ. 10 ರಂದು ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ಉತ್ತರ ಕರ್ನಾಟಕ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ನಾಗೇಶ ಗೋಲಶೆಟ್ಟಿ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉತ್ತರ ಕರ್ನಾಟಕ ಭಾಗದ 15 ಜಿಲ್ಲೆಗಳ ಅಭಿವೃದ್ಧಿಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ನಮ್ಮ ಭಾಗದ ಮುಖಂಡರಿಗೆ ಯಾವುದೇ ರೀತಿಯ ರಾಜಕೀಯ ಪ್ರಾತಿನಿಧ್ಯ ನೀಡುತ್ತಿಲ್ಲ' ಎಂದರು.



ಅವರೆ ಮೇಳ

ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಶುಕ್ರವಾರ ನಡೆದ 'ಶ್ರೀ ವಾಸವಿ ಅವರೆಬೇಳೆ ಮೇಳ'ದಲ್ಲಿ ಆಹಾರ ಸವಿಯಲು ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು

ಪ್ರಜಾವಾಣಿ ಚಿತ್ರ

ವಿದ್ಯಾರ್ಥಿನಿಯ ಪೋಷಕರೊಬ್ಬರು ದಾಖಲಿಸಿದ್ದ ಮೊಕದ್ದಮೆ

ನ್ಯಾಯಾಂಗ ನಿಂದನೆ: ಮಲ್ಲೇಶ್ವರ ಬ್ರಿಗೇಡ್ ಶಾಲೆಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದ ಆದೇಶದ ಅನ್ವಯ ತರಗತಿಗೆ ಹಾಜರಾಗಲು 9ನೇ ತರಗತಿಯ ವಿದ್ಯಾರ್ಥಿನಿಗೆ ಅನುಮತಿ ನೀಡದ ಮಲ್ಲೇಶ್ವರದ ಬ್ರಿಗೇಡ್ ಗೇಟ್ ವೇ ಎನ್ ಕ್ಲೇವ್ ನಲ್ಲಿರುವ ಬ್ರಿಗೇಡ್ ಶಾಲೆಗೆ ಹೈಕೋರ್ಟ್ ₹ 1 ಲಕ್ಷ ದಂಡ ವಿಧಿಸಿದೆ

ವಿದ್ಯಾರ್ಥಿನಿಯ ಪೋಷಕ ಜಗದೀಪ್ ರಾವ್ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಮೊಕದ್ದಮೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ದಂಡದ ಮೊತ್ತವನ್ನು ಮುಂದಿನ ಎರಡು ವಾರಗಳಲ್ಲಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ಪಾವತಿಸಬೇಕು' ಎಂದು ನಿರ್ದೇಶಿಸಿರುವ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.



ವಿಚಾರಣೆ ವೇಳೆ ಶಾಲೆಯ ಪರ ಹಾಜರಿದ್ದ ವಕೀಲರು, 'ನ್ಯಾಯಾಲಯದ ಆದೇಶ ಗಮನಕ್ಕೆ ಬಂದ ಕೂಡಲೇ ಶಾಲಾ ಆಡಳಿತ ಮಂಡಳಿ ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿನಿಗೆ ಅವಕಾಶ ಕಲ್ಪಿಸಿದೆ. ಬೇಷರತ್ತಾಗಿ ಕ್ಷಮೆಯನ್ನೂ ಯಾಚಿಸಲಾಗಿದೆ. ವಿದ್ಯಾರ್ಥಿನಿಗೆ ಆಗಿರುವ ಶೈಕ್ಷಣಿಕ ನಷ್ಟ ಸರಿದೂಗಿಸಲು ಹೆಚ್ಚುವರಿ ತರಗತಿ ನಡೆಸಲಾಗುವುದು. ಅಗತ್ಯವಿದ್ದಲ್ಲಿ ಕಿರು ಪರೀಕ್ಷೆ ನಡೆಸಿ ಮುಖ್ಯ ಪರೀಕ್ಷೆಗೆ ಅಡ್ಡಿಯಾಗದಂತೆ ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಿದರು.

ಮುಖ್ಯಾಂಶಗಳು

- ದಂಡದ ಮೊತ್ತ ಮುಖ್ಯಮಂತ್ರಿ ಪರಿಹಾರ ನಿಧಿಗೆ ಪಾವತಿಸಲು ಆದೇಶ
- ಆದೇಶ ಹೊರಬಿದ್ದ ಬೆನ್ನಲ್ಲೇ, ತರಗತಿಗೆ ಹಾಜರಾಗಲು ವಿದ್ಯಾರ್ಥಿನಿಗೆ ಅವಕಾಶ

ಆದರೆ, ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ 'ಯಾವುದೇ ಶಿಕ್ಷಣ ಸಂಸ್ಥೆ ಮಕ್ಕಳ ಭವಿಷ್ಯದ ಜೊತೆ ಈ ರೀತಿ ಚೆಲ್ಲಾಟ ಆಡಬಾರದು. ಇಂತಹ ವರ್ತನೆ ತೋರಿದವರನ್ನು ಹಗುರವಾಗಿ ನೋಡಿದರೆ ಸಾಲದು. ಇಂತಹ ಶಿಕ್ಷಣ ಸಂಸ್ಥೆಗಳಿಗೆಲ್ಲಾ ಒಂದು ಎಚ್ಚರಿಕೆ ಸಂದೇಶ ರವಾನೆ ಆಗಬೇಕಿದೆ' ಎಂದು ಅಭಿಪ್ರಾಯಪಟ್ಟು ದಂಡ ವಿಧಿಸಿ ಆದೇಶಿಸಿದೆ.

ಪ್ರಕರಣವೇನು?: 'ಅರ್ಜಿದಾರರ ಪುತ್ರಿ ಶಾಲೆಯ ನೈತಿಕ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ' ಎಂಬ ಆರೋಪದಡಿ '₹10 ಸಾವಿರ ದಂಡ ನೀಡಬೇಕು ಮತ್ತು ಮುಚ್ಚಳಿಕೆ ಪತ್ರ ಬರೆದುಕೊಡಬೇಕು' ಎಂದು ಶಾಲಾ ಆಡಳಿತ ಮಂಡಳಿ ವಿದ್ಯಾರ್ಥಿನಿಗೆ ಸೂಚಿಸಿತ್ತು.

ವಿದ್ಯಾರ್ಥಿನಿಯು, ದಂಡ ಮತ್ತು ಮುಚ್ಚಳಿಕೆ ಪತ್ರ ನೀಡದ ಹಿನ್ನೆಲೆಯಲ್ಲಿ ತರಗತಿಗಳಿಗೆ ಹಾಜರಾಗಲು ಆಕೆಗೆ ಅವಕಾಶ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಪೋಷಕರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ, ವಿದ್ಯಾರ್ಥಿನಿಗೆ ತರಗತಿಗೆ ಹಾಜರಾಗಲು ಅವಕಾಶ ನೀಡುವಂತೆ ಮಧ್ಯಂತರ ಆದೇಶ ನೀಡಿತ್ತು. ಆದರೆ, 'ಶಾಲಾ ಆಡಳಿತ ಮಂಡಳಿ ಈ ಆದೇಶವನ್ನು ಪಾಲನೆ ಮಾಡಿಲ್ಲ' ಎಂದು ಆರೋಪಿಸಿ ಈ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿತ್ತು.

ಶಾಂತಿ ನಾಯಕ ಸೇರಿ ಎಂಟು ಮಂದಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಿಕಾ ಸಾಹಿತ್ಯ ವೇದಿಕೆ ನೀಡುವ 2023ನೇ ಸಾಲಿನ 'ಲೇಖಿಕಾ ಪುಸ್ತಕ ಪ್ರಶಸ್ತಿ'ಗೆ ಲೇಖಕಿ ಶಾಂತಿ ನಾಯಕ ಸೇರಿ ಎಂಟು ಮಂದಿ ಆಯ್ಕೆಯಾಗಿದ್ದಾರೆ.

'ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿ'ಗೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶಾಂತಿ ನಾಯಕ ಅವರನ್ನು ಆಯ್ಕೆ ಮಾಡಲಾಗಿದೆ. 'ನಿಡಸಾಲೆ ಪುಟ್ಟಸ್ವಾಮಯ್ಯ ನಾಟಕ ಪ್ರಶಸ್ತಿ'ಗೆ ಧಾರವಾಡದ ಶೈಲಾ ಛಬ್ಬಿ ಅವರ 'ಇಪ್ಪತ್ತೈದು ಪ್ರಹಸನಗಳು' ಮತ್ತು ಮೈಸೂರಿನ ಗಣೇಶ ಅಮೀನಗಡ ಅವರ 'ಬಿಚ್ಚಿದ ಜೋಳಿಗೆ' ಕೃತಿ, 'ಅಪೂರ್ವ ಕಾದಂಬರಿ ಪ್ರಶಸ್ತಿ'ಗೆ ಮೈಸೂರಿನ ಗೀತಾ ಸೀತಾರಾಂ ಅವರ 'ರಾಜ ಕಲಾವಿದ ರವಿವರ್ಮ' ಪುಸ್ತಕ, 'ಮಂಗಳಾ ರಾಮಚಂದ್ರ ಮಕ್ಕಳ ಸಾಹಿತ್ಯ ಪ್ರಶಸ್ತಿ'ಗೆ ಸಂತೆಬೆನ್ನೂರಿನ ಫೈಜ್ನಟ್ರಾಜ್ ಅವರ 'ಮಗಳಿಗೆ ಹೇಳಿದ ಕಥೆಗಳು' ಕೃತಿ ಆಯ್ಕೆಯಾಗಿದೆ.

'ಕಮಲ ಸುರೇಶ ರಾವ್ ಮನೋಳಿ ಕಥಾ ಪ್ರಶಸ್ತಿ'ಗೆ ಧಾರವಾಡದ ವಿನುತಾ ಹಂಚಿನಮನಿ ಅವರ 'ಅನುಸಂಧಾನ' ಕೃತಿ ಹಾಗೂ 'ಲೇಖಿಕಾ ವಿಶೇಷ ಪ್ರಶಸ್ತಿ'ಗೆ ಬೆಂಗಳೂರಿನ ಬೇಲೂರು ರಘುನಂದನ್ ಅವರ 'ಚಿಟ್ಟೆ' ಮತ್ತು ಕೆ.ವಿ. ರಾಜಲಕ್ಷ್ಮಿ ಅವರ 'ಲಾಸ್ಟ್ ಬೆಂಚ್ ಹುಡುಗಿ ಮತ್ತು ಇತರ ಕಥೆಗಳು' ಕೃತಿ ಆಯ್ಕೆಯಾಗಿದೆ.

ಶೈಲಜಾ ಸುರೇಶ್, ಸರಸ್ವತಿ ನಟರಾಜ್, ವಿದ್ಯಾ ಶಿರಹಟ್ಟಿ ತೀರ್ಪುಗಾರರಾಗಿದ್ದರು. ಲೇಖಿಕಾ ಸಾಹಿತ್ಯ ವೇದಿಕೆ ಮಾರ್ಚ್ ತಿಂಗಳಲ್ಲಿ ಆಯೋಜಿಸುವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ



ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಅಂಗವಾಗಿ ಶನಿವಾರ ನಡೆದ ಸಂವಾದದಲ್ಲಿ ಇಂಕ್(ಐಎನ್‌ಕೆ) ಸಂಸ್ಥಾಪಕಿ ಲಕ್ಷ್ಮಿ ಪ್ರಾತುರಿ ಹಾಗೂ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಪಾಲ್ಗೊಂಡಿದ್ದರು

–ಪ್ರಜಾವಾಣಿ ಚಿತ್ರ



ವಿಜಯನಗರದಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ ಹಾಗೂ ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆ ಕಾರ್ಯಕ್ರಮದಲ್ಲಿ ಕಾಶೀಜ್ಞಾನಸಿಂಹಾನಾಧೀಶ್ವರ ಪೀಠಾಧ್ಯಕ್ಷ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ (ಎಡದಿಂದ ಮೂರನೇ) ಬರೆದಿರುವ ಇಷ್ಟಲಿಂಗಾಷ್ಟಕಮ್ ಪುಸ್ತಕವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬಿಡುಗಡೆ ಮಾಡಿದರು. (ಎಡದಿಂದ) ಶಿವಗಂಗೆ ಕ್ಷೇತ್ರದ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಭೂಪತಿಪುರ ವೀರ ಸಿಂಹಾಸನ ಸಂಸ್ಥಾನ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಮತ್ತು ಬಿಜೆಪಿ ಮುಖಂಡ ಮರಿಸ್ವಾಮಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ದುಬಾರಿ ದರದ ಉತ್ಪನ್ನಗಳನ್ನು ಕುತೂಹಲದಿಂದ ವೀಕ್ಷಿಸಿದ ಪ್ರೇಕ್ಷಕರು ● ಫೋಟೊ, ಸೆಲ್ಫಿ ತೆಗೆದುಕೊಂಡು ಸಂಭ್ರಮ

ಸಿರಿಧಾನ್ಯ ಮೇಳ: ಆಡಿನ ಹಾಲಿನ ಸೋಪು

● ಬಾಲಕೃಷ್ಣ ಪಿ.ಎಚ್.



'ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಆಯೋಜಿಸಲಾಗಿದ್ದ ಧಾನ್ಯಗಳ ಪ್ರದರ್ಶನವನ್ನು ಜನ ಕುತೂಹಲದಿಂದ ವೀಕ್ಷಿಸಿದರು
ಪ್ರಜಾವಾಣಿ ಚಿತ್ರಗಳು/ಎಂ.ಎಸ್. ಮಂಜುನಾಥ್

ಬೆಂಗಳೂರು: ಆಡಿನ ಹಾಲಿನ ಉತ್ಪನ್ನಗಳು ಸಿರಿಧಾನ್ಯ ಮೇಳದಲ್ಲಿ ವಿಶಿಷ್ಟ ಆಕರ್ಷಣೆಗೆ ಒಳಗಾದವು. ಹಾಲಿನ ಸೋಪು ಕಂಡು ಜನರು ಪುಳಕಿತರಾದರು. ಅದರ ದರ ಕೇಳಿದ ಮೇಲೆ ಮುಟ್ಟಿ ನೋಡಿಯೇ ತೃಪ್ತಿಪಟ್ಟರು.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಯಡಹಳ್ಳಿ 'ಯಶೋದ ವನ'ದ ಮಳಿಗೆ ವೀಕ್ಷಕರಿಂದ ತುಂಬಿ ಹೋಗಿತ್ತು. ಆಡಿನ ಹಾಲಿನ 200 ಗ್ರಾಂ ಪ್ಯಾಕೆಟ್‌ಗೆ ₹ 130 ದರ ಇದ್ದರೂ ಆರೋಗ್ಯಕ್ಕೆ ಒಳ್ಳೆಯದು, ಔಷಧೀಯ ಅಂಶಗಳಿವೆ ಎಂಬ ಕಾರಣಕ್ಕೆ ರೈತರು ಖರೀದಿಸಿದರು. ಸೋಪಿನ ಬೆಲೆ 100 ಗ್ರಾಂಗೆ ₹400 ಇತ್ತು. ತುಪ್ಪದ ಬೆಲೆ ಕೂಡ ಅಷ್ಟೇ ಇತ್ತು.

'ಆಡಿನ ಹಾಲು ಪ್ಯಾಕೆಟ್ ಅನ್ನು ಒಯ್ದು 4 ತಿಂಗಳವರೆಗೆ ಇಡಬಹುದು. ಆದರೆ, ಒಮ್ಮೆ ತೆರೆದರೆ ಎರಡು ದಿನಗಳ ಒಳಗೆ ಬಳಸಬೇಕು' ಎಂದು ಮಳಿಗೆಯಲ್ಲಿ ಪ್ರಶಾಂತ್ ಮಾಹಿತಿ ನೀಡಿದರು.

'ಆಡಿನ ಹಾಲು ಒಯ್ಯುತ್ತಿದ್ದಾರೆ. ತುಪ್ಪ, ಸೋಪಿಗೂ ಉತ್ತಮ ಬೇಡಿಕೆ ಬಂದರೆ ಮುಂದೆ ಚೀಸ್ (ಗಿಣ್ಣು), ಪನ್ನೀರು, ಐಸ್‌ಕ್ರೀಂ, ರಸಗುಲ್ಲಾ, ಚಾಕೊಲೇಟ್ ಸಹಿತ ವಿವಿಧ ಉತ್ಪನ್ನಗಳನ್ನು ತಯಾರಿಸುವ ಯೋಜನೆಯನ್ನು ಯಶೋದವನ ಇಟ್ಟುಕೊಂಡಿದೆ' ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಪುಂಗನೂರು ಹಸು: ಭಾರತದ ಹಸುಗಳ ಮೂಲ ತಳಿಗಳಲ್ಲಿ ಅತಿ ವೇಗದಲ್ಲಿ ಅಳಿವಿನಂಚಿಗೆ ಸಾಗುತ್ತಿರುವ ಪುಂಗನೂರು ಗಿಡ್ಡಹಸುಗಳೆರಡು ತನ್ನ ಆಕಾರ ಮತ್ತು ಸೌಂದರ್ಯದಿಂದ ಸೆಳೆದವು.

2ರಿಂದ 3 ಅಡಿಯಷ್ಟೇ ಬೆಳೆಯುವ ಈ ಹಸುಗಳ ಬೆಲೆ ಮಾತ್ರ ₹ 1.5 ಲಕ್ಷದಿಂದ ₹ 2 ಲಕ್ಷದವರೆಗೆ ಇದೆ. ಒಂದು ಲೀಟರ್‌ವರೆಗೆ ಹಾಲು ನೀಡುತ್ತಿದೆ. ಇದರ ಹಾಲಿಗೂ ಆಡು, ಮೇಕೆಗಳ ಹಾಲಿನಂತೆ ಭಾರಿ ಬೆಲೆ ಎಂದು ಅರುಣ್ ಯಡಹಳ್ಳಿ ಮಾಹಿತಿ ನೀಡಿದರು.

ಸಿರಿಧಾನ್ಯಗಳಿಗೆ ಬೇಡಿಕೆ: ಮೇಳದಲ್ಲಿ ಇರುವ ವಿವಿಧ ಸಿರಿಧಾನ್ಯಗಳ ಉತ್ಪನ್ನಗಳಿಗೆ ಶನಿವಾರ ಭಾರಿ ಬೇಡಿಕೆ ಕಂಡು ಬಂತು. 'ಜನರಿಗೆ ನೈಸರ್ಗಿಕ ಆಹಾರದ ಬಗ್ಗೆ ಜಾಗೃತಿ ಮೂಡಿದೆ. ಹಾಗಾಗಿ ಖರೀದಿ ಹೆಚ್ಚಾಗಿದೆ' ಎಂದು 'ಧರ್ಮಸ್ಥಳ ಸಿರಿ' ಮಳಿಗೆಯ ಮಹಾದೇವ್ ತಿಳಿಸಿದರು.

ಕೆಲವು ಮಳಿಗೆಗಳಲ್ಲಿ ಆಹಾರ ಉತ್ಪನ್ನಗಳ ಮಾರಾಟ ಮಾಡುವ ಮುನ್ನ ಗ್ರಾಹಕರು ರುಚಿ ನೋಡಲೆಂದು ರಾಗಿ ಬೋಟಿ, ಉಪ್ಪಿನಕಾಯಿ ಸಹಿತ ವಿವಿಧ ಉತ್ಪನ್ನಗಳನ್ನು ನೀಡುತ್ತಿದ್ದರು. ಈ ಮಳಿಗೆಗಳಲ್ಲಿ ಖರೀದಿಗಿಂತ ರುಚಿ ನೋಡುವವರ ಸಂಖ್ಯೆಯೇ ಹೆಚ್ಚಾಗಿತ್ತು.

ಮಂಡ್ಯದ ಬೆಲ್ಲವನ್ನು ಚಿತ್ತಾಕರ್ಷಕವಾಗಿ ಅಲಂಕರಿಸಿ ಇಡಲಾಗಿತ್ತು. ಜನರು ಅದರ ಮುಂದೆ ನಿಂತು ಫೋಟೊ, ಸೆಲ್ಫಿ ತೆಗೆದುಕೊಂಡರು. ಪೌಷ್ಟಿಕ ಆಹಾರದ ಉತ್ಪನ್ನಗಳ ಬಗ್ಗೆ ಪ್ರಚಾರಕ್ಕಾಗಿ ವಿವಿಧ ಕಂಪನಿಗಳ ಮಳಿಗೆಗಳಲ್ಲಿ ವಿವಿಧ ಆಟಗಳನ್ನು ಇಟ್ಟು ಜನರನ್ನು ಸೆಳೆಯುವುದು ಸಾಮಾನ್ಯ ದೃಶ್ಯವಾಗಿತ್ತು.

ನೂರಾರು ಬೇಳೆಕಾಳುಗಳು, ಭತ್ತದ ತಳಿಗಳು ಅಕ್ಕಿಯ ವೈವಿಧ್ಯಗಳು, ಜೋಳ, ರಾಗಿ ನವಣೆ, ಸಜ್ಜೆ, ಸಾಮೆ, ಕೊರಳೆ, ಬರಗು ಸಹಿತ ವಿವಿಧ ಧಾನ್ಯಗಳು ಗಮನ ಸೆಳೆದವು.



ಪ್ರದರ್ಶನಕ್ಕೆ ಇಟ್ಟಿದ್ದ ಭತ್ತದ ವಿವಿಧ ತಳಿಗಳು



ಆಕರ್ಷಣೆಯ ಕೇಂದ್ರ ಬಿಂದು ಆಗಿರುವ ಪುಂಗನೂರು ತಳಿಯ ಹಸುಗಳು

ಮೇಳ ಯಶಸ್ವಿ: ಚಲುವರಾಯಸ್ವಾಮಿ

ಬೆಂಗಳೂರಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಹಮ್ಮಿಕೊಂಡಿರುವ ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳವು ಯಶಸ್ವಿಯಾಗಿ ನಡೆಯುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೊದಲ ದಿನವೇ 60 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು. ಆಸ್ಟ್ರೇಲಿಯಾ, ಯುರೋಪ್, ಕೀನ್ಯಾ, ಕುವೈತ್, ಯುಎಇ, ದೇಶಗಳ ಮಾರುಕಟ್ಟೆದಾರರು ಮೇಳದಲ್ಲಿ ಭಾಗವಹಿಸಿದ್ದಾರೆ. ಅಂತರರಾಷ್ಟ್ರೀಯ 7, ಹೊರರಾಜ್ಯಗಳ 40 ಹಾಗೂ ರಾಜ್ಯದ 50 ಮಾರುಕಟ್ಟೆದಾರರು ಭಾಗವಹಿಸಿದ್ದಾರೆ. 97 ಮಾರುಕಟ್ಟೆದಾರರು, 154 ಉತ್ಪಾದಕರು ಬಿ2ಬಿಯಲ್ಲಿದ್ದಾರೆ ಎಂದು ವಿವರಿಸಿದರು.

310 ಮಳಿಗೆಗಳು ಮೇಳದಲ್ಲಿದ್ದು, 190 ಮಳಿಗೆಗಳು ಸಾವಯವ ಮತ್ತು ಸಿರಿಧಾನ್ಯ ಸಂಸ್ಥೆಗಳು ರಫ್ತುದಾರರು, ಮಾರಾಟಗಾರರು, ರೈತ ಗುಂಪುಗಳು, ಪ್ರಾಂತೀಯ ಒಕ್ಕೂಟಗಳು, ಸಾವಯವ ಪರಿಕರ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ಸಂಸ್ಥೆಗಳು ಪಾಲ್ಗೊಂಡಿವೆ ಎಂದರು.

ಸಿರಿಧಾನ್ಯಗಳನ್ನು ಕಡಿಮೆ ಖರ್ಚು, ಕಡಿಮೆ ಸಮಯದಲ್ಲಿ ಬೆಳೆದು ಆರ್ಥಿಕ ಸ್ವಾವಲಂಬನೆ ಸಾಧಿಸಬಹುದು. ಹೆಕ್ಟೇರ್‌ಗೆ ₹10 ಸಾವಿರ ಪ್ರೋತ್ಸಾಹ ಧನ ನೀಡುತ್ತಿದ್ದು, ಅದನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಹೇಳಿದರು.

ಸುದ್ದಿ 2 ನಿಮಿಷ

ರೇಷ್ಮೆ ಭವನಕ್ಕೆ ಹೂಡಿಕೆ- ಪ್ರಸ್ತಾವನೆ ಮಂಡಿಸಿ: ಸಿ.ಎಂ

ಬೆಂಗಳೂರು: ನಗರದ ಓಕಳಿಪುರಂನಲ್ಲಿ ರೇಷ್ಮೆ ಇಲಾಖೆಗೆ ಸೇರಿದ ಜಾಗದಲ್ಲಿ ರೇಷ್ಮೆ ಭವನ ನಿರ್ಮಾಣಕ್ಕೆ ಹೂಡಿಕೆ ಮಾಡಲು ಕರ್ನಾಟಕ ಗಣಿಗಾರಿಕೆ ಅಭಿವೃದ್ಧಿ ನಿಗಮ ಮುಂದೆ ಬಂದಿದ್ದು, ಈ ಕುರಿತು ಸಚಿವ ಸಂಪುಟ ಸಭೆಗೆ ವಿವರವಾದ ಪ್ರಸ್ತಾವನೆ ಮಂಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಈ ಯೋಜನೆಯ ರೂಪುರೇಷೆಗಳ ಕುರಿತ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದ ಮುಖ್ಯಮಂತ್ರಿ, ನಗರದ ಕೇಂದ್ರ ಭಾಗದಲ್ಲಿ ಈ ಜಾಗ ಇರುವುದರಿಂದ ಇದರ ಸದುಪಯೋಗ ಮಾಡಿಕೊಳ್ಳುವ ಕುರಿತು ವಿವರವನ್ನೂ ಸಲ್ಲಿಸಬೇಕು ಎಂದು ತಿಳಿಸಿದರು.

ಈ ಜಾಗದಲ್ಲಿ ವ್ಯಾಪಾರಿ ಮಳಿಗೆಗಳು, ಕಚೇರಿಗಳನ್ನು ನಿರ್ಮಿಸಿ, ಬಾಡಿಗೆಗೆ ನೀಡುವ ಮೂಲಕ ಬರುವ ಆದಾಯವನ್ನು ರೇಷ್ಮೆ ಇಲಾಖೆ ಹಾಗೂ ಕರ್ನಾಟಕ ಗಣಿಗಾರಿಕೆ ಅಭಿವೃದ್ಧಿ ನಿಗಮವು ಹಂಚಿಕೆ ಮಾಡಿಕೊಳ್ಳುವ ಕುರಿತು ಕೂಡಾ ಮಾಹಿತಿ ನೀಡಬೇಕು ಎಂದೂ ಸೂಚಿಸಿದರು.



ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ತೋಟಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಸಭೆಯಲ್ಲಿದ್ದರು.

ಕೆಆರ್‌ಎಸ್ ಪಕ್ಷದಿಂದ ಯುವ ಸಮಾವೇಶ 12ಕ್ಕೆ

ಬೆಂಗಳೂರು: ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ (ಕೆಆರ್‌ಎಸ್) ಇದೇ 12ರಂದು ಕೊಪ್ಪಳದಲ್ಲಿ ಯುವ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಯುವ ಘಟಕದ ರಾಜ್ಯ ಅಧ್ಯಕ್ಷೆ ಜನನಿ ವತ್ಸವ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದ ಅಭಿವೃದ್ಧಿ ಮಹತ್ವದ ಪಾತ್ರ ವಹಿಸುವ ಯುವ ಸಮುದಾಯದ ಸಮಗ್ರ ಅಭಿವೃದ್ಧಿಗೆ ಸಮಗ್ರ ಯುವ ನೀತಿಯ ಅಗತ್ಯವಿದೆ. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಯುವ ಸಮಾವೇಶದಲ್ಲಿ ಚರ್ಚೆಗಳು ನಡೆಯಲಿವೆ. ಯುವಕರು ಈ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು' ಎಂದು ಕರೆ ನೀಡಿದರು.

ಒಳಚರಂಡಿ ಸ್ವಚ್ಛತೆಗೆ ಕಾರ್ಮಿಕನ ಬಳಕೆ: ಎಫ್‌ಐಆರ್

ದಾವಣಗೆರೆ: ನಗರದ ಕಲ್ಯಾಣ ಮಂಟಪವೊಂದರಲ್ಲಿ ಕೂಲಿ ಕಾರ್ಮಿಕರೊಬ್ಬರನ್ನು ಒಳಚರಂಡಿ ಸ್ವಚ್ಛತೆಗೆ ಚರಂಡಿಗೆ ಇಳಿಸಿದ ಪ್ರಕರಣ ಸಂಬಂಧ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೂಲಿ ಕಾರ್ಮಿಕ ಸಿದ್ದೇಶ ಅವರನ್ನು ಒಳಚರಂಡಿಗೆ ಇಳಿಸಿದ ಸಂಬಂಧ ಪರಿಶೀಲನೆ ನಡೆಸಿದ್ದು, ಕೃತ್ಯ ಸಾಬೀತಾದ ಕಾರಣ ಕಲ್ಯಾಣ ಮಂಟಪದ ಮಾಲೀಕರು, ಮೇಲ್ವಿಚಾರಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆಯ ಸಹಾಯಕ ಎಂಜಿನಿಯರ್ ಪಿ.ಮಧುಸೂದನ್ ಬಡಾವಣೆ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಒಳಚರಂಡಿ ವ್ಯವಸ್ಥೆಯ ದುರವಸ್ಥೆ ಬಗ್ಗೆ ಪಾಲಿಕೆಗೆ ದೂರು ಸಲ್ಲಿಸದೆ ಕಾರ್ಮಿಕನಿಂದ ಸ್ವಚ್ಛ ಮಾಡಿಸಲಾಗಿದೆ. ಈ ಸಂಬಂಧ ಮಾಲೀಕರು, ಮೇಲ್ವಿಚಾರಕರು ಹಾಗೂ ಇತರರ ವಿರುದ್ಧ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ- 2013 ಕಾಯ್ದೆ ಹಾಗೂ ಸೆಕ್ಷನ್- 20ರ ಅಡಿ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ತಿಳಿಸಲಾಗಿದೆ.

'ಕಲ್ಯಾಣ ಮಂಟಕ್ಕೆ ಭೇಟಿ ನೀಡಿದಾಗ ಒಳಚರಂಡಿ ಛೇಂಬರ್ ತೆರೆದಿತ್ತು. ಮೇಲ್ವಿಚಾರಕ ಮುಪ್ಪಯ್ಯ ಅವರು ಸಿದ್ದೇಶ ಅವರಿಂದ ಸ್ವಚ್ಛಗೊಳಿಸಿರುವುದನ್ನು ಒಪ್ಪಿಕೊಂಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಹೆಸರಘಟ್ಟ: ರೈತ ಸಂತೆಗೆ ವ್ಯಾಪಾರಿಗಳ ಸ್ಥಳಾಂತರಿಸಲು ಅಧಿಕಾರಿಗಳ ನಿರ್ಲಕ್ಷ್ಯ

ರಸ್ತೆಯೇ ಸಂತೆ ಕಟ್ಟೆ, ಸಂಚಾರಕ್ಕೆ ಅಡಚಣೆ

● ಬೈಲಮೂರ್ತಿ ಜಿ.





ರಸ್ತೆ ಬದಿಯಲ್ಲಿಯೇ ತರಕಾರಿ ಮಾರಾಟ ಮಾಡುತ್ತಿರುವ ವ್ಯಾಪಾರಿಗಳು (ಎಡ) ಪಾಳು ಬಿದ್ದಿರುವ ರೈತ ಸಂತೆ ಪ್ರಾಂಗಣ

ಹೆಸರಘಟ್ಟ: ರೈತ ಸಂತೆ ಕಟ್ಟೆಗೆ ವ್ಯಾಪಾರಿಗಳನ್ನು ಸ್ಥಳಾಂತರಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದು, ಹೆಸರಘಟ್ಟ ಬಸ್ ನಿಲ್ದಾಣ ಮತ್ತು ರಸ್ತೆ ಮಾರುಕಟ್ಟೆಯಂತಾಗಿದೆ. ಒಂದು ಕಡೆ, ಪ್ರಯಾಣಿಕರು ರಸ್ತೆಯಲ್ಲೇ ನಿಂತು ಬಸ್‌ಗೆ ಕಾಯಬೇಕಾದ ಪರಿಸ್ಥಿತಿ ಎದುರಾಗಿದ್ದರೆ, ಮತ್ತೊಂದು ಕಡೆ ಸಂಚಾರ ದಟ್ಟಣೆ ವಿಪರೀತವಾಗಿದೆ.

ಯಲಹಂಕ, ಬೆಂಗಳೂರಿನಿಂದ ಹೆಸರಘಟ್ಟ ಮಾರ್ಗವಾಗಿ ತೋಟಗೆರೆ, ಗೋಪಾಲಪುರ, ರೈಲ್ವೆಗೊಲ್ಲಹಳ್ಳಿ, ಮೂಲಕ ನೆಲಮಂಗಲ ಕಡೆಗೆ ಮತ್ತು ಕುಕ್ಕನಹಳ್ಳಿ, ಚಿಕ್ಕ ಮಧುರೆ ಕಡೆಗೆ ಸಂಚರಿಸುವ ಬಸ್ ನಿಲ್ದಾಣದಲ್ಲಿ ಮುಖ್ಯರಸ್ತೆಯ ಅಕ್ಕಪಕ್ಕದಲ್ಲಿ ಬೀದಿ ಬದಿ ವ್ಯಾಪಾರಿಗಳು ನಿತ್ಯ ತರಕಾರಿ, ಹೂ, ಹಣ್ಣಿನ ವ್ಯಾಪಾರ ಮಾಡುತ್ತಾರೆ. ರಸ್ತೆಯಲ್ಲಿಯೇ ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಇದರಿಂದ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಬಸ್, ಲಾರಿಯಂಥ ಭಾರಿ ವಾಹನಗಳು ಬಂದರೆ ಪರಿಸ್ಥಿತಿ ಯಾತನಮಯವಾಗುತ್ತಿದೆ.

ಬಸ್ಸಿಗಾಗಿ ಕಾಯುವ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ವ್ಯಾಪಾರಿಗಳಿಗಾಗಿ ಹೆಸರಘಟ್ಟ ಗ್ರಾಮದ ಬಿಳಿಜಾಜಿ ರಸ್ತೆಯಲ್ಲಿ 12 ವರ್ಷಗಳ ಹಿಂದೆಯೇ ರೈತ ಸಂತೆಕಟ್ಟೆಗಳನ್ನು ನಿರ್ಮಿಸಲಾಗಿತ್ತು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂತೆ ಪ್ರಾಂಗಣವು ಪಾಳು ಬಿದ್ದಿದೆ. ಬೀದಿ ಬದಿ ವ್ಯಾಪಾರಿಗಳನ್ನು ಇಲ್ಲಿಗೆ ಸ್ಥಳಾಂತರಿಸಿ ಪರ್ಯಾಯ ವ್ಯವಸ್ಥೆ ಮಾಡದೇ ಇರುವುದು ಟ್ರಾಫಿಕ್ ಸಮಸ್ಯೆಗೆ ಕಾರಣವಾಗಿದೆ.

'ಹಬ್ಬಗಳ ಸಮಯದಲ್ಲಿ ಒಂದು ಕಿಲೋ ಮೀಟರ್‌ವರೆಗೂ ವಾಹನದಟ್ಟಣೆ ಇರುತ್ತದೆ. ಸಂಬಂಧಪಟ್ಟ ಅಧಿಕಾರಿಗಳಾಗಲಿ, ಇಲಾಖೆಯವರಾಗಲಿ ತಲೆಕೆಡಿಸಿಕೊಳ್ಳುತ್ತಿಲ್ಲ' ಎಂದು ಸ್ಥಳೀಯರಾದ ಮಲ್ಲಣ್ಣ ಬೇಸರ ವ್ಯಕ್ತಪಡಿಸಿದರು.

'ತಾಸುಗಟ್ಟಲೆ ಬಸ್‌ಗಾಗಿ ರಸ್ತೆಯಲ್ಲೇ ಕಾದು ನಿಲ್ಲಬೇಕಾದ ಪರಿಸ್ಥಿತಿ ಇದೆ. ಪ್ರಯಾಣಿಕರಿಗೆ ಬಸ್ ತಂಗುದಾಣದ ಅವಶ್ಯಕತೆ ಇದೆ. ಆದರೆ ಯಾರೂ ಇತ್ತ ಕಡೆ ಗಮನ ಹರಿಸುತ್ತಿಲ್ಲ' ಎಂದು ಕಾಲೇಜು ವಿದ್ಯಾರ್ಥಿಗಳಾದ ಅಂಜನ್ ಮತ್ತು ಸಂಜಯ್ ಹೇಳಿದರು.

ಹೆಸರಘಟ್ಟದ ಸುತ್ತಮುತ್ತಲಿನ ರೈತರು ತೋಟಗಾರಿಕೆಯನ್ನೇ ಅವಲಂಬಿಸಿರುವುದರಿಂದ ಬೆಳೆದ ಬೆಳೆಯನ್ನು ಸೂಕ್ತ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡಲು ರೈತ ಸಂತೆ ಮಾರುಕಟ್ಟೆಯ ಅವಶ್ಯಕತೆ ಇದೆ. ಪಾಳು ಬಿದ್ದಿರುವ ರೈತ ಸಂತೆ ಪ್ರಾಂಗಣಕ್ಕೆ ಮರುಜೀವ ನೀಡಿ ಸೂಕ್ತ ನಿರ್ವಹಣೆ ಮಾಡಿದರೆ ರೈತರಿಗೆ, ವ್ಯಾಪಾರಿಗಳಿಗೆ, ಗ್ರಾಹಕರಿಗೆ ಅನುಕೂಲವಾಗುತ್ತದೆ ಎಂಬುದು ರೈತರ ಅಭಿಪ್ರಾಯವಾಗಿದೆ.

> **ರೈತ ಸಂತೆ ಪ್ರಾಂಗಣ, ಕೆನರಾ ಬ್ಯಾಂಕ್, ರಂಗಮಂದಿರದ ಮುಂಭಾಗ ಬೀದಿಬದಿ ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಡಬೇಕು**
> **ಶೇಖರ್,** ಹೆಸರಘಟ್ಟ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ

> **ಹೆಸರುಘಟ್ಟ ಬಸ್ ನಿಲ್ದಾಣದಲ್ಲಿ ಟ್ರಾಫಿಕ್ ಸಮಸ್ಯೆ ತಲೆನೋವಾಗಿ ಪರಿಣಮಿಸಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸುತ್ತಿಲ್ಲ**
> **ವಸಂತ್,** ಸ್ಥಳೀಯ

> **ಪ್ರತಿದಿನ ಸಂಜೆ ನಾಲ್ಕರ ನಂತರ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದೆ. ರೈತ ಸಂತೆ ಮಾರುಕಟ್ಟೆಗೆ ವ್ಯಾಪಾರಿಗಳನ್ನು ಸ್ಥಳಾಂತರಿಸಬೇಕು**
> **ಪುನೀತ್,** ಸ್ಥಳೀಯ



ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ ಹಾಗೂ ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆ ಕಾರ್ಯಕ್ರಮದಲ್ಲಿ ಬಾಂಗ್ಲಾದೇಶದ ಜಂಗಮವಾಡಿ ಶಾಖಾ ಮಠದ ಬ್ರಹ್ಮಚಾರಿ ಪಂಕಜ್ ರಾಯ್ ಅವರಿಗೆ ಪಂಚಾಚಾರ್ಯ ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, ಶಿವಗಂಗೆ ಕ್ಷೇತ್ರದ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಭೂಪತಿಪುರ ವೀರ ಸಿಂಹಾಸನ ಸಂಸ್ಥಾನ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠಾಧ್ಯಕ್ಷ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ಮುಖಂಡ ಜಿ. ಮರಿಸ್ವಾಮಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ



ಅಂಚೆ ಸಂಭ್ರಮ

ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಅಂಚೆ ಇಲಾಖೆ ಆಯೋಜಿಸಿದ್ದ 'ಕರ್ನಾಪೆಕ್ಸ್ - 2024' ಅಂಚೆಚೀಟಿಗಳ ಹಬ್ಬದಲ್ಲಿ ಶನಿವಾರ ವಿದ್ಯಾರ್ಥಿನಿಯರು ಚಿತ್ರ ಬರೆದರು -ಪ್ರಜಾವಾಣಿ ಚಿತ್ರ/ ರಂಜು ಪಿ.

ಶಿಸ್ತು, ಪರಿಶ್ರಮದಿಂದ ಕ್ರಿಕೆಟ್‌ನಲ್ಲಿ ಯಶಸ್ಸು: ಬಿನ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ಡಿಜಿಟಲ್ ತಂತ್ರಜ್ಞಾನ ಬೆಳೆದಿದೆ. ಅತ್ಯಾಧುನಿಕ ಉಪಕರಣಗಳು ಬಂದಿವೆ. ಆದರೂ ದೊಡ್ಡ ಕ್ರಿಕೆಟಿಗನಾಗಿ ಬೆಳೆಯುವ ಆಕಾಂಕ್ಷೆ ಇದ್ದರೆ ಪ್ರತಿದಿನ ನಡೆಸುವ ಅಭ್ಯಾಸ ಮತ್ತು ಚಟುವಟಿಕೆಗಳನ್ನು ಒಂದು ಡೈರಿಯಲ್ಲಿ ಬರೆಯುವುದನ್ನು ರೂಢಿಸಿಕೊಳ್ಳಬೇಕು. ಪರಿಶ್ರಮ ಮತ್ತು ಶಿಸ್ತಿನಿಂದ ಮಾತ್ರ ಯಶಸ್ಸು ಸಾಧ್ಯ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ರೋಜರ್ ಬಿನ್ನಿ ಅವರು ಉದಯೋನ್ಮುಖ ಕ್ರಿಕೆಟಿಗರಿಗೆ ಸಲಹೆ ನೀಡಿದರು.

ಶನಿವಾರ ಕೆಎಸ್‌ಸಿಎ ಸಭಾಭವನದಲ್ಲಿ (ಚಿನ್ನಸ್ವಾಮಿ ಕ್ರೀಡಾಂಗಣ) ನಡೆದ ಕಾರ್ಯಕ್ರಮದಲ್ಲಿ ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ವಿಜೇತರಿಗೆ ಟ್ರೋಫಿ ವಿತರಿಸಿದ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಗಾರ್ಡ್‌ಗಳಾದ ಡಿ. ಸಿದ್ದೇಶ್ (ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ರೇಂಜ್) ಮತ್ತು ತಿರುಪತಿ ಪೂಜಾರ (ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ರೇಂಜ್) ಅವರಿಗೆ ಅರಣ್ಯ ಸೇವಾ ಪುರಸ್ಕಾರ ನೀಡಿ ಗೌರವಿಸಿದರು. ವನ್ಯಜೀವಿ ಸಂರಕ್ಷಣೆಯಲ್ಲಿ ಎನ್‌ಜಿಒಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಮೀರಾ ಚಂದ್ರನ್ ಮತ್ತು ರಾಜಕುಮಾರ್ ಡಿ ಅರಸ್ ಅವರನ್ನೂ ಸನ್ಮಾನಿಸಲಾಯಿತು.

'ನಿಮ್ಮ ಸಂಪರ್ಕಕ್ಕೆ ಬರುವ ಹಿರಿಯ ಮತ್ತು ಅನುಭವಿ ಕ್ರಿಕೆಟಿಗರ ಸಲಹೆಗಳನ್ನು ಪಡೆಯಿರಿ. ಆ ಸಲಹೆಗಳನ್ನು ಎಂದಿಗೂ ನಿರ್ಲಕ್ಷಿಸಬೇಡಿ. ಒಂದಿಲ್ಲೊಂದು ಹಂತದಲ್ಲಿ ಅವುಗಳು ಉಪಯುಕ್ತವಾಗುತ್ತವೆ. ಪರಿಸರ ಕಾಳಜಿ ಮತ್ತು ಸಂರಕ್ಷಣೆಗೂ ಕೈಜೋಡಿಸಿ' ಎಂದು 1983ರ ವಿಶ್ವಕಪ್ ವಿಜೇತ ತಂಡದ ಆಟಗಾರ ಬಿನ್ನಿ ಹೇಳಿದರು.

ಈ ಸಂದರ್ಭದಲ್ಲಿ 12 ವರ್ಷದೊಳಗಿನವರ ವಿಭಾಗದಲ್ಲಿ ಪ್ಲೇ ಸ್ಮಾರ್ಟ್ (ವಿಜೇತ), ಕೆಸಿಸಿ ಗುರುಕುಲ್ (ರನ್ನರ್ಸ್ ಅಪ್), 14 ವರ್ಷದೊಳಗಿನ ವಿಭಾಗದಲ್ಲಿ ಡಿಪಿಎಸ್ ಈಸ್ಟ್ (ವಿಜೇತ), ಸಿಕ್ಸ್ ಕ್ರಿಕೆಟ್ ಅಕಾಡೆಮಿ (ರನ್ನರ್ಸ್ ಅಪ್), 16 ವರ್ಷದೊಳಗಿಗವರ ವಿಭಾಗದಲ್ಲಿ ಸಿಲಿಕಾನ್ ಕ್ರಿಕೆಟ್ ಅಕಾಡೆಮಿ (ವಿಜೇತರು) ಹಾಗೂ ಮ್ಯಾಕ್ಸ್ ಮುಲ್ಲರ್ (ರನ್ನರ್ಸ್ ಅಪ್) ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಸೈಕಲ್ ಬ್ರ್ಯಾಂಡ್ ಅಗರಬತ್ತಿ ಸಂಸ್ಥೆಯ ಕಿರಣ್ ರಂಗಾ, ನಿಪ್ಪೊ ಪೇಂಟ್ಸ್‌ನ ಆರ್. ಜಯಸಿಂಹ, ಸಿಡ್ವಿನ್ ಸಂಸ್ಥೆಯ ಆಶಾ, ಡೆಕ್ಕನ್ ಹೆರಾಲ್ಡ್ ಕ್ರೀಡಾ ಸಂಪಾದಕ ಮಧುಕೇಶ್ವರ ಜವಳಿ, ಮಾಜಿ ಕ್ರಿಕೆಟಿಗ ಶಿವಪ್ರಸಾದ್ ಹಾಜರಿದ್ದರು.

ಟೈಗರ್ ಕಪ್ ಕ್ರಿಕೆಟ್ ಟೂರ್ನಿ ಮತ್ತು ಹುಲಿ ಸಂರಕ್ಷಣಾ ಸೇವಾ ಪ್ರಶಸ್ತಿಗೆ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು ಮಾಧ್ಯಮ ಸಹಭಾಗಿತ್ವ ನೀಡಿದ್ದವು.



ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 12 ವರ್ಷದೊಳಗಿನವರ ವಿಭಾಗದ ಪ್ರಶಸ್ತಿ ಜಯಿಸಿದ ಪ್ಲೇ ಸ್ಮಾರ್ಟ್ ತಂಡಕ್ಕೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಟ್ರೋಫಿ ಪ್ರದಾನ ಮಾಡಿದರು —ಪ್ರಜಾವಾಣಿ ಚಿತ್ರ

ರಾಜ್ಯಮಟ್ಟದ ಯುವಜನೋತ್ಸವಕ್ಕೆ ಚಾಲನೆ

ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿ

ಪ್ರಜಾವಾಣಿ ವಾರ್ತೆ



ಬಳ್ಳಾರಿಯ ವಾಲ್ಮೀಕಿ ಭವನದಲ್ಲಿ ಶನಿವಾರ ನಡೆದ ರಾಜ್ಯಮಟ್ಟದ ಯುವಜನೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು

ಬಳ್ಳಾರಿ: ರಾಜ್ಯದ ಕ್ರೀಡಾಪಟುಗಳಿಗೆ ಎಲ್ಲ ಇಲಾಖೆಗಳಲ್ಲಿಯೂ ಶೇ 2ರಷ್ಟು ಮೀಸಲಾತಿ ಕಲ್ಪಿಸಲಾಗುವುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ ತಿಳಿಸಿದರು.

ನಗರದ ವಾಲ್ಮೀಕಿ ಭವನದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ನಡೆಯುತ್ತಿರುವ ರಾಜ್ಯಮಟ್ಟದ ಯುವ ಜನೋತ್ಸವದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಕ್ರೀಡಾ ಹಾಸ್ಟೆಲ್, ಸುಸಜ್ಜಿತ ಜಿಮ್ ನಿರ್ಮಾಣ ಮಾಡಲಾಗುವುದು ಎಂದರು.

ಯುವಕರು ತಮ್ಮ ಜೀವನದಲ್ಲಿ ಸಂಕಲ್ಪ ಇಟ್ಟುಕೊಳ್ಳಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು.

ಶಾಸಕ ನಾರಾ ಭರತ್‌ರೆಡ್ಡಿ ಮಾತನಾಡಿ, 'ಪಂಜಾಬ್, ಹರಿಯಾಣದಲ್ಲಿ ಕ್ರೀಡಾ ಕೋಟಾದಡಿ ಹೆಚ್ಚು ಉದ್ಯೋಗ ಪಡೆದುಕೊಳ್ಳುತ್ತಿದ್ದು, ಇದು ರಾಜ್ಯದಲ್ಲಿಯೂ ಜಾರಿಯಾಗಬೇಕು' ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಎನ್. ಶಶಿಕುಮಾರ್, ಪಾಲಿಕೆ ಉಪ ಮೇಯರ್ ಬಿ. ಜಾನಕಿ, ಐಜಿಪಿ ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಎಸ್‌ಪಿ ರಂಜಿತ್ ಕುಮಾರ್ ಬಂಡಾರು, ಎಡಿಸಿ ಮಹಮ್ಮದ್ ಜುಬೇರ್, ಉಪ ವಿಭಾಗಾಧಿಕಾರಿ ಹೇಮಂತ್ ಎನ್., ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಕೆ. ಗ್ರೇಸಿ ಇತರರು ಹಾಜರಿದ್ದರು.

ಫೆಬ್ರುವರಿಯಲ್ಲಿ ಬಳ್ಳಾರಿ ಉತ್ಸವ: ಜಿಲ್ಲೆಯ ವೈಭವ ಸಾರುವ ಬಳ್ಳಾರಿ ಉತ್ಸವವನ್ನು ಫೆಬ್ರುವರಿಯಲ್ಲಿ ಅದ್ದೂರಿಯಾಗಿ ಆಚರಿಸಲಾಗುವುದು. ಉತ್ಸವಕ್ಕೆ ಮುಖ್ಯಮಂತ್ರಿ ಸಿದ್ದರಾಮತ್ತ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಆಹ್ವಾನಿಸಲಾಗುವುದು ಎಂದು ಸಚಿವ ನಾಗೇಂದ್ರ ಹೇಳಿದರು.

ಮಲಬಾರ್‌ನಿಂದ ವಿದ್ಯಾರ್ಥಿ ವೇತನ

ಪ್ರಜಾವಾಣಿ ವಾರ್ತೆ



ಕನಕಪುರದ ರೂರಲ್ ಪದವಿಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನಿಂದ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು

ಬೆಂಗಳೂರು: ರಾಮನಗರ ಜಿಲ್ಲೆಯ ಕನಕಪುರದ ರೂರಲ್ ಪದವಿಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನಿಂದ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ ನಡೆಯಿತು.

ಕನಕಪುರ ಸೇರಿದಂತೆ ಬೆಂಗಳೂರಿನ ಬಸವನಗುಡಿ, ಜಯನಗರ, ಕಗಳಿಪುರ, ಬ್ಯಾಟರಾಯನಪುರ, ಅಬ್ಬಾಸ್ ಖಾನ್ ಪದವಿ ಕಾಲೇಜು ಮತ್ತು ಗವಿಪುರಂನ 8 ಕಾಲೇಜುಗಳ 595 ವಿದ್ಯಾರ್ಥಿನಿಯರಿಗೆ ಒಟ್ಟು ₹56.72 ಲಕ್ಷ ಮೊತ್ತದ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್, ರೂರಲ್ ಎಜುಕೇಷನ್ ಸೊಸೈಟಿಯ ಗೌರವಾಧ್ಯಕ್ಷ ಎಚ್.ಕೆ. ಶ್ರೀಕಾಂತ, ಪಿಯು ಕಾಲೇಜಿನ ಪ್ರಾಂಶುಪಾಲ ಡಾ.ಗದಿಗೆಪ್ಪ ಹಿತ್ತಲಮನಿ, ಗ್ರಾಮೀಣ ಪದವಿ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಟಿ. ಬಾಲಕೃಷ್ಣ, ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಮ್ಯಾನೇಜ್‌ಮೆಂಟ್ ತಂಡದ ಸದಸ್ಯರು ಉಪಸ್ಥಿತರಿದ್ದರು.

ಮಲಬಾರ್ ಗ್ರೂಪ್‌ನ ಸಿಎಸ್‌ಆರ್ ಉಪಕ್ರಮದ ಭಾಗವಾಗಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ತನ್ನ ಲಾಭಾಂಶದಲ್ಲಿ ಶೇ 5ರಷ್ಟನ್ನು ಜನೋಪಕಾರಿ ಚಟುವಟಿಕೆಗಳಿಗೆ ನೀಡುತ್ತಿದೆ.

'ಪ್ರಯಾಣಿಕ ಸ್ನೇಹಿ ವರ್ಷ' ಕೆಎಸ್‌ಆರ್‌ಟಿಸಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ 2024ನೇ ವರ್ಷವನ್ನು 'ಪ್ರಯಾಣಿಕ ಸ್ನೇಹಿ ವರ್ಷ' ಎಂದು ಘೋಷಣೆ ಮಾಡಿದೆ.

'ಪ್ರಯಾಣಿಕ ಸ್ನೇಹಿ' ವರ್ಷದಲ್ಲಿ 2,000 ಹೊಸ ವಾಹನಗಳು ಸೇರ್ಪಡೆಗೊಳ್ಳಲಿವೆ. 'ನಮ್ಮ ಕಾರ್ಗೊ ಟ್ರಕ್'ಗಳನ್ನು 20ರಿಂದ 500ಕ್ಕೆ ಏರಿಸಲಾಗುವುದು. 1,000 ವಾಹನಗಳಿಗೆ ಪುನಶ್ಚೇತನ ಯೋಜನೆ, ಮಾಹಿತಿ ತಂತ್ರಜ್ಞಾನ ಆಧುನೀಕರಣಗೊಳಿಸಿ, ಪ್ರಯಾಣಿಕರ ಅನುಕೂಲಕ್ಕಾಗಿ ವಿಟಿಎಂಎಸ್, ಮೊಬೈಲ್ ಆ್ಯಪ್, ನಗದು ರಹಿತ ಸೇವೆಗೆ ಆದ್ಯತೆ, ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಲು ಚಾಲನಾ ಸಿಬ್ಬಂದಿಗೆ ತರಬೇತಿ ಹಮ್ಮಿಕೊಳ್ಳಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದ್ದಾರೆ.

ಮೆಟ್ರೊ ಸುರಂಗ ನಿಲ್ದಾಣದಲ್ಲಿ ಅಣಕು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರೊ ಸುರಂಗ ನಿಲ್ದಾಣದಲ್ಲಿ ಶನಿವಾರ ಅನಿಲ ದಾಳಿಯನ್ನು ತಡೆಯುವ ಅಣಕು ಪ್ರದರ್ಶನ ನಡೆಸಲಾಯಿತು.

ಯಾವುದೇ ರಾಸಾಯನಿಕ, ಜೈವಿಕ, ವಿಕಿರಣಶೀಲ ಮತ್ತು ನ್ಯೂಕ್ಲಿಯರ್ ಮೆಟೀರಿಯಲ್ (ಸಿಬಿಆರ್‌ಎನ್) ದಾಳಿಯ ಸಂದರ್ಭದಲ್ಲಿ ಎಲ್ಲ ಕಾರ್ಯ ವಿಧಾನಗಳ ಬಗ್ಗೆ ಅರಿವು ಮೂಡಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ, ಪೊಲೀಸ್, ವೈದ್ಯಕೀಯ ಸೇವಾ ಸಂಸ್ಥೆಗಳು ಈ ಅಣಕು ಪ್ರದರ್ಶನ ನಡೆಸಿದವು.

ಸಾರ್ವಜನಿಕ ಪ್ರಕಟಣೆಗಳ ಮೂಲಕ ಮಾಕ್ ಡ್ರಿಲ್ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡಲಾಯಿತು.

ಅಣಕು ಪ್ರದರ್ಶನದ ಸಮಯದಲ್ಲಿ, ರಾಸಾಯನಿಕಗಳನ್ನು ಬಳಸಿ ಹಾನಿಕಾರಕವಲ್ಲದ ಬಣ್ಣದ ಹೊಗೆಯನ್ನು ನಿಲ್ದಾಣದ ಆವರಣದಲ್ಲಿ ಹೊಗೆ ಬಾಂಬ್‌ಗೆ ಹೋಲುವ ಸನ್ನಿವೇಶವನ್ನು ಸೃಷ್ಟಿಸಲಾಯಿತು. ಮೆಟ್ರೊ ಸಿಬ್ಬಂದಿ ಪ್ರಯಾಣಿಕರಂತೆ ಬಂದು ಮೂರ್ಛೆ ಹೋದಂತೆ ನಟಿಸಿದರು. ಅವರಲ್ಲಿ ಕೆಲವರು ಸಹಾಯಕ್ಕಾಗಿ ಓಡಿದರು.

ಹೊಗೆ ಹರಡುವ ಮತ್ತು ನಿಯಂತ್ರಿಸಲಾಗದ ಕಾರಣ ವಿಪತ್ತು ನಿರ್ವಹಣಾ ಸಂಸ್ಥೆಯ ಮಧ್ಯಸ್ಥಿಕೆಗಾಗಿ ನಿಲ್ದಾಣದ ಅಧಿಕಾರಿಗಳು ಕೇಂದ್ರ ಕಮಾಂಡ್ ಮತ್ತು ಭದ್ರತಾ ಕಣ್ಗಾವಲುಗಳಿಗೆ ಮಾಹಿತಿ ನೀಡಿದರು. ನಿಲ್ದಾಣದೊಳಗೆ ಪ್ರಯಾಣಿಕರ ಪ್ರವೇಶವನ್ನು ಸ್ಥಗಿತಗೊಳಿಸಲಾಯಿತು. ನಿಲ್ದಾಣದ ಒಳಗಿರುವ ಪ್ರಯಾಣಿಕರಿಗೆ ನಿಲ್ದಾಣದಿಂದ ತರಾತುರಿಯಿಂದ ಹೊರಬರುವಂತೆ ಸೂಚಿಸಲಾಯಿತು. ನಿಲ್ದಾಣದಲ್ಲಿ ರೈಲು ನಿಲುಗಡೆ ಮಾಡದಂತೆ ರೈಲು ನಿರ್ವಾಹಕರಿಗೆ ಸೂಚನೆ ನೀಡಲಾಯಿತು.

ರಾಸಾಯನಿಕ ಕಂಟೈನರ್ ಅನ್ನು ಮುಚ್ಚಿ ಪ್ರದೇಶವನ್ನು ಸೋಂಕು ರಹಿತಗೊಳಿಸಿದರು. ನಿಲ್ದಾಣದ ಹವಾನಿಯಂತ್ರಣವನ್ನು ಸ್ಥಗಿತಗೊಳಿಸಿ, ಹೊಗೆ ತೆಗೆಯುವ ಸುರಕ್ಷಿತ ಸ್ವಯಂಚಾಲಿತ ವ್ಯವಸ್ಥೆಯನ್ನು ಸಕ್ರಿಯಗೊಳಿಸಲಾಯಿತು. ಎನ್‌ಡಿಆರ್‌ಎಫ್ ಅನುಮತಿಸಿದ ನಂತರ ರೈಲು ಸಂಚಾರವನ್ನು ಪುನರ್ ಆರಂಭಿಸಲಾಯಿತು.

ಸರಳ ವಿಧಾನಕ್ಕಾಗಿ ಕಾನೂನಿಗೆ ಅಗತ್ಯ ತಿದ್ದುಪಡಿ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಆಸ್ತಿ ತೆರಿಗೆ ಪಾವತಿಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಆಸ್ತಿ ತೆರಿಗೆ ಪಾವತಿಸಲು ಮಾಲೀಕರಿಗೆ ಹೆಚ್ಚಿನ ಕಾಲಾವಕಾಶ ಮಾಡಿಕೊಡಲಾಗುವುದು. ಜೊತೆಗೆ, ವಸತಿ ಪ್ರದೇಶದಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿದವರಿಗೆ ತೆರಿಗೆ ಕಡಿಮೆ ಮಾಡಲು ಕಾನೂನು ತಿದ್ದುಪಡಿ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಶಿವಾಜಿನಗರ, ಹೆಬ್ಬಾಳ ಹಾಗೂ ಪುಲಕೇಶಿನಗರ ವಿಧಾನಸಭಾ ಕ್ಷೇತ್ರಗಳ ನಾಗರಿಕರ ಕುಂದುಕೊರತೆ ಆಲಿಸುವ 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮದಲ್ಲಿ ಅವರು ಶನಿವಾರ ಭರವಸೆ ನೀಡಿದರು.

'ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದ ಹಲವು ತೊಂದರೆಗಳ ಬಗ್ಗೆ ನಾಗರಿಕರು ಗಮನ ಸೆಳೆದಿದ್ದಾರೆ. ವಸತಿ ನಿವೇಶನಗಳಲ್ಲಿ ವಾಣಿಜ್ಯ ಕಟ್ಟಡಗಳನ್ನು ಕಟ್ಟಿರುವವರಿಗೆ ತೆರಿಗೆ ಹಾಗೂ ದಂಡ ಹೆಚ್ಚಾಗಿದೆ. ನಮಗೆ ಸಮಯಾವಕಾಶ ಬೇಕು ಎಂದು ಮನವಿ ಸಲ್ಲಿಸುತ್ತಿದ್ದಾರೆ. ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

ಹಸಿರು ರಕ್ಷಕ, ಉದ್ಯಾನ ಮಿತ್ರ ಮತ್ತು ಕೆರೆ ಮಿತ್ರ ಎಂಬ ಬಿಬಿಎಂಪಿಯ ಮೂರು ಆ್ಯಪ್‌ಗಳನ್ನು ಶಿವಕುಮಾರ್ ಬಿಡುಗಡೆ ಮಾಡಿದರು.



ಶಿವಾಜಿನಗರದಲ್ಲಿ ಶನಿವಾರ ನಡೆದ 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಾಗರಿಕರ ದೂರುಗಳನ್ನು ಸ್ವೀಕರಿಸಿದರು

'ನನ್ನ ಆರೋಗ್ಯ ಸರಿಯಿಲ್ಲ. ಆದರೆ ನಿಮಗೆ ಸಮಯ ನೀಡಿದ್ದೇನೆ. ಮಾತಿಗೆ ತಪ್ಪಬಾರದು ಎಂಬ ಕಾರಣಕ್ಕೆ ವೈದ್ಯರ ವಿಶ್ರಾಂತಿ ಸಲಹೆಯನ್ನು ಲೆಕ್ಕಿಸದೆ ಇಲ್ಲಿಗೆ ಬಂದಿದ್ದೇನೆ' ಎಂದು ಹೇಳಿ ಅಹವಾಲು ಸ್ವೀಕರಿಸಿದರು.

'ನನ್ನ ಮಗ ಶಿವಾಜಿನಗರದ ಅಲೋಷಿಯಸ್ ಶಾಲೆಯಲ್ಲಿ ಓದುತ್ತಿದ್ದು, ಶಾಲಾ ಶುಲ್ಕ ಬಾಕಿ ಇದ್ದು ಕಟ್ಟುವ ಶಕ್ತಿ ಇಲ್ಲ' ಎಂದು ಭವ್ಯ ಅಳಲು ತೋಡಿಕೊಂಡರು.

'15 ವರ್ಷಗಳಿಂದ ಬಿಬಿಎಂಪಿ ಪೂರ್ವ ವಲಯದ ಕಚೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೇವೆ. ನಮ್ಮನ್ನು ಕಾಯಂ ಮಾಡಿ' ಎಂಬ ಶ್ರೀದೇವಿ ಮತ್ತು ಜ್ಯೋತಿ ಅವರ ಮನವಿಯನ್ನು ಈಡೇರಿಸುವ ಭರವಸೆ ಡಿಸಿಎಂ ನೀಡಿದರು.

'ನಮ್ಮ ಮನೆ ನೀರಿನ ಬಿಲ್ ₹7-8 ಸಾವಿರ ಬರುತ್ತಿದೆ' ಎಂದು ಶಿವಾಜಿನಗರದ ಜ್ಞಾನೇಶ್ವರ ಹೇಳಿದಾಗ, ಆಶ್ಚರ್ಯ ವ್ಯಕ್ತಪಡಿಸಿದ ಶಿವಕುಮಾರ್, ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

'ಹಲಸೂರು ಕೆರೆಗೆ ಅಗತ್ಯವಾಗಿ ಬೇಕಾದ ಕಾಮಗಾರಿ ನಡೆಸದೆ ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ. ಇಲ್ಲಿಗೆ ಹರಿಯುವ ಒಳಚರಂಡಿ ನೀರನ್ನು ಮೊದಲು ತಡೆಯಬೇಕು. ಈ ಬಗ್ಗೆ ಅಧಿಕಾರಿಗಳಿಗೆ ಸೂಚಿಸಿ' ಎಂದು ಹಲಸೂರಿನ ಮೋಹನ್ ರಾಜ್ ಮನವಿ ಮಾಡಿದರು.

'ಡ್ರಗ್ಸ್, ಡ್ರಗ್ಸ್ ವ್ಯಸನಿಗಳಿಂದ ತೊಂದರೆ ಮತ್ತು ದುಷ್ಪರಿಣಾಮ ಬೀರುವ ತ್ಯಾಜ್ಯ ವಿಲೇವಾರಿ ಸಮಸ್ಯೆ ಹೆಚ್ಚಾಗಿದೆ' ಎಂದು ನಿವಾಸಿಗಳು ಹೇಳಿಕೊಂಡರು. ಪೊಲೀಸರಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಶಿವಕುಮಾರ್ ಸೂಚಿಸಿದರು.

ಮಧ್ಯಾಹ್ನ 3 ಗಂಟೆ ವೇಳೆಗೆ ಕಾರ್ಯಕ್ರಮ ಸ್ಥಳದಲ್ಲಿ ದೂರು ನೀಡುವ ಕೌಂಟರ್‌ಗಳಲ್ಲಿ ಜನರೇ ಇರಲಿಲ್ಲ. 'ಗೃಹಲಕ್ಷ್ಮಿ' ಯೋಜನೆಗೆ ಸಂಬಂಧಿಸಿದ ಕೌಂಟರ್‌ನಲ್ಲಿ ಮಾತ್ರ ಸಮಸ್ಯೆ ಹೇಳಿಕೊಳ್ಳುವವರ ಸಾಲು ಸಂಜೆವರೆಗೂ ಇತ್ತು.

'ವ್ಯಾಪಾರಸ್ಥರು ಕನ್ನಡಕ್ಕೆ ಗೌರವ ನೀಡಲಿ'

'ನಾಮಫಲಕದಲ್ಲಿ ಶೇ 60ರಷ್ಟು ಕನ್ನಡ ಭಾಷೆ ಇರಬೇಕು. ಈ ಬಗ್ಗೆ ಕರ್ನಾಟಕ ರಕ್ಷಣಾ ವೇದಿಕೆ ಹೋರಾಟ ಮಾಡುತ್ತಿದ್ದು, ಕಾನೂನಿನಲ್ಲಿ ಇದಕ್ಕೆ ಅವಕಾಶವಿದೆ. ಉಳಿದಂತೆ ಅವರು ಯಾವುದೇ ಭಾಷೆಯಲ್ಲಿ ಹಾಕಿಕೊಳ್ಳಲಿ. ಕನ್ನಡಕ್ಕೆ ಹೆಚ್ಚಿನ ಆದ್ಯತೆ ಇರಬೇಕು. ವ್ಯಾಪಾರ ಮಾಡುವವರು ಕನ್ನಡ ತಾಯಿ ಹಾಗೂ ಭೂಮಿಗೆ ಗೌರವ ನೀಡಬೇಕು' ಎಂದು ಡಿಸಿಎಂ ಶಿವಕುಮಾರ್ ಹೇಳಿದರು.

'ಕಾನೂನಿನ ಅಡಿಯಲ್ಲಿ ನ್ಯಾಯ'

'ಕೆ.ಜೆ. ಹಳ್ಳಿ– ಡಿ.ಜೆ. ಹಳ್ಳಿ ಪ್ರಕರಣದಲ್ಲಿ ನಾವು ಏನೇ ಮಾಡಿದರೂ ಕಾನೂನು ವ್ಯಾಪ್ತಿಯಲ್ಲಿ ಮಾಡಬೇಕು. ಬಿಜೆಪಿ ಸರ್ಕಾರ ಕೆಲವು ಸೆಕ್ಷನ್ ಪ್ರಯೋಗ ಮಾಡಿರುವುದರಿಂದ ಬಂಧಿತರು ಹೊರಬರಲು ಆಗುತ್ತಿಲ್ಲ. ಕಾನೂನಿನ ಅಡಿಯಲ್ಲಿ ನ್ಯಾಯ ಒದಗಿಸಿಕೊಡಬೇಕು. ಕಾನೂನು ಕೈಗೆತ್ತಿಕೊಂಡವರ ವಿರುದ್ಧದ ಕ್ರಮಕ್ಕೆ ನಮ್ಮ ಅಭ್ಯಂತರವಿಲ್ಲ. ಕೆಲವು ಅಮಾಯಕರು ಇದರಲ್ಲಿ ಸಿಲುಕಿದ್ದಾರೆ ಎಂಬ ಕೂಗು ಇದೆ' ಎಂದು ಬಂಧಿತರ ಸಂಬಂಧಿತ ಮನವಿಗೆ ಶಿವಕುಮಾರ್ ಪ್ರತಿಕ್ರಿಯಿಸಿದರು.

'ಅಭಿಜಾತೆ–2024' ರಾಜ್ಯ ತೃತೀಯ ವಿಪ್ರ ಮಹಿಳಾ ಸಮ್ಮೇಳನ

'ಬ್ರಾಹ್ಮಣ ಧರ್ಮ ಪಾಲನೆಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣರಾಗಿ ಹುಟ್ಟಿದವರಿಗೆ ತಮ್ಮದೇ ಆದ ಕರ್ತವ್ಯಗಳಿರುತ್ತವೆ. ತಮ್ಮದೇ ಆದ ಧರ್ಮ ಇದೆ. ಅವುಗಳನ್ನು ಎಷ್ಟರ ಮಟ್ಟಿಗೆ ನಿಭಾಯಿಸುತ್ತಿದ್ದೇವೆ ಎಂಬ ಪ್ರಶ್ನೆ ಮೂಡಿದೆ' ಎಂದು ಚಿಂತಕಿ ಅಲ್ಕಾ ಇನಾಮದಾರ್ ಸಂದೇಹ ವ್ಯಕ್ತಪಡಿಸಿದರು.

ನಗರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಮ್ಮಿಕೊಂಡಿದ್ದ 'ಅಭಿಜಾತೆ–2024' ತೃತೀಯ ವಿಪ್ರ ಮಹಿಳಾ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಧರ್ಮ ಎಂದರೆ ಕರ್ತವ್ಯ. ರಾಜಧರ್ಮ, ಪ್ರಜಾಧರ್ಮ, ಪಿತೃಧರ್ಮ, ಪುತ್ರಧರ್ಮ... ಹೀಗೆ ಎಲ್ಲರಿಗೂ ಅವರದ್ದೇ ಆದ ಕರ್ತವ್ಯಗಳಿರುತ್ತವೆ. ವಿಪ್ರವರ್ಣದವರಿಗೂ ಕರ್ತವ್ಯಗಳಿವೆ. ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶನ ಮಾಡಿ ಸಮಾಜವನ್ನು ರಕ್ಷಿಸಿ, ಸರಿಯಾದ ದಾರಿಯಲ್ಲಿ ಒಯ್ಯುವವರೇ ಪುರೋಹಿತರು' ಎಂದು ಬಣ್ಣಿಸಿದರು.

'ಆದರೆ, ನಮ್ಮ ವೇಷಭೂಷಣ, ಭಾಷೆ, ಆಚಾರ, ವಿಚಾರ ನಮ್ಮ ಧರ್ಮಕ್ಕೆ ಅನುಗುಣವಾಗಿ ನಡೆಯುತ್ತಿದೆಯೇ ಎಂದು ಅವಲೋಕನ ಮಾಡಿಕೊಳ್ಳಬೇಕು. ಎಷ್ಟು ಮನೆಗಳಲ್ಲಿ ಮಕ್ಕಳು ಮಮ್ಮಿ, ಡ್ಯಾಡಿ ಎಂದು ಹೆತ್ತವರನ್ನು ಕರೆಯುತ್ತಾರೆ? ಮುಕ್ತಕೇಶರಾಗಿ ಹೆಣ್ಣುಮಕ್ಕಳು ಓಡಾಡುತ್ತಿದ್ದಾರೆ, ಲಜ್ಜಾ ರಕ್ಷಣೆಗಾಗಿ ವಸ್ತ್ರ ಇದೆ ಎಂಬುದನ್ನು ಮರೆತು ವೇಷಭೂಷಣ ತೊಡುತ್ತಿದ್ದಾರೆ ಎಂಬುದನ್ನು ಯೋಚಿಸಬೇಕು' ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ವಿ.ಆರ್. ಗೌರಿಶಂಕರ್, ಅದಮ್ಯ ಚೇತನದ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಲ್.ಎ. ರವಿಸುಬ್ರಹ್ಮಣ್ಯ, ಉದಯ ಗರುಡಾಚಾರ್, ಸಿ.ಕೆ. ರಾಮಮೂರ್ತಿ, 'ಅಭಿಜಾತೆ' ಕಾರ್ಯಾಧ್ಯಕ್ಷೆ ಮೇದಿನಿ ಉದಯ್ ಗರುಡಾಚಾರ್ ಭಾಗವಹಿಸಿದ್ದರು.



ಬೆಂಗಳೂರಿನ ಶೃಂಗೇರಿ ಶಂಕರಮಠದಲ್ಲಿ ಶನಿವಾರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಯೋಜಿಸಿದ 'ಅಭಿಜಾತೆ–2024' ತೃತೀಯ ವಿಪ್ರ ಮಹಿಳಾ ರಾಜ್ಯ ಸಮ್ಮೇಳನದಲ್ಲಿ ಶೃಂಗೇರಿ ಶಾರದಾ ಪೀಠದ ಆಡಳಿತಾಧಿಕಾರಿ ಆರ್. ಗೌರೀಶಂಕರ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಸಮ್ಮೇಳನ ಸಮಿತಿಯ ಕಾರ್ಯಾಧ್ಯಕ್ಷೆ ಮೇದಿನಿ ಉದಯ ಗರುಡಾಚಾರ್, ಸಮ್ಮೇಳನ ಸಂಚಾಲಕಿ ಶುಭಮಂಗಳಾ ಸುನಿಲ್, ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, ಸಮ್ಮೇಳನಾಧ್ಯಕ್ಷೆ ಅಲ್ಕಾ ಸುಧೀರ್ ಇನಾಮ್‌ದಾರ್, ಅದಮ್ಯ ಚೇತನದ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಶಾಸಕರಾದ ಸಿ.ಕೆ. ರಾಮಮೂರ್ತಿ, ಶಾಸಕ ಎಲ್.ಎ. ರವಿಸುಬ್ರಮಣ್ಯ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಚಿಕ್ಕಬಳ್ಳಾಪುರದಲ್ಲಿ 13ಕ್ಕೆ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಎಂ.ಎಸ್.ರಾಮಯ್ಯ ಯೂತ್ ಫೌಂಡೇಶನ್ ಮೂಲಕ ಜ.13ರಂದು ನಗರದ ಸಂತ ಜೋಸೆಫರ ಶಾಲೆ ಆವರಣದಲ್ಲಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ.

ಸುಮಾರು 75 ಕಂಪನಿಗಳು ಈ ಮೇಳದಲ್ಲಿ ಭಾಗಿಯಾಗಲಿದ್ದು, 15 ಸಾವಿರ ಯುವಕರಿಗೆ ಉದ್ಯೋಗದ ಅವಕಾಶ ದೊರಕಿಸಿಕೊಡಬೇಕು ಎನ್ನುವ ಚಿಂತನೆ ಇದೆ ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ಮತ್ತು ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಉದ್ಯೋಗ ಮೇಳ ನಡೆಸಲಾಗುತ್ತಿದೆ.

13ರಂದು ಬೆಳಿಗ್ಗೆ 9ರಿಂದ ಮೇಳ ಆರಂಭವಾಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕ ಪ್ರದೀಪ್ ಈಶ್ವರ್ ಮತ್ತಿತರರು ಪಾಲ್ಗೊಳ್ಳುವರು. ಆನ್‌ಲೈನ್‌ನಲ್ಲಿ ನೋಂದಣಿಗೆ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದೆ. 4.50 ಸಾವಿರ ಮಂದಿ ನೋಂದಣಿ ಆಗಿದ್ದಾರೆ ಎಂದರು.

ಮುಂದಿನ ದಿನಗಳಲ್ಲಿ ದೊಡ್ಡಬಳ್ಳಾಪುರ ಮತ್ತು ಯಲಹಂಕದಲ್ಲಿಯೂ ಉದ್ಯೋಗ ಮೇಳ ನಡೆಸಲಾಗುವುದು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಕಂಪನಿಗಳು ಮೇಳದಲ್ಲಿ ಭಾಗಿಯಾಗಲಿವೆ. ಕೃಷಿ ಕೈಗಾರಿಕೆಗಳಿಗೆ ಸಂಬಂಧಿಸಿದ, ಡಿಜಿಟಲ್ ಹಾಗೂ ಸ್ಟಾರ್ಟಪ್‌ಗಳಿಗೆ ಸಂಬಂಧಿಸಿದ ಕಂಪನಿ ಭಾಗಿಯಾಗಲಿವೆ ಎಂದು ತಿಳಿಸಿದರು.

ಮೃತ ಹೆಣ್ಣುಮಕ್ಕಳ ಉತ್ತರಾಧಿಕಾರಿಗೂ ಆಸ್ತಿಯಲ್ಲಿ ಸಮಪಾಲು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೃತ ಹೆಣ್ಣು ಮಕ್ಕಳ ಕಾನೂನುಬದ್ಧ ಉತ್ತರಾಧಿಕಾರಿಯೂ ಆಸ್ತಿಯಲ್ಲಿ ಸಮಾನ ಪಾಲು ಪಡೆಯಹುದು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಚನ್ನಬಸಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಧಾರವಾಡ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ವಜಾಗೊಳಿಸಿದ್ದಾರೆ.

'ಹಿಂದೂ ಉತ್ತರಾಧಿಕಾರ ಕಾಯ್ದೆ-2005ಕ್ಕೆ ತಿದ್ದುಪಡಿ ತರುವುದಕ್ಕೂ ಮೊದಲು ಮಗಳು ಮೃತಪಟ್ಟಿದ್ದಾಳೆ ಎನ್ನುವ ಕಾರಣದಿಂದಾಗಿ ಆಕೆಯ ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಆಸ್ತಿ ಹಕ್ಕು ಇಲ್ಲ ಎಂದು ಹೇಳಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: 2023ರ ಅಕ್ಟೋಬರ್ 3ರಂದು ಗದಗ ಪ್ರಧಾನ ಸಿವಿಲ್ ನ್ಯಾಯಾಲಯ ಮೃತ ಪುತ್ರಿಯರ ಕಾನೂನಾತ್ಮಕ ವಾರಸುದಾರರಿಗೆ ಅವರ ಪೂರ್ವಜರ ಆಸ್ತಿಯಲ್ಲಿ ಸಮಪಾಲು ನೀಡಿ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಚನ್ನಬಸಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದರು.

ಅಧಿಕಾರಿಗಳೊಂದಿಗೆ ಸಚಿವ ಡಾ.ಎಂ.ಸಿ.ಸುಧಾಕರ್ ಸಭೆ

ರೋಪ್ ವೇ; ಪ್ರಕ್ರಿಯೆ ಚುರುಕು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಂದಿಗಿರಿಧಾಮಕ್ಕೆ ರೋಪ್ ವೇ ನಿರ್ಮಾಣದ ವಿಚಾರವಾಗಿ ಪ್ರಕ್ರಿಯೆಗಳನ್ನು ಚುರುಕುಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಅಧಿಕಾರಿಗಳಿಗೆ ಸೂಚಿಸಿದರು.

ರೋಪ್ ವೇ ನಿರ್ಮಾಣ ಸಂಬಂಧ ಬೆಂಗಳೂರಿನ ರಾಜ್ಯ ಉನ್ನತ ಪರಿಷತ್ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಉಪವಿಭಾಗಾಧಿಕಾರಿ ಡಿ.ಎಚ್. ಅಶ್ವಿನ್, ತಹಶೀಲ್ದಾರ್ ಅನಿಲ್ ಹಾಗೂ ಪ್ರವಾಸೋದ್ಯಮ, ಅರಣ್ಯ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಸಭೆ ನಡೆಸಿದರು.

ರೋಪ್ ವೇ ಯೋಜನೆ, ಕಾಮಗಾರಿ ಪ್ರಾರಂಭಕ್ಕೆ ಅಗತ್ಯವಿರುವ ಭೂಮಿ, ಸ್ವಾಧೀನ ಪ್ರಕ್ರಿಯೆ, ಪರಿಸರ ಇಲಾಖೆಯ ಅನುಮತಿ ಸೇರಿದಂತೆ ಹಲವು ವಿಷಯಗಳ ಕುರಿತು ಸುದೀರ್ಘವಾಗಿ ಚರ್ಚಿಸಿದರು. ಯಾವುದೇ ಅಡೆತಡೆಗಳು ಇದ್ದರೂ ಸಮಸ್ಯೆಗಳನ್ನು ಪರಿಹರಿಸಬೇಕು. ಇದು ಮಹತ್ವದ ಯೋಜನೆ ಎಂದು ಹೇಳಿದರು.

ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರೋಪ್ ವೇ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ್ದರು. ಚುನಾವಣೆಯ ಸಮಯದಲ್ಲಿ ಭೂಮಿ ಪೂಜೆ ನಡೆದ ಕಾರಣ ಇದು ರಾಜಕೀಯವಾಗಿ ಬಳಕೆ ಆಗುತ್ತಿದೆ ಎಂಬ ಆರೋಪಗಳು ಕೇಳಿ ಬಂದಿದ್ದವು.

ನಂತರದ ದಿನಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಗಿರಿಧಾಮಕ್ಕೆ ಭೇಟಿ ನೀಡಿದ ಸಮಯಲ್ಲಿ ರೋಪ್ ವೇ ಕಾಮಗಾರಿಗಳ ಬಗ್ಗೆ ಸಮಗ್ರವಾಗಿ ತಿಳಿಯಲಾಗುವುದು ಎಂದಿದ್ದರು. ಆದರೆ ಇಂದಿಗೂ ರೋಪ್ ವೇ ಕಾಮಗಾರಿಗಳು ಆರಂಭವಾಗಿಲ್ಲ.



ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗಿರಿಧಾಮಕ್ಕೆ ರೋಪ್ ವೇ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಜೊತೆ ಸಚಿವ ಡಾ.ಎಂ.ಸಿ.ಸುಧಾಕರ್ ಮಾತುಕತೆಯಲ್ಲಿ ತೊಡಗಿರುವುದು

'ಓಮ್ವೆಡ್ತ್ ಭಾರತದ ದೊಡ್ಡ ಸಮಾಜಶಾಸ್ತ್ರಜ್ಞ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೇಲ್ ಓಮ್ವೆಡ್ತ್ ಭಾರತ ಕಂಡ ದೊಡ್ಡ ಸಮಾಜಶಾಸ್ತ್ರಜ್ಞ. ಆದರೆ, ಯಾವ ಸಮಾಜಶಾಸ್ತ್ರಜ್ಞರೂ ಅವರ ಹೆಸರನ್ನು ಪ್ರಸ್ತಾಪ ಮಾಡಿಲ್ಲ. ಹಾಗೆಯೇ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸಹ ಸಮಾಜಶಾಸ್ತ್ರಜ್ಞರು ಎಂದು ಯಾರೂಕೂಡ ಪರಿಗಣಿಸಿಲ್ಲ' ಎಂದು ಸಮಾಜಶಾಸ್ತ್ರಜ್ಞ ಸಿ.ಜಿ. ಲಕ್ಷ್ಮೀಪತಿ ಹೇಳಿದರು.

ನಗರದಲ್ಲಿ ಶನಿವಾರ ಬಯಲು ಬಳಗ ಆಯೋಜಿಸಿದ್ದ ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರು ಅನುವಾದಿಸಿರುವ 'ಬೇಗಂಪುರ' ಪುಸ್ತಕದ ಸಂವಾದ ಮತ್ತು ಮಾತುಕತೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಂಜಗೆರೆ ಜಯಪ್ರಕಾಶ್, 'ಅಂಬೇಡ್ಕರ್ ಅವರು ಸ್ವತಃ ವಾರ್ಕರಿ ಚಳವಳಿಯ ಸಂತರನ್ನು ಜಾತಿವಿರೋಧಿ ಸಂತರೆಂದು ನೋಡಲು ಸಾಧ್ಯವಾಗಿರಲಿಲ್ಲ. ಅದೇ ರೀತಿ ಕಬೀರರನ್ನೂ ಕೂಡ. ಆದರೆ ರವಿದಾಸರನ್ನು ಮಾತ್ರ ಜಾತಿವಿರೋಧಿ ಪ್ರವರ್ತಕರಾಗಿ ಒಪ್ಪಿದ್ದರು. ಕಾರಣ ಆ ಕಾಲಕ್ಕೆ ಅಂಬೇಡ್ಕರ್ ಅವರಿಗೆ ತಿಳಿದಿದ್ದಂತೆ ವಾರ್ಕರಿ ಚಳವಳಿ ಬ್ರಾಹ್ಮಣೀಕರಿಸಲ್ಪಟ್ಟಿತ್ತು. ಭಾರತದ ಬಹುತೇಕ ಸಂತರು ಭಾರತದ ಇತಿಹಾಸವನ್ನು ಪ್ರವೇಶ ಮಾಡಿರಲಿಲ್ಲ. ಆದರೆ ಜ್ಯೋತಿ ಬಾ ಫುಲೆ ಅವರನ್ನು ಒಳಗೊಂಡಂತೆ ನಂತರ ಬಂದವರು ಭಾರತದ ಚರಿತ್ರೆಯನ್ನು ವಿಶಿಷ್ಟವಾಗಿ ಗ್ರಹಿಸಲೆತ್ನಿಸಿದರು. ಹೀಗಾಗಿ 14ನೇ ಶತಮಾನದಿಂದ ಹಿಡಿದು ಅಂಬೇಡ್ಕರ್ ವರೆಗಿನ ಪ್ರತಿಯೊಬ್ಬ ಸುಧಾರಕರ ಕನಸುಗಳನ್ನು ಗೇಲ್ ಓಮ್ವೆಡ್ತ್ ಅವರು ಈ ಪುಸ್ತಕದಲ್ಲಿ ಹಿಡಿದಿಟ್ಟಿದ್ದಾರೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರಾದ ಹೊನ್ನು ಸಿದ್ಧಾರ್ಥ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

36 ಕರವೇ ಕಾರ್ಯಕರ್ತರಿಗೆ ಜಾಮೀನು

ದೇವನಹಳ್ಳಿ: ನಾಮಫಲಕದಲ್ಲಿ ಕಡ್ಡಾಯವಾಗಿ ಕನ್ನಡ ಬಳಸುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ವೇಳೆ ಬಂಧಿಸಲಾಗಿದ್ದ ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಸೇರಿ 36 ಕಾರ್ಯಕರ್ತರಿಗೆ ದೇವನಹಳ್ಳಿಯ 5ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಶನಿವಾರ ಜಾಮೀನು ಮಂಜೂರು ಮಾಡಿದೆ.

ಪಟ್ಟಣದ ಹೊರ ವಲಯದಲ್ಲಿರುವ ಸಾದಹಳ್ಳಿ ಟೋಲ್‌ನಿಂದ ಹೊರಟ ಜಾಗೃತಿ ಜಾಥಾ ವೇಳೆ ಕರವೇ ಕಾರ್ಯಕರ್ತರು ಇಂಗ್ಲಿಷ್ ನಾಮಫಲಕಗಳನ್ನು ಧ್ವಂಸ ಮಾಡಿದ್ದರು. ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಮೂರು ಪ್ರಕರಣ ದಾಖಲಾಗಿದ್ದವು.

ಆ ಪೈಕಿ ಒಂದು ಪ್ರಕರಣದಲ್ಲಿ ನಾರಾಯಣಗೌಡ ಸೇರಿ 36 ಕಾರ್ಯಕರ್ತರು ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ₹2 ಲಕ್ಷ ಬಾಂಡ್ ಸಲ್ಲಿಸುವಂತೆ ಷರತ್ತು ವಿಧಿಸಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಇನ್ನುಳಿದ ಎರಡು ಪ್ರಕರಣದಲ್ಲಿ ಠಾಣಾ ಜಾಮೀನು ಸಿಗುವ ಸಾಧ್ಯತೆ ಇರುವುದರಿಂದ ಜಾಮೀನಿಗೆ ಅರ್ಜಿ ಸಲ್ಲಿಸಿಲ್ಲ. ಎಲ್ಲ 36 ಕರವೇ ಕಾರ್ಯಕರ್ತರು ಬಹುತೇಕ ಸೋಮವಾರ ಬಿಡುಗಡೆಯಾಗುವ ಸಾಧ್ಯತೆ ಇದೆ

ನಗರದಲ್ಲಿ ಇಂದು

'ವಾಕ್ 2 ಹೀಲ್' 4ಕೆ ವಾಕಥಾನ್: ಅತಿಥಿಗಳು: ವಿ.ಆರ್. ಗೌರಿಶಂಕರ್, ಮಹಾದೇವನ್, ಎಸ್. ಅಹಲ್ಯಾ, ಎ. ಸುಬ್ರಹ್ಮಣಿಯನ್, ಸತೀಶ್ ಮೂರ್ತಿ, ಶೇಖರ್ ಎನ್., ಕುಟ್ರಾಲಂ ಎಸ್., ಶಿವದೀಪ್ ಮಹಡಿ, ಆಯೋಜನೆ: ಗೋಪಾಲ್ಸ್ ಚಾರಿಟಬಲ್ ಟ್ರಸ್ಟ್, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 6ರಿಂದ

ಆರ್ಗ್ಯಾನಿಕ್ ಸಂತೆ, ಕುವೆಂಪು ಅವರಿಗೆ ನುಡಿ ನಮನ: ಕವಿತೆಗಳ ಗಾಯನ: ತೀರ್ಥಹಳ್ಳಿ ರಮೇಶ್, ನೃತ್ಯ: ಮಂದಸ್ಮಿತ ಭಟ್ ಮತ್ತು ತಂಡ, ಸಂಯೋಜನೆ: ಅನಿತಾ ಬಿ., ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8ರಿಂದ


ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಂಗಲ ಪುರಪ್ರವೇಶ, ಗುರುವಂದನಾ ಕಾರ್ಯಕ್ರಮ: ಪುರಭವನದ ವೃತ್ತದಿಂದ ಮೆರವಣಿಗೆಗೆ ಚಾಲನೆ: ರಾಮಲಿಂಗಾರೆಡ್ಡಿ ಬೆಳಿಗ್ಗೆ 8ಕ್ಕೆ, 24 ತೀರ್ಥಂಕರರಿಗೆ ಏಕಕಾಲದಲ್ಲಿ ವೈಭವದ ಕಲ್ಪದ್ರುವ ಮಹಾಭಿಷೇಕ ಪೂಜೆ ಬೆಳಿಗ್ಗೆ 11.15ಕ್ಕೆ, ಅಭಿನಂದನಾ ಕಾರ್ಯಕ್ರಮ: ಸಾನ್ನಿಧ್ಯ: ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಅತಿಥಿಗಳು: ಸುರೇಂದ್ರಕುಮಾರ್, ಡಿ.ಕೆ. ಶಿವಕುಮಾರ್, ಜಮೀರ್ ಅಹಮದ್ ಖಾನ್, ಡಿ. ಸುಧಾಕರ್, ಉದಯ್ ಗರುಡಾಚಾರ್, ಅಭಯ ಪಾಟೀಲ್, ಮನೋಜ್ ಜೈನ್, ಅಧ್ಯಕ್ಷತೆ: ಬಿ. ಪ್ರಸನ್ನಯ್ಯ, ಸನ್ಮಾನಿತರು: ಎಸ್. ಜಿತೇಂದ್ರ ಕುಮಾರ್, ರಾವ್ ಸಾಹೇಬ್ ಎ. ಪಾಟೀಲ್, ಆಯೋಜನೆ: ಕರ್ನಾಟಕ ಜೈನ್ ಅಸೋಸಿಯೇಷನ್, ಸ್ಥಳ: ಜೈನ್ ಭವನ, ಮಧ್ಯಾಹ್ನ 2.30

ಭಕ್ತಿ ಭಾವಾನಂದ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9ರಿಂದ

ರಾಜ್ಯಮಟ್ಟದ ಮಕ್ಕಳ ಚೆಸ್ ಪಂದ್ಯಾವಳಿ ಉದ್ಘಾಟನೆ, ಚೊಚ್ಚಲ ಬೆಂಗಳೂರು ಅಂತರರಾಷ್ಟ್ರೀಯ ಗ್ರ್ಯಾಂಡ್ ಮಾಸ್ಟರ್ಸ್ ಓಪನ್ ಚೆಸ್ ಪಂದ್ಯಾವಳಿ ಮಾಸ್ಕಟ್ ಅನಾವರಣ: ಉದ್ಘಾಟನೆ: ಸುದರ್ಶನ ಚನ್ನಂಗಿಹಳ್ಳಿ, ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಉಪಸ್ಥಿತಿ: ಜಯಪಾಲ್ ಚಂದಾಡಿ, ಸೌಮ್ಯ ಎಂ.ಯು., ಶ್ರೀಪಾದ್ ಕೆ.ವಿ., ಅರವಿಂದ ಶಾಸ್ತ್ರಿ, ಲೋಕೇಶ್ ಎಂ., ಆಯೋಜನೆ ಮತ್ತು ಸ್ಥಳ: ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಕಾಲೇಜು, ಗುರುರಾಯನಪುರ, ಕೋಲೂರು, ರಾಮೋಹಳ್ಳಿ, ಬೆಳಿಗ್ಗೆ 9

'ಶೂದ್ರ ಶ್ರೀನಿವಾಸ್' ಸಾಹಿತ್ಯ ಪತ್ರಿಕೆಯ 50 ವರ್ಷಗಳ ನೆನಪು: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಪ್ರಶಸ್ತಿ ಪ್ರದಾನ: ಹುಣಸವಾಡಿ ರಾಜನ್, ಪ್ರಸ್ತಾವನೆ: ಎಚ್. ದಂಡಪ್ಪ, ಅಧ್ಯಕ್ಷತೆ: ಕೆ. ಮರುಳಸಿದ್ಧಪ್ಪ, ಅತಿಥಿಗಳು: ಮೋಹನ್ ಕುಮಾರ್ ಕೊಂಡಜ್ಜಿ, ಸೌಮ್ಯ ರೆಡ್ಡಿ, ಟಿ.ಎನ್. ಸೀತಾರಾಮ್, ಕಾಳೇಗೌಡ ನಾಗವಾರ, ಗೋಪಾಲರೆಡ್ಡಿ, ಮಾನಸ ಸಿದ್ಧಲಿಂಗಯ್ಯ, ಲಕ್ಷ್ಮೀಪತಿಬಾಬು, ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ ಪುರಸ್ಕೃತರು: ರೇಣುಕಾ ರಮಾನಂದ, ಕಿ.ರಂ. ನಾಗರಾಜ ಪ್ರಶಸ್ತಿ ಪುರಸ್ಕೃತರು: ಜಿ.ಎಸ್. ಸಿದ್ಧಲಿಂಗಯ್ಯ, ಕೆ. ಮರುಳಸಿದ್ಧಪ್ಪ ಪ್ರಶಸ್ತಿ ಪುರಸ್ಕೃತರು: ಪ್ರಸನ್ನ, ದಲಿತಕವಿ ಸಿದ್ಧಲಿಂಗಯ್ಯ ಪ್ರಶಸ್ತಿ ಪುರಸ್ಕೃತರು: ಎಚ್.ಟಿ. ಪೋತೆ, ಎಂ. ನಂಜಪ್ಪರೆಡ್ಡಿ ಪ್ರಶಸ್ತಿ ಪುರಸ್ಕೃತರು: ಜಿ. ಸುಶೀಲ್, ಆಯೋಜನೆ: ಶೂದ್ರ ಶ್ರೀನಿವಾಸ್ ನೆಲದ ಮಾತು ಪ್ರತಿಷ್ಠಾನ, ಸ್ಥಳ: ನೆಲದಮಾತು ವೇದಿಕೆ, ಮಾನಸ ವಿದ್ಯಾಕೇಂದ್ರ, ಅಣ್ಣಯ್ಯರೆಡ್ಡಿ ಬಡಾವಣೆ, ಜೆ.ಪಿ.ನಗರ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮಧುಮಿತ ರವೀಂದ್ರ, ಅತಿಥಿಗಳು: ಆರ್.ಕೆ. ಪದ್ಮನಾಭ, ವೈ.ಕೆ. ಸಂಧ್ಯಾ ಶರ್ಮ, ಅನು ಪ್ರಭಾಕರ್ ಮುಖರ್ಜಿ, ಆಯೋಜನೆ: ಸಮರಸ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6



ಮಧುಮಿತ ರವೀಂದ್ರ

ಗೀತಾ ಜಯಂತಿ ಉಪನ್ಯಾಸ: ವೆಂಕಟರಾಮ್ ಭಾರತಿ, ಅತಿಥಿಗಳು: ಶೈಲಜಾ ರಾವ್, ಸಿ.ಎನ್. ಉಮೇಶ್, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಅನಿತಾಕೌಲ್ ಸ್ಮರಣೆ, ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಸಿ.ಆರ್. ಚಂದ್ರಶೇಖರ್, ಅತಿಥಿಗಳು: ಎಲ್.ಕೆ. ಅತೀಕ್, ಎಚ್.ಎಲ್. ಪುಷ್ಪ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ರಜತ ಮಹೋತ್ಸವ: ಅಧ್ಯಕ್ಷತೆ: ಎಂ.ಕೆ. ಖಂಡಪ್ಪ, ಅತಿಥಿಗಳು: ಪಿ.ಸಿ. ಮೋಹನ್, ಕೆ.ಎನ್. ರಾಜಣ್ಣ, ದಿನೇಶ್ ಗುಂಡೂರಾವ್, ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಸವ್ವಾಸರೆ ವಿ. ಶಿವರಾಂ, ಅಶ್ವತ್ಥನಾರಾಯಣ, ಜಿ. ರಾಮಚಂದ್ರ, ಆಯೋಜನೆ: ಜಿಹ್ವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಸ್ಥಳ: ಅಲ್ಲಮ್ಮ ಪ್ರಭು ಮಂಟಪ, ವಿಜಯನಗರ, ಬೆಳಿಗ್ಗೆ 11

ರೈತರೊಂದಿಗೆ ಸಂವಾದ: ಅತಿಥಿ: ಅರ್ಜುನ್ ಮುಂಡಾ, ಉಪಸ್ಥಿತಿ: ಸಂಜಯ್ ಕುಮಾರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ, ಬೆಳಿಗ್ಗೆ 11

ಮಾಸದ ಮಂಥನ: ಅತಿಥಿ: ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಸ್ಥಳ: ನಂ. 17, ಸಾನ್ನಿಧ್ಯ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಸಿಸ್ಟರ್ ಪ್ರೇಮ ಅವರ 'ಕನ್ನಡ ಕ್ರೈಸ್ತ ಸಾಹಿತ್ಯದ ಒಳನೋಟಗಳು' ಪುಸ್ತಕ ಬಿಡುಗಡೆ: ಮಂಜುನಾಥ ಪಾಳ್ಯ, ಅಧ್ಯಕ್ಷತೆ: ಜೆಸ್ಸಿ ಮರ್ಲಿನ್, ಅತಿಥಿಗಳು: ಎಸ್. ಜಾಫೆಟ್, ಡಾಮ್ನಿಕ್, ಸಿ. ಫ್ರಾನ್ಸಿಸ್, ಪುಸ್ತಕ ಪರಿಚಯ: ಸಿ. ಮೆರಿಜೋಸೆಫ್, ಆಯೋಜನೆ: ಸುಮೇರು ಟ್ರಸ್ಟ್, ಸ್ಥಳ: ಸಂತ ತೆರೇಸ ಮಹಿಳಾ ಪದವಿ ಕಾಲೇಜು, ಚಾಮರಾಜಪೇಟೆ, ಬೆಳಿಗ್ಗೆ 11

ಸ್ವರ ಸುಬ್ರಹ್ಮಣ್ಯ ಹಾಡಿರುವ ಭಾವಗೀತೆಗಳ ಗುಚ್ಛ 'ಭಾವಸ್ವರ', ಮೃತ್ಯುಂಜಯ ದೊಡ್ಡವಾಡ ನಿರ್ದೇಶನದ ಧ್ವನಿಸಾಂದ್ರಿಕೆ ಬಿಡುಗಡೆ: ಬಿ.ಆರ್. ಲಕ್ಷ್ಮಣ ರಾವ್, 'ಜಿ.ಎಸ್. ಶಿವರುದ್ರಪ್ಪ ಅವರ ವಿಚಾರ ವಿಮರ್ಶೆ': ಎಸ್.ಜಿ. ಸಿದ್ಧರಾಮಯ್ಯ, 'ಜಿ.ಎಸ್. ಶಿವರುದ್ರಪ್ಪ' ಅವರ ಕಾವ್ಯದ ಕುರಿತು: ಕಾ.ವೆಂ. ಶ್ರೀನಿವಾಸಮೂರ್ತಿ, ಅತಿಥಿ: ಶ್ರೀಶೈಲ ಮಾದಣ್ಣವರ, ಆಯೋಜನೆ: ಸಂಗೀತ ಧಾಮ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4

ಸಂಗೀತ ಕಾರ್ಯಕ್ರಮ: ಪಿಟೀಲು: ಕುಶಲ್ ಬಿ.ಆರ್., ಮೃದಂಗ: ರಘು ಭಾಗವತ್ ಬಿ.ಆರ್., ಘಟ: ಸಚಿನ್ ದೇವಿಪ್ರಸಾದ್, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ವಿನಯ್ ಶರ್ವಾ, ಪಿಟೀಲು: ಬಿ.ಕೆ. ರಘು, ಮೃದಂಗ: ಅನಿರುದ್ಧ ಭಟ್, ಮೋರ್ಸಿಂಗ್: ಗೋಪಿ ಶ್ರವಣ್, ಸ್ಥಳ: ಸ್ವಾಮಿ ವಿವೇಕಾನಂದ ಶತಾಬ್ದಿ ಸಭಾಂಗಣ, ಸಂಜೆ 5.30ರಿಂದ

ಸೂತ್ರದ ಬೊಂಬೆ ಆಟ, ಶ್ರೀಕೃಷ್ಣ ತುಲಾಭಾರ: ಪ್ರಸ್ತುತಿ: ಪತ್ತಳಿ ಕಲಾರಂಗ, ಬನಶಂಕರಿ, ಆಯೋಜನೆ: ರಾಯಲ್ ಪಾರ್ಕ್ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್, ಸ್ಥಳ: ಕೊಕೊನಟ್ ಗ್ರೂವ್ ಗಾರ್ಡನ್, ರಾಯಲ್ ಪಾರ್ಕ್ ರೆಸಿಡೆನ್ಸಿ, ಜೆ.ಪಿ. ನಗರ, ಸಂಜೆ 5.30

'ಕಳರಿ ಅನುಭವ' ಉದ್ಘಾಟನೆ: ತೇಜಸ್ವಿ ಸೂರ್ಯ, ಮಹೇಂದ್ರ ಡಿ., ಆಯೋಜನೆ: ಕಳರಿ ಮನೋಯುವ್ರೆ , ಸ್ಥಳ: ಎಸ್.ಜೆ.ಆರ್.ಸಿ. ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಸಂಜೆ 6

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸರ್ಕಾರಿ ವ್ಯವಸ್ಥೆಯಡಿ ನಿರ್ಮಾಣವಾದ ದೇಶದ ಎರಡನೇ ಆಸ್ಪತ್ರೆ

ಕ್ರೀಡಾ ಗಾಯ ಚಿಕಿತ್ಸೆಗೆ ಹೈಟೆಕ್ ಸಂಕೀರ್ಣ

● ವರುಣ ಹೆಗಡೆ

ಬೆಂಗಳೂರು: ಗಾಯಾಳು ಕ್ರೀಡಾಪಟುಗಳಿಗೆ ಚಿಕಿತ್ಸೆ ಹಾಗೂ ಪುನರ್ವಸತಿ ಕಲ್ಪಿಸಲು ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ (ಎಸ್‌ಜಿಐಟಿಒ) ಹೈಟೆಕ್ ಕಟ್ಟಡ ತಲೆಯೆತ್ತಿದೆ. ಇದು ಸರ್ಕಾರಿ ವ್ಯವಸ್ಥೆಯಡಿ ನಿರ್ಮಾಣಗೊಳ್ಳುತ್ತಿರುವ ದೇಶದ ಎರಡನೇ ಕ್ರೀಡಾ ಚಿಕಿತ್ಸಾ ಸಂಕೀರ್ಣವಾಗಿದೆ.

ಇದೇ ಮಾದರಿಯ ಕ್ರೀಡಾ ಚಿಕಿತ್ಸಾ ಸಂಕೀರ್ಣವೊಂದು ಉತ್ತರ ಪ್ರದೇಶದಲ್ಲಿದೆ. ಈ ಸಂಕೀರ್ಣ ಕ್ರೀಡಾಪಟುಗಳಿಗೆ ಮೀಸಲಾಗಿರಲಿದ್ದು, ಕ್ರೀಡಾ ಗಾಯಗಳ ನಿರ್ವಹಣೆ ಬಗ್ಗೆ ತರಬೇತಿಯನ್ನೂ ನೀಡಲಾಗುತ್ತದೆ.

ಈ ನೂತನ ಕ್ರೀಡಾ ಚಿಕಿತ್ಸಾ ಸಂಕೀರ್ಣದಲ್ಲಿ ಓಟದ ಟ್ರ್ಯಾಕ್, ಕ್ರೀಡಾ ಪ್ರಯೋಗಾಲಯ, ಕ್ರಯೋಥೆರಪಿಯಂತಹ ಸೌಲಭ್ಯಗಳಿವೆ. ಜತೆಗೆ ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೊಠಡಿ ಸೇರಿ ವಿವಿಧ ಸೌಲಭ್ಯಗಳೂ ಇಲ್ಲಿ ಇರಲಿವೆ.

ಈಗಾಗಲೇ ಎರಡು ಮಹಡಿಯ ಕಟ್ಟಡದ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಒಳಾಂಗಣಕ್ಕೆ ಅಂತಿಮ ಸ್ಪರ್ಶ ಹಾಗೂ ವೈದ್ಯಕೀಯ ಉಪಕರಣಗಳ ಅಳವಡಿಕೆ ಬಾಕಿ ಉಳಿದಿದೆ. ನಾಲ್ಕರಿಂದ ಐದು ತಿಂಗಳಲ್ಲಿ ಈ ಸಂಕೀರ್ಣವನ್ನು ಪ್ರಾರಂಭಿಸಲು ಸಂಸ್ಥೆ ಸಿದ್ಧತೆ ಮಾಡಿಕೊಂಡಿದ್ದು, ಉಪಕರಣಗಳ ಖರೀದಿ ಪ್ರಕ್ರಿಯೆ ನಡೆಸುತ್ತಿದೆ.

ಈ ಕ್ರೀಡಾ ಸಂಕೀರ್ಣವು 22 ಸಾವಿರ ಚದರ ಅಡಿಯಲ್ಲಿ ತಲೆಯೆತ್ತಿದೆ. ಕೆಳಮಹಡಿಯಲ್ಲಿ ವೈದ್ಯರ ವಾಹನಗಳ ಪಾರ್ಕಿಂಗ್, ಎಕ್ಸ್‌–ರೇ ಘಟಕಕ್ಕೆ ಅವಕಾಶ ನೀಡಲಾಗಿದೆ. ಮೊದಲ ಮಹಡಿಯಲ್ಲಿ ಹೊರರೋಗಿ ವಿಭಾಗ, ಔಷಧಾಲಯ, ತುರ್ತು ಚಿಕಿತ್ಸಾ ಘಟಕಕ್ಕೆ ಸ್ಥಳಾವಕಾಶ ಒದಗಿಸಲಾಗಿದೆ. ಮೊದಲ ಮಹಡಿಯಲ್ಲಿ ಕ್ರೀಡಾ ಗಾಯಗಳಿಗೆ ಚಿಕಿತ್ಸಾ ಘಟಕ ಇರಲಿದ್ದು, ಹೈಟೆಕ್ ಜಿಮ್, ಓಟದ ಟ್ರ್ಯಾಕ್‌ಗೆ ವಿಶಾಲ ಸ್ಥಳಾವಕಾಶ ನೀಡಲಾಗಿದೆ. ಗಾಯ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಇಲ್ಲಿ ತರಬೇತಿ ನೀಡಲಾಗುತ್ತದೆ. ಎರಡನೇ ಮಹಡಿಯಲ್ಲಿ ಎರಡು ಶಸ್ತ್ರಚಿಕಿತ್ಸಾ ಘಟಕ ಹಾಗೂ ಅಗತ್ಯ ಕೊಠಡಿಗಳನ್ನು ನಿರ್ಮಿಸಲಾಗಿದೆ.

> **ಕ್ರೀಡಾಪಟುಗಳಿಗೆ ಗಾಯಗಳು ಕಾಡುತ್ತವೆ. ಇದರಿಂದಾಗಿ ಕೆಲವರು ಕ್ರೀಡೆಯಿಂದ ವಿಮುಖರಾಗುತ್ತಾರೆ. ಆದ್ದರಿಂದ ಅಗತ್ಯ ಚಿಕಿತ್ಸೆ, ಪುನರ್ವಸತಿಗೆ ಕೇಂದ್ರ ನಿರ್ಮಿಸಲಾಗಿದೆ**
> **ಡಾ. ಪ್ರಕಾಶಪ್ಪ ಟಿ.ಎಚ್.,** ಎಸ್‌ಜಿಐಟಿಒ ವೈದ್ಯಕೀಯ ಅಧೀಕ್ಷಕ

ಉಪಕರಣ ಖರೀದಿ: ಕಟ್ಟಡ ನಿರ್ಮಾಣಕ್ಕೆ ₹29 ಕೋಟಿ ವೆಚ್ಚವಾಗಿದ್ದು, ₹ 10 ಕೋಟಿ ವೆಚ್ಚದಲ್ಲಿ ಅಗತ್ಯ ಉಪಕರಣಗಳನ್ನು ಖರೀದಿಸಲಾಗುತ್ತದೆ. ಸಂಸ್ಥೆಯ ಕ್ರೀಡಾ ಚಿಕಿತ್ಸಾ ವಿಭಾಗವು ಸದ್ಯ ಇಬ್ಬರು ವೈದ್ಯರನ್ನು ಒಳಗೊಂಡಿದೆ. ಕ್ರೀಡಾ ಚಿಕಿತ್ಸಾ ಸಂಕೀರ್ಣದಲ್ಲಿ ವೈದ್ಯಕೀಯ ಉಪಕರಣಗಳ ಅಳವಡಿಕೆ ಬಳಿಕ ಅಗತ್ಯ ಫಿಸಿಯೋಥೆರಪಿಸ್ಟ್‌ಗಳ ನೇಮಕಾತಿ ಪ್ರಕ್ರಿಯೆ ನಡೆಯಲಿದೆ. ಕ್ರೀಡಾ ಗಾಯದ ಚಿಕಿತ್ಸೆಗಳಿಗೂ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಸೇರಿ ವಿವಿಧ ವಿಮಾ ಯೋಜನೆಯಡಿ ಚಿಕಿತ್ಸೆ ಒದಗಿಸಲಾಗುತ್ತದೆ. ಇದರಿಂದ ದುಬಾರಿ ವೆಚ್ಚದ ಚಿಕಿತ್ಸೆಗಳು ಅಗ್ಗದ ದರದಲ್ಲಿ ಲಭ್ಯವಾಗುತ್ತವೆ.

'ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ವ್ಯವಸ್ಥೆಯಲ್ಲಿ ಕ್ರೀಡಾ ಚಿಕಿತ್ಸಾ ಸಂಕೀರ್ಣವಿಲ್ಲ. ಇದೇ ಮೊದಲ ಬಾರಿಗೆ ಈ ರೀತಿ ಸಂಕೀರ್ಣವನ್ನು ನಿರ್ಮಾಣ ಮಾಡಲಾಗುತ್ತಿದೆ. ಕ್ರೀಡಾಪಟುಗಳು ದೇಹವನ್ನು ಸದೃಢವಾಗಿಟ್ಟುಕೊಳ್ಳಲು, ವೃತ್ತಿ ಜೀವನದಲ್ಲಿ ಗಾಯ ರಹಿತ ಆಟವಾಡಲು ಅಗತ್ಯ ಮಾರ್ಗದರ್ಶನ, ತರಬೇತಿ ನೀಡಲಾಗುತ್ತದೆ. ಕ್ರೀಡಾಪಟುಗಳು ಗಾಯಗೊಂಡಾಗ ಸೂಕ್ತ ಚಿಕಿತ್ಸೆ ನೀಡಿದಲ್ಲಿ ಮೊದಲಿನಂತೆ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ದುಬಾರಿ ಚಿಕಿತ್ಸೆ ಸಾಧ್ಯವಾಗುವುದಿಲ್ಲ. ಹೀಗಾಗಿ, ಕ್ರೀಡಾ ಚಿಕಿತ್ಸಾ ಸಂಕೀರ್ಣ ನಿರ್ಮಿಸಲಾಗಿದೆ' ಎಂದು ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ. ಪ್ರಕಾಶಪ್ಪ ಟಿ.ಎಚ್. ತಿಳಿಸಿದರು.



ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗಿರುವ ಕ್ರೀಡಾ ಚಿಕಿತ್ಸೆ ಸಂಕೀರ್ಣದ ಹೊರನೋಟ –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ

ಹೊರರೋಗಿ ವಿಭಾಗ ಸ್ಥಳಾಂತರ

ಕ್ರೀಡಾ ಚಿಕಿತ್ಸೆ ಸಂಕೀರ್ಣ ಕಾರ್ಯಾರಂಭಿಸಿದ ಬಳಿಕ ಅಲ್ಲಿಗೆ ಸಂಸ್ಥೆಯ ಹೊರರೋಗಿ ವಿಭಾಗ ಸ್ಥಳಾಂತರವಾಗಲಿದೆ. ಸದ್ಯ ಸಂಸ್ಥೆಗೆ ಚಿಕಿತ್ಸೆಗಾಗಿ ರಾಜ್ಯದ ವಿವಿಧೆಡೆಯಿಂದ ಹಾಗೂ ಹೊರ ರಾಜ್ಯಗಳಿಂದ ಗಾಯಾಳುಗಳು ಸೇರಿ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದರಿಂದಾಗಿ ಸಂಸ್ಥೆಯ ಹೊರರೋಗಿ ವಿಭಾಗದಲ್ಲಿ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಆದ್ದರಿಂದ ಕ್ರೀಡಾ ಚಿಕಿತ್ಸೆ ಸಂಕೀರ್ಣಕ್ಕೆ ಹೊರರೋಗಿ ವಿಭಾಗ ಸ್ಥಳಾಂತರಿಸಲು ಯೋಜನೆ ರೂಪಿಸಲಾಗಿದೆ.

ಕ್ರೀಡಾ ಚಿಕಿತ್ಸೆ ಸಂಕೀರ್ಣದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದವರನ್ನು ಸಂಸ್ಥೆಯ ಮುಖ್ಯ ಕಟ್ಟಡಕ್ಕೆ ಸ್ಥಳಾಂತರ ಮಾಡಲು ಮೇಲ್ಸೇತುವೆ ನಿರ್ಮಿಸಲಾಗುತ್ತದೆ. ಈ ಕಾರ್ಯವು ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ ಎಂದು ಸಂಸ್ಥೆಯ ವೈದ್ಯರು ತಿಳಿಸಿದ್ದಾರೆ.

ಗುಳೆ ಗ್ರಾಮಗಳು ಖಾಲಿ ಖಾಲಿ...



ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ತೆಕ್ಕೂರಿನ ಆಟದ ಮೈದಾನದಲ್ಲಿ ವಲಸೆ ತೋಟ ಕಾರ್ಮಿಕರು ಟೆಂಟ್‌ಗಳಲ್ಲಿ ನೆಲೆಸಿರುವುದು –ಪ್ರಜಾವಾಣಿ ಚಿತ್ರಗಳು/ಕೆ.ಎನ್‌.ರಾಘವೇಂದ್ರ

ಒಂದನೇ ಪುಟದಿಂದ

‘ಕೂಲಿ ಕೆಲಸಕ್ಕೆ ಗುತ್ತಿಗೆದಾರ ಮುಂಗಡವಾಗಿಯೇ ಹಣ ನೀಡಿದ್ದ. ಇದನ್ನು ಬಡ್ಡಿ ಸಮೇತ ತೀರಿಸಲು ಕೂಲಿಗೆ ಹೋಗಬೇಕು. ಮಳೆಗಾಲದಲ್ಲಿ ಸ್ಥಳೀಯವಾಗಿ ಕೂಲಿ ಕೆಲಸ ಸಿಗಲಿಲ್ಲ. ಕಬ್ಬು ಕಡಿಯಲು ಮಂಡ್ಯ, ಮೈಸೂರು ಭಾಗಕ್ಕೆ ತೆರಳಿದವರು ಉಗಾದಿ ಹಬ್ಬಕ್ಕೆ ವಾಪಸಾಯ್ತಾರೆ. ಮೊನ್ನೆ ಸತ್ತ ಸಂಬಂಧಿ ಶಾರದಾಬಾಯಿ ಅಂತ್ಯಕ್ರಿಯೆಗೆ ಬರಲು ಅನೇಕರಿಗೆ ಸಾಧ್ಯವಾಗಲಿಲ್ಲ’ ಎಂದು ತುಪ್ಪದಕ್ಕನಹಳ್ಳಿ ತಾಂಡಾದ ಕಮಲಾಬಾಯಿ ಕಣ್ಣಾಲೆಗಳನ್ನು ಒರೆಸಿಕೊಂಡರು.

ಮೊಳಕಾಲ್ಮುರು ತಾಲ್ಲೂಕಿನ ಮಾರಮ್ಮನಹಳ್ಳಿ, ಲಂಬಾಣಿಹಟ್ಟಿ, ತುಮಕೂರ್ಲಹಳ್ಳಿ, ರಾಯಾಪುರ ಮ್ಯಾಸರಹಟ್ಟಿ, ಮುತ್ತಿಗಾರಹಳ್ಳಿ ಮ್ಯಾಸರಹಟ್ಟಿ, ದೇವಸಮುದ್ರ, ಕಣಕುಪ್ಪೆ, ಕೋನಸಾಗರ, ನೇರಲಹಳ್ಳಿ ಗ್ರಾಮಗಳಲ್ಲಿ ಸಾಕಷ್ಟು ಜನರು ಊರು ತೊರೆದಿದ್ದಾರೆ. ಕಾಟನಾಯಕನಹಳ್ಳಿ, ಹುಚ್ಚಂಗಿದುರ್ಗ, ರಾಯಪುರದಿಂದಲೂ ಜನ ಗುಳೆ ಹೋಗಿದ್ದಾರೆ. ಪಕ್ಕದ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

ಮಳೆಯಾಶ್ರಿತ ಪ್ರದೇಶದಲ್ಲಿ ಗುಳೆ ಸಾಮಾನ್ಯ. ಮುಂಗಾರು ಹಂಗಾಮಿನ ಬೆಳೆಯನ್ನೇ ಬಹುತೇಕ ರೈತರು ಅವಲಂಬಿತರಾಗಿದ್ದಾರೆ. ಶೇಂಗಾ, ಮೆಕ್ಕೆಜೋಳ, ಜೋಳ, ರಾಗಿ, ಹುರುಳಿಯಂತಹ ಬೆಳೆಗಳು ಕೂಡ ಪ್ರಸಕ್ತ ವರ್ಷ ರೈತರ ಕೈಹಿಡಿದಿಲ್ಲ. ಕೂಲಿ ಕಾರ್ಮಿಕರೊಂದಿಗೆ ಸಣ್ಣ ಹಿಡುವಳಿ ಹೊಂದಿರುವ ರೈತರು ಗುಳೆ ಹೋಗಿರುವುದು ಬರದ ತೀವ್ರತೆಯನ್ನು ಬಿಂಬಿಸುವಂತಿದೆ. ಗುಳೆ ಹೋದವರಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಕುಟುಂಬಗಳ ಸಂಖ್ಯೆಯೇ ಹೆಚ್ಚು.

ಕಲ್ಯಾಣ ಕರ್ನಾಟಕದಲ್ಲಿ ಗುಳೆ ಜನಜೀವನದ ಭಾಗವಾಗಿದೆ. ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳ ಸಾವಿರಾರು ಜನರು ಜೀವನ ಕಟ್ಟಿಕೊಳ್ಳಲು ಮುಂಬೈ, ಪುಣೆ, ಹೈದರಾಬಾದ್, ಬೆಂಗಳೂರಿಗೆ ಹೋಗುತ್ತಿದ್ದಾರೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ, ಕಮಲಾಪುರ, ಚಿಂಚೋಳಿ, ಕಾಳಗಿ ತಾಲ್ಲೂಕುಗಳಲ್ಲಿ ಗುಳೆ ಈಗಾಗಲೇ ಆರಂಭವಾಗಿದೆ. ಚಿಂಚೋಳಿ ತಾಲ್ಲೂಕು ಒಂದರಿಂದಲೇ 15,000ಕ್ಕೂ ಹೆಚ್ಚು ಜನ ಗುಳೆ ಹೋಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಹಾವೇರಿ ಜಿಲ್ಲೆಯಲ್ಲಿ ದೀಪಾವಳಿ ಬಳಿಕ ಕುಟುಂಬ ಸಮೇತ ಊರು ತೊರೆದವರು ಮಳೆ ಬಿದ್ದ ಬಳಿಕವೇ ಮರಳುವುದು. ಗೋವಾ, ಬೆಂಗಳೂರು ಹಾಗೂ ಕಾಫಿಸೀಮೆ ಇಲ್ಲಿನ ಜನರನ್ನು ಪೊರೆಯುತ್ತಿವೆ. ಚಾಮರಾಜನಗರ ಜಿಲ್ಲೆಯ ಕೂಲಿ ಕಾರ್ಮಿಕರ ಕುಟುಂಬಗಳು ಕೊಡಗು ಹಾಗೂ ನೆರೆಯ ಕೇರಳಕ್ಕೆ ಪ್ರತಿ ವರ್ಷ, ಐದಾರು ತಿಂಗಳು ವಲಸೆ ಹೋಗುವುದು ಸಾಮಾನ್ಯ. ಕಾಫಿ ಕೊಯ್ಲಿನ ಸಂದರ್ಭದಲ್ಲಿ ಹನೂರು ಮತ್ತು ಗುಂಡ್ಲುಪೇಟೆ ತಾಲ್ಲೂಕಿನಿಂದ ವಲಸೆ ಹೆಚ್ಚಾಗುತ್ತದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ, ಇಳಕಲ್, ಬಾದಾಮಿ ತಾಲ್ಲೂಕಿನ ಜನರು ದುಡಿಮೆಗಾಗಿ ಮಂಗಳೂರು, ಉಡುಪಿ ಹಾಗೂ ಗೋವಾಗೆ ದುಡಿಯಲು ಹೋಗುತ್ತಾರೆ. ಜಿಲ್ಲೆಯಿಂದ ಮಂಗಳೂರಿಗೆ ಸಂಪರ್ಕ ಕಲ್ಪಿಸಿದ ಬಸ್‌ಗಳು ನಿತ್ಯವೂ ಭರ್ತಿಯಾಗುತ್ತಿವೆ. ಬಸ್ ಮೇಲೆ ಬಿಗಿಯಾಗಿ ಕಟ್ಟಿದ ಸಾಮಗ್ರಿ ಗುಳೆಯ ಸಂಕೇತವಾಗಿ ಕಾಣುತ್ತಿದೆ.

ಹೀಗೆ ಕೂಲಿ ಅರಸಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಬರುವವರ ಪೈಕಿ ಬಹುತೇಕರು ಬಾಗಲಕೋಟೆ, ವಿಜಯಪುರ, ಕೊಪ್ಪಳ, ಹಾವೇರಿ ಮತ್ತು ರಾಯಚೂರು ಜಿಲ್ಲೆಯವರು. ನೆರೆಯ ಕೇರಳದ ಕಾಸರಗೋಡು ಜಿಲ್ಲೆವರೆಗೂ ಗುಳೆ ವಿಸ್ತರಿಸಿದೆ. ಮಲ್ಪೆ, ಮಂಗಳೂರು ಬಂದರಿನಲ್ಲಿ ನೂರಾರು ಮಂದಿ ದುಡಿಯುತ್ತಿದ್ದಾರೆ.

ಮಂಗಳೂರು, ಉಡುಪಿ ಮತ್ತು ಮಣಿಪಾಲ ನಗರದಲ್ಲಿ ಮಹಿಳೆಯರು ಮನೆಕೆಲಸದಲ್ಲೂ, ಪುರುಷರು ನಿರ್ಮಾಣ ಕಾಮಗಾರಿಯಲ್ಲೂ ತೊಡಗಿಸಿಕೊಂಡಿದ್ದಾರೆ. ಸಣ್ಣ ಶೆಡ್‌ಗಳು, ಹೆಂಚಿನ ಮನೆಗಳು ಇವರ ನೆಲೆ. ಮೂಲಸೌಲಭ್ಯಗಳಿಲ್ಲದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರೂ ಇದ್ದಾರೆ.

ಗುಳೆ ತಡೆಯದ ಮನರೇಗಾ: ಗುಳೆ ತಡೆಯುವ ಉದ್ದೇಶದಿಂದ ಅನುಷ್ಠಾನಗೊಂಡಿರುವ ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಕೂಲಿ ಕೆಲಸ ನೀಡುವಲ್ಲಿ ಸಂಪೂರ್ಣ ಸಫಲವಾಗಿಲ್ಲ. ಕೆಲಸದ ಅನಿಶ್ಚಿತತೆ, ಕಡಿಮೆ ಕೂಲಿ, ಸಕಾಲಕ್ಕೆ ಬಾರದ ಹಣ, ಆಧಾರ್ ಲಿಂಕ್ ಮಾಡುವಲ್ಲಿನ ತೊಂದರೆ, ರಾಜಕೀಯ ಮೇಲಾಟ, ಯಂತ್ರಗಳ ಬಳಕೆ... ಹೀಗೆ ಹಲವು ಕಾರಣಗಳಿಂದಾಗಿ ಜನರು ಮನರೇಗಾ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಸರ್ಕಾರಿ ದಾಖಲೆಗಳಿಗೂ ಬದುಕಿನ ವಾಸ್ತವಕ್ಕೂ ವ್ಯತ್ಯಾಸ ಇರುವುದು ಗ್ರಾಮೀಣ ಭಾಗದಲ್ಲಿ ಕಣ್ಣಾಡಿಸಿದರೆ ದಿಟವಾಗುತ್ತದೆ.

‘ಅಳಿಯ 30 ದಿನ ಮನರೇಗಾ ಕೆಲಸಕ್ಕೆ ಹೋಗಿದ್ದ. ಖಾತ್ರಿ ಯೋಜನೆಯ ಕೆಲಸ ಮುಗಿದು ಎರಡೂವರೆ ತಿಂಗಳು ಕಳೆದಿದೆ. ಈವರೆಗೆ ಕೂಲಿ ಬಂದಿಲ್ಲ. ಕೂಲಿ ನೀಡುವಂತೆ ಗ್ರಾಮ ಪಂಚಾಯಿತಿಗೆ ಅಲೆದು ಬೇಸರಗೊಂಡು ಪತ್ನಿಯೊಂದಿಗೆ ಕಾಫಿದೇಶಕ್ಕೆ ಗುಳೆ ಹೋಗಿದ್ದಾನೆ. ನಾನು ಮೊಮ್ಮಕ್ಕಳ ಆರೈಕೆ ಮಾಡಿಕೊಂಡು ಮನೆಯಲ್ಲಿದ್ದೇನೆ’ ಎನ್ನುವಾಗ ಮ್ಯಾಸರಹಟ್ಟಿಯ ಬೋರಮ್ಮ ದುಃಖಿತರಾದರು. ಇಳಿ ವಯಸ್ಸಿನಲ್ಲಿ ಮನೆ ನೋಡಿಕೊಳ್ಳುವ ಜವಾಬ್ದಾರಿಯ ಭಾರಕ್ಕೆ ಅವರ ದೇಹ ಸ್ಪಂದಿಸುತ್ತಿಲ್ಲ ಎಂಬುದನ್ನು ಅವರು ಕುಳಿತ ಸ್ಥಿತಿಯೇ ಹೇಳುತ್ತಿತ್ತು.

ಮೊಳಕಾಲ್ಮುರು ತಾಲ್ಲೂಕಿನ ರಾಯಪುರ ಮ್ಯಾಸರಹಟ್ಟಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ. ಬಳ್ಳಾರಿ–ಚಿಕ್ಕಮಗಳೂರು ನಡುವೆ ಸಂಚರಿಸುವ ಬಸ್‌ನಲ್ಲಿ ಇಲ್ಲಿಯ ಜನ ಗುಳೆ ಹೋಗುತ್ತಾರೆ. ಜನರ ಸಂದೇಶ, ಸಾಮಗ್ರಿಗಳು ಇದೇ ಬಸ್ ಮೂಲಕ ವಿನಿಮಯವಾಗುತ್ತವೆ. ಜನರ ಒತ್ತಾಯದ ಮೇರೆಗೆ ಕೆಲ ದಿನ ‘ಮನರೇಗಾ’ ಕೆಲಸ ನೀಡಿದ ಗ್ರಾಮ ಪಂಚಾಯಿತಿಗಳು, ಮಾಡಿದ ಕೆಲಸಕ್ಕೆ ಕೂಲಿ ನೀಡುವುದನ್ನು ಮರೆತಿದೆ. ರಾಜ್ಯದ ಹಲವು ಗ್ರಾಮಗಳಲ್ಲಿ ಇದಕ್ಕಿಂತ ಭಿನ್ನ ಸ್ಥಿತಿ ಇಲ್ಲ. ಮನರೇಗಾ ಯೋಜನೆಯಡಿ ನಿತ್ಯ ₹ 316 ಕೂಲಿ ನಿಗದಿಪಡಿಸಲಾಗಿದೆ. ಕಾಫಿ ಎಸ್ಟೇಟ್, ಅಡಿಕೆ ತೋಟ ಹಾಗೂ ನಗರ ಪ್ರದೇಶದ ಕಟ್ಟಡ ಕಾರ್ಮಿಕರ ಕೂಲಿ ಇದಕ್ಕಿಂತ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶದ ರೈತರು, ಕೂಲಿ ಕಾರ್ಮಿಕರಿಗೆ ಇದು ಆಕರ್ಷಕವಾಗಿ ಕಾಣುತ್ತಿದೆ. ವಾಸ್ತವ್ಯಕ್ಕೆ ಮನೆ, ಊಟ–ತಿಂಡಿ ನೀಡುವ ಕಾಫಿ ಎಸ್ಟೇಟ್ ಮಾಲೀಕರು, ನಿತ್ಯ ₹ 400ರಿಂದ ₹ 500 ಕೂಲಿ ನಿಗದಿಪಡಿಸಿದ್ದಾರೆ.



ತುಮಕೂರು ಜಿಲ್ಲೆಯ ಹೆಬ್ಬೂರಿನಲ್ಲಿ ಮೂರು ತಿಂಗಳು ಕೆಲಸ ಮಾಡಿದೆ. ಮನೆಯಲ್ಲಿದ್ದ ಮಕ್ಕಳನ್ನು ನೋಡಿಕೊಂಡು ಹೋಗಲು ಬಂದಿದ್ದೆ. ಕೆಲಸ ಅರಸಿ ಮತ್ತೆ ಬೆಂಗಳೂರಿಗೆ ಹೊರಡಬೇಕಿದೆ.

ಭೀಮಪ್ಪ, ಕೂಲಿ ಕಾರ್ಮಿಕ, ಸೂರಮ್ಮನಹಳ್ಳಿ, ಚಿತ್ರದುರ್ಗ ಜಿಲ್ಲೆ



ಇಬ್ಬರು ಪುತ್ರರು, ಸೊಸೆಯಂದಿರು ಮೈಸೂರು ಭಾಗಕ್ಕೆ ಕಬ್ಬು ಕಡಿಯಲು ಹೋಗಿದ್ದಾರೆ. ಯುಗಾದಿಗೆ ಮರಳಿ ಬರುತ್ತಾರೆ. ಹೀಗೆ ದುಡಿದು ತಂದ ಹಣದಲ್ಲಿಯೇ ವರ್ಷವಿಡೀ ಜೀವನ.

ಕಮಲಾಬಾಯಿ, ತುಪ್ಪದಕ್ಕನಹಳ್ಳಿ ತಾಂಡಾ, ಚಿತ್ರದುರ್ಗ ಜಿಲ್ಲೆ



ಕೃಷಿ ಕೆಲಸಕ್ಕೆ ₹ 200, ಬಂಡೆ ಒಡೆಯಲು ₹ 300 ಕೂಲಿ ಇದೆ. ನರೇಗಾ ಕೆಲಸಕ್ಕೆ ಸರಿಯಾಗಿ ಕೂಲಿ ನೀಡುತ್ತಿಲ್ಲ. ‘ಕಾಫಿದೇಶ’ದ ಕೂಲಿ ಕೊಂಚ ಕೈಹಿಡಿಯುವುದರಿಂದ ಗುಳೆ ಹೋಗುತ್ತೇವೆ.

ಆರ್.ಪಾಲಯ್ಯ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮ್ಯಾಸರಹಟ್ಟಿ, ಚಿತ್ರದುರ್ಗ ಜಿಲ್ಲೆ

2022ರ ಏಪ್ರಿಲ್‌ವರೆಗೆ ಮನರೇಗಾ ಕೂಲಿ ₹ 289 ಇತ್ತು. ಆ ಬಳಿಕ ಇದನ್ನು ₹ 309ಕ್ಕೆ ಏರಿಕೆ ಮಾಡಲಾಯಿತು. 2023ರ ಮಾರ್ಚ್‌ನಲ್ಲಿ ಕೂಲಿಯನ್ನು ₹ 316ಕ್ಕೆ ಹೆಚ್ಚಿಸಲಾಗಿದೆ. ದಿನಬಳಕೆ ವಸ್ತುಗಳ ಬೆಲೆ ಏರಿಕೆಗೆ ಅನುಗುಣವಾಗಿ ಕೂಲಿ ಹೆಚ್ಚಿಸಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದಿಡಲಾಗುತ್ತಿದೆ. ಬರ ಅಧ್ಯಯನಕ್ಕಾಗಿ ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡಿದ್ದ ಕೇಂದ್ರ ತಂಡದ ಎದುರು ಮನರೇಗಾ ಕೂಲಿ ಏರಿಕೆಯ ಬಗ್ಗೆ ಕಾರ್ಮಿಕರು ಗಮನ ಸೆಳೆದಿದ್ದರು.

ಕಲ್ಯಾಣ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಮನರೇಗಾ ಯೋಜನೆಯಡಿ ಗರಿಷ್ಠ ಕೆಲಸ ನೀಡಲಾಗಿದೆ. ಜಾಬ್ ಕಾರ್ಡ್‌ವೊಂದಕ್ಕೆ ನಿಗದಿಯಾದ 100 ಮಾನವ ದಿನ ಕೆಲವೆಡೆ ಮುಗಿದು ಹೋಗಿವೆ. ಗರಿಷ್ಠ ಮಿತಿ ಪೂರೈಸಿದವರು ಹೆಚ್ಚುವರಿಯಾಗಿ ಇನ್ನೂ 50 ದಿನ ಕೆಲಸ ಸಿಗಬಹುದು ಎಂಬ ಆಸೆಗಣ್ಣಿನಿಂದ ಎದುರು ನೋಡಿ ಬೇಸತ್ತಿದ್ದಾರೆ.

‘ಉದ್ಯೋಗ ಖಾತ್ರಿಯಲ್ಲಿ ಕೇವಲ 100 ದಿನ ಕೆಲಸ ನೀಡಲಾಗುತ್ತಿದೆ. ಇದನ್ನು 200 ದಿನಗಳಿಗೆ ಹೆಚ್ಚಿಸಿದರೆ ಅನುಕೂಲವಾಗುತ್ತದೆ. ಸಕಾಲದಲ್ಲಿ ಕೂಲಿ ಪಾವತಿಯಾಗದ ಹಾಗೂ ಕಡಿಮೆ ವೇತನದ ಕಾರಣಕ್ಕೆ ಕಾರ್ಮಿಕರು ಅನ್ಯ ಕೆಲಸಗಳನ್ನು ಅರಸುತ್ತಾ ದೂರದ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ’ ಎನ್ನುತ್ತಾರೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ವನಸಿರಿ ಸಂಸ್ಥೆಯ ನಿರ್ದೇಶಕ ಎಸ್‌.ಡಿ. ಬಳಿಗಾರ.

ಮಕ್ಕಳ ಶಿಕ್ಷಣ ಮೊಟಕು: ಗುಳೆ ಹೊರಟ ಪಾಲಕರು ಮಕ್ಕಳನ್ನು ಜೊತೆಗೆ ಕರೆದೊಯ್ದಿದ್ದಾರೆ. ಕಾಫಿ, ಅಡಿಕೆ ತೋಟ ಅಥವಾ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಮಕ್ಕಳು ನೆರವಾದರೆ ಹೆಚ್ಚುವರಿ ಕೂಲಿ ಸಿಗುವ ಆಸೆ ಪಾಲಕರದು. ಗುಳೆ ಹೊರಟವರು ಮಕ್ಕಳನ್ನು ಕರೆದೊಯ್ಯದಂತೆ ಶಿಕ್ಷಣ ಇಲಾಖೆ ಮೂಡಿಸಿದ ಅರಿವು ಅಷ್ಟಾಗಿ ಪರಿಣಾಮ ಬೀರಿದಂತೆ ಕಾಣುತ್ತಿಲ್ಲ. ಯಾದಗಿರಿ ಹಾಗೂ ಬೀದರ್ ಜಿಲ್ಲೆಯ ತಾಂಡಾಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬ ಸಮೇತವೇ ಗುಳೆ ಹೋಗಿದ್ದಾರೆ. ಮಕ್ಕಳ ಕಲಿಕೆಗೆ ತೀವ್ರ ಹಿನ್ನಡೆಯಾಗಿದೆ.

‘ರಾಜ್ಯದ ಬೇರೆ ಜಿಲ್ಲೆಯಲ್ಲಿ ಪಾಲಕರೊಂದಿಗೆ ಮಕ್ಕಳು ಗುಳೆ ಹೋಗಿದ್ದರೆ ಸಮೀಪದ ಶಾಲೆಗಳ ಮುಖ್ಯ ಶಿಕ್ಷಕರೊಂದಿಗೆ ಮಾತನಾಡಿ ತರಗತಿಗಳಿಗೆ ಕುಳಿತುಕೊಳ್ಳಲು ಅವಕಾಶ ಕೊಡಿಸಬಹುದು. ಆದರೆ, ಬೇರೆ ರಾಜ್ಯದಲ್ಲಿ ಹೀಗೆ ಸಂಪರ್ಕ ಸಾಧಿಸುವುದು ಕಷ್ಟ’ ಎನ್ನುತ್ತಾರೆ ಕಲಬುರಗಿ ಜಿಲ್ಲೆಯ ಗುಂಜ ಬಬಲಾದ ಶಾಲೆಯ ಮುಖ್ಯ ಶಿಕ್ಷಕ ನಿಂಗಪ್ಪ ಮಂಗೊಂಡಿ.

ಉತ್ತರ ಕರ್ನಾಟಕದ ಜಿಲ್ಲೆಗಳಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಬರುವ ಕಾರ್ಮಿಕರ ಪೈಕಿ ಹೆಚ್ಚಿನವರು ಸರ್ಕಾರಿ ಶಾಲೆ ಮತ್ತು ಆಶ್ರಯ ಶಾಲೆಗಳಲ್ಲಿ ಮಕ್ಕಳನ್ನು ಓದಿಸುತ್ತಿದ್ದಾರೆ. ಕೆಲವರು ಊರಲ್ಲಿ ಅಜ್ಜ–ಅಜ್ಜಿಯ ಜೊತೆ ಮಕ್ಕಳನ್ನು ಬಿಟ್ಟು ಬಂದಿದ್ದಾರೆ.

‘ನಿರ್ದಿಷ್ಟ ಜಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಕಾರ್ಮಿಕರ ಮಕ್ಕಳಿಗೆ ಶಿಕ್ಷಣಕ್ಕೆ ಸೌಲಭ್ಯ ಕಲ್ಪಿಸಿಕೊಡಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂಥ ಪರಿಸ್ಥಿತಿ ಇಲ್ಲ’ ಎನ್ನುತ್ತಾರೆ ಜಿಲ್ಲಾ ಪಂಚಾಯಿತಿ ಯೋಜನಾಧಿಕಾರಿ ಜಯರಾಮ ಕೆ.ಇ.

ಆದರೂ, ಉಡುಪಿ ಜಿಲ್ಲೆಯ ಮಲ್ಪೆ ಬಂದರಿನಲ್ಲಿ ಹೊರ ಜಿಲ್ಲೆಗಳ ಮಕ್ಕಳು ಬಾಲ ಕಾರ್ಮಿಕರಾಗಿ ದುಡಿಯುತ್ತಿರುವುದು ಬೆಳಕಿಗೆ ಬಂದಿದೆ. ಕಾರ್ಮಿಕ ಇಲಾಖೆ ನಡೆಸುವ ದಾಳಿಯಲ್ಲಿ ಇಂತಹ ಮಕ್ಕಳು ಹೆಚ್ಚಾಗಿ ಪತ್ತೆಯಾಗುತ್ತಿದ್ದಾರೆ.

ಮುಂಗಾರು, ಹಿಂಗಾರು ಕೈಕೊಟ್ಟು ರೈತರು, ಕೂಲಿಕಾರರು ಕಂಗಾಲಾಗಿ ಸಂಸಾರ ಸಮೇತವಾಗಿ ಊರು ತೊರೆಯುವಾಗ ಕೈಹಿಡಿಯಬೇಕಿದ್ದ ಸ್ಥಳೀಯವಾಗಿ ಹೆಚ್ಚು ದಿನಗಳ ಕಾಲ ಉದ್ಯೋಗ ನೀಡುವ ಯೋಜನೆ ಮನರೇಗ ಕೇಂದ್ರದ ಅಸಹಕಾರ ನೀಡುತ್ತಿದೆ. ರಾಜ್ಯದ ಮನವಿಗೂ ಉತ್ತರವಿಲ್ಲ ಎಂದು ರಾಜ್ಯದ ಸಚಿವರೇ ಆಪಾದಿಸುತ್ತಾರೆ. ಇಂತಹ ಜ್ವಲಂತ ಸಮಸ್ಯೆಗೆ ಉತ್ತರದ ಬದಲು ಪರಿಹಾರ ಬೇಕಾಗಿದೆ.

(ಪೂರಕ ಮಾಹಿತಿ: ವಿ.ಎಸ್. ಸುಬ್ರಹ್ಮಣ್ಯ, ಬಸವರಾಜ ಹವಾಲ್ದಾರ, ವಿಕ್ರಂ ಕಾಂತಿಕೆರೆ, ಮನೋಜ್ ಕುಮಾರ್ ಗುದ್ದಿ, ವಿ.ಸೂರ್ಯನಾರಾಯಣ, ಸಿದ್ದು ಆರ್.ಜಿ.ಹಳ್ಳಿ)

ಮನರೇಗಾ: ಕೇಂದ್ರ, ರಾಜ್ಯದ ಜಟಾಪಟಿ

ಒಂದನೇ ಪುಟದಿಂದ

ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರಿಗೆ ಪ್ರಿಯಾಂಕ್ ಅವರು 2023ರ ಸೆಪ್ಟೆಂಬರ್ 20ರಿಂದ ಮೂರು ಬಾರಿ ಪತ್ರ ಬರೆದಿದ್ದಾರೆ. ರಾಜ್ಯಕ್ಕೆ ನಿಗದಿಪಡಿಸಿರುವ ಮಾನವ ದಿನಗಳ ಸಂಖ್ಯೆಯನ್ನು 13 ಕೋಟಿಯಿಂದ 18 ಕೋಟಿಗೆ ಹೆಚ್ಚಿಸುವಂತೆ ಹಾಗೂ ಕೂಲಿಯನ್ನೂ ಏರಿಕೆ ಮಾಡುವಂತೆ ಬೇಡಿಕೆ ಇಟ್ಟಿದ್ದರು.

‘ನಾನು ಮೂರು ಬಾರಿ ಪತ್ರ ಬರೆದಿದ್ದೇನೆ. ಖುದ್ದಾಗಿ ಸಚಿವರನ್ನು ಭೇಟಿ ಮಾಡಲು ಪ್ರಯತ್ನಿಸಿದರೂ ಸಮಯಾವಕಾಶ ನೀಡಲಿಲ್ಲ. ನಮ್ಮ ಅಧಿಕಾರಿಗಳೂ ಪತ್ರ ಬರೆದಿದ್ದಾರೆ. ಮೊದಲ ಪತ್ರ ಬಂದಿರುವುದನ್ನು ಖಚಿತಪಡಿಸಿ ಕೇಂದ್ರ ಸಚಿವರು ನನಗೆ ಪತ್ರ ಬರೆದಿದ್ದರು. ಆದರೆ, ನಮ್ಮ ಬೇಡಿಕೆಗೆ ಯಾವ ಸ್ಪಂದನೆಯೂ ಸಿಕ್ಕಿಲ್ಲ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಸ್ತಾವ ಬಂದಿಲ್ಲ ಎಂದ ಕೇಂದ್ರ: ಕೆಲಸದ ದಿನಗಳು, ಒಟ್ಟು ಮಾನವ ದಿನಗಳ ಸಂಖ್ಯೆ ಹಾಗೂ ಕೂಲಿ ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದ್ದರೂ, ಅಂತಹ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರು ಲೋಕಸಭೆಗೆ ತಿಳಿಸಿದ್ದಾರೆ.

ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರ ಪ್ರಶ್ನೆಗೆ ಡಿಸೆಂಬರ್ 12ರಂದು ಉತ್ತರ ನೀಡಿರುವ ಗಿರಿರಾಜ್ ಸಿಂಗ್, ‘ಕೆಲಸದ ದಿನಗಳನ್ನು ಹೆಚ್ಚಳ ಮಾಡುವಂತೆ ಕರ್ನಾಟಕ ಸರ್ಕಾರದಿಂದ ಯಾವುದೇ ಪ್ರಸ್ತಾವ ಬಂದಿಲ್ಲ’ ಎಂದು ಉತ್ತರ ನೀಡಿದ್ದರು.

ಕೆಲಸ ಒದಗಿಸುವುದು ಅಸಾಧ್ಯ: ‘ಮನರೇಗಾ ಯೋಜನೆಯು ಕೇಂದ್ರ ಸರ್ಕಾರದ ಕಾಯ್ದೆಯಡಿ ಅನುಷ್ಠಾನದಲ್ಲಿದೆ. ರಾಜ್ಯ ಸರ್ಕಾರ ಬದಲಾವಣೆ ಮಾಡುವುದು ಸಾಧ್ಯವಿಲ್ಲ. ಕುಟುಂಬವೊಂದಕ್ಕೆ 100ಕ್ಕಿಂತ ಹೆಚ್ಚು ಮಾನವ ದಿನಗಳ ಕೆಲಸವನ್ನು ರಾಜ್ಯ ಸರ್ಕಾರವೇ ಒದಗಿಸುವುದು ಅಸಾಧ್ಯ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

‘ಕುಟುಂಬಕ್ಕೆ 50 ದಿನಗಳ ಹೆಚ್ಚುವರಿ ಕೆಲಸ ಒದಗಿಸಲು ದೊಡ್ಡ ಪ್ರಮಾಣದ ವೆಚ್ಚವಾಗುತ್ತದೆ. ಅಷ್ಟೊಂದು ಹಣವನ್ನು ರಾಜ್ಯ ಸರ್ಕಾರದಿಂದ ಭರಿಸುವುದು ಸಾಧ್ಯವಿಲ್ಲ’ ಎಂದರು.

ಮುಷ್ಕರ ಕೈಬಿಟ್ಟ ಅತಿಥಿ ಉಪನ್ಯಾಸಕರು

ಒಂದನೇ ಪುಟದಿಂದ

ಮಹಿಳಾ ಅತಿಥಿ ಉಪನ್ಯಾಸಕರಿಗೆ ಹೆರಿಗೆ ಸಮಯದಲ್ಲಿ ಮೂರು ತಿಂಗಳವರೆಗೆ ವೇತನ ಸಹಿತ ಮಾತೃತ್ವ ರಜೆ ನೀಡಬೇಕೆಂಬ ಬೇಡಿಕೆಗೂ ಸಿದ್ದರಾಮಯ್ಯ ಸಮ್ಮತಿ ಸೂಚಿಸಿದರು. ಮುಷ್ಕರ ಅಂತ್ಯಗೊಳಿಸಿ ಕರ್ತವ್ಯಕ್ಕೆ ಹಾಜರಾಗುವಂತೆ ಅತಿಥಿ ಉಪನ್ಯಾಸಕರಲ್ಲಿ ಮನವಿ ಮಾಡಿದರು.

‘ಅತಿಥಿ ಉಪನ್ಯಾಸಕರ ಬಗ್ಗೆ ನಮ್ಮ ಸರ್ಕಾರಕ್ಕೆ ಕಾಳಜಿ ಇದೆ. ಆದರೆ, ಸೇವಾ ಭದ್ರತೆ ಒದಗಿಸಬೇಕೆಂಬ ಬೇಡಿಕೆ ಈಡೇರಿಸಲು ಕಾನೂನು ತೊಡಕು ಇದೆ. ಆದ್ದರಿಂದ ಅದನ್ನು ಈಡೇರಿಸುವುದು ಅಸಾಧ್ಯ. ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಿದೆ’ ಎಂದರು.

ಹೆರಿಗೆ ರಜೆಗೆ ಒಪ್ಪಿಗೆ: ಮಹಿಳಾ ಅತಿಥಿ ಉಪನ್ಯಾಸಕರಿಗೆ ಈ ತಿಂಗಳಿನಿಂದಲೇ ಜಾರಿಗೆ ಬರುವಂತೆ ಮೂರು ತಿಂಗಳವರೆಗೆ ವೇತನಸಹಿತ ಹೆರಿಗೆ ರಜೆ ನೀಡಲು ಸರ್ಕಾರ ಒಪ್ಪಿಕೊಂಡಿದೆ.

ಕೌನ್ಸೆಲಿಂಗ್ ಕೈಬಿಟ್ಟು ಹಾಲಿ ಇರುವ ಸ್ಥಳದಲ್ಲೇ ಅತಿಥಿ ಉಪನ್ಯಾಸಕರು ಮುಂದುವರಿಯಲು ಅವಕಾಶ ನೀಡಬೇಕೆಂಬ ಬೇಡಿಕೆಗೂ ಸಮ್ಮತಿ ಸೂಚಿಸಿದೆ. ಇಚ್ಛೆ ಇರುವವರು ಹಾಲಿ ಇರುವ ಕಾಲೇಜಿನಲ್ಲೇ ಮುಂದುವರಿಯಬಹುದು. ಉಳಿದಂತೆ ಕಳೆದ ವಾರ ನಡೆದ ಸಭೆಯಲ್ಲಿ ಕೈಗೊಂಡಿದ್ದ ಎಲ್ಲ ನಿರ್ಧಾರಗಳನ್ನು ಮುಂದುವರಿಸಲಾಗಿದೆ.

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ಎಂ.ಎಸ್. ಶ್ರೀಕರ್, ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಜಿ. ಜಗದೀಶ್ ಸಭೆಯಲ್ಲಿದ್ದರು.

₹84 ಕೋಟಿ ಹೆಚ್ಚುವರಿ ಹೊರೆ

ರಾಜ್ಯದಲ್ಲಿ 10,600 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ತಿಂಗಳಿಗೆ ₹26,000ದಿಂದ ₹32,000 ವರೆಗೆ ಗೌರವಧನ ನೀಡಲಾಗುತ್ತಿದೆ. ಅದನ್ನು ₹5,000 ವರೆಗೆ ಹೆಚ್ಚಿಸಲು ಹಿಂದಿನ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಐದು ವರ್ಷಕ್ಕಿಂತ ಕಡಿಮೆ ಸೇವಾನುಭವ ಹೊಂದಿದವರಿಗೆ ₹5,000, ಐದರಿಂದ ಹತ್ತು ವರ್ಷದ ಸೇವಾನುಭವ ಹೊಂದಿದವರಿಗೆ ₹6,000, 10ರಿಂದ 15 ವರ್ಷ ಸೇವಾನುಭವ ಹೊಂದಿದವರಿಗೆ ₹7,000 ಮತ್ತು 15 ವರ್ಷಕ್ಕಿಂತ ಹೆಚ್ಚು ಸೇವಾನುಭವ ಹೊಂದಿದವರಿಗೆ ₹8,000ಗಳಷ್ಟು ಗೌರವಧನ ಹೆಚ್ಚಿಸಲು ಶನಿವಾರದ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದಕ್ಕಾಗಿ ₹84 ಕೋಟಿ ಭರಿಸಲಾಗುತ್ತಿದೆ.

ಸರ್ಕಾರ ನಮ್ಮ ಬಹುತೇಕ ಬೇಡಿಕೆಗಳನ್ನು ಒಪ್ಪಿಕೊಂಡಿದೆ. ಸೇವಾ ಭದ್ರತೆಯ ಬೇಡಿಕೆಯನ್ನೂ ಈಡೇರಿಸಲು ಸರ್ಕಾರ ಒಪ್ಪಿಕೊಂಡಿದೆ. ಮುಷ್ಕರ ಕೈಬಿಟ್ಟು ಸೋಮವಾರದಿಂದಲೇ ಕರ್ತವ್ಯಕ್ಕೆ ಹಾಜರಾಗಲು ನಿರ್ಧರಿಸಿದ್ದೇವೆ

ಹನುಮಂತಗೌಡ ಕಲ್ಮನಿ, ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ

2,500 ಕಿ.ಮೀ. ರಸ್ತೆ ಅಭಿವೃದ್ಧಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಲೋಕೋಪಯೋಗಿ ಇಲಾಖೆಯ ಅಧೀನದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಎಚ್‌ಡಿಪಿ) ಅಡಿಯಲ್ಲಿ ಎರಡು ಘಟ್ಟಗಳಲ್ಲಿ ₹9,000 ಕೋಟಿ ವೆಚ್ಚದಲ್ಲಿ 2,500 ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೆ ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ಇದು ಎಸ್‌ಎಚ್‌ಡಿಪಿಯ ಐದನೇ ಹಂತ. ಮೊದಲ ಘಟ್ಟದಲ್ಲಿ ₹4,000 ಕೋಟಿ ವೆಚ್ಚದಲ್ಲಿ 1,200 ಕಿ.ಮೀ. ಉದ್ದ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತದೆ. ಎರಡನೇ ಘಟ್ಟದಲ್ಲಿ ₹ 5,000 ಕೋಟಿ ವೆಚ್ಚದಲ್ಲಿ 1,300 ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತದೆ. ಮೊದಲ ಘಟ್ಟದ ಕಾಮಗಾರಿಗಳು ಪ್ರಸಕ್ತ ಆರ್ಥಿಕ ವರ್ಷದಿಂದಲೇ ಆರಂಭವಾಗಲಿವೆ. ಎರಡನೇ ಘಟ್ಟದ ಕಾಮಗಾರಿಗಳು 2027–28ನೇ ಆರ್ಥಿಕ ವರ್ಷದಲ್ಲಿ ಆರಂಭವಾglive.

ಎಸ್‌ಎಚ್‌ಡಿಪಿ ಕಾಮಗಾರಿಗಳಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ನಿರ್ಧರಿಸಲಾಗಿದೆ. ಅದರ ಪ್ರಕಾರ, ರಸ್ತೆಯನ್ನು ಮೇಲ್ದರ್ಜೆಗೇರಿಸಿದ ನಂತರದ ಐದು ವರ್ಷಗಳವರೆಗೆ ಗುತ್ತಿಗೆದಾರರೇ ನಿರ್ವಹಣೆ ಮಾಡಬೇಕು. ಐದು ವರ್ಷ ಪೂರ್ಣಗೊಂಡ ಬಳಿಕ ಮತ್ತೊಮ್ಮೆ ಡಾಂಬರೀಕರಣ ಹಾಗೂ ಇತರ ಕಾಮಗಾರಿಗಳನ್ನು ಪೂರ್ಣಗೊಳಿಸಿ ರಸ್ತೆಯನ್ನು ಹಸ್ತಾಂತರಿಸಬೇಕಾಗುತ್ತದೆ.

2011ರಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಆರಂಭಿಸಲಾಗಿತ್ತು. ಈವರೆಗೆ 11,700 ಕಿ.ಮೀ. ಉದ್ದದ ರಸ್ತೆಗಳನ್ನು ಸುಧಾರಣೆ ಮಾಡಲಾಗಿದೆ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 7-1-1999

● **ಬಿಜೆಪಿಯಲ್ಲಿ ಗರ್ಭಗುಡಿ ಸಂಸ್ಕೃತಿ– ನಂಜೇಗೌಡ**

ಬೆಂಗಳೂರು, ಜ. 6– ‘ದೇವಸ್ಥಾನಗಳಲ್ಲಿ ಅರ್ಚಕರು ಬೇರೆ ಯಾರನ್ನೂ ಗರ್ಭಗುಡಿಗೆ ಪ್ರವೇಶಿಸಲು ಅವಕಾಶ ನೀಡುವುದಿಲ್ಲ. ಪೂಜೆ ಮಾಡುವಾಗಲೂ ಪರದೆ ಕಟ್ಟಿ ದೇವರು ಕಾಣದಂತೆ ಮಾಡುತ್ತಾರೆ. ಹೋದ ಭಕ್ತರು ಅರ್ಚಕರು ಬಾರಿಸುವ ಗಂಟೆ ಶಬ್ದ ಕೇಳಿಕೊಂಡು ಹಿಂದಿರುಗಬೇಕು. ಈ ರೀತಿಯ ಗರ್ಭಗುಡಿ ಸಂಸ್ಕೃತಿ ರಾಜ್ಯ ಬಿಜೆಪಿಯಲ್ಲೂ ಇತ್ತೀಚೆಗೆ ಪ್ರಾರಂಭವಾಗಿದೆ.’

ರಾಜ್ಯ ಬಿಜೆಪಿಯ ಇತ್ತೀಚಿನ ಬೆಳವಣಿಗೆಗಳ ಕುರಿತು ಪಕ್ಷದ ಶಾಸಕ ಎಚ್‌.ಎನ್. ನಂಜೇಗೌಡ ಅವರು ಇಂದು ವ್ಯಕ್ತಪಡಿಸಿದ ಅಭಿಪ್ರಾಯವಿದು.

50 ವರ್ಷಗಳ ಹಿಂದೆ — ಸೋಮವಾರ, 7-1-1974

● **ಶತಾಯಗತಾಯ ಮಹಾಜನ್ ವರದಿ ಕಾರ್ಯಗತವಾಗಲಿ: ಒತ್ತಾಯ**

ಬೆಳಗಾವಿ, ಜ. 6– ‘ಏನೇ ಆಗಲಿ ಮಹಾಜನ್ ಆಯೋಗದ ವರದಿಯನ್ನು ಕಾರ್ಯಗತ ಮಾಡಲೇಬೇಕು. ಈ ಬಗ್ಗೆ ಅಚಲ ನಿರ್ಧಾರ ಇರಬೇಕು’ ಎಂದು ಹಲವಾರು ನಿಯೋಗಗಳು ಇಂದು ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಆಗ್ರಹಪಡಿಸಿದವು.

ಸಂಸತ್ ಸದಸ್ಯರ ಸಭೆ ನಡೆಯಲಿದ್ದ ಸರ್ಕ್ಯೂಟ್‌ಹೌಸ್ ಆವರಣ ನಾನಾ ನಿಯೋಗಗಳ ಪ್ರತಿನಿಧಿಗಳಿಂದ ತುಂಬಿ ಸಂತೆಯಂತೆ ಕಾಣುತ್ತಿತ್ತು. ಅರಸು ಅವರು ಬಂದ ಕೂಡಲೆ ಪ್ರತಿನಿಧಿಗಳು ಅವರನ್ನು ಮುತ್ತಿದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಜನವರಿ 7, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಏಕಾದಶಿ ಗಂ. 24-47 **ನಕ್ಷತ್ರ:** ವಿಶಾಖಾ ಗಂ. 22-08 **ಯೋಗ:** ಶೂಲ ಗಂ. 28-53
ಕರಣ: ಬವ ಗಂ. 12-51, ಧನು ಮಾಸದ 22 ನೇ ದಿನ, **ಮಳೆನಕ್ಷತ್ರ:** ಪೂರ್ವಾಷಾಢ 3
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-59 **ಸೂರ್ಯಾಸ್ತ:** 06-14
ಮುಸ್ಲಿಂ ದಿನಾಂಕ: 24 ಜುಮಾದುಸ್ಸಾನಿ
ದಿನ ವಿಶೇಷ: ಸಫಲ ಏಕಾದಶಿ, **ಅದೃಷ್ಟ ಸಂಖ್ಯೆ:** 10, 3

ಮೇಷ: ಇಂದು ನೀವು ತೆಗೆದುಕೊಳ್ಳುವ ನಿರ್ಧಾರ ಘರ್ಷಣೆ ಉಂಟಾಗುವುದಕ್ಕೆ ಮೂಲ ಕಾರಣವಾಗುತ್ತದೆ. ನಿಮ್ಮದೆ ಆದಂತಹ ಜವಾಬ್ದಾರಿಯುತವಾದ ಕಾರ್ಯಗಳ ಬಗ್ಗೆ ಗಮನವಿರಲಿ. ತಾಯಿಯ ಆರೋಗ್ಯ ಸುಧಾರಿಸುವುದು.

ವೃಷಭ: ಮಕ್ಕಳ ಹೊಸ ವ್ಯವಹಾರದಲ್ಲಿ ತಂದೆತಾಯಿಯ ಆಶೀರ್ವಾದ ಮತ್ತು ಆರ್ಥಿಕ ಸಹಾಯ ಸಹಕಾರ ದೊರೆಯಲಿದೆ. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಈ ದಿನ ಹೆಚ್ಚಿನ ಲಾಭ ಉಂಟಾಗುವುದು.

ಮಿಥುನ: ಐಷಾರಾಮಿ ಮಟ್ಟದ ಜೀವನ ನಿರ್ವಹಣೆಯು ಆರ್ಥಿಕ ನಷ್ಟಕ್ಕೆ ಕಾರಣವಾಗುವುದು. ದಾಯಾದಿಗಳ ಮಧ್ಯೆ ನೀವಂದುಕೊಂಡಷ್ಟು ನಿಮ್ಮ ಪರಿಸ್ಥಿತಿ ಕೆಟ್ಟದಾಗಿ ಇರುವುದಿಲ್ಲ. ಪೊಲೀಸರಿಗೆ ಕೆಲಸದ ಒತ್ತಡ ಇರುತ್ತದೆ.

ಕರ್ಕಾಟಕ: ನಿಮ್ಮ ಮೌನದ ಉತ್ತರದಿಂದ ಭಿನ್ನಾಭಿಪ್ರಾಯದ ಸಮಸ್ಯೆಗೆ ಈ ದಿನ ಅಂತ್ಯ ನೋಡಬಹುದು. ಧ್ಯಾನ ಹಾಗೂ ಯೋಗದ ಕಡೆ ಗಮನ ಹರಿಸಿ, ಅದರಿಂದ ನಿಮ್ಮ ಆರೋಗ್ಯದ ಲವಲವಿಕೆಗೆ ಬಹಳ ಸಹಾಯವಾಗಲಿದೆ.

ಸಿಂಹ: ನಿಮ್ಮಂತೆಯೇ ಇತರರೂ ಸ್ವತಂತ್ರ ಹಾಗೂ ಸಂತೋಷವಾಗಿರಬೇಕೆಂಬ ನಿಮ್ಮ ಮನೋಭಾವದಿಂದಾಗಿ ಹೆಚ್ಚಿನ ಗೌರವ ಪಡೆದುಕೊಳ್ಳುವಿರಿ. ನಿಮ್ಮ ನೈತಿಕ ಜವಾಬ್ದಾರಿಗಳ ಕಡೆಗೆ ನಿಮ್ಮ ಹೆಚ್ಚಿನ ಗಮನವಿರಲಿ.

ಕನ್ಯಾ: ಪಾಲುದಾರಿಕೆ ವ್ಯವಹಾರದಲ್ಲಿ ಈ ದಿನ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಬಹಳ ದಿನದ ನಂತರದ ಹಳೆಯ ಮಿತ್ರನೊಬ್ಬನ ಭೇಟಿ ಮನಸ್ಸಿಗೆ ಮುದ ತರುವುದು. ಹಣದ ವಿಚಾರದಲ್ಲಿ ಬಿಗಿ ನಿಲುವು ಉತ್ತಮ.

ತುಲಾ: ಗ್ರಹದ ಚಲನೆಯು ನಿಮಗೆ ಕೆಲಸದಲ್ಲಿದ್ದಂಥ ಅಡೆತಡೆಗಳನ್ನು ನಿವಾರಣೆ ಮಾಡುವುದು. ಎಲ್ಲಾ ಕೆಲಸಗಳೂ ತ್ವರಿತ ಗತಿಯಲ್ಲಿ ಸಾಗುವವು. ಹಣ ಮಾಡುವ ಪ್ರಯತ್ನಕ್ಕಿಂತ ಮಿಗಿಲಾಗಿ ಹೆಸರು ಮಾಡುವ ಬಗ್ಗೆ ಗಮನವಿರಲಿ.

ವೃಶ್ಚಿಕ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಮುಂದೊಂದು ದಿನ ಅವರ ಸಹಾಯ ಪಡೆಯಬೇಕಾಗಬಹುದು. ಆರೋಗ್ಯದಲ್ಲಿ ಜಾಗ್ರತೆವಹಿಸಿ. ನಿಮ್ಮ ಪ್ರಯಾಣವು ಪೂರ್ವನಿಯೋಜಿತ ರೀತಿಯಲ್ಲಿ ನೆಡೆಯುವುದು ಕಷ್ಟಕರ.

ಧನು: ನಿಮ್ಮ ಸ್ವಯಂ ಶಕ್ತಿ ನಿಮ್ಮ ಹಿತೈಷಿಗಳ ಕಣ್ಣನ್ನು ಕೆಂಪಾಗಿಸುತ್ತದೆ. ಈಶ್ವರನ ಅನುಗ್ರಹವು ನಿಮ್ಮ ಪಾಲಿಗಿದ್ದು, ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕನಾಗಿರುತ್ತಾನೆ.

ಮಕರ: ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನವನ್ನೂ ತೆಗೆದುಕೊಳ್ಳಬೇಡಿ. ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು. ತಾಳ್ಮೆ ನಿಮಗೆ ಅತ್ಯವಶ್ಯ.


ಕುಂಭ: ಕ್ಷಣಿಕ ಸುಖಕ್ಕಾಗಿ ಇನ್ನೊಬ್ಬರ ಒತ್ತಾಯಕ್ಕೆ ಮಣಿದು ಅಧಿಕ ಹಣ ವ್ಯಯ ಮಾಡುವುದು ಸರಿಯಲ್ಲ. ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಿದ ಸಂತೋಷ ಸಿಗುವುದು. ನಿಮ್ಮ ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ನಿಮಗೆ ಸಿಗಲಿದೆ.

ಮೀನ: ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರೊಂದಿಗೆ ವ್ಯವಹರಿಸುವಾಗ ದಾಕ್ಷಿಣ್ಯಕ್ಕೆ ಸಿಕ್ಕಿಕೊಳ್ಳದಿರುವ ರೀತಿಯಲ್ಲಿ ವ್ಯವಹರಿಸಿ. ನಿಮ್ಮ ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ.

ಪದಬಂಧ 5553 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ನೆತ್ತರು ಸುರಿಯುವಿಕೆ (4)
6.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)
7.ಅಕ್ಕರೆಯಿಂದ ತಿನಿಸಿದ ಸಿಹಿ ಉಲ್ಟಾ ಕಾಣುತ್ತಿದೆ (3)
9.ಟಾರ ರಸ್ತೆ ಬಳಿಯಿರುವ ಮೋರಿ (3)
10.ವಾದವನ್ನು ಮಂಡಿಸುವ ಕ್ರಮ (5)
11.ಕತ್ತರಿಸುವ ಸಾಧನ (3)
12.ತಲೆಯಲ್ಲಿರುವ ದುಂಡನೆಯ ಪಾತ್ರೆ! (3)
16.ಬೂಟಾಟಿಕೆ ಸ್ವಭಾವದವಳು (4)
17.ಪಿಸುಣ ಇಲ್ಲಿ ತಿರುಗಿದ್ದಾನಲ್ಲಾ (4)

ಮೇಲಿಂದ ಕೆಳಕ್ಕೆ
1.ಹಾಲಿನ ಧಾರೆಯಿದು (4)
2.ಅವನಿರುವ ಭೂಮಿ (3)
3.ತರಳೆ ಹಿಡಿದಿರುವ ಹತ್ತಿ (3)
4.ವಾರದ ಕೊನೆಗೆ ನೆರೆದ ಸುತ್ತಲಿನ ಜನ (4)
8.ಪ್ರಾಣಿ ಅಥವಾ ವಾಹನದ ಮೇಲೆ ಕುಳಿತು ಹೋಗುವಿಕೆ (3)
9.ಗಣೆಯ ಬಳಿ ಕಲಿತ ಲೆಕ್ಕ ಶಾಸ್ತ್ರ (3)
11.ಋಷಿಗಳು ಬಳಸುವ ನೀರಿನ ಪಾತ್ರೆ (4)
13.ಲೆಕ್ಕಕ್ಕೆ ಸಂಬಂಧಪಟ್ಟದ್ದು (4)
14.ಇದೇ ಕೊನೆ! (3)
15.ನೇಯುವ ಸಾಧನ (3)



5552ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಭವ 3.ಅಂಗರಾಗ
5.ನನಸು 7.ಮಾರಾಮಾರಿ
8.ರತ್ನಖಚಿತಪೀಠ 11.ಸೆರೆಮನೆ
12.ಹಾವುಗೆ 14.ಗುಣಗ್ರಾಹಿ
15.ಕಡವರ

ಮೇಲಿಂದ ಕೆಳಕ್ಕೆ:
1.ಅಧ್ವಾನ 2.ಭಕ್ಷೀಸು
4.ಗಡಾರಿ 6.ನಕಾರ
7.ಮಾರುತ 9.ಖಜಾನೆ
10.ಠರಾವು 11.ಸೆರಗು
12.ಹಾಯ್ಗುಡ 13.ಗೆಸಿರ

ಸುಡೊಕು 5938

8		2		4		1		5
	1		8					
9		6			7	2		4
			1	6				
					3	8		6
		7		8				
	4	8		9	2			
1		5	7				4	
2		3		5	1	9		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5937 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾದರೆ ನಿರ್ದಾಕ್ಷಿಣ್ಯ ಕ್ರಮ: ಮುಖ್ಯಮಂತ್ರಿ ಎಚ್ಚರಿಕೆ

‘ರಿಯಲ್ ಎಸ್ಟೇಟ್ ಜತೆ ಶಾಮೀಲಾಗಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ತಮ್ಮನ್ನು ಶನಿವಾರ ಭೇಟಿಯಾದ ನಗರದ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಕಾನೂನುಬಾಹಿರವಾಗಿ ಕೆಲಸ ಮಾಡಿ ಎಂದು ನಿಮಗೆ ಹೇಳುವುದಿಲ್ಲ. ನಗರದಲ್ಲಿ ರೌಡಿಸಂ ಮಟ್ಟ ಹಾಕಬೇಕು. ಕಾನೂನು ಕೈಗೆತ್ತಿಕೊಳ್ಳಲು ಯಾರಿಗೂ ಅವಕಾಶ ನೀಡಬಾರದು’ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

‘ಪೊಲೀಸ್ ಅಧಿಕಾರಿ, ಸಿಬ್ಬಂದಿ ರಿಯಲ್ ಎಸ್ಟೇಟ್‌ನವರ ಜೊತೆ ಶಾಮೀಲಾಗುವುದು, ಅಪರಾದ ಪ್ರಕರಣಗಳಲ್ಲಿ ಭಾಗಿಯಾಗುವುದು ಸರಿಯಲ್ಲ. ಇದರಿಂದ ಜನರಿಗೆ ಪೊಲೀಸ್ ವ್ಯವಸ್ಥೆಯ ಮೇಲಿನ ವಿಶ್ವಾಸ ಹೊರಟು ಹೋಗುತ್ತದೆ’ ಎಂದೂ ಹೇಳಿದರು.

‘ನಗರದಲ್ಲಿ ಮಾದಕದ್ರವ್ಯ ಹಾವಳಿ ತಡೆಗಟ್ಟಬೇಕು. ಡ್ರಗ್ಸ್ ಮಾಫಿಯಾ ಮಟ್ಟಹಾಕುವ ಬಗ್ಗೆ ಎಲ್ಲ ಹಂತದ ಪೊಲೀಸ್ ಅಧಿಕಾರಿಗಳು ತೀರ್ಮಾನ ಕೈಗೊಂಡು, ಅನುಷ್ಠಾನಗೊಳಿಸಬೇಕು. ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂಟಿಯಾಗಿ ಜೀವನ ಮಾಡುವವರನ್ನು ಗುರುತಿಸಿ, ಅವರ ರಕ್ಷಣೆಗೆ ಆದ್ಯತೆ ನೀಡಬೇಕು. ಪೊಲೀಸ್ ಬೀಟ್ ವ್ಯವಸ್ಥೆ ಬಲಪಡಿಸಬೇಕು. ನಗರದಲ್ಲಿರುವ 241 ಹೊಯ್ಸಳ ವಾಹನಗಳ ಗಸ್ತುಪಡೆಯನ್ನು ಬಲಪಡಿಸಿ, ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡಬೇಕು’ ಎಂದು ಸಲಹೆ ನೀಡಿದರು.

‘ಅಪರಾಧ ಪ್ರಕರಣಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗದಿದ್ದರೂ, ಕಡಿಮೆಗೊಳಿಸಲು ಸಾಧ್ಯವಿದೆ. ತಡೆಯಲು ಸಾಧ್ಯವಿರುವ ಅಪರಾಧಗಳನ್ನು ತಡೆಗಟ್ಟಲು ಪೊಲೀಸರು ಹೆಚ್ಚಿನ ಆದ್ಯತೆ ನೀಡಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವುದು, ಶಾಂತಿಯುತ ಹಾಗೂ ಭಯವಿಲ್ಲದ ವಾತಾವರಣ ನಿರ್ಮಿಸಲು ಪೊಲೀಸರು ಶ್ರಮಿಸಬೇಕು’ ಎಂದು ಸೂಚನೆ ನೀಡಿದರು.

ಮುಖ್ಯಮಂತ್ರಿಯವರ ಮಾರ್ಗದರ್ಶನದಲ್ಲಿ ಶಾಂತಿಯುತ ಹಾಗೂ ಸುರಕ್ಷಿತ ವಾತಾವರಣ ನಿರ್ಮಾಣಕ್ಕೆ ಶ್ರಮಿಸುವುದಾಗಿ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ತಿಳಿಸಿದರು.



ಬೆಂಗಳೂರು ಹಿರಿಯ ಪೊಲೀಸ್ ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ಮಾಡಿದರು

ಡಿಕೆಶಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ದೂರು

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮುಖಂಡರಾದ ಕೆ.ಎಸ್.ಈಶ್ವರಪ್ಪ ಮತ್ತು ಸಿ.ಟಿ.ರವಿ, ಶಾಸಕ ಸುನೀಲ್ ಕುಮಾರ್ ಹಾಗೂ ಸಂಸದ ಪ್ರತಾಪ್ ಸಿಂಹ ಅವರ ಫೋಟೊಗಳನ್ನು ಕಾಂಗ್ರೆಸ್ ದುರ್ಬಳಕೆ ಮಾಡಿಕೊಂಡು ಅಪಪ್ರಚಾರ ನಡೆಸುತ್ತಿದೆ ಎಂದು ಆರೋಪಿಸಿ ಹೈಗ್ರೌಂಡ್ಸ್ ಠಾಣೆಗೆ ಬಿಜೆಪಿ ದೂರು ನೀಡಿದೆ.

‘ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ಫೇಸ್‌ಬುಕ್ ಖಾತೆಯ ನಿರ್ವಹಣೆ ಮಾಡುತ್ತಿರುವವ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಬಿಜೆಪಿ ಕಾನೂನು ಘಟಕದ ರಾಜ್ಯ ಸಂಚಾಲಕ ಯೋಗೇಂದ್ರ ಹೊಡಘಟ್ಟ ಅವರು ದೂರು ನೀಡಿದ್ದಾರೆ.

‘ಕಾಂಗ್ರೆಸ್‌ನ ಅಧಿಕೃತ ಫೇಸ್‌ಬುಕ್ ಖಾತೆಯಲ್ಲಿ ಬಿಜೆಪಿಯ ಮುಖಂಡರ ಫೋಟೊ ಬಳಸಿಕೊಂಡು ಹಾದಿತಪ್ಪಿಸುವ ರೀತಿಯಲ್ಲಿ ಪೋಸ್ಟ್ ಮಾಡಲಾಗುತ್ತಿದೆ. ಉದ್ದೇಶ ಪೂರ್ವಕವಾಗಿ ರಾಜ್ಯದ ಜನರಲ್ಲಿ ದ್ವೇಷ ಹುಟ್ಟಿಸಲು ಹಾಗೂ ಬಿಜೆಪಿ ನಾಯಕರ ಹೆಸರಿಗೆ ಮಸಿ ಬಳಿಯಲು ಯತ್ನಿಸಲಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.



ಬನ್ನೇರುಘಟ್ಟ ರಸ್ತೆಯಲ್ಲಿರುವ ಅಗ್ನಿಶಾಮಕ ಹಾಗೂ ತುರ್ತು ಸೇವಾ ಅಕಾಡೆಮಿ ಮೈದಾನದಲ್ಲಿ ಶನಿವಾರದಿಂದ ಆರಂಭವಾದ ರಾಜ್ಯ ಅಗ್ನಿಶಾಮಕ ಹಾಗೂ ತುರ್ತುಸೇವಾ ಸಿಬ್ಬಂದಿ, ಗೃಹರಕ್ಷಕದಳ, ಎಸ್‌ಡಿಆರ್‌ಎಫ್ ಸಿಬ್ಬಂದಿ ವಾರ್ಷಿಕ ಕ್ರೀಡಾಕೂಟದಲ್ಲಿ ರಾಜ್ಯ ಪೊಲೀಸ್ ನಿವೃತ್ತ ಮಹಾನಿರ್ದೇಶಕಿ ನೀಲಮಣಿ ಎಂ.ರಾಜು ಅವರು ಕ್ರೀಡಾ ಜ್ಯೋತಿ ಸ್ವೀಕರಿಸಿದರು. ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮಹಾ ನಿರ್ದೇಶಕ ಕಮಲ್ ಪಂತ್ ಇದ್ದರು

ಐಪಿಎಸ್ ಅಧಿಕಾರಿಗೆ ಬೆದರಿಕೆ

ಬೆಂಗಳೂರು: ಬೈಕ್ ಸವಾರನೊಬ್ಬ, ಐಪಿಎಸ್ ಅಧಿಕಾರಿ ಶೋಭಾರಾಣಿ ಅವರಿಗೆ ನಿಂದಿಸಿ ಬೆದರಿಕೆ ಹಾಕಿದ್ದು ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಪ್ತಗಿರಿ ಲೇಔಟ್‌ನ ಜಿ.ಅಭಿಷೇಕ್ ವಿರುದ್ಧ ದೂರು ದಾಖಲಾಗಿದೆ. ಬಿಬಿಎಂಪಿ ಕೇಂದ್ರ ಕಚೇರಿಯ ಬೆಂಗಳೂರು ಮಹಾನಗರ ಕಾರ್ಯಪಡೆಯಲ್ಲಿ ಎಸ್‌ಪಿಯಾಗಿ ಶೋಭಾರಾಣಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ.

‘ಜ.3ರಂದು ಸರ್ಕಾರಿ ವಾಹನದಲ್ಲಿ ಕೆಲಸಕ್ಕೆ ತೆರಳುತ್ತಿದ್ದೆ. ಗೊರಗುಂಟೆಪಾಳ್ಯ ಸಿಗ್ನಲ್ ಬಳಿ ಹಿಂಬದಿಯಿಂದ ಬಂದ್ ಬೈಕ್, ಕಾರಿಗೆ ಡಿಕ್ಕಿಯಾಗಿತ್ತು. ನಂತರ ಕಾರು ನಿಲ್ಲಿಸಿ ಚಾಲಕ ಸವಾರನನ್ನು ಪ್ರಶ್ನಿಸುತ್ತಿದ್ದರು. ಕಾರು ಚಾಲಕನಿಗೆ ಆರೋಪಿ ನಿಂದಿಸಿದ. ಅದನ್ನು ಕಂಡು ಕಾರಿನಿಂದ ಇಳಿದು ಪ್ರಶ್ನಿಸಿದ್ದಕ್ಕೆ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾನೆ. ಬೈಕ್ ಸವಾರನ ವಿರುದ್ಧ ಕ್ರಮ ಕೈಗೊಳ್ಳಿ’ ಎಂದು ಆಗ್ರಹಿಸಿ ಶೋಭಾರಾಣಿ ದೂರು ನೀಡಿದ್ದಾರೆ.

ಅಪರಾಧ ಸುದ್ದಿಗಳು

ಪ್ರಚೋದನೆ: ಪುನೀತ್ ಕೆರೆಹಳ್ಳಿ ವಿರುದ್ಧ ದೂರು

ಬೆಂಗಳೂರು: ‘ಕೋಮುದ್ವೇಷ ಸೃಷ್ಟಿಸಲು ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿ, ರಾಷ್ಟ್ರ ರಕ್ಷಣಾ ಪಡೆಯ ಮುಖಂಡ ಪುನೀತ್ ಕೆರೆಹಳ್ಳಿ ಸೇರಿದಂತೆ ಯುವತಿಯೊಬ್ಬರ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ವಿಭಾಗದ ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

ಪುನೀತ್ ವಿರುದ್ಧ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಬಿ.ಎಲ್.ಚೇತನ್ ದೂರು ನೀಡಿದ್ದಾರೆ.

‘ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಪುನೀತ್ ಅವರು ಪ್ರಚೋದನಕಾರಿ ಬರಹ ಪ್ರಕಟಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಆಗ್ರಹಿಸಲಾಗಿದೆ.

ಫೇಸ್‌ಬುಕ್‌ನಲ್ಲಿ ಯುವತಿಯೊಬ್ಬರು ‘ದೇವಾಲಯಗಳಿಗೆ ಕೇವಲ ಒಂದು ರೂಪಾಯಿ ನೀಡಿ, ದೇವಾಲಯಗಳ ಹಣವನ್ನು ಅನ್ಯ ಧರ್ಮಗಳಿಗೆ ಖರ್ಚು ಮಾಡಲಾಗುತ್ತಿದೆ’ ಎಂಬ ಬರಹ ಪ್ರಕಟಿಸಿದ್ದಾರೆ. ಸಮಾಜದಲ್ಲಿ ಕೋಮುದ್ವೇಷ ಉಂಟು ಮಾಡುತ್ತಿದ್ದಾರೆ. ಆ ಯುವತಿಯ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಕಾಂಗ್ರೆಸ್‌ನ ವೈ.ಪುಟ್ಟರಾಜು ದೂರು ನೀಡಿದ್ದಾರೆ.

ಅಪಘಾತ: ಯುವಕ ಸಾವು

ಬೆಂಗಳೂರು: ವೈಟ್‌ಫೀಲ್ಡ್‌ನಲ್ಲಿ ಟ್ರ್ಯಾಕ್ಟರ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಯುವಕ ಮೃತಪಟ್ಟಿದ್ದಾರೆ.

ಕಾಡುಗೋಡಿ ನಿವಾಸಿ ಫಕೀರ್ ಅಹಮದ್ (28) ಮೃತಪಟ್ಟವರು.

ಅಸ್ಸಾಂನ ಫಕೀರ್ ಅಹಮದ್ ಅವರು ಎರಡು ವರ್ಷಗಳಿಂದ ಬೆಂಗಳೂರಿನ ಕಾಡುಗೋಡಿಯಲ್ಲಿ ವಾಸವಾಗಿದ್ದರು. ಶುಕ್ರವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಪಟ್ಟಂದೂರು ಮೆಟ್ರೊ ನಿಲ್ದಾಣದ ಮಾರ್ಗವಾಗಿ ವೈಟ್‌ಫೀಲ್ಡ್ ಕಡೆಗೆ ತೆರಳುವಾಗ ಹಿಂದಿನಿಂದ ಬಂದ ಟ್ರ್ಯಾಕ್ಟರ್ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್‌ನಿಂದ ಕೆಳಕ್ಕೆ ಬಿದ್ದ ಫಕೀರ್ ಅಹಮದ್ ತಲೆಗೆ ಗಂಭೀರ ಪೆಟ್ಟುಬಿದ್ದು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಟ್ರ್ಯಾಕ್ಟರ್ ಜಪ್ತಿ ಮಾಡಲಾಗಿದ್ದು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು. ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೌಡಿ ಕಾಲಿಗೆ ಗುಂಡೇಟು: ಬಂಧನ

ತುಮಕೂರು: ತಾಲ್ಲೂಕಿನ ವಕ್ಕೋಡಿ ಬಳಿ ಶನಿವಾರ ರಾತ್ರಿ ರೌಡಿಶೀಟರ್ ಮನೋಜ್ ಅಲಿಯಾಸ್ ಮಂಡೇಲಾ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ.

ಮನೋಜ್ ಮತ್ತು ಇತರರು ಶನಿವಾರ ಬೆಳಗ್ಗೆ ಮತ್ತೊಬ್ಬ ರೌಡಿಶೀಟರ್ ಬಂಡೆನಾಗನ ಮೇಲೆ ಹಲ್ಲೆ ನಡೆಸಿದ್ದರು. ಈ ಕುರಿತು ಬಂಡೆನಾಗ ನಗರ ಠಾಣೆಗೆ ಕೊಲೆ ಯತ್ನದ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಖಚಿತ ಮಾಹಿತಿ ಮೇರೆಗೆ ಮನೋಜ್ ಮತ್ತು ಸಹಚರರನ್ನು ಬಂಧಿಸಲು ವಕ್ಕೋಡಿ ಬಳಿಗೆ ಹೋಗಿದ್ದಾರೆ. ಈ ವೇಳೆ ನಗರ ಠಾಣೆಯ ಎಎಸ್‌ಐ ಮಲ್ಲೇಶ್, ಹೆಡ್‌ಕಾನ್‌ಸ್ಟೆಬಲ್ ಮಹ್ಮದ್ ನಯಾಜ್ ಮೇಲೆ ಮನೋಜ್ ಡ್ರ್ಯಾಗರ್‌ನಿಂದ ಹಲ್ಲೆ ನಡೆಸಿದ್ದಾನೆ. ಈ ವೇಳೆ ಪೊಲೀಸರು ಮನೋಜ್ ಕಾಲಿಗೆ ಗುಂಡು ಹಾರಿಸಿ, ಬಂಧಿಸಿದ್ದಾರೆ.



‘ಮಾದಕ ವ್ಯಸನ ಮುಕ್ತ ನಡಿಗೆ’

ನಗರ ಪೊಲೀಸ್ ಇಲಾಖೆಯ ಪೂರ್ವ ವಿಭಾಗ ಹಾಗೂ ಆರೋಹಣ ಫೌಂಡೇಷನ್ ಜಂಟಿಯಾಗಿ ಶನಿವಾರ ಆಯೋಜಿಸಿದ್ದ ‘ಮಾದಕ ವ್ಯಸನ ಮುಕ್ತ ನಡಿಗೆ’ಯಲ್ಲಿ ನಟ ಡಾಲಿ ಧನಂಜಯ್, ನಟಿ ಸಂಜನಾ ಆನಂದ್, ಪೂರ್ವ ವಿಭಾಗದ ಡಿಸಿಪಿ ಡಿ.ದೇವರಾಜ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ/ರಂಜು ಪಿ.

ಬ್ರಿಜ್‌ಭೂಷಣ್ ವಿರುದ್ಧ ದೋಷಾರೋಪಕ್ಕೆ ಒತ್ತಾಯ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಮಾಜಿ ಮುಖ್ಯಸ್ಥ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ವಿರುದ್ಧ ದಾಖಲಾಗಿರುವ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಪ್ರಕರಣದಲ್ಲಿ ದೋಷಾರೋಪ ನಿಗದಿಪಡಿಸುವಂತೆ ದೆಹಲಿ ಪೊಲೀಸರು ನ್ಯಾಯಾಲಯವನ್ನು ಶನಿವಾರ ಒತ್ತಾಯಿಸಿದ್ದಾರೆ.

ಆರೋಪಿಸಲಾಗಿರುವ ಕೆಲ ಘಟನೆಗಳು ಹೊರದೇಶದಲ್ಲಿ ನಡೆದಿರುವ ಕಾರಣ ಅವು ದೆಹಲಿ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ, ದೋಷಾರೋಪ ನಿಗದಿಯ ವಾದ–ಪ್ರತಿವಾದಗಳು ಮುಕ್ತಾಯಗೊಂಡಿವೆ ಎಂಬ ಆರೋಪಿಯ ವಾದವನ್ನು ಪೊಲೀಸರು ವಿರೋಧಿಸಿದರು.

ಸಿಂಗ್ ಅವರು ಹೊರದೇಶದಲ್ಲಿ ಮತ್ತು ಭಾರತದಲ್ಲಿ ನಡೆಸಿದ್ದಾರೆ ಎನ್ನಲಾದ ಲೈಂಗಿಕ ಕಿರುಕುಳ ಘಟನೆಗಳು ಒಂದೇ ಅಪರಾಧದ ಭಾಗ ಎಂದು ಪೊಲೀಸರು, ಅಡಿಷನಲ್ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಪ್ರಿಯಾಂಕ್ ರಜಪೂತ್ ಅವರ ಮುಂದೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ. ‘ಈ ಪ್ರಕರಣದ ವಿಚಾರಣೆಯು ದೆಹಲಿ ಕೋರ್ಟ್ ವ್ಯಾಪ್ತಿಗೇ ಬರುತ್ತದೆ’ ಎಂದು ಹೇಳಿದ್ದಾರೆ. ಪ್ರಕರಣದ ವಿಚಾರಣೆಯನ್ನು ಕೋರ್ಟ್ ಇದೇ ತಿಂಗಳ 20ಕ್ಕೆ ಮುಂದುವರಿಸಲಿದೆ.

ಅಮ್ಮನನ್ನು ಬೀದಿಯಲ್ಲಿ ಬಿಟ್ಟು ಹೋದ ಮಗಳು!

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ವಿ.ಕಲ್ಲಹಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ವೃದ್ಧೆಯೊಬ್ಬರನ್ನು ಆಕೆಯ ಮಗಳು ಮತ್ತು ಅಳಿಯ ರಸ್ತೆಯಲ್ಲಿ ಬಿಟ್ಟು ಹೋಗಿದ್ದಾರೆ. ಮೈ ಕೊರೆಯುವ ಚಳಿಯಲ್ಲಿ ನಡುಗುತ್ತಿದ್ದ ವೃದ್ಧೆಯನ್ನು ಗ್ರಾಮಸ್ಥರು ವೃದ್ಧಾಶ್ರಮಕ್ಕೆ ದಾಖಲಿಸಿದ್ದಾರೆ.

ತಾಲ್ಲೂಕಿನ ದೊಮ್ಮಸಂದ್ರದಲ್ಲಿ 80 ವರ್ಷದ ಗ್ರೇಸಿ ಪೀಟರ್ ಅವರು ತಮ್ಮ ಮಗಳು, ಅಳಿಯ ಮತ್ತು ಮೊಮ್ಮಕ್ಕಳೊಂದಿಗೆ ವಾಸವಾಗಿದ್ದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಗ್ರೇಸಿ ಅವರನ್ನು ಮಗಳು ಮತ್ತು ಅಳಿಯ ಗುರುವಾರ ರಾತ್ರಿ ಕಾರಿನಲ್ಲಿ ಕರೆತಂದು ಸರ್ಜಾಪುರ ಸಮೀಪದ ವಿ.ಕಲ್ಲಹಳ್ಳಿ ಬಳಿಯ ದೇವಾಲಯವೊಂದರ ಬಳಿ ಬಿಟ್ಟು ಹೋಗಿದ್ದಾರೆ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಚಳಿಯಲ್ಲಿ ನಡುಗುತ್ತಿದ್ದ ವೃದ್ಧೆಯ ರೋದನೆ ಗಮನಿಸಿದ ಸ್ಥಳೀಯರು ಶುಕ್ರವಾರ ಬನ್ನೇರುಘಟ್ಟದ ಏರ್ ಹ್ಯುಮಾನಿಟೇರಿಯನ್ ಹೋಮ್ಸ್‌ಗೆ ದಾಖಲಿಸಿದ್ದಾರೆ. ಚಿಕಿತ್ಸೆ ಕೊಡಲಾಗಿದೆ.



ಗ್ರೇಸಿ ಪೀಟರ್

ಅವಧಿ ಮೀರಿ ಕಾರ್ಯಾಚರಣೆ ಪಬ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾವೊಂದರ ಯಶಸ್ಸು ಸಂಭ್ರಮಿಸಲು ಮುಂಜಾನೆವರೆಗೆ ಪಬ್‌ನಲ್ಲಿ ಅವಕಾಶ ಮಾಡಿಕೊಟ್ಟ ಆರೋಪದ ಮೇರೆಗೆ ಪಬ್‌ನ ಮಾಲೀಕ ಸೇರಿದಂತೆ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಯಶವಂತಪುರದ ಒರಾಯನ್ ಮಾಲ್ ಎದುರಿನ ಜೆಟ್‌ಲ್ಯಾಗ್ ಪಬ್‌ನ ಮಾಲೀಕರಾದ ಶಶಿರೇಖಾ ಜಗದೀಶ್ ಮತ್ತು ಪಬ್‌ನ ವ್ಯವಸ್ಥಾಪಕ ಪ್ರಶಾಂತ್ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಹಾಗೂ ಅಬಕಾರಿ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪಬ್‌ನ ಮಾಲೀಕರಿಗೆ ಕಾರಣ ಕೇಳಿ ನೋಟಿಸ್ ಕೊಡಲಾಗಿದೆ ಎಂದು ಪೊಲೀಸರು ಹೇಳಿದರು.

ಪಾರ್ಟಿಯಲ್ಲಿ ಸಿನಿಮಾ ನಟ– ನಟಿಯರು ಭಾಗಿ: ಪಾರ್ಟಿಯಲ್ಲಿ ಚಿತ್ರರಂಗದ ನಟ, ನಟಿಯರು, ನಿರ್ಮಾಪಕರು ಪಾಲ್ಗೊಂಡಿದ್ದರು. ಜ.3ರಂದು ರಾತ್ರಿ ಪಾರ್ಟಿ ಆಯೋಜನೆ ಮಾಡಲಾಗಿತ್ತು. ರಾತ್ರಿ 8 ಗಂಟೆಗೆ ಆರಂಭವಾದ ಪಾರ್ಟಿ ಜ.4ರ ಮುಂಜಾನೆ 3.30ರವರೆಗೆ ನಡೆದಿತ್ತು. ಈ ವೇಳೆ ಪಾರ್ಟಿಯಲ್ಲಿ ಪಾಲ್ಗೊಂಡ ಎಲ್ಲರಿಗೂ ಮುಂಜಾನೆವರೆಗೆ ಮದ್ಯ ಹಾಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ರಾತ್ರಿ 12.45ಕ್ಕೆ ಬೀಟ್‌ನಲ್ಲಿದ್ದ ಪಿಎಸ್‌ಐ ಹಾಗೂ ಹೊಯ್ಸಳ ಸಿಬ್ಬಂದಿ ಪಬ್‌ಗೆ ಭೇಟಿ ನೀಡಿ ಪಬ್ ಬಂದ್ ಮಾಡುವಂತೆ ಸೂಚಿಸಿ ತೆರಳಿದ್ದರು. ಆದರೂ ಮುಂಜಾನೆ ವರೆಗೂ ಪಾರ್ಟಿ ನಡೆದಿತ್ತು ಎಂದು ಮೂಲಗಳು ಹೇಳಿವೆ.

‘ಮುಂಜಾನೆವರೆಗೂ ಪಬ್ ಕಾರ್ಯ ನಿರ್ವಹಿಸಿದೆ. ಕರ್ತವ್ಯಕ್ಕೆ ನಿಯೋಜಿಸಿದ್ದ ಬೀಟ್ ಸಿಬ್ಬಂದಿ ಹಾಗೂ ಪಿಎಸ್‌ಐ ವಿರುದ್ಧವೂ ತನಿಖೆಗೆ ಸೂಚಿಸಲಾಗಿದೆ. ಒಂದುವೇಳೆ ಕರ್ತವ್ಯ ಲೋಪ ಕಂಡು ಬಂದರೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ಪ್ರಾಥಮಿಕ ಮಾಹಿತಿ ಪ್ರಕಾರ ಸೆಲೆಬ್ರಿಟಿಗಳು ಪಾಲ್ಗೊಂಡಿದ್ದ ಪಾರ್ಟಿಯಲ್ಲಿ ಡ್ರಗ್ಸ್ ಸೇವನೆ ಆಗಿರುವ ಮಾಹಿತಿ ಇಲ್ಲ. ಬೆಳಿಗ್ಗೆವರೆಗೂ ಮದ್ಯ ಪೂರೈಕೆ ಮಾಡಲಾಗಿದೆ. ಅವಧಿ ಮೀರಿ ಪಬ್ ಕಾರ್ಯಾಚರಣೆ ನಡೆಸಿದ ಆರೋಪದ ಮೇರೆಗೆ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ’ ಎಂದು ಎಂದು ಉತ್ತರ ವಿಭಾಗ ಡಿಸಿಪಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಮೂರು ಠಾಣೆಗಳಲ್ಲಿ ಎಫ್‌ಐಆರ್ ದಾಖಲು

ಬಾಂಬ್ ಬೆದರಿಕೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಕೇಂದ್ರ ವಿಭಾಗದ ಮೂರು ಪೊಲೀಸ್ ಠಾಣಾ ವ್ಯಾಪ್ತಿಯ ವಸ್ತು ಸಂಗ್ರಹಾಲಯಗಳಿಗೆ ಬಾಂಬ್ ಬೆದರಿಕೆಯ ಇ–ಮೇಲ್ ಬಂದಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

‘ಕಬ್ಬನ್ ಪಾರ್ಕ್, ವಿಧಾನಸೌಧ ಹಾಗೂ ಹೈಗ್ರೌಂಡ್ಸ್ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಕೇಂದ್ರ ವಿಭಾಗದ ಡಿಸಿಪಿ ಎಚ್.ಟಿ.ಶೇಖರ್ ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ ಕಸ್ತೂರ ಬಾ ರಸ್ತೆಯ ವಿಶ್ವೇಶ್ವರಯ್ಯ ಕೈಗಾರಿಕೆ ಹಾಗೂ ತಾಂತ್ರಿಕ ವಸ್ತು ಸಂಗ್ರಹಾಲಯ, ರಾಜಭವನ ರಸ್ತೆಯ ಜವಹರ್‌ಲಾಲ್ ನೆಹರೂ ತಾರಾಲಯ, ವಸಂತನಗರದ ನ್ಯಾಷನಲ್ ಗ್ಯಾಲರಿ ಫಾರ್ ಮಾಡರ್ನ್ ಆರ್ಟ್‌ಗೆ ಬೆದರಿಕೆಯ ಇ–ಮೇಲ್ ಬಂದಿತ್ತು. ಮಾಹಿತಿ ತಿಳಿದ ತಕ್ಷಣವೇ ಸ್ಥಳಕ್ಕೆ ತೆರಳಿದ್ದ ಆಯಾ ವಿಭಾಗದ ಪೊಲೀಸರು ಪರಿಶೀಲನೆ ನಡೆಸಿದ್ದರು. ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದ ಸಹಾಯದಿಂದ ತಪಾಸಣೆ ನಡೆಸಲಾಗಿತ್ತು. ಇದು ಹುಸಿ ಇ–ಮೇಲ್ ಎಂದು ಕಂಡುಬಂದ ಮೇಲೆ ಸಿಬ್ಬಂದಿ ನಿಟ್ಟುಸಿರು ಬಿಟ್ಟಿದ್ದರು.

ಹೊರರಾಜ್ಯದಿಂದ ಕರೆ: ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರಕ್ಕೂ ಬಾಂಬ್ ಬೆದರಿಕೆ ಕರೆ ಬಂದಿತ್ತು. ಜ.3ರಂದು ಮುಂಬೈನ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ಕಚೇರಿಗೆ ಕರೆ ಮಾಡಿ, ಬೆಂಗಳೂರಿನ ಕಚೇರಿಯಲ್ಲಿ ಬಾಂಬ್ ಇಡಲಾಗಿದೆಯೆಂದು ಹೇಳಿದ್ದರು ಎಂದು ಗೊತ್ತಾಗಿದೆ.

ಮುಂಬೈ ಕಚೇರಿ ಸಿಬ್ಬಂದಿ ವಿಧಾನಸೌಧ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ತಕ್ಷಣ ಪೊಲೀಸರು ಬಾಂಬ್ ನಿಷ್ಕ್ರಿಯ ದಳದೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆ ಯಾವುದೇ ಸ್ಫೋಟಕವಸ್ತು ಪತ್ತೆಯಾಗಿಲ್ಲ ಎಂದು ಪೊಲೀಸರು ಹೇಳಿದರು.

ಪ್ರಾಥಮಿಕ ಮಾಹಿತಿ ಪ್ರಕಾರ, ನೆರೆ ರಾಜ್ಯದಿಂದ ಕರೆ ಬಂದಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಬೆದರಿಕೆ ಸಂದೇಶ ಬಂದ ಇ-ಮೇಲ್ ವಿಳಾಸಗಳ ಐಪಿ ವಿಳಾಸ ಪತ್ತೆಗೆ ತಾಂತ್ರಿಕ ತನಿಖೆ ನಡೆಸಲಾಗುತ್ತಿದ್ದು, ಜತೆಗೆ ಸಂಬಂಧಿತ ಸಂಸ್ಥೆಗೆ ಐಪಿ ವಿಳಾಸ ನೀಡುವಂತೆ ಕೋರಲಾಗಿದೆ. ಪ್ರಾಥಮಿಕ ತನಿಖೆ ನಡೆಸಲಾಗಿದ್ದು ವಿಪಿಎನ್ ಬಳಸಿ ಬೆದರಿಕೆ ಸಂದೇಶ ಕಳುಹಿಸಿರುವ ಸಾಧ್ಯತೆಯಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮತ್ತೆ ಚಿರತೆ ಪ್ರತ್ಯಕ್ಷ ಸೆರೆಗೆ ಬೋನು



ಆನೇಕಲ್: ಚಂದಾಪುರ ಸಮೀಪದ ಹೀಲಲಿಗೆ ಗ್ರಾಮದ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಶನಿವಾರ ಚಿರತೆ ಪ್ರತ್ಯಕ್ಷವಾಗಿದೆ.

ಗ್ರಾಮದ ನಿರ್ಜನ ಬೀದಿಯಲ್ಲಿ ರಾತ್ರಿ ಚಿರತೆ ಓಡಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೂಡ್ಲು, ಗಟ್ಟಹಳ್ಳಿ, ಹುಸ್ಕೂರು, ಗೋಪಸಂದ್ರ ಸಮೀಪ ಈಚೆಗೆ ಚಿರತೆ ಓಡಾಟ ಆತಂಕ ಮೂಡಿಸಿದೆ.

ಎರಡು ಮೂರು ದಿನಗಳಿಂದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆ ಹಿಡಿಯಲು ನಡೆಸಿರುವ ಪ್ರಯತ್ನ ಫಲಿಸಿಲ್ಲ. ಶುಕ್ರವಾರ ಹುಸ್ಕೂರು ಸಮೀಪ ಬೋನಿಟ್ಟು ಚಿರತೆ ಹಿಡಿಯುವ ಪ್ರಯತ್ನ ನಡೆಸಿದ್ದರು.

‘ಕೃಷ್ಣಾಷ್ಟಮಿಗೆ ರಜೆ ಘೋಷಿಸಲಿ’

ಮಂಗಳೂರು: ರಾಜ್ಯ ಸರ್ಕಾರವು ಗೀತಾ ಜಯಂತಿ ಹಾಗೂ ಕೃಷ್ಣಾಷ್ಟಮಿಗೆ ಸಾರ್ವತ್ರಿಕ ರಜೆ ಘೋಷಿಸಲಿ ಎಂದು ನಾಲ್ಕನೇ ಬಾರಿಗೆ ಉಡುಪಿ ಕೃಷ್ಣ ಮಠದ ಸರ್ವಜ್ಞ ಪೀಠಾರೋಹಣ ಮಾಡಲಿರುವ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಶನಿವಾರ ಇಲ್ಲಿ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಈ ಬಾರಿಯ ಪರ್ಯಾಯವನ್ನು ವಿಶ್ವ ಗೀತಾ ಪರ್ಯಾಯದ ಪರಿಕಲ್ಪನೆಯಲ್ಲಿ ಆಚರಿಸಲಾಗುತ್ತಿದೆ ಎಂದರು.



ಮುಂಬೈನಲ್ಲಿ ರೀಟೆಲ್ ಜುವೆಲ್ಲರ್ ಗ್ರೂಪ್‌ನಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಸ್ಟ್ ಡಿಜಿಟಲ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಆಫ್ ಇಯರ್ ಮತ್ತು ನ್ಯಾಷನಲ್ ರೀಟೆಲ್ ಚೈನ್ ಆಫ್ ಇಯರ್ ಸಾಧನೆಗಾಗಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್ ಅವರು, ‘ರೀಟೆಲ್ ಜ್ಯುವೆಲ್ಲರ್ ಎಂ.ಡಿ ಮತ್ತು ಸಿಇಒ ಪ್ರಶಸ್ತಿ’ಗೆ ಭಾಜನರಾಗಿದ್ದು, ನಟಿ ಜೋಯಾ ಅಫ್ರೋಜ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು. ನಟಿ ಸನ್ಯಾ ಮಲ್ಹೋತ್ರಾ ಇದ್ದರು

ಯುವಕ, ಯುವತಿ ಮೇಲೆ ಹಲ್ಲೆ ಮಾಡಿದ ಗುಂಪು: ರಕ್ಷಿಸಿದ ಪೊಲೀಸರು

ಮೂರು ತಾಸು ಕೂಡಿ ಹಾಕಿ ಹಿಂಸೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಕೋಟೆ ಕೆರೆ ಉದ್ಯಾನದಲ್ಲಿ ಮಾತನಾಡುತ್ತ ಕುಳಿತಿದ್ದ ಯುವಕ– ಯುವತಿಯನ್ನು ಎಳೆದೊಯ್ದ ಏಳು ಜನರ ತಂಡ, ಮನಸೋ ಇಚ್ಛೆ ಹಲ್ಲೆ ನಡೆಸಿದ ಘಟನೆ ಶನಿವಾರ ಸಂಜೆ ನಡೆದಿದೆ.

ಬೆಳಗಾವಿ ತಾಲ್ಲೂಕಿನ ಯಮನಾಪುರ ಗ್ರಾಮದ ಸಚಿನ್ ಲಮಾಣಿ (22) ಹಾಗೂ ಮುಸ್ಕಾನ್ ಪಟೇಲ್ (23) ಹಲ್ಲೆಗೆ ಒಳಗಾದವರು. ಈ ಇಬ್ಬರೂ ಪರಿಚಯಸ್ಥರಾಗಿದ್ದಾರೆ.

ಇಬ್ಬರೂ ‘ಯುವನಿಧಿ’ಗೆ ಅರ್ಜಿ ಸಲ್ಲಿಸಲು ಬೆಳಗಾವಿಗೆ ಬಂದಿದ್ದರು. ಕೇಂದ್ರದಲ್ಲಿ ಸರ್ವರ್ ಸಮಸ್ಯೆ ಉಂಟಾಗಿ ಕೆಲಸ ಸ್ಥಗಿತಗೊಂಡಿತು. ಸಮಯ ಕಳೆಯಲು ಇಬ್ಬರೂ ಇಲ್ಲಿನ ಕೋಟೆ ಕೆರೆಯ ಉದ್ಯಾನದಲ್ಲಿ ಬಂದು ಮಾತನಾಡುತ್ತ ಕುಳಿತಿದ್ದರು.

‘ಇಳಿಸಂಜೆಗೆ ನಮ್ಮತ್ತ ಧಾವಿಸಿದ ಆರೋಪಿಗಳು ಏಕಾಏಕಿ ಹಲ್ಲೆ ಮಾಡಿದರು. ನೀವು ಯಾರು, ಏನು ಸಂಬಂಧ ಎಂದೆಲ್ಲ ಪ್ರಶ್ನೆ ಮಾಡಿ ಅವರನ್ನು ಎಳೆದುಕೊಂಡು ಹತ್ತಿರದ ರೂಮಿಗೆ ಕರೆದೊಯ್ದರು. ಮೂರು ತಾಸು ರೂಮಿನಲ್ಲಿ ಕೂಡಿಹಾಕಿ, ಮನಸೋ ಇಚ್ಛೆ ಥಳಿಸಿದರು’ ಎಂದು ಗಾಯಗೊಂಡ ಯುವಕ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಳಿಕ ಯುವಕ 112ಕ್ಕೆ ಕರೆ ಮಾಡಿ ಪೊಲೀಸರಿಗೆ ಮಾಹಿತಿ ನೀಡಿದರು. ಅವರನ್ನು ಕೂಡಿ ಹಾಕಿದ ಲೊಕೇಷನ್ ಪತ್ತೆ ಮಾಡಿದ ನಗರ ಪೊಲೀಸರು ಇಬ್ಬರನ್ನೂ ರಕ್ಷಿಸಿದರು.

‘ಘಟನೆ ಸಂಬಂಧ ಈಗಾಗಲೇ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಯುವಕ– ಯುವತಿಗೆ ಹೆಚ್ಚಿನ ಅನಾಹುತ ಆಗದಂತೆ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿದ್ದಾರೆ. ಯಾರೇ ಕಾನೂನು ಕೈಗೆತ್ತಿಕೊಂಡರೂ ಸಹಿಸುವುದಿಲ್ಲ. ಎಲ್ಲ ಆರೋಪಿಗಳನ್ನು ಬಂಧಿಸಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಎಸ್.ಎನ್.ಸಿದ್ರಾಮಪ್ಪ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು. ಗಾಯಗೊಂಡ ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಭಾರಿ ಮಳೆ

ಹುಬ್ಬಳ್ಳಿ/ಮಡಿಕೇರಿ/ಸುಬ್ರಹ್ಮಣ್ಯ: ಕೊಡಗು, ದಕ್ಷಿಣ ಕನ್ನಡ, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯ ವಿವಿಧೆಡೆ ಶನಿವಾರ ಮಳೆಯಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ಪರಿಸರವೂ ಸೇರಿದಂತೆ ಸುಳ್ಯ ಮತ್ತು ಕಡಬ ತಾಲ್ಲೂಕಿನಾದ್ಯಂತ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಲ್ಲಿ ಸಂಜೆ ಭಾರಿ ಮಳೆ ಸುರಿಯಿತು. ಸುಳ್ಯ ತಾಲ್ಲೂಕಿನ ಗುತ್ತಿಗಾರು, ದೇವಚಳ್ಳ, ಎಲಿಮಲೆ, ಮರ್ಕಂಜ, ವಳಲಂಬೆ, ಜಾಲ್ಸೂರು, ಮಂಡೆಕೋಲು, ಬೆಳ್ಳಾರೆ, ಐವರ್ನಾಡು, ಕೊಲ್ಲಮೊಗ್ರು, ಅರಂತೋಡು ಮೊದಲಾದ ಕಡೆಗಳಲ್ಲಿ ಸರಾಸರಿ 7 ಸೆಂ.ಮೀ. ಮಳೆಯಾಗಿದೆ.

ಟ್ರಾಮಾಕೇರ್ ಕೇಂದ್ರ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002
Website: www.teccbmcri.karnataka.gov.in | Tele: 080- 26802725
Email: splofftrtcc@gmail.com | traumacareblr123@gmail.com

ಸಂಖ್ಯೆ: DME/2023-24/SE0142 ದಿನಾಂಕ: 06.01.2023

ಇ–ಟೆಂಡರ್ ಅಧಿಸೂಚನೆ

ಟ್ರಾಮಾಕೇರ್ ಕೇಂದ್ರ, ಬಿಎಂಸಿಆರ್‌ಐ, ಬೆಂಗಳೂರು ಇಲ್ಲಿಗೆ ಅಗತ್ಯವಿರುವ ಜೈವಿಕ ವೈದ್ಯಕೀಯ ತ್ಯಾಜ್ಯ ವಸ್ತುಗಳ ಸಾಗಣೆ ಹಾಗೂ ವಿಲೇವಾರಿ ಮಾಡುವ ಸಂಬಂಧ ಪ್ರಸ್ತಾವನೆ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿ, ಅಗತ್ಯವಿರುವ ಮಾಹಿತಿಗಳ ವಿವರ, ಇ.ಎಂ.ಡಿ ಮತ್ತು ಷರತ್ತು ಮುಂತಾದ ವಿವರಗಳನ್ನು https://kppp.karnataka.gov.in ಹಾಗೂ ನಮ್ಮ ಸಂಸ್ಥೆಯ www.teccbmcri.karntaka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಿ. ಆಸಕ್ತಿಯುಳ್ಳ ಟೆಂಡರ್‌ದಾರರು https://kppp.karnataka.gov.in e-procurement portal ನಲ್ಲಿ ನೋಂದಾಯಿಸತಕ್ಕದ್ದು, ನೋಂದಾವಣೆಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ:	10/01/2024 ಅಪರಾಹ್ನ 4:00 ರ ನಂತರ
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ:	25/01/2024 ಅಪರಾಹ್ನ 4:00 ರ ಒಳಗಾಗಿ
ಟೆಂಡರ್‌ಗಳನ್ನು ತೆರೆಯುವ ದಿನಾಂಕ	27/01/2024 11.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ವಿಶೇಷಾಧಿಕಾರಿಗಳು, ಟ್ರಾಮಾಕೇರ್ ಕೇಂದ್ರ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

ಸಹಿ/–
ವಿಶೇಷಾಧಿಕಾರಿಗಳು,
ಟ್ರಾಮಾಕೇರ್ ಕೇಂದ್ರ

ವಾಸಾಸಂಇ/ವಾಪ್ರ/ಜಿಎ/2902/2023–24

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001,
ಫೋನ್: 080–22215601,22211246, ಫ್ಯಾಕ್ಸ್ : 080–22215602

ಸಂ. ಡಿವೈಇಎಸ್/ತಾಂಶಾಖೆ/67/2023–24 ದಿನಾಂಕ: 05.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಭಾರತ, ಇವರು, ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ತಂಗಲು ಅನುಕೂಲವಾಗುವಂತೆ ಸುಸಜ್ಜಿತವಾದ ಕ್ರೀಡಾ ವಸತಿ ನಿಲಯವನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸುವ ಯೋಜನೆಗೆ ಸಂಬಂಧಿಸಿದಂತೆ ವಹಿವಾಟು ಸಲಹೆಗಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಇ.ಎಂ.ಡಿ. ಮೊತ್ತ
1	ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ತಂಗಲು ಅನುಕೂಲವಾಗುವಂತೆ ಸುಸಜ್ಜಿತವಾದ ಕ್ರೀಡಾ ವಸತಿ ನಿಲಯುವನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸುವ ಯೋಜನೆಗೆ ಸಂಬಂಧಿಸಿದಂತೆ ವಹಿವಾಟು ಸಲಹೆಗಾರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ	ರೂ.1,00,000/–

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್ ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 16.01.2024 ಸಮಯ 16.00 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.01.2024 ಸಮಯ 16.30 ಗಂಟೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ–ನಿರ್ದೇಶಕರು (ಆಡಳಿತ),
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/2916/ಆಕಾರ್/2023–24

ಮಂಗಳೂರು ಮಹಾನಗರಪಾಲಿಕೆ

ಮಮಪಾ/ಇಇ/2023–24/ಇ.1 ದಿನಾಂಕ: 05.01.2024

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪ್ರೀಮಿಯಂ ಎಫ್.ಎ.ಆರ್ ಅನುದಾನದಲ್ಲಿ WORK INDENT NO. 11820, ಸಾಮಾನ್ಯ ಅನುದಾನದಲ್ಲಿ 12053, 12059, 12066 ಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 12.01.2024 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/1040/23-24 dt.06.01.2024

ಆಯುಕ್ತಾಲಯ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560 023.

ಸಂಖ್ಯೆ: ಹೆಚ್‌ಎಸ್/ಲೀ/04/2023–24 ದಿನಾಂಕ:06.01.2024

ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾನೂನು ಸಲಹೆಗಾರರು / ಸಮಾಲೋಚಕರ ಸೇವೆಯನ್ನು ಪಡೆಯಲು ಅರ್ಹ ವಕೀಲರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕಾನೂನು ಸಲಹೆಗಾರರು (Legal Advisor) ಹುದ್ದೆ–1	ಕೆ.ಎ.ಟಿ / ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ (ಕನಿಷ್ಠ 15ರಿಂದ 20 ವರ್ಷಗಳ ಅನುಭವ ಹೊಂದಿರಬೇಕು).
ಕಾನೂನು ಸಮಾಲೋಚಕರು (Legal Consultant) ಹುದ್ದೆ–2	ಕೆ.ಎ.ಟಿ / ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ (ಕನಿಷ್ಠ 3ರಿಂದ 10 ವರ್ಷಗಳ ಅನುಭವ ಹೊಂದಿರಬೇಕು).

ವಿದ್ಯಾರ್ಹತೆ, ಅನುಭವ ಹಾಗೂ ಇತರೆ ಮಾಹಿತಿಗಾಗಿ ಇಲಾಖೆಯ ಜಾಲತಾಣ https://hfwcom.karnataka.gov.in ನ್ನು ವೀಕ್ಷಿಸುವುದು.

ಸಹಿ/– ಆಯುಕ್ತರು,
ಆರೋಗ್ಯ ಮತ್ತು. ಕು.ಕ. ಸೇವೆಗಳು

ವಾಸಾಸಂಇ/ವಾಪ್ರ/ಜಿಎ/2909/2023–24

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831–2470342, 2470257
ಇ–ಮೇಲ್: belagavibuda@gmail.com

ಸಂಖ್ಯೆ:ಬೆನಪ್ರಾ/ಪಿಡಬ್ಲ್ಯೂಡಿ/ಇ–ಟೆಂಡರ್/2023–24/3536 ದಿನಾಂಕ: 05–01–2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಗಳನ್ವಯ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಯ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಆಸಕ್ತಿದಾರರು ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831–2470342) ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಮುಂಗಡ ಠೇವಣಿ
1	E-Auction for Deposit BUDA Fund for Maximum One Year Period (Only Nationalized Banks Should Participate)	BGMUDA/ 2023-24/ AUCTION15	ರೂ. 2,10,000/-

ಟೆಂಡರ್ ಫಾರ್ಮ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ:
1) ಆಕ್ಷನ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: 12–01–2024 ರಂದು ಸಾಯಂಕಾಲ 5.00 ಘಂಟೆವರೆಗೆ. 2) ಆಕ್ಷನ್‌ನಲ್ಲಿ ಭಾಗವಹಿಸುವ ಕೊನೆಯ ದಿನಾಂಕ: 22–01–2024 ರಂದು ಸಾಯಂಕಾಲ 5.00 ಘಂಟೆಗೆ. 3) ಆಕ್ಷನ್ ಪ್ರಾರಂಭ ದಿನಾಂಕ: 23–01–2024 ರಂದು ಮುಂಜಾನೆ 10.00 ಘಂಟೆಗೆ. 4) ಆಕ್ಷನ್ ಮುಕ್ತಾಯ ದಿನಾಂಕ: 24–01–2024 ರಂದು ಸಾಯಂಕಾಲ 5.00 ಘಂಟೆವರೆಗೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಸಹಿ/– ಆಯುಕ್ತರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ವಾಸಾಸಂಇ/ಬೆಳಗಾವಿ/893/ಅಡ್ವಟೋರ್/2023–24

ಅರಣ್ಯ ಕಾಮಗಾರಿಗಳಿಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ "Flexi-fund" ಲೆಕ್ಕಶೀರ್ಷಿಕೆಯಡಿಯಲ್ಲಿ ಭದ್ರಾವತಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮುತ್ತೋಡಿ, ಹೆಬ್ಬೆ, ಲಕ್ಕವಳ್ಳಿ ಮತ್ತು ತಣಿಗೆಬೈಲು ವನ್ಯಜೀವಿ ವಲಯಗಳಲ್ಲಿ ಒಟ್ಟು 292.14 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಲಂಟಾನ ಕಳೆ ನಿರ್ಮೂಲನೆ ಮಾಡಿ ಹುಲ್ಲುಗಾವಲು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 11–01–2024ರ ಅಪರಾಹ್ನ 3 ಗಂಟೆವರೆಗೆ ನಿಗದಿಪಡಿಸಲಾಗಿದೆ. ಒಟ್ಟು 51 ಕಾಮಗಾರಿಗಳನ್ನು ಮತ್ತು ಅವುಗಳ ಒಟ್ಟು ಟೆಂಡರ್ ಮೊತ್ತ ರೂ. 149.585 ಲಕ್ಷಗಳಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ.

ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಭದ್ರಾವತಿ ವಿಭಾಗ,
ಲೋಯರ್ ಹುತ್ತಾ, ಭದ್ರಾವತಿ –577301
Ph:08282-266355 Fax:08282-266647
Email: dcfbdvt@yahoo.in

ಸಂಖ್ಯೆ: ಎ2:ಪಿಯುಡಿ:ಟೆಂಡರ್.ಸಿ.ಆರ್–26/2023–24–9. Dt: 01.01.2024

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

2023–24ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗದ ವಿವಿಧ ವಲಯ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ:09–01–2024ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳ ಬಹುದಾಗಿರುತ್ತದೆ. ಕಾಮಗಾರಿಯ ಅಂದಾಜು ಮೊತ್ತ:–359.86875 ಲಕ್ಷಗಳು
*) ಮುಂಗಡ ಗುಂಡಿ ಹಾಗೂ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು:– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09.01.2024, ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 10.01.2024 4.30 PM ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 10.01.2024 05.30 PM

ಸಹಿ/– ಆಶೀಶ್ ರೆಡ್ಡಿ ಎಮ್.ವಿ (ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/29/01/23–24/1010

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJMTENDER23–24:2023–24/1923
ದಿನಾಂಕ:04.01.2024

1.ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:09/2023–24

(ಏಕ&ದ್ವಿ–ಲಕೋಟೆ ಪದ್ಧತಿ) – (kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.57.72 ಲಕ್ಷಗಳು. ಪೂರ್ವಭಾವಿ ಸಭೆ **ದಿನಾಂಕ:11.01.2024 ಸಮಯ :ಬೆಳಿಗ್ಗೆ 11:00 ಗಂಟೆಗೆ** (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ.&ನೈ ವಿಭಾಗ, ಮಂಡ್ಯ) ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ:16–01–2024 ಸಂಜೆ:5:00 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:17–01–2024 ಸಂಜೆ:05:05 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:20–01–2024 ಬೆಳಿಗ್ಗೆ: 11:00ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/431/2023–24

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ

ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು–09.
ದೂರವಾಣಿ: 080–22131430, Email ID: egovbangalorenorth@gmail.com

ಸಂಖ್ಯೆ: ಎಸ್‌ಎ(ಎ)/ಆರ್.ಬಿ.ಎಸ್.ಕೆ/01/2023–24 ದಿನಾಂಕ: 04.01.2024

ಇ–ಟೆಂಡರ್ ಪ್ರಕಟಣೆ

ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಿ ಅವರನ್ನು ದೈಹಿಕವಾಗಿ ಸದೃಡಗೊಳಿಸಲು ಮತ್ತು Strengthening for DEIC & Support for RBSK ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಡಿ.ಇ.ಐ.ಸಿ/ಆರ್.ಬಿ.ಎಸ್.ಕೆ ಕೇಂದ್ರಗಳ ಸೇವೆಯನ್ನು ಬಲವರ್ಧನೆಗೊಳಿಸುವ ಸಲುವಾಗಿ ಹೆಲ್ತ್‌ಕೇರ್ ಹಾಗೂ ಮೆಡಿಕಲ್ ಎಕ್ಯುಪ್‌ಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಲು ಇ–ಟೆಂಡರನ್ನು ಅರ್ಹ ಸಂಸ್ಥೆಗಳಿಂದ ಪ್ರಸ್ತಾವನೆ ಕೆಳಕಂಡಂತೆ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: https//kppp.karnataka.gov.in ಹಾಗೂ ಸಂಪರ್ಕಸಬಹುದಾದ ಮೊಬೈಲ್ ಸಂಖ್ಯೆ: 9448999428.

ವಿವರ ಹಾಗೂ ಟೆಂಡರಿನ ಸಂಖ್ಯೆ : 1) Kits for RBSK mobile health items - 23, 2) Therapy chairs for DEIC's - 02, 3) Refraction kits for RBSK MHT's - 23, 4) Equipments for DEIC's - 01, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.01.2024. **Reference No. : SSK/2023-24/IND0023**

ಸಹಿ/– ಉಪನಿರ್ದೇಶಕರು ಹಾಗೂ
ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸ.ಶಿ.ಕ, ಬೆಂಗಳೂರು ಉತ್ತರ ಜಿಲ್ಲೆ.

ವಾ.ಸಾ.ಸಂ.ಇ/ವಾಪ್ರ/2911/ಆಕಾರ್/2023–24

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ,

ಸಾರಿಗೆ ಇಲಾಖೆ TRANSPORT DEPARTMENT

ಯಲಹಂಕ,
ಬೆಂಗಳೂರು – 560064.

ಸಂ: ಪ್ರಾ.ಸಾ.ಅ/ಯ/ಕಟ್ಟಡ/ಟೆಂಡರ್/2023–24 ದಿನಾಂಕ: 05–01–2024

ಇ–ಟೆಂಡರ್ ಪ್ರಕಟಣೆ

ಯಲಹಂಕ ಪ್ರಾದೇಶಿಕ ಸಾರಿಗೆ ಕಛೇರಿಯು ಸರ್ವೆ ನಂ.111, ಸಿಂಗನಾಯಕನಹಳ್ಳಿ, ಯಲಹಂಕ, ಬೆಂಗಳೂರು–560 064 ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕಛೇರಿಗೆ ಸ್ವಚ್ಛತಾ (House Keeping) ನಿರ್ವಹಣೆಗೆ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲ ಮೂಲಕ ವೆಬ್‌ಸೈಟ್ ವಿಳಾಸ: https://kppp.karnataka.gov.in/ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: 080–41296235/41296261/42250402 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 29–01–2024 ರ ಸಂಜೆ 4:00 ಗಂಟೆ ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ದೂರವಾಣಿ ಸಂಖ್ಯೆ: 080–29729908/09/9449864050 ನ್ನು ಸಂಪರ್ಕಿಸಬಹುದು.

ಸಹಿ/–
ಪ್ರಾದೇಶಿಕ ಸಾರಿಗೆ ಅಧಿಕಾರಿಗಳು
ಯಲಹಂಕ, ಬೆಂಗಳೂರು–560 064.

ವಾಸಾಸಂಇ/ವಾಪ್ರ/2912/ಎಂಎಎ/2023–24

ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ,

ರನ್ನನಗರ, ತಿಮ್ಮಾಪೂರ–587122 ತಾ॥ ಮುಧೋಳ, ಜಿ॥ಬಾಗಲಕೋಟೆ
Email: rannasugartender@gmail.com M: 9341570141, 8147841817
GSTIN : 29AAAAR0428E1ZT PAN : AAAAR0428E

Ref: RSSKN/Lease/LROT/2023-24/371 Date: 05-01-2024

ತಿದ್ದುಪಡೆ ಅಲ್ಪಾವಧಿ ಟೆಂಡರ್ ಪ್ರಕಟಣೆ

ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ರನ್ನನಗರ, ತಿಮ್ಮಾಪೂರ. ತಾ: ಮುಧೋಳ, ಜಿ:ಬಾಗಲಕೋಟೆ ಇದರ ಅಲ್ಪಾವಧಿ ಟೆಂಡರ್ ಪ್ರಕಟಣೆ ಕ್ರಮಾಂಕ : Ref: RSSKN/Lease/LROT/2023-24/364 ದಿನಾಂಕ:01–01–2024 ರಲ್ಲಿ ಟೆಂಡರ್ ದಾಖಲಾತಿ ವಿವರ ಮತ್ತು ಇತರ ಷರತ್ತುಗಳು ಹಾಗೂ ನಿಭಂದನೆಗಳನ್ನು ನೋಡಲು ಅಥವಾ ಡೌನ್‌ಲೋಡ್ ಮಾಡಿಕೊಳ್ಳಲು: https://www.kppp.karnataka.gov.in Tender No : RSSKN/Lease/LROT/2023-24/364 ದಿನಾಂಕ:01–01–2024 ಇದ್ದು ಇದಕ್ಕೆ ತಿದ್ದುಪಡೆ ಮಾಡಿ Tender No: RSSKN /2023-24/SE0001 ದಿನಾಂಕ 03–01–2024 ಅಂತಾ ಓದಿಕೊಳ್ಳತಕ್ಕದ್ದು.
ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–
(ಮಲ್ಲಿಕಾರ್ಜುನ. ಬಿ. ಪೂಜಾರ)
ವ್ಯವಸ್ಥಾಪಕ ನಿರ್ದೇಶಕರು (ಪ್ರ)

ಸಹಿ/–
(ಸಂತೋಷ ಕಾಮಗೌಡ)
ವಿಶೇಷಾಧಿಕಾರಿಗಳು

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕರ್ನಾಟಕ ಸರ್ಕಾರ
ನಂ.55, 1ನೇ ಮಹಡಿ ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು–560020. ದೂರವಾಣಿ: 080–23460085

No: KSDB/Commr/CE/KC/KKRDB/2023-24/1320 Dated : 26/12/2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – ದ್ವಿ ಲಕೋಟೆ ಪದ್ಧತಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ (ಕೆಎಸ್‌ಡಿಬಿ) ಬೆಂಗಳೂರು ಇವರು **ಕಲಬುರಗಿ ಜಿಲ್ಲೆ, ಕಲಬುರಗಿ ತಾಲೂಕು, ಕೊತ್ತನೂರು ಗ್ರಾಮದ ಸರ್ವೆ ನಂ.57/1ರಲ್ಲಿ ಮೂಲಸೌಕರ್ಯ (ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು ಸಿಮೆಂಟ್ ಕಾಂಕ್ರೀಟ್ ಡ್ರೈನ್) ಒದಗಿಸುವ ಕಾಮಗಾರಿಗೆ** 1ನೇ ದರ್ಜೆಯ ನೋಂದಾಯಿತ ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದೆ. **ಟೆಂಡರ್‌ಗೆ ಇಟ್ಟ ಮೊತ್ತ: ರೂ.685.36 ಲಕ್ಷಗಳು. ಇಎಂಡಿ ಮೊತ್ತ : ರೂ.12.13 ಲಕ್ಷಗಳು** (ಜಿಎಸ್‌ಟಿ ಸೇರಿದಂತೆ). ಪೂರ್ಣಗೊಳಿಸುವ ಕಾಲಾವಧಿ: **6 ತಿಂಗಳು.**

ಟೆಂಡರ್ ಪ್ರಕ್ರಿಯೆಯ ವಿವರಗಳು	
ಪೂರ್ವ ಬಿಡ್ ಸಭೆಯ ಸಮಯ ಮತ್ತು ದಿನಾಂಕ	12.01.2024 ಸಂಜೆ 04:30 ಗಂಟೆಗೆ
ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	22.01.2024 ಸಂಜೆ 05:00 ಗಂಟೆಗೆ
ಟೆಂಡರ್ ದಾಖಲೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ಅರ್ಹತಾ ವಿವರಗಳು)	24.01.2024 ಬೆಳಗ್ಗೆ 11:00 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ಅರ್ಹ ಬಿಡ್‌ದಾರರ ದಿನಾಂಕ ಮತ್ತು ಸಮಯ	ಅರ್ಹತೆ ಗಳಿಸಿದವರಿಗೆ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು
ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಮತ್ತು ತೆರೆಯುವ ಸ್ಥಳ	ಮುಖ್ಯ ಅಭಿಯಂತರವರ ಕಚೇರಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, 55, 1ನೇ ಮಹಡಿ ಅಭಯ ಕಾಂಪ್ಲೆಕ್ಸ್, ರಿಸಾಲ್ದಾರ್ ಬೀದಿ, ಶೇಷಾದ್ರಿಪುರಂ, ಬೆಂಗಳೂರು-20 ದೂರವಾಣಿ: +91 80 2356 3504. ಇಮೇಲ್ ಐಡಿ: ksdbce@gmail.com Website: https://kppp.karnataka.gov.in

ಟೆಂಡರ್‌ನಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ಮಂಡಳಿಯ ವೆಬ್‌ಸೈಟ್ / ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ಟೆಂಡರ್ ದಸ್ತಾವೇಜಿನ ದರ, ಇ.ಎಂ.ಡಿ. ಮತ್ತು ಇತರೆ ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಲಭ್ಯವಿರುತ್ತವೆ. ಇ.ಎಂ.ಡಿ. ಮತ್ತು ಟೆಂಡರ್ ಪ್ರಕ್ರಿಯೆ ದರವನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಇ-ಪೇಮೆಂಟ್ ಮೋಡ್ ಮೂಲಕ ಮಾತ್ರ ಸಲ್ಲಿಸಬಹುದು. ಟೆಂಡರ್ ಅರ್ಜಿಗಳನ್ನು ನಿಗದಿಪಡಿಸಿದ ಟೆಂಡರ್ ಕಾಮಗಾರಿಯ ಇ.ಎಂ.ಡಿ ಹಣದ ಜೊತೆಗೆ ಸಲ್ಲಿಸಬೇಕು. ಇ.ಎಂ.ಡಿ ಅವಧಿ ಟೆಂಡರ್ ದಿನಾಂಕದ ಮಾನ್ಯತೆಯನ್ನು ಮೀರಿ 45 ದಿನಗಳವರೆಗೆ ಮಾನ್ಯವಾಗಿರಬೇಕು.

ಸಹಿ/– ಆಯುಕ್ತರು
ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.

DIPR/CP/RO2910/AAPL/2023-24

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಮಂಡ್ಯ–571401 email: eemimandya@gmail.com

ಸಂ.ಕಾಇಂ/ಮಂಡ್ಯ/ತಾಂಶಾ/ನೋಟಿಫಿಕೇಶನ್/2023–24/823 ದಿನಾಂಕ :03.01.2024

ಟೆಂಡರ್ ಮುಂದೂಡಿಕೆ ಪ್ರಕಟಣೆ–1 ದಿನಾಂಕ : 04.01.2024

ವಿಷಯ : ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ : 01/2023–24, ದಿನಾಂಕ : 01.01.2024ರ ಮುಂದೂಡಿಕೆ ಪ್ರಕಟಣೆ ಬಗ್ಗೆ.
ಉಲ್ಲೇಖ : 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 796 & 797 ದಿ: 02.01.2024
ಈ ಕಛೇರಿ ಟೆಂಡರ್ ಆಹ್ವಾನ ಸಂಖ್ಯೆ : 01/2023–24 ದಿನಾಂಕ: 01–01–2024 ರನ್ನು ಹೊರಡಿಸಲಾಗಿದ್ದು, ಅದರಂತೆ ಲೆಕ್ಕ ಶೀರ್ಷಿಕೆ 4702– ಅಣೆಕಟ್ಟು ಮತ್ತು ಪಿಕಪ್–ಪ್ರಧಾನ ಕಾಮಗಾರಿ (ಮಳೆಹಾನಿ) ಅಡಿಯಲ್ಲಿ ಕ್ರ.ಸಂ. 01 ರ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿ ಪ್ರಕಟಿಸಲಾಗಿದೆ.

ಕ್ರ ಸಂ	ವಿಷಯ	ಈ ಹಿಂದೆ ನಮೂದಿಸಿದ್ದಂತೆ	ಮುಂದೂಡಿರುವ ದಿನಾಂಕ
1	ಟೆಂಡರಿಗೆ ಸಂಬಂಧಿಸಿದಂತೆ ಕಛೇರಿಯಲ್ಲಿ ಮಾಹಿತಿ ಪಡೆಯಬಹುದಾದ ದಿನಾಂಕ	11.01.2024 ಕಛೇರಿ ವೇಳೆಯಲ್ಲಿ	12.01.2024 15.30 ಗಂಟೆವರೆಗೆ
2	ಅಂತರ್ಜಾಲದಲ್ಲಿ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ	12.01.2024 17.30 ಗಂಟೆವರೆಗೆ	17.01.2024 17.30 ಗಂಟೆವರೆಗೆ
3	ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ	16.01.2024 11.00 ಗಂಟೆಗೆ	19.01.2024 11.00 ಗಂಟೆಗೆ
4	ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ	18.01.2024 11.00 ಗಂಟೆಗೆ	22.01.2024 11.00 ಗಂಟೆಗೆ

ಇನ್ನುಳಿದಂತೆ ಮೂಲ ಟೆಂಡರ್ ಅಧಿಸೂಚನೆಯ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಕಾಮಗಾರಿಗಳಿಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಅಂತರ್ಜಾಲ **"www.eproc.karnataka.gov.in"** ನಲ್ಲಿ ಪಡೆಯಬಹುದಾಗಿರುತ್ತದೆ.
ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಇಂಜನಿಯರ್, ಸ.ನೀ. ಮತ್ತು ಅಂ.ಅ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/423'ಎ'/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬ್ಯಾಟರಾಯನಪುರ ವಿಭಾಗ, ಸಂಖ್ಯೆ 2152/20, ಡಿಫೆನ್ಸ್ ಕಾಲೋನಿ, ಬೆಂಗಳೂರು
ಜಲಮಂಡಳಿ ಟ್ಯಾಂಕ್ ರಸ್ತೆ, ಸಹಕಾರನಗರ, ಬೃ.ಬೆಂ.ಮ.ಪಾಲಿಕೆ ಕಚೇರಿ, ಬ್ಯಾಟರಾಯನಪುರ, ಬೆಂಗಳೂರು – 560 092

ಸಂಖ್ಯೆ: ಕಾಪಾಅ/ಬ್ಯಾಪು/ಬೃಬೆಂಮಪಾ/ಕೆಪಿಪಿಪಿ/14/2023–24 ದಿನಾಂಕ: 04.01.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ. **ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–4.**

ಕ್ರ ಸಂ	ಕಾಮಗಾರಿಗಳ ಹೆಸರು	ಇಎಂಡಿ (₹.ಲಕ್ಷಗಳಲ್ಲಿ)
1.	**ಪ್ಯಾಕೇಜ್ ಸಂ.01 (ಪ್ಯಾಕೇಜ್ 10 ಕಾಮಗಾರಿಗಳನ್ನು ಒಳಗೊಂಡಿದೆ ಟೆಂಡರಿಗಿಟ್ಟ ಮೊತ್ತ ರೂ.1000.00 ಲಕ್ಷಗಳು)** 1) ಹೊಸ ವಾರ್ಡ್ ಸಂಖ್ಯೆ–08 ಅಮೃತಹಳ್ಳಿಯ ಭುವನೇಶ್ವರಿ ನಗರ, ಮಾರುತಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 2) ಹೊಸ ವಾರ್ಡ್ ಸಂಖ್ಯೆ–08 ಅಮೃತಹಳ್ಳಿಯ ವಿವೇಕಾನಂದನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 3) ಹೊಸ ವಾರ್ಡ್ ಸಂಖ್ಯೆ–08 ಅಮೃತಹಳ್ಳಿಯ ವರದರಾಜ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 4) ಹೊಸ ವಾರ್ಡ್ ಸಂಖ್ಯೆ–08 ಅಮೃತಹಳ್ಳಿಯ ಅಮೃತಹಳ್ಳಿ ಕಾಲೋನಿ, ಸ್ನೇಹ ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 5) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ಮುನಿಸ್ವಾಮಿ ಗೌಡ ಬಡಾವಣೆ, ವಾಯುನಂದನ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 6) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ಪಂಪಾ ಎಕ್ಸ್‌ಟೆಂಷನ್ ಮುಖ್ಯ ಮತ್ತು ಅಡ್ಡರಸ್ತೆಗಳು, ಚಿರಂಜೀವಿ ಬಡಾವಣೆ, ಅಮೃತನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 7) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ವೆಂಕಟೇಗೌಡ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 8) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ಸಹಕಾರನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 9) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ಕರಿಯಣ್ಣ ಬಡಾವಣೆ, ಯೋಗೇಶ್ ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 10) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ಕಾಫಿ ಬೋರ್ಡ್ ಬಡಾವಣೆ, ಮರಿಯಣ್ಣಪಾಳ್ಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	15.00
2.	**ಪ್ಯಾಕೇಜ್ ಸಂ.02 (ಪ್ಯಾಕೇಜ್ 10 ಕಾಮಗಾರಿಗಳನ್ನು ಒಳಗೊಂಡಿದೆ ಟೆಂಡರಿಗಿಟ್ಟ ಮೊತ್ತ ರೂ.1000.00 ಲಕ್ಷಗಳು)** 1) ಹೊಸ ವಾರ್ಡ್ ಸಂಖ್ಯೆ–09 ಹೆಬ್ಬಾಳ ಕೆಂಪಾಪುರದ ಸಂಜೀವಿನಿನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 2) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟರಾಯನಪುರದ ಟೆಲಿಕಾಂ ಲೇಔಟ್, ಟೆನ್ನಿಸ್ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 3) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟರಾಯನಪುರದ ಲೇಕ್ ಶೋರ್ ಲೇಔಟ್, ಹನುಮಾನ್ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 4) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟರಾಯನಪುರದ ಎಪಿಸಿ ಬಡಾವಣೆ, ಮುನಿಸ್ವಾಮಪ್ಪ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 5) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟರಾಯ–ನಪುರದ ಸರ್. ಎಂ. ವಿ ಬಡಾವಣೆಯ ಕೊಡಿಗೆ ಎನ್‌ಕ್ಲೇವ್, ಸಿದ್ಧಿ ವಿನಾಯಕ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 6) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟ–ರಾಯನಪುರದ ಸುಮುಖ ಬಡಾವಣೆ, ಆಂಜನೇಯ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 7) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟರಾಯನಪುರದ 'ಜಿ' ಬ್ಲಾಕ್, ಸಿಕ್ಯೂಎಲ್ ಬಡಾವಣೆ, ಸಹಕಾರನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 8) ಹೊಸ ವಾರ್ಡ್ ಸಂಖ್ಯೆ–10 ಬ್ಯಾಟರಾಯನಪುರದ ಸಹಕಾರನಗರ, ಅಯ್ಯಪ್ಪ ದೇವಸ್ಥಾನ ರಸ್ತೆ, ಶಬರಿ ನಗರ ಮತ್ತು ಬ್ಯಾಟರಾಯನಪುರ ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 9) ಹೊಸ ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಗಣೇಶ ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 10) ಹೊಸ ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಕೊಡಿಗೇಹಳ್ಳಿ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು.	15.00
3.	**ಪ್ಯಾಕೇಜ್ ಸಂ.03 (ಪ್ಯಾಕೇಜ್ 08 ಕಾಮಗಾರಿಗಳನ್ನು ಒಳಗೊಂಡಿದೆ ಟೆಂಡರಿಗಿಟ್ಟ ಮೊತ್ತ ರೂ.1500.00 ಲಕ್ಷಗಳು)** 1) ಹೊಸ ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಅಮ್‌ಕೋ ಬಡಾವಣೆ, ಎನ್‌ಟಿಐ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 2) ಹೊಸ ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಭದ್ರಪ್ಪ ಬಡಾವಣೆ, ಮಾರುತಿನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 3) ಹೊಸ ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಬಾಲಾಜಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 4) ಹೊಸ ವಾರ್ಡ್ ಸಂಖ್ಯೆ–11 ಕೊಡಿಗೇಹಳ್ಳಿಯ ಲೊಟ್ಟೆಗೊಲ್ಲಹಳ್ಳಿ, ದೇವಿನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಚರಂಡಿಗಳ ಸುಧಾರಣೆ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. 5) ಹೊಸ ವಾರ್ಡ್ ಸಂಖ್ಯೆ–12 (ದೊಡ್ಡಬೊಮ್ಮಸಂದ್ರ)ದ ದೇಶಬಂಧುನಗರ, ಯರಪ್ಪ ಗಾರ್ಡನ್, ಕೃಷ್ಣ ದೇವಸ್ಥಾನ ಸುತ್ತಮುತ್ತ, ದೊಡ್ಡಬೊಮ್ಮಸಂದ್ರ ಗ್ರಾಮ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. 6) ಹೊಸ ವಾರ್ಡ್ ಸಂಖ್ಯೆ–12 (ದೊಡ್ಡಬೊಮ್ಮಸಂದ್ರ)ದ ಕಾಳಪ್ಪ ಬಡಾವಣೆ, ಮುನೇಶ್ವರ ಬಡಾವಣೆ, ಭೈರಪ್ಪ ಗಾರ್ಡನ್, ಚಿಕ್ಕಚನ್ನಪ್ಪ ಬಡಾವಣೆ, ಕೆಂಪಣ್ಣ ಬಡಾವಣೆ, ಗಂಗಮ್ಮ ಗುಡಿ ಮತ್ತು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. 7) ಹೊಸ ವಾರ್ಡ್ ಸಂಖ್ಯೆ–13 (ವಿದ್ಯಾರಣ್ಯಪುರ)ದ ಬಿಇಎಲ್ ಬಡಾವಣೆಯ 1, 3, 5, 6ನೇ ಬ್ಲಾಕ್, ಎನ್‌ಟಿಐ ಬಡಾವಣೆ, ಹೆಚ್‌ಎಂಟಿ ಬಡಾವಣೆಯ 4, 5, 6ನೇ ಬ್ಲಾಕ್, ಅನ್ನಪೂರ್ಣೇಶ್ವರಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. 8) ಹೊಸ ವಾರ್ಡ್ ಸಂಖ್ಯೆ–13 (ವಿದ್ಯಾರಣ್ಯಪುರ)ದ ಬಸವಸಮಿತಿ, ಜ್ಞಾನೇಶ್ವರಿ ಬಡಾವಣೆ, ಗುರು ದರ್ಶನ ಬಡಾವಣೆ, ಸಪ್ತಗಿರಿ ಬಡಾವಣೆ, ವೆಂಕಟಸ್ವಾಮಪ್ಪ ಬಡಾವಣೆ, ಚಾಮುಂಡೇಶ್ವರಿ ಬಡಾವಣೆ, ನಂಜಪ್ಪ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು.	15.00
4.	**ಪ್ಯಾಕೇಜ್ ಸಂ.04 (ಪ್ಯಾಕೇಜ್ 04 ಕಾಮಗಾರಿಗಳನ್ನು ಒಳಗೊಂಡಿದೆ ಟೆಂಡರಿಗಿಟ್ಟ ಮೊತ್ತ ರೂ.1000.00 ಲಕ್ಷಗಳು)** 1) ಹೊಸ ವಾರ್ಡ್ ಸಂಖ್ಯೆ–14 (ಕುವೆಂಪುನಗರ)ದ ಸಿಂಹಾದ್ರಿ ಬಡಾವಣೆ, ಮುನಿಸ್ವಾಮಪ್ಪ ಬಡಾವಣೆ, ಸಿಂಗಾಪುರ, ಸಿಂಗಾಪುರ ಬಡಾವಣೆ, ಎಕ್ಸ್‌ಪ್ರೆಸ್ ಬಡಾವಣೆ, ಲಕ್ಕಪ್ಪ ಬಡಾವಣೆ, ಸಿಂಗಾಪುರ ಗಾರ್ಡನ್, ಸಿಂಗಾಪುರ ಪ್ಯಾರಡೈಸ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. 2) ಹೊಸ ವಾರ್ಡ್ ಸಂಖ್ಯೆ–14 (ಕುವೆಂಪುನಗರ)ದ ವರದರಾಜನಗರದ 1 & 2ನೇ ಹಂತ, ನಾಯ್ಡು ಬಡಾವಣೆ, ಹೆಚ್‌ವಿವಿ ವ್ಯಾಲಿ, ಕುವೆಂಪುನಗರ 1 ಮತ್ತು 2ನೇ ಹಂತ, ಹೊಸಬಾಳುನಗರ, ಚಂದ್ರಪ್ಪ ಬಡಾವಣೆ, ಭಾರತ್‌ನಗರ, ವಿನಾಯಕನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. 3) ಹೊಸ ವಾರ್ಡ್ ಸಂಖ್ಯೆ–14 (ಕುವೆಂಪುನಗರ)ದ ಗಣೇಶ ಬಡಾವಣೆ, ಎಂಎಸ್ ಪಾಳ್ಯ, ರಾಘವೇಂದ್ರ ಕಾಲೋನಿ, ಡಿಫೆನ್ಸ್ ಬಡಾವಣೆ, ಬಾಲಾಜಿ ಬಡಾವಣೆ, ಶ್ರೀನಿಧಿ ಬಡಾವಣೆ, ಟೀಚರ್ಸ್ ಬಡಾವಣೆ, ರಾಮಚಂದ್ರಪುರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು. 4) ಬ್ಯಾಟರಾಯನಪುರ ಕ್ಷೇತ್ರದಲ್ಲಿ ಶಕ್ತಿ ವರ್ಧಿತ ಎಲ್‌ಇಡಿ ಬೀದಿ ದೀಪಗಳು ಮತ್ತು ಸಲಕರಣೆಗಳನ್ನು ಒದಗಿಸುವುದು.	15.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 23.01.2024ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, (ಬ್ಯಾಟರಾಯನಪುರ ವಿಭಾಗ) ಇಲ್ಲಿ ದಿನಾಂಕ 16.01.2024ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (3) ಬಿಡ್‌ಗಳನ್ನು ದಿನಾಂಕ 25.01.2024ರ ಬೆಳಿಗ್ಗೆ 11:00 ಗಂಟೆಯ ನಂತರ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಬ್ಯಾಟರಾಯನಪುರ ವಿಭಾಗ

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್)

ಜಿಲ್ಲಾ ಆಯುಷ್ ಕಛೇರಿ, ಗದಗ
(ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ) ಸಂಪರ್ಕಿಸಬೇಕಾದ ವಿಳಾಸ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೆಲ್ತ್ ಕ್ಯಾಂಪ್ ಬೆಟಗೇರಿ–ಗದಗ 582102
ಇ–ಮೇಲ್ : dao.gadag09@gmail.com
ಸಂಖ್ಯೆ: No:DAOG/E-Proc/03/Medicine/2023-24 Date: 03-01-2024

ಇ–ಟೆಂಡರ್ ಅಧಿಸೂಚನೆ

ಜಿಲ್ಲಾ ಆಯುಷ್ ಅಧಿಕಾರಿಗಳು ಗದಗ ರವರ ಅಧೀನದಲ್ಲಿ ಬರುವ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಔಷಧಿಗಳನ್ನು ಖರೀದಿಸಲು ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಇ–ಟೆಂಡರ್ ಪ್ರಕ್ರಿಯೆಯ ವೇಳಾ ಪಟ್ಟಿ : (1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿನಾಂಕ : **03–01–2024** ಸ್ಥಳ ಇ–ಪೋರ್ಟಲ್ (2) ಇ–ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **18–01–2024** ಸ್ಥಳ ಇ–ಪೋರ್ಟಲ್ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **22–01–2024** ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಹೆಲ್ತ್ ಕ್ಯಾಂಪ್ ಬೆಟಗೇರಿ–ಗದಗ (4) ಆರ್ಥಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ : **24–01–2024** ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ಹೆಲ್ತ್ ಕ್ಯಾಂಪ್ ಬೆಟಗೇರಿ–ಗದಗ

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾ ಆಯುಷ್ ಕಛೇರಿ, ಹೆಲ್ತ್ ಕ್ಯಾಂಪ್,
ಬೆಟಗೇರಿ–ಗದಗ 582102

ವಾಸಾಸಂಇ/ಗದಗ/ಕೆಎಸ್‌ಎಂಸಿಎ/437/2023–24

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ
ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್(MDTC), ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ,
ಬೆಂಗಳೂರು–560 016, ಕರ್ನಾಟಕ, ದೂರವಾಣಿ: 080-2565 0285, E-mail: kvicbang@gmail.com

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಎಂಡಿಟಿಸಿ ವತಿಯಿಂದ ಸ್ವಯಂ ಉದ್ಯೋಗ ಕಾರ್ಯಕ್ರಮಗಳ ತರಬೇತಿಗಾಗಿ ಅರ್ಜಿ ಆಹ್ವಾನ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್ ವತಿಯಿಂದ, ನಿರುದ್ಯೋಗಿ ಯುವಕರು, ಗೃಹಿಣಿಯರು, ಸ್ವ–ಸಹಾಯ ಗುಂಪು ಇತ್ಯಾದಿಗಳಿಂದ ಈ ಕೆಳಗಿನ ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾರ್ಯಕ್ರಮದ ಹೆಸರು	ಅವಧಿ	ಶುಲ್ಕ (ರೂ)
1	ಟೈಲರಿಂಗ್ & ಎಂಬ್ರಾಯಿಡರಿ	3 ತಿಂಗಳು	3,000/–
2	ಬ್ಯೂಟಿಷಿಯನ್ ತರಬೇತಿ	1 ತಿಂಗಳು	2,500/–
3	ಕಂಪ್ಯೂಟರ್ ಬೇಸಿಕ್ ತರಬೇತಿ	1 ತಿಂಗಳು	2,000/–
4	ಡಿಟರ್ಜಂಟ್ ಕೇಕ್ ಮತ್ತು ಪೌಡರ್	10 ದಿನಗಳು	2,000/–
5	ಪೇಪರ್ ಆರ್ಟಿಕಲ್ ತಯಾರಿಕೆ	10 ದಿನಗಳು	1,000/–
6	ಮನೆಯ ರಾಸಾಯನಿಕ ಉತ್ಪನ್ನಗಳು	5 ದಿನಗಳು	1,000/–
7	ಹಣ್ಣುಗಳು ಮತ್ತು ತರಕಾರಿ ಸಂಸ್ಕರಣೆ	10 ದಿನಗಳು	2,000/–
8	ಖಾದಿ ಪ್ರಾಕೃತಿಕ ಬಣ್ಣಗಳ ತಯಾರಿಕೆ (ಗೊಬ್ಬರ ಪೈಂಟ್)	5 ದಿನಗಳು	2,000/–
9	ಆರಿ ಎಂಬ್ರಾಯಿಡರಿ	5 ದಿನಗಳು	1,000/–
10	ಜೇನು ಸಾಕಾಣಿಕೆ ಕೋರ್ಸ್	5 ದಿನಗಳು	500/–
11	ಬೇಕರಿ ಹವ್ಯಾಸ ಕೋರ್ಸ್	5 ದಿನಗಳು	1,000/–

ಅಣತ್ಯದ ಆಧಾರದ ಮೇಲೆ ಇತರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಸಹ ಲಭ್ಯವಿದೆ. ಆಸಕ್ತ ಅಭ್ಯರ್ಥಿಗಳು ನೇರವಾಗಿ ಅಥವಾ ದೂರವಾಣಿ ಸಂಖ್ಯೆ: 080–25650285, 9449354126, 8299377420 ಅನ್ನು ಸಂಪರ್ಕಿಸಬಹುದು. SC/ST/BPL/PH ಅಭ್ಯರ್ಥಿಗಳಿಗೆ ಮಾತ್ರ ಶುಲ್ಕದಲ್ಲಿ ರೂ. 150/– ರಿಯಾಯಿತಿ ನೀಡಲಾಗುವುದು. ತರಬೇತಿ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿದ ನಂತರ, ತರಬೇತಿ ಪಡೆದವರಿಗೆ ಭಾರತ ಸರ್ಕಾರದ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ ಮತ್ತು ಯೋಜನಾ ವೆಚ್ಚದೊಂದಿಗೆ ಸ್ವಂತ ಉದ್ಯಮವನ್ನು ಸ್ಥಾಪಿಸಲು 15% ರಿಂದ 35% ರಷ್ಟು ಮಾರ್ಜಿನ್ ಹಣ (ಸಬ್ಸಿಡಿ) ಯೊಂದಿಗೆ PMEGP ಯೋಜನೆಯಡಿ ರೂ. 20 ಲಕ್ಷದಿಂದ ರೂ. 50 ಲಕ್ಷದವರೆಗೆ ಹಣಕಾಸಿನ ನೆರವು ಪಡೆಯಲು ಮಾರ್ಗದರ್ಶನ ನೀಡಲಾಗುತ್ತದೆ. **ವಿವಿಧ ಕೌಶಲ್ಯಾಭಿವೃದ್ಧಿ ವಲಯಗಳಲ್ಲಿ ಸಾಕಷ್ಟು ಬೋಧನಾ ಅನುಭವ ಹೊಂದಿರುವ ತರಬೇತುದಾರರು / ಪ್ರದರ್ಶಕರು ಸಹ ಸ್ಥಳೀಯ ಕೌಶಲ್ಯ ತರಬೇತುದಾರರಾಗಿ ನೇಮಕಗೊಳ್ಳಲು ಸಂಪರ್ಕಿಸಬಹುದು.** ಹೆಚ್ಚಿನ ಮಾಹಿತಿಯನ್ನು www.kvic.org.in & e-mail: kvicbang@gmail.com ದಿಂದ ಪಡೆದುಕೊಳ್ಳಬಹುದು.

ಸಹಿ/– ನಿರ್ದೇಶಕರು / ಪ್ರಾಂಶುಪಾಲರು

ಕಳೆದುಕೊಂಡಿದ್ದ ಏರ್‌ಪಾಡ್ 'ಎಕ್ಸ್' ಮೂಲಕ ಪತ್ತೆ

ಬೆಂಗಳೂರು (ಪಿಟಿಐ): ಮುಂಬೈ ಮೂಲದ ನಿಖಿಲ್ ಜೈನ್ ಎಂಬವರು ಕೇರಳ ಪ್ರವಾಸದಲ್ಲಿದ್ದ ವೇಳೆ ಕಳೆದುಕೊಂಡಿದ್ದ ದುಬಾರಿ ಬೆಲೆಯ ಏರ್‌ಪಾಡ್ ಅನ್ನು ಸಾಮಾಜಿಕ ಜಾಲತಾಣ 'ಎಕ್ಸ್' ಸಹಾಯ ಪಡೆದು ಪತ್ತೆ ಮಾಡಿರುವ ಅಚ್ಚರಿಯ ಘಟನೆ ನಡೆದಿದೆ.

ಈ ಬಗ್ಗೆ ಸ್ವತಃ ಜೈನ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಕೇರಳದ ರಾಷ್ಟ್ರೀಯ ಉದ್ಯಾನವನವೊಂದರ ಬಸ್‌ನಲ್ಲಿ ಏರ್‌ಪಾಡ್ ಕಳೆದುಕೊಂಡಿದ್ದೆ. ಇದು ತಿಳಿಯುತ್ತಿದ್ದಂತೆಯೇ ವಾಪಸ್ ಅದೇ ಸ್ಥಳಕ್ಕೆ ಬಂದು ನೋಡಿದಾಗ ಬೇರೊಬ್ಬರು ಅದನ್ನು ತೆಗೆದುಕೊಂಡು ಹೋಗಿದ್ದರು. ನಂತರ ಅದರ ಲೊಕೇಷನ್ ಜಾಡು ಹಿಡಿದು ಹುಡುಕಾಟ ನಡೆಸಿದಾಗ ಹತ್ತಿರದ ಹೋಟೆಲ್‌ವೊಂದರಲ್ಲಿ ಇರುವ ಸುಳಿವು ಲಭ್ಯವಾಗಿತ್ತು. ಪೊಲೀಸರ ನೆರವಿನೊಂದಿಗೆ ಹೋಟೆಲ್‌ನಲ್ಲಿ ವಿಚಾರಣೆ ನಡೆಸಿದೆ. ಆದರೆ ನಿರ್ದಿಷ್ಟ ಲೊಕೇಷನ್ ಲಭ್ಯವಾಗದ ಕಾರಣ ಆ ಪ್ರಯತ್ನವೂ ವಿಫಲವಾಯಿತು' ಎಂದು ಜೈನ್ ತಿಳಿಸಿದ್ದಾರೆ.

'ನಂತರ ಏರ್‌ಪಾಡ್ ತೆಗೆದುಕೊಂಡ ವ್ಯಕ್ತಿ ಮಂಗಳೂರು ಮೂಲಕ ಗೋವಾ ತಲುಪಿ ಅಲ್ಲಿನ ಹೋಟೆಲ್‌ವೊಂದರಲ್ಲಿ ಇರುವ ಸುಳಿವು ಲಭ್ಯವಾಯಿತು. ಏರ್‌ಪಾಡ್ ವಿವರಗಳೊಂದಿಗೆ 'ಎಕ್ಸ್'ನಲ್ಲಿ ಸಂದೇಶವನ್ನು ಹಂಚಿಕೊಂಡೆ. ನೆಟ್ಟಿಗರೊಬ್ಬರ ಸಹಾಯದಿಂದ ಏರ್‌ಪಾಡ್ ಇರುವ ನಿರ್ದಿಷ್ಟ ಲೊಕೇಷನ್ ಮತ್ತು ಅದನ್ನು ತೆಗೆದುಕೊಂಡಿದ್ದ ವ್ಯಕ್ತಿಯನ್ನು ಪತ್ತೆ ಮಾಡಲು ಸಾಧ್ಯವಾಯಿತು. ಏರ್‌ಪಾಡ್ ತೆಗೆದುಕೊಂಡಿದ್ದ ವ್ಯಕ್ತಿ ಡಿ. 22ರಂದು ಮಡಗಾವ್ ಪೊಲೀಸ್ ಠಾಣೆಯಲ್ಲಿ ಅದನ್ನು ಕೊಟ್ಟು ತೆರಳಿದ್ದರು. ಸ್ನೇಹಿತರೊಬ್ಬರ ಸಹಾಯದಿಂದ ಅದು ಕಳೆದ ರಾತ್ರಿ ನನ್ನ ಕೈಸೇರಿತು' ಎಂದು ಅವರು ಹೇಳಿದ್ದಾರೆ.

'ಎಕ್ಸ್' ಮೂಲಕ ಪತ್ತೇದಾರಿ ಕೆಲಸ ಮಾಡಿದ ಜೈನ್ ಅವರ ಕಾರ್ಯಕ್ಕೆ ಸಾಮಾಜಿಕ ಜಾಲತಾಣದ ಬಳಕೆದಾರರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಜೈನ್ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದ ಮೂಲ ಸಂದೇಶವು ಈವರೆಗೆ 12 ಲಕ್ಷ ವೀಕ್ಷಣೆ ಪಡೆದಿದೆ.

'ಜೈಲಿನಲ್ಲೇ ಸಾಯಲು ಬಿಡಿ'



ನರೇಶ್ ಗೋಯಲ್

ಮುಂಬೈ (ಪಿಟಿಐ): 'ಜೀವನದ ಕುರಿತು ಭರವಸೆಯನ್ನೇ ಕಳೆದುಕೊಂಡಿದ್ದೇನೆ. ನಾನು ಈ ಸ್ಥಿತಿಯಲ್ಲಿ ಬದುಕಿರುವುದಕ್ಕಿಂತ ಜೈಲಿನಲ್ಲೇ ಸಾಯುವುದು ಉತ್ತಮ'. ಹೀಗೆಂದು ಜೆಟ್ ಏರ್‌ವೇಸ್ ಸಂಸ್ಥಾಪಕ ನರೇಶ್ ಗೋಯಲ್ ಅವರು ವಿಶೇಷ ನ್ಯಾಯಾಲಯವೊಂದರಲ್ಲಿ ಹೇಳಿದರು.

ಕೆನರಾ ಬ್ಯಾಂಕ್‌ಗೆ ₹538 ಕೋಟಿ ವಂಚಿಸಿದ ಆರೋಪ ಮೇಲೆ ಅವರನ್ನು ಕಳೆದ ವರ್ಷ ಸೆ. 1ರಂದು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿತ್ತು.

ಮುಂಬೈನ ಆರ್ಥರ್ ಜೈಲಿನಲ್ಲಿ ನ್ಯಾಯಾಂಗ ವಶದಲ್ಲಿರುವ ಅವರು, ಕಳೆದ ತಿಂಗಳು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆಗಾಗಿ ಅವರನ್ನು ವಿಶೇಷ ನ್ಯಾಯಾಲಯದಲ್ಲಿ ಶನಿವಾರ ಹಾಜರುಪಡಿಸಲಾಗಿತ್ತು.

ನ್ಯಾಯಾಧೀಶರ ಎದುರು ಕೈಕಟ್ಟಿ ದುಃಖತಪ್ತರಾಗಿ ಮಾತನಾಡಿದ ಅವರು, ತಮ್ಮ ಆರೋಗ್ಯ ಸ್ಥಿರವಾಗಿಲ್ಲ. ಪತ್ನಿಯು ಅಂತಿಮ ಹಂತದ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಹಾಸಿಗೆ ಹಿಡಿದಿದ್ದಾರೆ. ಮಗಳೂ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ತಮಗೆ ಸಹಾಯ ಮಾಡಲು ಜೈಲಿನ ಸಿಬ್ಬಂದಿಗೆ ಮಿತಿಗಳಿವೆ ಎಂದರು.

'ಆರೋಗ್ಯ ತಪಾಸಣೆಗಾಗಿ ನನ್ನನ್ನು ಜೆಜೆ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ. ಅಲ್ಲಿ ದೀರ್ಘ ಅವಧಿಗೆ ಸರದಿಯಲ್ಲಿ ಕಾದುನಿಲ್ಲಲೂ ಶಕ್ತಿ ಇಲ್ಲ. ತಪಾಸಣೆಗಾಗಿ ಪದೇಪದೇ ಆಸ್ಪತ್ರೆಗೆ ಹೋಗುವುದು ದುಸ್ತರ. ಜೆಜೆ ಆಸ್ಪತ್ರೆಗೆ ಕರೆದೊಯ್ಯುವ ಬದಲು ಜೈಲಿನಲ್ಲೇ ಸಾಯಲು ಬಿಡಿ' ಎಂದು ಹೇಳಿದರು. ಬಳಿಕ ನ್ಯಾಯಾಲಯವು ವಿಚಾರಣೆಯನ್ನು ಜ.16ಕ್ಕೆ ನಿಗದಿಪಡಿಸಿತು.

ಬಿಲ್ಕಿಸ್ ಬಾನು ಪ್ರಕರಣ: ತೀರ್ಪು ನಾಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಮಂದಿ ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿದ್ದನ್ನು ಪ್ರಶ್ನಿಸಿದ್ದ ಅರ್ಜಿಗಳ ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಇದೇ 8ರಂದು ಪ್ರಕಟಿಸಲಿದೆ.

ಬಿಲ್ಕಿಸ್ ಬಾನು ಮತ್ತು ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ನ್ಯಾಯಪೀಠವು ಅಕ್ಟೋಬರ್ 12ರಂದು ತೀರ್ಪನ್ನು ಕಾಯ್ದಿರಿಸಿತ್ತು.



ಅಪರಾಧಿಗಳ ಕೃತ್ಯವು ಘೋರ ಎಂದು ಅಭಿಪ್ರಾಯ ಪಟ್ಟಿದ್ದ ನ್ಯಾಯಪೀಠವು, 'ಈ ಪ್ರಕರಣದಲ್ಲಿ ನಾವು ಭಾವನೆಗಳ ಆಧಾರದಲ್ಲಿ ಯಾವುದೇ ನಿರ್ಣಯ ಕೈಗೊಳ್ಳುವುದಿಲ್ಲ. ಎಲ್ಲವನ್ನೂ ಕಾನೂನಿನ ಅಡಿಯಲ್ಲೇ ತೀರ್ಮಾನಿಸಲಿದ್ದೇವೆ' ಎಂದು ಹೇಳಿತ್ತು. ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಅವರು ನಿವೃತ್ತರಾಗುವವರೆಗೆ ಅವರ ನೇತೃತ್ವದ ನ್ಯಾಯಪೀಠವು ಈ ಪ್ರಕರಣದ ವಿಚಾರಣೆಯನ್ನು ನಡೆಸಿತ್ತು.

ಬಿಲ್ಕಿಸ್ ಬಾನು ಅವರಲ್ಲದೆ ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್, ಲಖನೌ ವಿಶ್ವವಿದ್ಯಾಲಯದ ಮಾಜಿ ಕುಲಪತಿ ರೂಪ್ ರೇಖಾ ವರ್ಮಾ, ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರೂ ಅಪರಾಧಿಗಳ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಬಾಂಗ್ಲಾದೇಶ: ಇಂದು ಸಾರ್ವತ್ರಿಕ ಚುನಾವಣೆ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಪ್ರಮುಖ ವಿರೋಧ ಪಕ್ಷ ಕರೆ ನೀಡಿರುವ 48 ತಾಸುಗಳ ರಾಷ್ಟ್ರವ್ಯಾಪಿ ಮುಷ್ಕರ, ಹಿಂಸಾಚಾರದ ನಡುವೆ ಭಾನುವಾರ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಪ್ರಧಾನಿ ಶೇಖ್ ಹಸೀನಾ ಸತತ ನಾಲ್ಕನೇ ಅವಧಿಗೆ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ವಿರೋಧ ಪಕ್ಷ ಬಿಎನ್‌ಪಿ ಚುನಾವಣೆಯನ್ನು ಬಹಿಷ್ಕರಿಸಿ, ಶನಿವಾರದಿಂದಲೇ ಎರಡು ದಿನ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿದೆ.

27 ರಾಜಕೀಯ ಪಕ್ಷಗಳು 1,500ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. 436 ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ದೇಶದಾದ್ಯಂತ 42 ಸಾವಿರ ಮತಗಟ್ಟೆ ತೆರೆಯಲಾಗಿದ್ದು, ಒಟ್ಟು 11.96 ಕೋಟಿ ಮತದಾರರು ಮತ ಚಲಾಯಿಸಲಿದ್ದಾರೆ.

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 7 ಜನವರಿ 2024



ಬೆಳ್ಳಿ ಬೆಳಕಿನಲ್ಲಿ ‘ಅಭಿನೇತ್ರಿ’ 9



ಕಳೆದ ಕಾಲದ ಸಾಕ್ಷಿ 11

ಒಂಟಿತನವೆಂಬ ಕುಣಿಕೆ


ನಡಹಳ್ಳಿ ವಸಂತ್

ಅಮೆರಿಕದ ಕೊಯೊಟೆ ಬುಡಕಟ್ಟು ಜನಾಂಗದವರಲ್ಲಿ ಒಂದು ವಿಶಿಷ್ಟ ಪದ್ಧತಿಯಿದೆ. ತಮ್ಮವರಲ್ಲಿ ಒಬ್ಬರಿಗೆ ಕಾಯಿಲೆಯಾದಾಗ ಎಲ್ಲರೂ ಅವನನ್ನು ಸುತ್ತುವರೆದು ಧನ್ಯವಾದಗಳನ್ನು ಹೇಳುತ್ತಾ ತಮ್ಮ ಬದುಕಿನ ರೀತಿಯನ್ನು ಚರ್ಚೆ ಮಾಡುತ್ತಾರೆ. ಗುಂಪಿನ ಒಬ್ಬನಿಗೆ ಆದ ಕಾಯಿಲೆ ಇಡೀ ಗುಂಪು ಬದುಕುತ್ತಿರುವ ರೀತಿಯಲ್ಲಿಯೇ ಇರುವ ಕೊರತೆಯನ್ನು ಸೂಚಿಸುತ್ತದೆ ಎನ್ನುವುದು ಅವರ ತಿಳಿವಳಿಕೆ. ಮೇಲುನೋಟಕ್ಕೆ ಇದು ಹಾಸ್ಯಾಸ್ಪದ ಎನ್ನಿಸಬಹುದು. ಆದರೆ ವ್ಯಕ್ತಿಯನ್ನು ಮತ್ತು ಅವನ ಮನೋದೈಹಿಕ ಸ್ಥಿತಿಗತಿಗಳನ್ನು ಸುತ್ತಲಿನ ಪರಿಸರದಿಂದ ಬೇರ್ಪಡಿಸಲಾಗುವುದಿಲ್ಲ ಎಂದು 2,600 ವರ್ಷಗಳ ಹಿಂದೆಯೇ ಬುದ್ಧ ಹೇಳಿದ್ದ. ಇದು ಸಂಪೂರ್ಣ ಸತ್ಯ ಎಂದು ಇವತ್ತಿನ ನರವಿಜ್ಞಾನದ ಸಂಶೋಧನೆಗಳೆಲ್ಲಾ ಸಾರಿಸಾರಿ ಹೇಳುತ್ತಿವೆ.

ಈ ಹಿನ್ನೆಲೆಯಲ್ಲಿ ಚಿತ್ರದುರ್ಗದ ಪಾಳುಬಿದ್ದ ಮನೆಯೊಂದರಲ್ಲಿ ಐದು ಜನರ ಅಸ್ಥಿಪಂಜರಗಳು ಪತ್ತೆಯಾದ ದುರಂತದ ಘಟನೆಯ ಸಾಮಾಜಿಕ ಆಯಾಮಗಳನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಪೊಲೀಸರ ತನಿಖೆ ನಡೆಯುತ್ತಿದ್ದರೂ ಅದು ಕಾನೂನಿನ ಅಗತ್ಯಗಳನ್ನು ಮಾತ್ರ ದೃಷ್ಟಿಕೋನದಲ್ಲಿಟ್ಟುಕೊಂಡಿರುತ್ತದೆ. ಸಾವಿನ ಸಾಮಾಜಿಕ

> ಚಿತ್ರದುರ್ಗದಲ್ಲಿ ಒಂದೇ ಕುಟುಂಬದ ಐವರ ಅಸ್ಥಿಪಂಜರ ಸಿಕ್ಕಿದೆ. ಸಮಾಜದಿಂದ ಸಂಪೂರ್ಣ ತೊಡೆದುಕೊಂಡಂತೆ ಬದುಕಿದ ಕುಟುಂಬವೊಂದರ ಈ ದಾರುಣ ಕಥನವು ಕಾಲವು ಸೃಷ್ಟಿಸಿರುವ ಏಕಾಂಗಿತನದ ಸೂಕ್ಷ್ಮಗಳನ್ನು ತಡವಿನೋಡಲು ಇಂಬುನೀಡಿದೆ.

ಆಯಾಮಗಳು ತನಿಖೆಯ ವ್ಯಾಪ್ತಿಗೆ ಬರುವುದಿಲ್ಲ. ಇಡೀ ಕುಟುಂಬ ಸಾಮಾಜಿಕ ಸಂಪರ್ಕ ಕಳೆದುಕೊಂಡಿತ್ತು ಎನ್ನುವುದು ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶ. ಇದಕ್ಕೆ ಕಾರಣಗಳೇನೇ ಇದ್ದರೂ ಹೀಗೆ ಮಾನವ ಸಂಪರ್ಕವನ್ನು ಕಳೆದುಕೊಂಡಾಗ ಆಗುವ ಮನೋದೈಹಿಕ ಪರಿಣಾಮಗಳನ್ನು ವೈಜ್ಞಾನಿಕವಾಗಿ ತಿಳಿದರೆ ಹೊಸ ಸಾಧ್ಯತೆಗಳು ಹೊಳೆದಾವು.



ಸಂದೇಶ, ಸಂವೇದನೆಯ ಸೂಕ್ಷ್ಮ

ಮಾನವ ಮೂಲತಃ ಸಂಘಜೀವಿ. ಇತರ ಮಾನವ ಜೀವಿಗಳ ಒಡನಾಟದಲ್ಲಿ ಮಾತ್ರ ಮಾನವರ ಮಿದುಳು ನರಮಂಡಲಗಳು ಸಮಾಧಾನ ಮತ್ತು ಸುರಕ್ಷಿತ ಭಾವನೆಗಳನ್ನು ಅನುಭವಿಸುತ್ತವೆ ಎಂದು ನರವಿಜ್ಞಾನಿ ಡಾ. ಸ್ಟೀಫನ್ ಪೋರ್ಜೆಸ್ ತನ್ನ ಪಾಲಿವೇಗಲ್ ಸಿದ್ಧಾಂತದಲ್ಲಿ ತೋರಿಸಿದ್ದಾನೆ. ಮಿದುಳು ಸಕ್ರಿಯವಾಗಿ ಕಾರ್ಯನಿರ್ವಹಿಸಲು ಅದರ ಜೀವಕೋಶಗಳಾದ ನ್ಯೂರಾನ್‌ಗಳ ಸಂಪರ್ಕಜಾಲ ಸೃಷ್ಟಿಯಾಗಬೇಕು. ಜೊತೆಗೆ ಇಂತಹ ಸಂಪರ್ಕಜಾಲದಲ್ಲಿ ಮತ್ತೆ ಮತ್ತೆ ಸಂದೇಶಗಳ ವರ್ಗಾವಣೆಯಾಗಿ ಮಿದುಳಿನ ಕ್ಷಮತೆಯನ್ನು ಹೆಚ್ಚಿಸಬೇಕು. ಸಂವೇದನಾಂಗಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳ ಮೂಲಕ ನಾವು ಗ್ರಹಿಸಿದ ಸಂದೇಶವು ಮಿದುಳಿನ ಸಂಪರ್ಕ ಜಾಲಗಳಲ್ಲಿ ಪ್ರವಹಿಸುತ್ತಿದ್ದಾಗ ಅವು ಸಕ್ರಿಯವಾಗಿರುತ್ತವೆ. ಆದರೆ ಮಾನವ ಸಂಪರ್ಕವನ್ನು ಕಳೆದುಕೊಳ್ಳುವವರ ಸಂವೇದನಾಂಗಗಳಿಗೆ ಹೊರಗಿನಿಂದ ಸೂಚನೆಗಳೇ ಬರುತ್ತಿರುವುದಿಲ್ಲ. ಹಾಗಾಗಿ ನಿಧಾನವಾಗಿ ಮಿದುಳಿನ ಜೀವಕೋಶಗಳು ನಿಷ್ಕ್ರಿಯವಾಗುತ್ತಾ ಹೋದಂತೆ ಸಂಪರ್ಕಜಾಲಗಳು ಕಡಿದುಹೋಗುತ್ತವೆ. ಆಗ ವ್ಯಕ್ತಿ ಖಿನ್ನತೆಯೆಡೆಗೆ ಸರಿಯುತ್ತಾನೆ. ಸೂಕ್ತ ಸಮಯದಲ್ಲಿ ಮನೋವೈದ್ಯರ ಮತ್ತು ಮನೋಚಿಕಿತ್ಸಕರ ಸಹಾಯ ದೊರಕದಿದ್ದರೆ ಇಂತಹವರು ಆತ್ಮಹತ್ಯೆಗೆ ಮೊರೆಹೋಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಏಕಾಂಗಿತನ ಇವರನ್ನು ನಿಧಾನವಾಗಿ ಸಾವಿನೆಡೆಗೆ ನೂಕುತ್ತದೆ.

ಚಿತ್ರದುರ್ಗದ ಘಟನೆಯಲ್ಲಿ ಸಮಾಜದ ಪಾತ್ರವೇನು ಎನ್ನುವುದು ಎಲ್ಲರ ಮುಂದಿನ ಪ್ರಶ್ನೆಯಾಗಿರಲು ಸಾಧ್ಯ. ಇದಕ್ಕೆ ಉತ್ತರ ಹುಡುಕಲು ನಾವು ಆಧುನಿಕ ನಾಗರಿಕತೆ ಸಾಗಿಬಂದ ದಾರಿಯತ್ತ ಕಣ್ಣುಹಾಯಿಸಬೇಕು. ಈ ಭೂಮಿಯಲ್ಲಿ ಮಾನವನ ಉಗಮವಾಗಿ ಸುಮಾರು 18 ಲಕ್ಷ ವರ್ಷಗಳಾಗಿರಬಹುದು ಎನ್ನುವುದು ಮಾನವಶಾಸ್ತ್ರಜ್ಞರ ಅಂದಾಜು. ಈ 18 ಲಕ್ಷ ವರ್ಷಗಳಲ್ಲಿ ಕೃಷಿಯನ್ನು ಅನ್ವೇಷಿಸಿ ಮಾನವ ಒಂದು ಸ್ಥಿರ ಬದುಕನ್ನು ಕಂಡಕೊಂಡಿದ್ದು ಸುಮಾರು 12,000 ವರ್ಷಗಳ ಹಿಂದೆ ಮಾತ್ರ. ಅಂದರೆ ಈ ಪಯಣದ ಹೆಚ್ಚಿನ ಭಾಗದಲ್ಲಿ ನಮ್ಮ ಪೂರ್ವಜರು ಕಾಡುಮೇಡುಗಳಲ್ಲಿ ಹೆಚ್ಚೆಂದರೆ 150-200 ಜನರ ಸಣ್ಣಸಣ್ಣ ಗುಂಪುಗಳಲ್ಲಿ ಬದುಕುತ್ತಿದ್ದರು. ಗುಂಪಿನ ಎಲ್ಲಾ ಸದಸ್ಯರಿಗೂ ಪರಸ್ಪರ ಹತ್ತಿರದವರ ಪರಿಚಯ ಇರಲೇಬೇಕಾಗಿತ್ತು. ಹಾಗಿಲ್ಲದಿದ್ದರೆ ಗುಂಪಿನ ಒಗ್ಗಟ್ಟು ಸಾಧ್ಯವಾಗದೆ ಗುಂಪು ನಾಶವಾಗುತ್ತಿತ್ತು. ಅಂದರೆ ಇಡೀ ಗುಂಪು ಸುಮಾರಾಗಿ ಒಂದೇ ಮನೋದೈಹಿಕ ಸ್ಥಿತಿಯಲ್ಲಿ ಇರುತ್ತಿತ್ತು. ಗುಂಪಿನ ಒಬ್ಬ ಸದಸ್ಯನಲ್ಲಿ ಆಗುವ ಏರುಪೇರುಗಳನ್ನು ಸರಿಪಡಿಸಲು ಇಡೀ ಗುಂಪಿನ ಬೆಂಬಲವಿರುತ್ತಿತ್ತು. ಇಂತಹ ವ್ಯವಸ್ಥೆಗೆ ಹೊಂದಿಕೊಂಡು ಬಂದಿರುವ ನಮ್ಮ ಮಿದುಳು ನರಮಂಡಲಗಳು ಕಳೆದ ಕೇವಲ 12,000 ವರ್ಷಗಳಿಂದ ಆದ ಸಾಮಾಜಿಕ ಬದಲಾವಣೆಗೆ ಹೊಂದಿಕೊಂಡಿಲ್ಲ ಏಕೆಂದರೆ ನಮ್ಮ ವಂಶವಾಹಿಗಳಲ್ಲಿ ಸಣ್ಣಪುಟ್ಟ ಬದಲಾವಣೆ ಆಗಲು ಲಕ್ಷಾಂತರ ವರ್ಷಗಳೇ ಬೇಕು.

ವಿಘಟಿತ ಸಾಮಾಜಿಕ ಬದುಕಿನ ವೃದ್ಧಾಶ್ರಮಗಳು

ಕೃಷಿಯಿಂದ ಪ್ರಾರಂಭವಾಗಿ ಕೈಗಾರಿಕೆಗಳಿಗೆ ಹೊರಳಿಕೊಂಡ ಆಧುನಿಕ ನಾಗರಿತೆ, ಇಡೀ ಮಾನವ ಕುಲ ಆಳದಲ್ಲಿ ಒಂದೇ ಎನ್ನುವ ಚಿಂತನೆಯನ್ನು ಮರೆತು ವ್ಯಕ್ತಿ ವಿಶಿಷ್ಟತೆಯನ್ನು ವೈಭವೀಕರಿಸುತ್ತಾ ಬಂದಿತು ಎಂದು ಮನೋವೈದ್ಯ ಸಂಶೋಧಕ ಡಾ. ಬೆಸಲ್ ವ್ಯಾಂಡರ್‌ಕಾಕ್ ತನ್ನ ಜನಪ್ರಿಯ ಪುಸ್ತಕ ‘ದಿ ಬಾಡಿ ಕೀಪ್ಸ್ ದಿ ಸ್ಕೋರ್’ನಲ್ಲಿ ವೈಜ್ಞಾನಿಕವಾಗಿ ವಿವರಿಸಿದ್ದಾನೆ. ವಿಘಟಿತ ಸಾಮಾಜಿಕ ಬದುಕಿನ ದುಷ್ಪರಿಣಾಮಗಳು ನಮ್ಮ ಸುತ್ತಲೂ ದಿನೇದಿನೇ ಎದ್ದು ಕಾಣಿಸುತ್ತಿವೆ. ಕೂಡುಕುಟುಂಬಗಳು ಒಡೆದುಹೋಗಿವೆ. ಮಕ್ಕಳಿಗೆ ಅಪ್ಪ-ಅಮ್ಮಂದಿರ ಹೊರತಾಗಿ ಇತರರ ಬೆಂಬಲ ಸಿಗುತ್ತಿಲ್ಲ. ಇವತ್ತಿನ ಅಗತ್ಯಗಳನ್ನು ಪೂರೈಸಲು ಪೋಷಕರಿಬ್ಬರೂ ದುಡಿಯುವ ಅನಿವಾರ್ಯದಲ್ಲಿ ಅವರು ದಿನದ ಹೆಚ್ಚಿನ ಸಮಯ ಮನೆಯಿಂದ ಹೊರಗೆ ಕಳೆಯುತ್ತಾರೆ. ಹಳ್ಳಿಗಳು ವಿಘಟನೆಗೊಂಡು ಜನಸಂಖ್ಯೆಯೇ ಇಲ್ಲದ ವೃದ್ಧಾಶ್ರಮಗಳಾಗುತ್ತಿವೆ. ಪಟ್ಟಣಗಳಲ್ಲಿ ಗುಂಪು ಜೀವನದ ಅವಕಾಶಗಳು ಅತಿ ಕಡಿಮೆಯಾಗಿವೆ. ಹೀಗಾಗಿ ಮನುಷ್ಯರ ಒಂಟಿತನ ಹೆಚ್ಚುತ್ತಲೇ ಬರುತ್ತಿದೆ ಎಂದು ಪ್ರಪಂಚದ ಹಲವಾರು ಕಡೆ ನಡೆಸಿದ ಸಂಶೋಧನೆಗಳಿಂದ ತಿಳಿದುಬಂದಿದೆ. ಸಾಕಷ್ಟು ಸರ್ಕಾರಗಳು ಇದಕ್ಕೆ ಪರಿಹಾರ ಮಾರ್ಗಗಳನ್ನು ಹುಡುಕಲು ತಜ್ಞರನ್ನು ಆಹ್ವಾನಿಸುತ್ತಿವೆ. ಹೆಚ್ಚುತ್ತಿರುವ ಆತ್ಮಹತ್ಯೆಗಳು, ನಶೆಯ ವಸ್ತುಗಳ ವ್ಯಸನ ಮುಂತಾದವುಗಳಿಗೆ ಪರಿಹಾರಗಳನ್ನು ಹುಡುಕಲು ಬ್ರಿಟನ್ ಮತ್ತು ಜಪಾನ್ ದೇಶಗಳಲ್ಲಿ ‘ಏಕಾಂಗಿತನದ ಸಚಿವಾಲಯ’ಗಳನ್ನು (Ministry of Loneliness) ಪ್ರಾರಂಭಿಸಿ, ಅದಕ್ಕಾಗಿಯೇ ಒಬ್ಬ ಕೇಂದ್ರ ಸಚಿವರನ್ನು ನೇಮಿಸಲಾಗಿದೆ. ನಮ್ಮ ಸರ್ಕಾರಗಳಿಗೆ ಇತ್ತ ಕಡೆ ಗಮನಹರಿಸುವ ಆಸಕ್ತಿ ಇರುವಂತೆ ಕಾಣಿಸುತ್ತಿಲ್ಲ.

ಮಾನವೀಯ ಸಂಪರ್ಕದ ಸಹಜ ಹಸಿವು ತಣಿಯದಿದ್ದಾಗ ಮೂಡುವ ಏಕಾಂಗಿತನವನ್ನು ತಣಿಸಲು ಸಿಗರೇಟ್, ಮದ್ಯ ಮತ್ತಿತರ ನಶೆಯ ವಸ್ತುಗಳ ಸೇವನೆ ಹೆಚ್ಚುತ್ತಿದೆ. ಏಕಾಂಗಿಯಾಗಿದ್ದಾಗ ಹತ್ತಿಕ್ಕಲಾದ ಭಾವನಾತ್ಮಕ ಏರುಪೇರುಗಳು ಹಿಂಸೆಯಾಗಿಯೂ ಹೊರಬರಬಹುದು. ಮನೆ, ಬೀದಿ ಶಾಲಾ-ಕಾಲೇಜುಗಳು ಹೀಗೆ ಎಲ್ಲೆಂದರಲ್ಲಿ ಕಂಡುಬರುತ್ತಿರುವ ಮೊಬೈಲ್, ಕಂಪ್ಯೂಟರ್, ಸಾಮಾಜಿಕ ಮಾಧ್ಯಮಗಳ ‘ಡಿಜಿಟಲ್ ಅಡಿಕ್ಷನ್’ ಎಲ್ಲಾ ವಯಸ್ಸಿನವರನ್ನೂ ಆವರಿಸಿಕೊಳ್ಳುತ್ತಿದೆ. ಮಾನವ ಸಂಪರ್ಕದಿಂದ ದೊರಕುವ ಸಂತೋಷ ಸಮಾಧಾನಗಳನ್ನು ಹೀಗೆ ಕೃತಕವಾಗಿ ಪೂರೈಸಿಕೊಳ್ಳುತ್ತಾ ಹೋದಂತೆ ಏಕಾಂಗಿತನ ಇನ್ನೂ ಹೆಚ್ಚಾಗುತ್ತದೆ.

9ನೇ ಪುಟಕ್ಕೆ...

ಸಂಪರ್ಕ ಕಡಿದುಕೊಂಡಿದ್ದ ಕುಟುಂಬ

ಚಿತ್ರದುರ್ಗದಲ್ಲಿ ಅಸ್ಥಿಪಂಜರ ಸ್ವರೂಪದಲ್ಲಿ ಪತ್ತೆಯಾದ ಕುಟುಂಬ (ಒಟ್ಟು ಐದು ಮಂದಿಯ ಅಸ್ಥಿಪಂಜರಗಳು ಪತ್ತೆಯಾದವು) ಹೊರಜಗತ್ತಿನೊಂದಿಗೆ ಪ್ರಜ್ಞಾಪೂರ್ವಕವಾಗಿ ಸಂಪರ್ಕ ಕಡಿದುಕೊಂಡಿತ್ತು. ಸಹೋದರರು, ಸ್ನೇಹಿತರು, ಗ್ರಾಮಸ್ಥರೊಂದಿಗೂ ಕುಟುಂಬದ ಯಾವೊಬ್ಬ ಸದಸ್ಯರೂ ಸಂಬಂಧವನ್ನು ಜೀವಂತವಾಗಿಟ್ಟುಕೊಂಡಿರಲಿಲ್ಲ. ಮನೆಯ ಮುಂಭಾಗದಲ್ಲಿ ಹಾದುಹೋದವರಿಗೆ ತಿರುಗಿ ನೋಡುವ ಕುತೂಹಲ ಕೂಡ ಉಳಿದಿರಲಿಲ್ಲ ಎಂಬ ಸಂಗತಿ ಸೋಜಿಗ ಮೂಡಿಸಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದ ಜಗನ್ನಾಥರೆಡ್ಡಿ 1988ರಲ್ಲಿ ನಿವೃತ್ತರಾಗಿದ್ದರು. ಚಿತ್ರದುರ್ಗದ ಕಾರಾಗೃಹ ರಸ್ತೆಯ ವಿಶಾಲ ಮನೆಯಲ್ಲಿ ಸಂಧ್ಯಾಕಾಲದ ಜೀವನ ಕಳೆಯುತ್ತಿದ್ದರು. ಅನಾರೋಗ್ಯಪೀಡಿತ ಪುತ್ರಿ, ಅಪರಾಧ ಪ್ರಕರಣದಲ್ಲಿ ಸಿಕ್ಕಿಬಿದ್ದ ಪುತ್ರ ಇವುಗಳು ಕುಟುಂಬದ ಸದಸ್ಯರನ್ನು ಮಾನಸಿಕವಾಗಿ ಕುಗ್ಗಿಸಿದ್ದವು. ವಿಳಂಬವಾಗುತ್ತಿದ್ದ ಮಕ್ಕಳ ವಿವಾಹದ ಕೊರಗು ಪೋಷಕರನ್ನು ಬಲವಾಗಿ ಕಾಡಿತ್ತು. ಆರ್ಥಿಕ ವಿಚಾರಗಳಲ್ಲಿ ಉಂಟಾಗಿದ್ದ ಕಹಿ ಅನುಭವಗಳು ಜನರಿಂದ ದೂರ ಉಳಿಯುವಂತೆ ಮಾಡಿದ ಸಾಧ್ಯತೆ ಹೆಚ್ಚಿದೆ ಎನ್ನುವುದು ಸಂಬಂಧಿಕರ ಹೇಳಿಕೆ.

ರಕ್ತ ಸಂಬಂಧಿಕರಿಗೂ ಮನೆಯ ಬಾಗಿಲನ್ನು ತೆರೆಯದಷ್ಟು ಏಕಾಂತವನ್ನು ಕುಟುಂಬ ಅನುಭವಿಸುತ್ತಿತ್ತು. ಮದುವೆ, ಗೃಹ ಪ್ರವೇಶದಂತಹ ಸಮಾರಂಭಗಳ ಆಹ್ವಾನ ಪತ್ರಿಕೆಗಳನ್ನು ಸಂಬಂಧಿಕರು ಗೇಟಿನ ಹೊರಗೆ ನಿಂತು ನೀಡುತ್ತಿದ್ದರು. ಈ ಅನುಭವಗಳು ಸಂಬಂಧಿಕರಲ್ಲಿ ಕಹಿ ಭಾವನೆ ಮೂಡಿಸಿದ್ದವು. ಮನೆಯ ಮುಂಭಾಗ, ಆವರಣದಲ್ಲಿ ಬೆಳೆದಿದ್ದ ಕಳೆಗಿಡಗಳನ್ನು ಕೂಡ ಶುಚಿಗೊಳಿಸುತ್ತಿರಲಿಲ್ಲ. ಜಗನ್ನಾಥರೆಡ್ಡಿ ಕುಟುಂಬ ಸಂಪರ್ಕ ಕಳೆದುಕೊಂಡರೂ ಪಾಳು ಮನೆಯ ಬಳಿ ಧಾವಿಸಿ ವಿಚಾರಿಸುವ ಆಸಕ್ತಿ ಸಂಬಂಧಿಕರಲ್ಲಿಯೂ ಇರಲಿಲ್ಲ.

ಆಟೊಗಳ ಸಿಂಗಾರ ಸಿರಿ

ದಾವಣಗೆರೆಯಲ್ಲಿನ ಆಟೊಗಳು ಭಿನ್ನ ವಿನ್ಯಾಸದಿಂದ ಕಣ್ಣು ಕೋರೈಸುತ್ತವೆ. ಇಲ್ಲಿ ಆಟೊ ಓಡಿಸುವವರು ಶೋಕಿಯಿಂದಾಗಿ ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿ ಹಣವನ್ನು ಆಟೊಗಳ ಅಲಂಕಾರಕ್ಕಾಗಿಯೇ ವಿನಿಯೋಗಿಸುತ್ತಾರೆ.




ಸಿದ್ದಯ್ಯ ಹಿರೇಮಠ

ಒಂದು ಊರಿನ ಮೊದಲ ದರ್ಶನ ಮಾಡಿಸುವ ವಾಹನಗಳಲ್ಲಿ ಆಟೊ ಮುಖ್ಯವಾದುದು. ಬರುವ ಅತಿಥಿಗಳನ್ನೋ, ತಮ್ಮದೇ ಊರಿನವರನ್ನೋ ಹೊತ್ತು ಸಾಗುವ ಆಟೊ ಚಾಲಕರು ದೇಸಿಭಾಷೆಯಲ್ಲಿ ಅನುಭವ ಹಂಚಿಕೊಳ್ಳುವುದನ್ನು ಎಷ್ಟೋ ಕಡೆ ನೋಡುತ್ತೇವೆ. ಹಾಗೆ ಕುಶಲೋಪರಿಯ ರೀತಿ ತೆರೆದುಕೊಳ್ಳುವ ಸಂಭಾಷಣೆ ವಿಚಾರ ವಿನಿಮಯವಾಗಿ ವಿಸ್ತರಣೆಯಾಗಲೂಬಹುದು. ಆಟೊ ಚಾಲಕರ ಸಂವಾದದ ಮಾತು ಒಂದು ಕಡೆ. ಜನರು ಹತ್ತುವ ಇಂತಹ ಆಟೊಗಳು ಚೆಂದವಾಗಿರಬೇಕು, ಭಿನ್ನವಾಗಿರಬೇಕು ಎಂದು ಬಯಸುವ ಚಾಲಕರಿಗೂ ಕೊರತೆ ಇಲ್ಲ.

ಆಟೊಗಳ ವಿನ್ಯಾಸ ಒಂದೊಂದು ಊರಲ್ಲಿ ಒಂದೊಂದು ಬಗೆ. ಕರ್ನಾಟಕದ ಬಹುತೇಕ ನಗರಗಳಲ್ಲಿ ಕಂಡುಬರುವ ಆಟೊಗಳ ಸ್ವರೂಪಕ್ಕೆ ಹೋಲಿಸಿದರೆ, ಮಧ್ಯ ಕರ್ನಾಟಕದ ಪ್ರಮುಖ ನಗರವಾದ ದಾವಣಗೆರೆಯಲ್ಲಿನ ಆಟೊಗಳ ಸ್ವರೂಪ ಸಂಪೂರ್ಣ ಭಿನ್ನ. ಮುಂಭಾಗದಿಂದ ಹಿಂಭಾಗದತ್ತ ಇಳಿಜಾರಾಗಿರುವಂತೆ ಆಟೊಗಳ ಮೇಲಿನ ಹೊದಿಕೆ ಮೊದಲ ನೋಟಕ್ಕೆ ಕಾಣುತ್ತದೆ. ಹೆಚ್ಚು ಮಳೆ ಸುರಿಯುವ ಪ್ರದೇಶದಲ್ಲಿ ಕಂಡುಬರುವ ಹೆಂಚಿನ ಮನೆಗಳ ಇಳಿಜಾರನ್ನು ಈ ಆಟೊಗಳ ಚಾವಣಿಯ ವಿನ್ಯಾಸ ನೆನಪಿಸುತ್ತದೆ. ಇಂತಹ ವಿನ್ಯಾಸಕ್ಕೆ ಆಟೊ ಓಡಿಸುವವರ ಶೋಕಿಯೊಂದೇ ಕಾರಣ ಎನ್ನುವುದು ಚಾಲಕರನ್ನು ಹಾಗೂ ಈ ರೀತಿ ವಿನ್ಯಾಸ ಮಾಡುವವರನ್ನು ಕೇಳಿದರೆ ತಿಳಿಯುತ್ತದೆ.

ಜೀವನೋಪಾಯಕ್ಕೆಂದು ಹೊಸ ಅಥವಾ ಸೆಕೆಂಡ್ ಹ್ಯಾಂಡ್ ಆಟೊ ಖರೀದಿಸುವ ಇಲ್ಲಿನ ಯುವಕರು, ಆ ಆಟೊಗಳ ಅಂದ ಹೆಚ್ಚಿಸಲು ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿವರೆಗೆ ಹಣ ವ್ಯಯಿಸುತ್ತಾರೆ. ದಾವಣಗೆರೆಯಲ್ಲಿ ಸಂಚರಿಸುವ ಮುಕ್ಕಾಲು ಪಾಲು ಆಟೊಗಳ ಆಕಾರ ಇದರಿಂದಾಗಿಯೇ ಆಕರ್ಷಣೀಯವೆನಿಸುತ್ತದೆ.

ಅಂದಾಜು ಎರಡರಿಂದ ಎರಡೂವರೆ ಲಕ್ಷ ರೂಪಾಯಿ ಕೊಟ್ಟು ಆಟೊ ಖರೀದಿಸುವ ಚಾಲಕರು, ನೇರವಾಗಿ ಅವುಗಳನ್ನು ಅಂದಗಾಣಿಸುವ ವಿನ್ಯಾಸಗಾರರ ಬಳಿಗೆ ತೆಗೆದುಕೊಂಡು ಹೋಗುವುದು ವಾಡಿಕೆ. ಆಟೊಗಳ ಹೊರಮೈನಲ್ಲಿ ರಾತ್ರಿ ಹೊತ್ತು ಎದ್ದು ಕಾಣುವಂತಹ ಲೈಟಿಂಗ್ ಅಳವಡಿಕೆ, ಹಿಂಭಾಗ ಮತ್ತು ಮುಂಭಾಗ ಕಂಡೊಡನೆಯೇ ಮನ ಸೆಳೆಯುವ ಮಾದರಿಯ ಪೇಂಟಿಂಗ್ ಮತ್ತು ಗಮನ ಸೆಳೆಯುವಂಥ ಸಾಲುಗಳನ್ನು ಆಟೊಗಳ ಮೇಲೆ ಬರೆಸುವುದಕ್ಕೆ ಯುವಕರ ನಡುವೆ ಪೈಪೋಟಿಯೇ ಇದೆ. ಒಳಗೆ ಕುಳಿತು ಪ್ರಯಾಣ ಮಾಡುವವರಿಗೆ ಹಿತಾನುಭವ ಕಲ್ಪಿಸುವ ಕುಷನ್ ವರ್ಕ್‌ಗೆ ಆದ್ಯತೆ ನೀಡುವವರು ಕೂಡ ಇದ್ದಾರೆ. ಆಸನ, ಚಾವಣಿಯ ಒಳಗಿನ ಭಾಗದ (ಸೀಲಿಂಗ್) ವಿನ್ಯಾಸವೂ ವಿಭಿನ್ನವಾಗಿ ಇರುವಂತೆಯೇ ನೋಡಿಕೊಂಡು, ಐಷಾರಾಮಿ ವಾಹನಗಳಲ್ಲಿನ ‘ಸುಖಾಸೀನ’ ವ್ಯವಸ್ಥೆ ಅಳವಡಿಸುವುದು ಇಲ್ಲಿನ ವೈಶಿಷ್ಟ್ಯ. ಇಪ್ಪತ್ತು ವರ್ಷಗಳಿಂದ ವಾಹನಗಳ ವಿನ್ಯಾಸದ ಕೆಲಸದಲ್ಲಿ ತೊಡಗಿರುವ ಸಾದಿಕ್ ಇಂತಹ ಸಣ್ಣಪುಟ್ಟ ವಿವರವನ್ನೆಲ್ಲ ಉತ್ಸಾಹದಿಂದ ಹೇಳುತ್ತಾರೆ.



ಆಟೋದಲ್ಲಿನ ಮಿನಿ ಸ್ಟೀರಿಂಗ್

ಮುಂಭಾಗ ಹೆಚ್ಚು ಎತ್ತರ

ಇಲ್ಲಿನ ಆಟೊಗಳ ಮುಂಭಾಗದ ಎತ್ತರ ಇತರೆಡೆ ಕಂಡುಬರುವ ಸಾಮಾನ್ಯ ಆಟೊಗಳಂತಿರದೆ, ಒಂದರಿಂದ ಒಂದೂವರೆ ಅಡಿಯಷ್ಟು ಹೆಚ್ಚು ಎತ್ತರವಾಗಿರುತ್ತದೆ. ಹೀಗೆ ವಿಶೇಷ ರೂಪ ನೀಡುವ ಪರಿಣತರ ತಂಡವೇ ಇಲ್ಲಿ ಕೆಲಸ ಮಾಡುತ್ತಿದೆ. ಆಟೊಗಳ ಚಾಸಿ ಎತ್ತರಿಸುವ ಮೂಲಕ ಮುಂಭಾಗವನ್ನು ತುಸು ಏರು ಸ್ತರದಲ್ಲಿ ಇರುವಂತೆ ಮರು ವಿನ್ಯಾಸ ಮಾಡಲಾಗುತ್ತದೆ. ಇದರಿಂದ ಆಟೊದ ಸ್ವರೂಪವೇ ಬದಲಾಗುತ್ತದೆ. ಹೀಗೆ ಮುಂಭಾಗ ಎತ್ತರವಾಗುವುದರಿಂದ ಒಳಗೆ ಕುಳಿತುಕೊಳ್ಳುವ ಚಾಲಕರಿಗೆ ಆರಾಮದಾಯಕ ಅನುಭವ ದೊರೆಯುತ್ತದೆ. ಆದರೆ, ಚಾಲನೆಯ ವೇಳೆ ಮೈಯೆಲ್ಲ ಕಣ್ಣಾಗಿರಬೇಕು. ವೇಗವಾಗಿ ಸಾಗುವಾಗ ಹೆಚ್ಚು ಕಡಿಮೆ ಆಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ ಎಂದು ಅನೇಕ ವರ್ಷಗಳಿಂದ ಆಟೊಗಳ ವಿನ್ಯಾಸ ಗಮನಿಸುತ್ತಾ ಬಂದಿರುವ ಯಡಿಯೂರು ಸ್ವಾಮಿ ಹೇಳುತ್ತಾರೆ.

ಒಂದೂವರೆ ದಶಕದಿಂದ ಹೆಚ್ಚಾದ ಖಯಾಲಿ

‘ಆಟೊಗಳ ಅಲಂಕಾರಕ್ಕೆ ದಾವಣಗೆರೆಯವರು ಮಹತ್ವ ನೀಡಿದಷ್ಟು ರಾಜ್ಯದ ಬೇರೆಡೆಯವರು ನೀಡಿದ್ದನ್ನು ನಾನು ಕಂಡಿಲ್ಲ. 20 ವರ್ಷಗಳ ಹಿಂದೆ ಇಂಥ ಖಯಾಲಿ ಇಲ್ಲಿ ಅಪರೂಪ ಎಂಬಂತಿತ್ತು.

10ನೇ ಪುಟಕ್ಕೆ...



ಆಟೊದೊಳಗೆ ಸಿ.ಸಿ.ಟಿ.ವಿ. ಕ್ಯಾಮೆರಾ



ಆಟೊದೊಳಗೆ ಕುಷನ್ ಸೀಟು. ಪ್ರಜಾವಾಣಿ ಚಿತ್ರಗಳು: ಸತೀಶ ಬಡಿಗೇರ್

ಕಡತಗಳ ತುಂಬ ಆಟೋಗ್ರಾಫ್ ಬಿಂಬ



ಬೆಂಗಳೂರಿನ ಡಿ.ಎನ್. ರಾಘವೇಂದ್ರ ರಾವ್ ಅವರ ಬಳಿ ಇರುವ ಕ್ರಿಕೆಟಿಗರ ಹಸ್ತಾಕ್ಷರ ಸಂಗ್ರಹ

ಪ್ರಜಾವಾಣಿ ಚಿತ್ರ: ರಂಜು ಪಿ

ಗಿರೀಶ ದೊಡ್ಡಮನಿ

ಕ್ರಿಕೆಟ್ ಎಂದರೆ ಆಡುವವರ ಪಾಲಿಗೆ ಕನಸುಗಳ ಕಾರ್ಖಾನೆ. ಅಭಿಮಾನಿಗಳಿಗೆ ಹವ್ಯಾಸಗಳ ಕಣಜ.

ಅಂತಹ ಕೋಟ್ಯಂತರ ಅಭಿಮಾನಿಗಳಲ್ಲಿ ಬೆಂಗಳೂರಿನ ಡಿ.ಎನ್. ರಾಘವೇಂದ್ರ ರಾವ್ ಅಪರೂಪದವರು. ಏಕೆಂದರೆ, ಅವರ ಬಳಿ ಇರುವ 25ಕ್ಕೂ ಹೆಚ್ಚು ಕಡತಗಳಲ್ಲಿ ಆಸ್ಟ್ರೇಲಿಯಾದ ದಂತಕಥೆ ಡಾನ್ ಬ್ರಾಡ್ಮನ್ ಅವರಿಂದ ಹಿಡಿದು ಇತ್ತೀಚಿನ ಕ್ರಿಕೆಟಿಗರವರೆಗೆ ಸುಮಾರು 1,500 ಹಸ್ತಾಕ್ಷರಗಳಿವೆ.


ಭಾರತದ ದಿಗ್ಗಜರಾದ ಸುನಿಲ್ ಗಾವಸ್ಕರ್, ಕಪಿಲ್ ದೇವ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಬಿ.ಎಸ್. ಚಂದ್ರಶೇಖರ್, ಯರಪಳ್ಳಿ ಪ್ರಸನ್ನ, ಜಿ.ಆರ್. ವಿಶ್ವನಾಥ್, ವೆಸ್ಟ್ ಇಂಡೀಸ್‌ನ ಸರ್ ಫ್ರ್ಯಾಂಕ್ ವೊರೆಲ್, ಬ್ರಯನ್ ಲಾರಾ ಸೇರಿ ಹಲವರ ಹಸ್ತಾಕ್ಷರಗಳ ಪ್ರತಿಗಳು ರಾಘವೇಂದ್ರ ರಾವ್ ಅವರ ಕಡತಗಳಲ್ಲಿ ಇವೆ. ಹಸ್ತಾಕ್ಷರಗಳನ್ನು ಅತ್ಯಂತ ಜೋಪಾನವಾಗಿ ಅಡಕ ಮಾಡಿ ಇಟ್ಟು, ಅಚ್ಚುಕಟ್ಟಾಗಿ ಕಡತಗಳನ್ನು ಮಾಡಿದ್ದಾರೆ. ಈ ಚೆಂದದ ಕಡತಗಳ ಒಂದೊಂದೇ ಪುಟಗಳನ್ನು ತಿರುವುತ್ತ ಹೋದರೆ ಕ್ರಿಕೆಟ್ ವೈಭವದ ಚಿತ್ರಗಳು, ದಿಗ್ಗಜರ ಆಟದ ಭಂಗಿಗಳ ಚಿತ್ರಪಟಗಳು ಮತ್ತು ಅವುಗಳ ಮೇಲಿನ ಆಟೋಗ್ರಾಫ್‌ಗಳು ಕಣ್ಮನ ಸೆಳೆಯುತ್ತವೆ. ಒಂದೊಂದು ಕಡತದಲ್ಲಿಯೂ 50 ಪುಟಗಳಿವೆ. ಸುಮಾರು ಏಳು ದಶಕಗಳ ಹವ್ಯಾಸದ ಫಲವಿದು.

ಬಹುತೇಕ ಕ್ರಿಕೆಟಿಗರು ತಮ್ಮ ಹಸ್ತಾಕ್ಷರದ ಜೊತೆಗೆ ರಾಘವೇಂದ್ರ ರಾವ್ ಹವ್ಯಾಸವನ್ನು ಕೊಂಡಾಡಿ ಬರೆದ ಪತ್ರಗಳೂ ಇವೆ. ದಿನಪತ್ರಿಕೆಗಳಲ್ಲಿ ಪ್ರಕಟವಾದ ಆಟಗಾರರ ಚಿತ್ರಗಳನ್ನು ಕತ್ತರಿಸಿಕೊಂಡು ಅದರ ಮೇಲೆಯೇ ಹಸ್ತಾಕ್ಷರ ಪಡೆದ ಪ್ರತಿಗಳೂ ಇವೆ.

ಹನ್ನೊಂದನೇ ವಯಸ್ಸಿನಿಂದಲೇ ಈ ಹವ್ಯಾಸ ಆರಂಭಿಸಿದವರು ರಾಘವೇಂದ್ರ ರಾವ್. 80 ವಸಂತ ದಾಟಿದರೂ ದಣಿವರಿಯದೇ ತಮ್ಮ ಹವ್ಯಾಸವನ್ನು ಮುಂದುವರಿಸಿದ್ದಾರೆ. ಈ ಡಿಜಿಟಲ್ ಯುಗದ ಸೆಲ್ಫಿ ಭರಾಟೆಯಲ್ಲಿಯೂ ಆಟೋಗ್ರಾಫ್ ಪರಂಪರೆಯನ್ನು ಜೀವಂತವಾಗಿಟ್ಟಿದ್ದಾರೆ.

ಹಸ್ತಾಕ್ಷರಗಳನ್ನು ರಾಘವೇಂದ್ರ ರಾವ್ ಸಂಗ್ರಹಿಸಿದ ಪರಿ ಮಾತ್ರ ವಿಭಿನ್ನ. ಕ್ರಿಕೆಟಿಗರಿಗೆ ನೇರವಾಗಿ ಮನವಿಪತ್ರ ಬರೆದು, ಅವರ ಹಸ್ತಾಕ್ಷರ ತರಿಸಿಕೊಳ್ಳುತ್ತಾರೆ. ಈ ಪ್ರಕ್ರಿಯೆಗೆ ಅಪಾರ ತಾಳ್ಮೆ ಅಗತ್ಯ. ಹಸನ್ಮುಖಿಯಾಗಿರುವ ರಾಘವೇಂದ್ರ ಅವರು ಈ ಹಾದಿಯಲ್ಲಿ ಯಾವತ್ತೂ ಸೋತಿಲ್ಲ.

> ಏಳು ದಶಕಗಳಿಂದ ಕ್ರಿಕೆಟಿಗರ ಆಟೋಗ್ರಾಫ್ ಸಂಗ್ರಹಿಸುವ ಹವ್ಯಾಸ ಹಚ್ಚಿಕೊಂಡವರು ರಾಘವೇಂದ್ರ ರಾವ್. ಅದಕ್ಕಾಗಿ ಅವರು ವಿನಿಯೋಗಿಸಿರುವ ಸಮಯ, ಕಳೆದುಕೊಳ್ಳದ ತಾಳ್ಮೆಗೆ ಸಾಟಿಯಿಲ್ಲ.



ವೆಸ್ಟ್ ಇಂಡೀಸ್ ತಂಡದ ಫ್ರ್ಯಾಂಕ್ ವೊರೆ ಹಸ್ತಾಕ್ಷರ

‘ಹನ್ನೊಂದನೇ ವಯಸ್ಸಿನವನಾಗಿದ್ದಾಗ ಮೊದಲ ಬಾರಿಗೆ ಹಸ್ತಾಕ್ಷರ ಸಂಗ್ರಹದ ಹವ್ಯಾಸ ಶುರುವಾಯಿತು. ಮೊದಲಿಗೆ ಸಿ.ಆರ್. ರಂಗಾಚಾರಿ ಅವರಿಗೆ ಪತ್ರ ಬರೆದೆ. ಆ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಧೀಶರೂ ಆಗಿದ್ದ ನನ್ನ ತಂದೆ ಡಿ.ಆರ್. ನರಸಿಂಗ ರಾವ್ ಅವರು ಕೊಟ್ಟಿದ್ದ ಸಲಹೆಯನ್ನು ಎಂದಿಗೂ ಮರೆಯುವುದಿಲ್ಲ. ಕ್ರಿಕೆಟಿಗರಿಗೆ ಪತ್ರ ಬರೆಯುವಾಗ ಸಭ್ಯ ಭಾಷೆ ಬಳಕೆ ಮಾಡಬೇಕೆಂದು ಹೇಳಿದ್ದರು. ನನ್ನ ಪತ್ರದ ಜೊತೆಗೆ ಸ್ವವಿಳಾಸವಿರುವ ಕವರ್ ಮತ್ತು ಸ್ಟ್ಯಾಂಪ್ ಇಟ್ಟಿರುತ್ತೇನೆ. ಆದ್ದರಿಂದ ನನ್ನ ಪತ್ರ ಪಡೆದವರಿಗೆ ಪ್ರತಿಕ್ರಿಯಿಸಲು ಅನುಕೂಲವಾಗುತ್ತದೆ. ಈ ಹವ್ಯಾಸದಲ್ಲಿ ನನಗೆ ಇಂದಿಗೂ ನಿರಾಶೆಯಾಗಿಲ್ಲ’ ಎಂದು ರಾಘವೇಂದ್ರ ರಾವ್ ಹೇಳುತ್ತಾರೆ.


ಕೆಲವು ಆಟಗಾರರು ಹಸ್ತಾಕ್ಷರವನ್ನು ನಿರೀಕ್ಷೆಗಿಂತಲೂ ಬೇಗ ಕಳಿಸುತ್ತಿದ್ದರು. ಇನ್ನು ಕೆಲವರು ಆರು ತಿಂಗಳು ಸಮಯ ತೆಗೆದುಕೊಂಡ ಉದಾಹರಣೆಗಳೂ ಇವೆ.

‘ನಾನು ಪತ್ರಿಕೆಗಳಲ್ಲಿ ಪ್ರಕಟವಾಗುವ ಚಿತ್ರಗಳನ್ನು ಕತ್ತರಿಸಿ ಆಟಗಾರರಿಗೆ ಕಳಿಸುತ್ತೇನೆ. ಅದರೊಂದಿಗೆ ಮನವಿಪತ್ರವನ್ನೂ ಬರೆದಿರುತ್ತೇನೆ. ಒಮ್ಮೆ ಪತ್ರ ಕಳಿಸಿದ ಮೇಲೆ ಕಾಯುವುದೊಂದೇ ಕೆಲಸ. ಯಾವ ಕ್ರಿಕೆಟ್ ಆಟಗಾರರೂ ನಿರಾಶೆಗೊಳಿಸಿಲ್ಲ. ಕೆಲವು ಕ್ರಿಕೆಟಿಗರಿಂದ ಪದೇ ಪದೇ ಆಟೋಗ್ರಾಫ್ ಸಂಗ್ರಹಿಸಿದ್ದೇನೆ. ಹೀಗಾಗಿ ಬ್ರಾಡ್ಮನ್ ಅವರ 21, ಬಿ.ಎಸ್. ಚಂದ್ರಶೇಖರ್ ಹಾಗೂ ಸುನಿಲ್ ಗಾವಸ್ಕರ್ ಅವರ 100ಕ್ಕೂ ಹೆಚ್ಚು ಹಾಗೂ ದ್ರಾವಿಡ್ ಅವರ 80ಕ್ಕೂ ಹೆಚ್ಚು ಹಸ್ತಾಕ್ಷರ ಪ್ರತಿಗಳು ನನ್ನ ಬಳಿ ಇವೆ’ ಎಂದು ಸಂತಸ ವ್ಯಕ್ತಪಡಿಸುತ್ತಾರೆ.

‘ಕೆಎಸ್‌ಸಿಎ ಮತ್ತು ಬೇರೆ ಬೇರೆ ಕಡೆ ಇರುವ ಸ್ನೇಹಿತರ ಸಹಾಯದಿಂದ ಖ್ಯಾತನಾಮ ಆಟಗಾರರ ಹಸ್ತಾಕ್ಷರಗಳನ್ನು ಪಡೆದುಕೊಂಡಿದ್ದೇನೆ. ಶ್ರೀಲಂಕಾದ ಆಟಗಾರ ಮುರಳೀಧರ್ ಅವರ ನೆರವು ಕೂಡ ಸಾಕಷ್ಟಿದೆ’ ಎಂದು ಸ್ಮರಿಸುತ್ತಾರೆ.

ಸಿವಿಲ್ ಎಂಜಿನಿಯರ್ ಆಗಿರುವ ರಾಘವೇಂದ್ರ ರಾವ್ ಅವರು ಭಿಲಾಯಿ ಸ್ಟೀಲ್ಸ್‌ನಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿಯಾಗಿದ್ದಾರೆ. ಇದೀಗ 28ನೇ ಕಡತವನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಬೆಳ್ಳಿ ಬೆಳಕಿನಲ್ಲಿ 'ಅಭಿನೇತ್ರಿ'



ಲಕ್ಷ್ಮೀ ಚಂದ್ರಶೇಖರ್ ಪಾತ್ರದ ಪರಕಾಯ ಪ್ರವೇಶಕ್ಕೆ ಕನ್ನಡಿ ಹಿಡಿಯುವ ಭಾವ

ಲಕ್ಷ್ಮೀ ಚಂದ್ರಶೇಖರ್ ರಂಗಭೂಮಿಯಲ್ಲಿ ಏಕವ್ಯಕ್ತಿ ನಾಟಕಗಳ ಪ್ರಯೋಗ ಪ್ರಾರಂಭಿಸಿ 25 ವಸಂತಗಳು ಕಳೆದಿವೆ. ಅವರ ರಂಗಪಯಣದಲ್ಲಿನ ಮೈಲುಗಲ್ಲುಗಳು ಕಣ್ಣಗಲಿಸುವಂತೆ ಮಾಡುತ್ತವೆ.

ಸಂಭ್ರಮ

ಶಶಿಧರ ಭಾರಿಘಾಟ್

ಕನ್ನಡ ರಂಗಭೂಮಿಯ ಏಕವ್ಯಕ್ತಿ ರಂಗಪ್ರಯೋಗಗಳ ಕಾಲು ಶತಮಾನದ ಇತಿಹಾಸದಲ್ಲಿ ಲಕ್ಷ್ಮೀ ಚಂದ್ರಶೇಖರ್ ಬಹಳ ಮುಖ್ಯವಾದ ಕಲಾವಿದೆ. ಅವರ ಏಕವ್ಯಕ್ತಿ ಪ್ರದರ್ಶನದ ಸಾಹಸಕ್ಕೆ ಈಗ ಬೆಳ್ಳಿಹಬ್ಬದ ಸಂಭ್ರಮ.

ಕನ್ನಡ ರಂಗ ಪರಂಪರೆಯಲ್ಲಿ ಒಂದು ರೀತಿಯ ದೊಡ್ಡ ಪ್ರವೇಶವನ್ನು ಏಕವ್ಯಕ್ತಿ ರಂಗಪ್ರಸ್ತುತಿಗೆ ದೊರಕಿಸಿಕೊಟ್ಟಿದ್ದು ಮೇರು ಕಲಾವಿದ ಸಿ.ಆರ್.ಸಿಂಹ; 'ಟಿಪಿಕಲ್ ಟಿ.ಪಿ. ಕೈಲಾಸಂ' ಪ್ರಸ್ತುತಿಯ ಮೂಲಕ. ಇದರ ನಿರ್ದೇಶಕರು ಟಿ.ಎನ್.ನರಸಿಂಹನ್. ಹಾಗೆಯೇ ಲಕ್ಷ್ಮೀ ಚಂದ್ರಶೇಖರ್ ಒಂದು ವಿಶಿಷ್ಟ ಸಂದರ್ಭದಲ್ಲಿ ಏಕವ್ಯಕ್ತಿ ಪ್ರಸ್ತುತಿಯನ್ನು ಆರಂಭಿಸಿದರು. ಭಿನ್ನ ಭಿನ್ನ ಪ್ರಯೋಗ ವಸ್ತು ವೈವಿಧ್ಯಗಳಿಂದ ತಮ್ಮ ಏಕವ್ಯಕ್ತಿ ರಂಗ ಪ್ರಸ್ತುತಿಗಳನ್ನು ದೇಶವಿದೇಶಗಳಲ್ಲಿ ಮಾಡುತ್ತಾ, ಕನ್ನಡದ ಬಹುಮುಖ್ಯ ಕೃತಿಗಳನ್ನು ರಂಗಕ್ಕೆ ತಂದರು. ಹಾಗೆಯೇ ಕನ್ನಡಕ್ಕೆ ವಿವಿಧ ಭಾಷೆಗಳಿಂದ ಮುಖ್ಯವಾಗಿ ಇಂಗ್ಲಿಷಿನ ಹಲವಾರು ನಾಟಕಗಳನ್ನು ಪರಿಚಯಿಸಿದರು.

ಏಕವ್ಯಕ್ತಿ ರಂಗಪ್ರಸ್ತುತಿಗೆ ತೆರೆದುಕೊಳ್ಳುವ ಮುನ್ನ ಬೆಂಗಳೂರು ಸಮುದಾಯ, ಮೈಸೂರಿನ ಸಮತೆಂತೋ ರಂಗ ತಂಡಗಳ ನಾಟಕಗಳಲ್ಲಿ ಅಭಿನಯಿಸಿದ್ದರು. ಮೈಸೂರಿಗೆ ಕಾಲೇಜು ಅಭ್ಯಾಸಕ್ಕೆ ಬಂದವರು ಅಲ್ಲಿಯ ಹವ್ಯಾಸಿ ರಂಗಚಳವಳಿಯ ಭಾಗವಾದರು. ಸಮತೆಂತೋ ತಂಡದ ಹಲವಾರು ನಾಟಕಗಳು, ರಂಗ ಕಾರ್ಯಾಗಾರಗಳಲ್ಲಿ ಪಾಲ್ಗೊಂಡರು. ವಿದೇಶದಲ್ಲಿ ವ್ಯಾಸಂಗ ಮುಗಿಸಿ ಬೆಂಗಳೂರಿಗೆ ಬಂದವರು ಪ್ರತಿಷ್ಠಿತ ಎನ್.ಎಂ.ಕೆ.ಆರ್.ವಿ. ಕಾಲೇಜಿನ ಅಧ್ಯಾಪಕರಾದರು. ಬೆಂಗಳೂರು ಸಮುದಾಯದ ಒಡನಾಟವೂ ಆರಂಭವಾಯಿತು. ಖ್ಯಾತ ರಂಗ ನಿರ್ದೇಶಕ ಪ್ರಸನ್ನ ಅವರ 'ಗೆಲಿಲಿಯೋ', ನಂತರ ಟಿ.ಎಸ್.ನರಸಿಂಹನ್ ಅವರ 'ಕತ್ತಲೆ ದಾರಿ ದೂರ', ಎಂ.ಎಸ್.ಸತ್ಯು ಅವರ 'ಕುರಿ' ಸುರೇಶ ಆನಗಳ್ಳಿ ಅವರ 'ಮದುರೆಕಾಂಡ', ಸಿ.ಬಸವಲಿಂಗಯ್ಯ ಅವರ 'ಮಾದಾರಿ ಮಾದಯ್ಯ', ಎನ್.ಎ.ಸೂರಿ ಅವರ 'ಈ ಕೆಳಗಿನವರು', ಇಕ್ಬಾಲ್ ಅಹಮದ್ ಅವರ 'ಮಹಾಚೈತ್ರ', ಮುಂತಾದ ನಾಟಕಗಳಲ್ಲಿ ಅಭಿನಯಿಸಿ, ಬೆಂಗಳೂರು ಸಮುದಾಯದ ಅಧ್ಯಕ್ಷರೂ ಆಗಿದ್ದರು. ತಾವು ಕಲಿಸುತ್ತಿದ್ದ ವಿದ್ಯಾರ್ಥಿನಿಯರೂ ರಂಗ ಮಾಧ್ಯಮದ ರುಚಿ ಹತ್ತಿಸಿ, ಕಾಲೇಜು ರಂಗಭೂಮಿಗೆ ಅಪಾರ ಕೊಡುಗೆ ನೀಡಿದರು.

ಅವರಿಗಿದ್ದ ಮತ್ತೊಂದು ಆಸಕ್ತಿಯ ವಿಷಯ ರಂಗವಿಮರ್ಶೆ. ಸಾಹಿತ್ಯದ ಒಲವು, ವಿಸ್ತಾರವಾದ ಓದು, ಕನ್ನಡ, ಆಂಗ್ಲ ಸಾಹಿತ್ಯ ಸೇರಿದಂತೆ ವಿವಿಧ ಭಾಷಾ ಸಾಹಿತ್ಯವನ್ನು ಅಭ್ಯಾಸ ಮಾಡಿರುವ ಲಕ್ಷ್ಮೀ ಸಹಜವಾಗಿ ತಮ್ಮ ಅಭಿವ್ಯಕ್ತಿಗಾಗಿ ಏಕವ್ಯಕ್ತಿ ಪ್ರಸ್ತುತಿ ರಂಗಮಾಧ್ಯಮವನ್ನು ಆರಿಸಿಕೊಂಡರು.

ಏಕವ್ಯಕ್ತಿ ಪ್ರಯೋಗ ಯಾಕಾಗಿ?

ಸಾಮೂಹಿಕವಾದ ರಂಗಕಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಾಣೆಯಾಗುತ್ತಿರುವ ತಾಲೀಮಿನ ಶಿಸ್ತು, ಸಮಯಪ್ರಜ್ಞೆಯ ಬಗ್ಗೆ ಒಂದು ರೀತಿಯ ಬೇಸರವೂ ಉಂಟಾದ ಸಂದರ್ಭ ಒಂದೆಡೆಯಾದರೆ, ಬಹುತೇಕ ನಾಟಕಗಳಲ್ಲಿ ಪುರುಷಕೇಂದ್ರಿತ ಪಾತ್ರಗಳೇ ವಿಜೃಂಭಿಸುವ ವಾಸ್ತವತೆಯೂ ಅವರಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕಿದವು. ಇಂತಹ ಪ್ರಶ್ನೆಗಳಿಗೆ ಉತ್ತರವಾಗಿ ಅವರು ಏಕವ್ಯಕ್ತಿ ಪ್ರಸ್ತುತಿ ರಂಗಪ್ರಯೋಗಕ್ಕೆ ಮುಂದಾದರು. ಅದರ ಮೂಲಕ ಗೌಣವಾಗಿದ್ದ ಮಹಿಳಾ ಪಾತ್ರಗಳಿಗೆ, ಮಹಿಳಾ ಕೇಂದ್ರಿತ ವಸ್ತುಗಳಿಗೆ ಒಂದು ಖಚಿತರೂಪ ಹಾಗೂ ಅಭಿವ್ಯಕ್ತಿಯ ಅವಕಾಶವನ್ನು ಕಲ್ಪಿಸಿದರು. ಹಾಗಾಗಿ ಅವರು ಮೊದಲು ಪ್ರಾಯೋಗಿಕವಾಗಿ 'ಹೆಣ್ಣಲ್ಲವೆ...!' ರಂಗಪ್ರಸ್ತುತಿಯನ್ನು ಮಾಡಲು ಅಣಿಯಾಗಿದ್ದು. ಸಾಂಪ್ರದಾಯಿಕ ರಂಗಪ್ರಯೋಗಕ್ಕೆ ಭಿನ್ನವಾದ, ಆದರೆ ಏಕಪಾತ್ರಾಭಿನಯಕ್ಕಿಂತ ಬೇರೆಯದೇ ಆದ ಪಾತ್ರಪೋಷಣೆ, ಪರಿಕರ ಬಳಕೆ, ಸಂಗೀತ ಅಳವಡಿಕೆಯಿಂದ ಒಂದು ಪೂರ್ಣ ಪ್ರಮಾಣದ ನಾಟಕದ ಅನುಭವ ನೀಡುವ ರಂಗಪ್ರಸ್ತುತಿಗೆ ತೊಡಗಿಸಿಕೊಂಡರು.

ಅಮೆರಿಕದ ಷಿಕಾಗೋ ನಗರದಲ್ಲಿ 1998ರ ಫೆಬ್ರುವರಿಯಲ್ಲಿ ನಡೆದ ಅಂತರರಾಷ್ಟ್ರೀಯ ಶೇಕ್ಸ್‌ಪಿಯರ್ ಸಮಾವೇಶದಲ್ಲಿ ಭಾಗಿಯಾಗಲು ಹೋಗಿದ್ದಾಗ, ಅಲ್ಲಿದ್ದ ತಮ್ಮ ಸ್ನೇಹಿತರು, ವಿದ್ಯಾರ್ಥಿಗಳು, ಕನ್ನಡ ಸಂಘಟನೆಗಳ ಸಹಕಾರದಿಂದ ಅವರ ಮೊದಲ ಏಕವ್ಯಕ್ತಿ ರಂಗಪ್ರಸ್ತುತಿ 'ಹೆಣ್ಣಲ್ಲವೆ...!' ಪ್ರದರ್ಶಿಸಿದರು. 1998ರ ಮಾರ್ಚ್ 16ರಂದು ಉತ್ತರ ಅಮೆರಿಕ ವೀರಶೈವ ಸಮಾಜದ ಆಶ್ರಯದಲ್ಲಿ ಕ್ಯಾಲಿಫೋರ್ನಿಯಾದ ಕ್ಯೂಪರ್ಟಿನೋ ಕಮ್ಯುನಿಟಿ ಹಾಲ್‌ನಲ್ಲಿ ನಡೆದ ಮೊದಲ ಪ್ರದರ್ಶನಕ್ಕೆ 2024ಕ್ಕೆ 25 ವರ್ಷಗಳು ತುಂಬುತ್ತಿದೆ.

ನಮ್ಮ ದೇಶದ ವಿವಿಧ ರಾಜ್ಯಗಳಲ್ಲಿ, ಕನಾಟಕದ ಹಲವು ಕಲಾಕೇಂದ್ರಗಳಲ್ಲಿ ವಿದೇಶಗಳಲ್ಲಿ ನೂರಾರು ಪ್ರದರ್ಶನಗಳನ್ನು ಕಂಡ ಈ ರಂಗಪ್ರಯೋಗ, ಅವರ ಮುಂದಿನ ರಂಗಯಾತ್ರೆಗೆ ಮುನ್ನುಡಿ ಬರೆಯಿತು. ಆಗಲೇ ಹುಟ್ಟಿಕೊಂಡಿದ್ದು ಕ್ರಿಯೇಟಿವ್ ಥಿಯೇಟರ್-ರಂಗಸಮೂಹ. ರಂಗಸಜ್ಜಿಕೆ, ಪರಿಕರ, ರಂಗವಿನ್ಯಾಸ, ಸಂಗೀತ, ಬೆಳಕು ಮುಂತಾದ ವಿಭಾಗಗಳಲ್ಲೂ ಸಮರ್ಥ ತಜ್ಞರನ್ನೊಳಗೊಂಡ ತಂಡವನ್ನು ಸಂಘಟಿಸಿ, ಒಂದು ಪ್ರದರ್ಶನಕ್ಕೆ ಅಗತ್ಯವಾದ ಆರ್ಥಿಕ ಸಂಪನ್ಮೂಲವನ್ನು ಹೊಂದಿಸಿ, ರಂಗತಂಡವನ್ನು ಶ್ರಮಪಟ್ಟು ಕಟ್ಟಿದರು.

ಸಾಲುಸಾಲು ಪ್ರಯೋಗಗಳು

'ಹೆಣ್ಣಲ್ಲವೆ...!' ಒಂದು ಪ್ರಾಯೋಗಿಕ ರಂಗಪ್ರಸ್ತುತಿ ಎನ್ನುತ್ತಲೇ ಅದು ವೃತ್ತಿಪರ ಪ್ರಯೋಗವಾಗಿ ಮಾರ್ಪಾಡುಗೊಂಡಿತು. ಮುಂದೆ ಚಂದ್ರಶೇಖರ ಕಂಬಾರರ 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿಯ ಏಕವ್ಯಕ್ತಿ ಪ್ರಸ್ತುತಿಯ ಸವಾಲನ್ನು ಸಮರ್ಥವಾಗಿ ಎದುರಿಸಿದರು. ಕಂಬಾರರ ಬೃಹತ್ ಕಾದಂಬರಿಯನ್ನು ಲಕ್ಷ್ಮೀ ಚಂದ್ರಶೇಖರ್ ಅವರು ಆಂಗ್ಲಭಾಷೆಗೆ ಅನುವಾದ ಮಾಡುತ್ತಿದ್ದಾಗಲೇ, ಏಕವ್ಯಕ್ತಿ ಪ್ರಸ್ತುತಿಯ ಆಶಯ ಮೊಳಕೆಯೊಡೆಯುತ್ತಿತ್ತು. ಅವರ ಸಾಹಸಕ್ಕೆ ಜೊತೆಯಾದವರು ಅವರ ವಿದ್ಯಾರ್ಥಿನಿ, ರಂಗನಿರ್ದೇಶಕಿ ಸೌಮ್ಯ ವರ್ಮಾ. ಮೈಸೂರು ರಂಗಾಯಣದ ಅಕ್ಕ-ರಾಷ್ಟ್ರೀಯ ರಂಗೋತ್ಸವದ ಭಾಗವಾಗಿ ಅದು ಪ್ರದರ್ಶಿತವಾದಾಗ ಅದಕ್ಕೆ ಬಂದ ಪ್ರೇಕ್ಷಕರ ಪ್ರತಿಕ್ರಿಯೆ, ಮರುಪ್ರದರ್ಶನಗಳಿಗೆ ಬಂದ ಬೇಡಿಕೆ, ಅವರ ಕ್ರಿಯಾಶೀಲತೆಗೆ ದೊರಕಿದ ಪ್ರತಿಫಲವಾಗಿತ್ತು.

ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಓದು ಹಾಗೂ ಅವುಗಳ ಮೇಲಿದ್ದ ಹಿಡಿತದ ಪರಿಣಾಮ 'ಹೆಣ್ಣಲ್ಲವೆ...!' ಹಾಗೂ 'ಸಿಂಗಾರವ್ವ' ಎರಡೂ ಭಾಷೆಗಳಲ್ಲಿ ಪ್ರಸ್ತುತಗೊಂಡು ಹೊಸ ಇತಿಹಾಸ ನಿರ್ಮಿಸಿತು.

ಬಹುಶಃ ಭಾರತೀಯ ಭಾಷಾ ರಂಗಭೂಮಿಯಲ್ಲಿ ತಮ್ಮ ಪ್ರಾದೇಶಿಕ ಭಾಷೆ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಾಟಕವನ್ನು ಪ್ರದರ್ಶಿಸುವ ಕಲಾವಿದರಲ್ಲಿ ಇವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. 'ಎದ್ದೇಳು', 'ಮೀಡಿಯಾ', 'ಕಿತ್ತಲೆಮನೆ ಕಾವೇರಿ', 'ಶೇಕ್ಸ್‌ಪಿಯರ್‌ನ ಶ್ರೀಮತಿ' ಮುಂತಾದ ಏಕವ್ಯಕ್ತಿರಂಗ ಪ್ರಸ್ತುತಿಗಳನ್ನು ನೀಡಿದ್ದಾರೆ. ಈ ಎಲ್ಲಾ ಪ್ರಯೋಗಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾಡಿರುವುದು ಇವರ ಹೆಗ್ಗಳಿಕೆ.

ಜ. 12ರಿಂದ 'ಅಭಿನೇತ್ರಿ-25'

ಏಕವ್ಯಕ್ತಿ ರಂಗ ಪ್ರದರ್ಶನಗಳಿಗಷ್ಟೇ ಸೀಮಿತಗೊಳ್ಳದ ಕ್ರಿಯೇಟರ್ ಥಿಯೇಟರ್ 'ಹೀಗಾದ್ರೆ ಹೇಗೆ?', 'ಆದದ್ದೆಲ್ಲಾ ಒಳಿತೇ', 'ರತ್ನನ್ ಪರ್ಪಂಚ', 'ಸಾಹೇಬರ ಸರ್ಕೀಟು', 'ಕಾಯ' ಮುಂತಾದ ಬಹು ಕಲಾವಿದರ ಒಳಗೊಂಡ ನಾಟಕಗಳನ್ನು ಪ್ರಸ್ತುತಪಡಿಸಿದೆ. ಈಗ ಲಕ್ಷ್ಮೀ ಚಂದ್ರಶೇಖರ್ ಏಕವ್ಯಕ್ತಿ ಪ್ರಸ್ತುತಿಗೆ ಪದಾರ್ಪಣೆ ಮಾಡಿದ 25ನೇ ವರ್ಷವನ್ನು 'ಅಭಿನೇತ್ರಿ' ತಂಡದವರು ರಂಗೋತ್ಸವದ ಮೂಲಕ ಸಂಭ್ರಮಿಸುತ್ತಿದ್ದಾರೆ.

ಜನವರಿ 12, 13, 14ರಂದು ಮೂರು ದಿನ ಏಕವ್ಯಕ್ತಿ ರಂಗಪ್ರಯೋಗಗಳ ಉತ್ಸವವು ಬೆಂಗಳೂರಿನ ಬಸವನಗುಡಿ, ಬಿ.ಪಿ.ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನಡೆಯಲಿದೆ. ಪ್ರತಿದಿನ ಒಂದು ನಾಟಕ, ಎರಡು ಭಾಷೆಗಳಲ್ಲಿ. ಕನ್ನಡ ರಂಗಭೂಮಿಯ ಸಂದರ್ಭದಲ್ಲಿ ಇದೊಂದು ವಿಶಿಷ್ಟ ಪ್ರಯತ್ನ. ಜನವರಿ 12 ಸೌಮ್ಯ ವರ್ಮಾ ನಿರ್ದೇಶನದ 'ಸಿಂಗಾರೆವ್ವ ಮತ್ತು ಅರಮನೆ', 13ರಂದು ವಿಶ್ವರಾಜ ಪಾಟೀಲ ನಿರ್ದೇಶನದ 'ಶೇಕ್ಸ್‌ಪಿಯರ್‌ನ ಶ್ರೀಮತಿ' ಮತ್ತು 14ರಂದು ಸೌಮ್ಯ ವರ್ಮಾ ನಿರ್ದೇಶನದ 'ಕಿತ್ತಲೆಮನೆ ಕಾವೇರಿ'- ಪ್ರತಿದಿನ 3.30ಕ್ಕೆ ಕನ್ನಡ ಭಾಷೆಯಲ್ಲಿ, ಸಂಜೆ 7.30ಕ್ಕೆ ಇಂಗ್ಲಿಷ್ ಭಾಷೆಯಲ್ಲಿ- ಈ ನಾಟಕಗಳು ಪ್ರದರ್ಶಿತವಾಗುತ್ತಿವೆ. ಮೂರು ರಂಗಪ್ರಸ್ತುತಿಗಳನ್ನು ಎರಡೂ ಭಾಷೆಗಳಲ್ಲಿ ಸವಿಯುವ ಅವಕಾಶ 'ಅಭಿನೇತ್ರಿ-25'ರ ಮೂಲಕ ಲಕ್ಷ್ಮೀ ಚಂದ್ರಶೇಖರ್ ರಂಗ ರಸಿಕರಿಗೆ ದೊರಕಿಸಿ ಕೊಟ್ಟಿದ್ದಾರೆ.

ಗಂಧರ್ವ ಗಾನದ ನೆನಪಿನಂಗಳ

ನೆನಪು

ಎಂ.ಎನ್. ಸುಂದರ ರಾಜ್

ಸಂಗೀತದಲ್ಲಿ ತಮ್ಮತನದ ರುಜು ಮಾಡಿದ ಕುಮಾರ ಗಂಧರ್ವ ಅವರ ಜನ್ಮ ಶತಮಾನೋತ್ಸವ ವರ್ಷವಿದು. ಅವರ ಸಂಗೀತ ಬದುಕಿನ ಪುಟಗಳಲ್ಲಿನ ನಾದದಲೆಗಳು ನಿಮ್ಮ ಕಿವಿಗಳಿಗೆ, ಕಣ್ಣಿಗೆ...



ಕುಮಾರ ಗಂಧರ್ವ

ಐದು ವರ್ಷದ ತುಂಬುಗಲ್ಲದ ಬಾಲಕ ಬೆಳಗಾವಿಯ ವಿಶಾಲ ವೇದಿಕೆಯಲ್ಲಿ ಕುಳಿತು ತನ್ಮಯನಾಗಿ ಹಾಡುತ್ತಿದ್ದ. ಠುಮ್ರಿ, ಖಯಾಲ್, ಆಗ್ರಾ ಘರಾಣಾ ಶೈಲಿಯಲ್ಲಿ ಅತಿ ಮಧುರ ಧ್ವನಿಯಲ್ಲಿ ತೇಲಿ ಬರುತ್ತಿದ್ದುದನ್ನು ಸಂಗೀತಾಸಕ್ತರು ಕೇಳಿ ಭಾವಪರವಶರಾದರು. ಅಬ್ದುಲ್ ಕರೀಂ ಖಾನ್ ಮತ್ತು ಸವಾಯಿ ಗಂಧರ್ವರ ಗಾಯನದಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನು ಹಾಡಿ ತೋರಿಸಿದ. ಇದ್ದಕ್ಕಿದ್ದಂತೆ ಸಂಗೀತ ನಿಂತಿತು. ಶ್ರೋತೃಗಳಾಗಿ ಆಗಮಿಸಿದ್ದ ಕಲಬುರಗಿ ಗುರುಕಲ್ಮಠದ ಶಾಂತವೀರ ಸ್ವಾಮಿಗಳು ಆ ಬಾಲಕನನ್ನು ತಬ್ಬಿ ಹಿಡಿದು, 'ಎಂತಹ ಪ್ರತಿಭೆ ನಿನ್ನದು ಮಗೂ, ನೀನು ನಿಜವಾಗಿಯೂ ಅಪ್ರತಿಮ ಗಾಯಕ, ನೀನು ಕುಮಾರ ಗಂಧರ್ವನೇ ಸರಿ' ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು. ಎಲ್ಲರ ಗಮನಸೆಳೆದ ಆ ಪುಟ್ಟ ಬಾಲಕ ಮುಂದೆ 'ಕುಮಾರ ಗಂಧರ್ವ' ಎಂಬ ಹೆಸರಿನಿಂದ ಪ್ರಖ್ಯಾತನಾದ. ಆತನೇ ಶಿವಪುತ್ರ ಸಿದ್ಧರಾಮಯ್ಯ ಕೊಂಕಲಿಮಠ; ಅಪ್ಪಟ ಕನ್ನಡದ ಪ್ರತಿಭೆ.

ಕುಮಾರ ಗಂಧರ್ವ ಜನಿಸಿದ್ದು 1924ರ ಏಪ್ರಿಲ್ 8ರಂದು, ಬೆಳಗಾವಿಯ ಸೂಳೇಭಾವಿಯಲ್ಲಿ. ಚಿಕ್ಕಂದಿನಿಂದಲೇ ಮರಾಠಿ ಕಾವ್ಯ ನಾಟಕಗಳನ್ನು ನೋಡಿ ಸಂಗೀತದ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಈ ಬಾಲಕ, ಉಸ್ತಾದ್ ಕರೀಂ ಖಾನರ ಮುದ್ರಿತ ಸಂಗೀತಕ್ಕೆ ಮಾರುಹೋಗಿದ್ದ. ಹಿಂದೂಸ್ತಾನಿ ಸಂಗೀತಾಸಕ್ತಿಯನ್ನು ಗಮನಿಸಿ ಈತನ ತಂದೆ ಮುಂಬೈನ ಡಾ.ಬಿ.ಆರ್. ದೇವಧರ್ ಬಳಿ ಕಳಿಸಿ ಸಂಗೀತ ಕಲಿಸಲು ನೆರವಾದರು.

ಹನ್ನೊಂದನೆಯ ವಯಸ್ಸಿಗೇ ಅಲಹಾಬಾದ್‌ನಲ್ಲಿ ನಡೆದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಕುಮಾರ ಗಂಧರ್ವ ಸಂಗೀತ ಕಛೇರಿ ನಡೆಸಿಕೊಟ್ಟರು. ಕೊನೆಯ ಅರ್ಧ ಗಂಟೆ ಕಾಫಿ ರಾಗದಲ್ಲಿ ಹಾಡಿ ಎಲ್ಲರೂ ಅಚ್ಚರಿಪಡುವಂತೆ ಮಾಡಿದರು. ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ತೇಜ ಬಹಾದ್ದೂರ್ ಸಪ್ರು ಚಿನ್ನದ ಪದಕವನ್ನಿತ್ತು ಗೌರವಿಸಿದರು. ಕೆ.ಎಲ್. ಸೈಗಾಲ್, ಪಂ. ಓಂಕಾರನಾಥ್, ಉಸ್ತಾದ್ ಫಯಾಜ್ ಖಾನ್ ಮುಂತಾದವರು ಈ ಸಂಗೀತ ಕಛೇರಿಯ ಮುಖ್ಯ ಶ್ರೋತೃಗಳಾಗಿದ್ದರು.

ಅಬ್ದುಲ್ ಫಯಾಜ್ ಖಾನರೂ ವೇದಿಕೆಗೆ ಪ್ರವೇಶಿಸಿ, ಬಾಲಕ ಕುಮಾರ ಗಂಧರ್ವರನ್ನು ಆಲಿಂಗಿಸಿಕೊಂಡು, ಹರಸಿದರು. ಅವರು ಸದಾ ಧರಿಸುತ್ತಿದ್ದ ಟೋಪಿಯನ್ನು ತೆಗೆದು ಬಾಲಕನ ತಲೆಗೆ ತೊಡಿಸಿದರು. ಅಂದಿನಿಂದ ಕುಮಾರ ಗಂಧರ್ವ ಮನೆಮಾತಾದರು.

ಐದು ದಿನಗಳ ಸಂಗೀತೋತ್ಸವ

ಧಾರವಾಡದ ಜಿ.ಬಿ. ಜೋಶಿ ಸ್ಮಾರಕ ಟ್ರಸ್ಟ್, ಹುಬ್ಬಳ್ಳಿಯ 'ಕ್ಷಮತಾ' ಜಂಟಿಯಾಗಿ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ ಜನವರಿ 9ರಿಂದ 13ರ ವರೆಗೆ ಐದು ದಿನಗಳ 'ಪಂ. ಕುಮಾರ ಗಂಧರ್ವ ಜನ್ಮಶತಾಬ್ದಿ ಸಂಗೀತೋತ್ಸವ' ಆಯೋಜಿಸಿವೆ. ಧಾರವಾಡದ ಕರ್ನಾಟಕ ಕಾಲೇಜು ಆವರಣದಲ್ಲಿರುವ ಡಾ. ಅಣ್ಣಾಜಿರಾವ್ ಸಿತೂರ್ ಸಭಾಂಗಣದಲ್ಲಿ ಈ ಸಂಗೀತೋತ್ಸವ ನಡೆಯಲಿದೆ. ಪಂ. ವಿಜಯ್ ಕೋಪಾರ್ಕರ್, ವಯೊಲಿನ್ ವಾದಕಿಯರಾದ ಎನ್. ರಾಜಂ ಹಾಗೂ ನಂದಿನಿ ಶಂಕರ್, ಪಂ. ಕೈವಲ್ಯಕುಮಾರ್ ಗುರವ್, ಸಿತಾರ್ ವಾದಕಿ ಸಸ್ಕಿಯಾ ರಾವ್, ಸೆಲ್ಲೊ ವಾದಕ ಶುಭೇಂದ್ರ ರಾವ್, ಸರೋದ್ ವಾದಕಿ ವಿದುಷಿ ದೇಬಸ್ಮಿತಾ ಭಟ್ಟಾಚಾರ್ಯ, ಜಯತೀರ್ಥ ಮೇವುಂಡಿ ಮೊದಲಾದ ದಿಗ್ಗಜರ ಸಂಗೀತ ಆಸ್ವಾದಿಸುವ ಅವಕಾಶ ಕಲಾ ರಸಿಕರಿಗೆ.

ಕುಮಾರ ಗಂಧರ್ವ ಅವರು ಘರಾಣಾವನ್ನು ಪಾರಂಪರಿಕ ಶೈಲಿಯಲ್ಲಿ ಹಾಡದೆ, ತಮ್ಮದೇ ಧಾಟಿಯಲ್ಲಿ ಹಾಡಿದರು. ಅನೇಕ ಹೊಸ ರಾಗಗಳನ್ನು ಸಂಯೋಜಿಸಿದರು. ಅವುಗಳನ್ನು 'ಧುನ್ ಉಗಮ್ ರಾಗಗಳು' ಎಂದು ಕರೆದರು.

ಕ್ಷಯಕ್ಕೆ ಸಿಕ್ಕ ಔಷಧ: ಬದುಕಿನಲ್ಲಿ ಬಿರುಗಾಳಿಯಂತೆ ಬಂದಿದ್ದು ಕ್ಷಯರೋಗ. ಆಗ ರೋಗಕ್ಕೆ ಔಷಧ ಇರಲಿಲ್ಲ. ಸ್ವಲ್ಪ ಶುಷ್ಕ ಪ್ರದೇಶದಲ್ಲಿ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ನೀಡಿದ್ದರಿಂದ, ಅವರು ಆಯ್ಕೆ ಮಾಡಿದ ಸ್ಥಳ ಮಧ್ಯಪ್ರದೇಶ ರಾಜ್ಯದ ದೇವಾಸ್. ಅಲ್ಲಿ ಮನೆಯೊಂದನ್ನು ಕಟ್ಟಿ, ಅದಕ್ಕೆ 'ಭಾನುಕುಲ್' ಎಂದು ಹೆಸರಿಟ್ಟರು. ಸಂಪೂರ್ಣ ಗುಣಮುಖರಾಗುವವರೆಗೆ ಹಾಡಬಾರದೆಂದು ವೈದ್ಯರು ತಾಕೀತು ಮಾಡಿದರು. ಇಡೀ ದೇಶ 1947ರಲ್ಲಿ ಸ್ವಾತಂತ್ರ್ಯ ಸಂಭ್ರಮವನ್ನು ಆಚರಿಸುತ್ತಿದ್ದರೆ, ಧ್ವನಿ ಅಡಗಿಹೋದ ಕುಮಾರ ಗಂಧರ್ವರು ಮೌನವಾಗಿ ನೋವು ಅನುಭವಿಸುತ್ತಿದ್ದರು.

ಅವರು ಕ್ಷಯರೋಗದಿಂದ ಮುಕ್ತರಾದ ಬಳಿಕ 1952ರಲ್ಲಿ ಮಾಂಡೋವಿನಲ್ಲಿ ಒಂದು ಸಂಗೀತ ಕಛೇರಿ ನಡೆಸಿದರು. ಅದಕ್ಕೆ ಪ್ರಧಾನಿ ಜವಾಹರಲಾಲ್ ನೆಹರೂ ಬಂದಿದ್ದುದು ವಿಶೇಷ.

ಮಿಂಚಿದ್ದು ಮರಾಠಿ ನೆಲದಲ್ಲಿ: ನಂತರ ದೇಶದಾದ್ಯಂತ ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ಹಾಡಲು ಪ್ರಾರಂಭಿಸಿದರು. ಅವರು ಮಿಂಚಿದ್ದು ಮರಾಠಿ ನೆಲದಲ್ಲಿ ಮತ್ತು ನೆಲೆಸಿದ್ದು ಹಿಂದಿ ಪ್ರದೇಶದಲ್ಲಿ. ಅವರನ್ನು 'ಇಂಡಿಯನ್ ಮೊಜಾರ್ಟ್' ಎಂದು ಕರೆಯಲಾಗುತ್ತಿತ್ತು. ಸತ್ಯಶೀಲ ದೇಶಪಾಂಡೆ, ಶುಭಾ ಮುದ್ಗಲ್, ವಿಜಯಾ ಸರದೇಶಮುಖ್ ಅವರ ಶಿಷ್ಯವರ್ಗದ ಪ್ರಮುಖರು. ಅವರಿಗೆ ಮಾಳ್ವಾದ ಮೇಲೆ ಅದೇನೋ ವಿಶೇಷ ಮಮತೆ ಮತ್ತು ಅಭಿಮಾನ. ಸದಾ ತಮ್ಮನ್ನು 'ಮೈ ಮಾಳ್ವಾಕಾ, ಮಾಳ್ವಾ ಮೇರಾ' ಎಂದು ಹೇಳಿಕೊಳ್ಳುತ್ತಿದ್ದರು. ಅವರನ್ನು 'ಮಾಳ್ವಾದ ಮಹಾರಾಜ' ಎಂದೂ ಕರೆಯುತ್ತಿದ್ದರು.

1965ರಲ್ಲಿ ತಮ್ಮ ಹತ್ತು ವರ್ಷದ ಸಂಶೋಧನೆಯ ಫಲವಾಗಿ ರಚಿಸಿದ 'ಅನೂಪ ರಾಗ ವಿಲಾಸ' ಎಂಬ ಪುಸ್ತಕವನ್ನು ಪ್ರಕಟಿಸಿದರು.


ಅವರ ಮೊದಲ ಪತ್ನಿ ಭಾನುಮತಿ ಅನಾರೋಗ್ಯದಿಂದ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡಿದ್ದರು. ತಮ್ಮ ಪುಟ್ಟ ಮಗ ಮುಕುಲ್ ಶಿವಪುತ್ರನಿಗಾಗಿ ವಸುಂಧರಾ ಶ್ರೀಖಂಡೆಯವರನ್ನು ಎರಡನೇ ವಿವಾಹವಾದರು. ಅವರಿಗೆ ಜನಿಸಿದ ಕಲಾಪಿನಿ ಕೊಂಕಾಲಿ ಕೂಡ ಪ್ರಸಿದ್ಧ ಗಾಯಕಿಯಾಗಿದ್ದಾರೆ.

1992ರ ಜನವರಿ 12ರಂದು ಕುಮಾರ ಗಂಧರ್ವರು ಅಸ್ತಂಗತರಾದರು. ಮಧ್ಯಪ್ರದೇಶ ಸರ್ಕಾರ 1992ರಿಂದ ಪ್ರತಿವರ್ಷ ಅವರ ಗೌರವಾರ್ಥ ಸಂಗೀತ ಕ್ಷೇತ್ರದಲ್ಲಿ ಅಪೂರ್ವ ಸೇವೆ ಸಲ್ಲಿಸಿದ ಒಬ್ಬರಿಗೆ 'ಕುಮಾರ ಗಂಧರ್ವ ಪ್ರಶಸ್ತಿ' ನೀಡಿ ಗೌರವಿಸುತ್ತಿದೆ. 'ಭಾನುಕುಲ್' ಮನೆ ಇಂದು ಕುಮಾರ ಗಂಧರ್ವರ ನೆನಪನ್ನು ಅಜರಾಮರಗೊಳಿಸುವ ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿದೆ.

ಅನುಕರಣೆಯ ಅನುಭವ

ಒಮ್ಮೆ ಭೋಪಾಲ್‌ನಲ್ಲಿ ರಾಷ್ಟ್ರೀಯ ಸಂಗೀತೋತ್ಸವ ನಡೆಯಿತು. ಅಲ್ಲಿಗೆ ಕುಮಾರ ಗಂಧರ್ವರೂ ಹೋಗಿದ್ದರು. ಅವರು, ಗಂಗೂಬಾಯಿ ಹಾನಗಲ್, ಭೀಮಸೇನ ಜೋಷಿ ಮುಂತಾದ ಸಂಗೀತ ದಿಗ್ಗಜರೂ ಇದ್ದರು. ಅಂದು ಅವರೆಲ್ಲ ಪಂಡಿತ್ ಓಂಕಾರನಾಥರ ಸಂಗೀತ ಕಛೇರಿಗೆ ಹೊರಡುವ ಸಿದ್ಧತೆ ನಡೆಸಿದ್ದರು. ಅಷ್ಟರಲ್ಲಿ ಕುಮಾರ ಗಂಧರ್ವರು, 'ಅಲ್ಲಿಗೆ ಯಾಕೆ ಹೋಗೋದು, ಇಲ್ಲಿಯೇ ಪಂ.ಓಂಕಾರನಾಥರ ಹಾಡು ಕೇಳಿಸುತ್ತೇನೆ' ಎಂದವರೇ ಹಾಡತೊಡಗಿದರು. ಅದೆಷ್ಟು ಅದ್ಭುತವಾಗಿತ್ತೆಂದರೆ, ಪಂ.ಓಂಕಾರನಾಥರು ಇವರ ಕೊಠಡಿಯನ್ನು ಹಾದು ಹೋಗುವಾಗ ತಮ್ಮದೇ ಹಾಡನ್ನು ಕೇಳಿ, ಬಹುಶಃ ರೆಕಾರ್ಡ್ ಇರಬಹುದೆಂದು ಇಣುಕಿ ನೋಡಿದ್ದರು. ಒಳ ಬಂದವರೇ ಬರಸೆಳೆದು ಅಪ್ಪಿ, ಅವರೇ ಆಶೀರ್ವದಿಸಿದ್ದು ಒಂದು ಅಪೂರ್ವ ಸಂಗತಿಯಾಗಿದೆ.

ಒಂಟಿತನವೆಂಬ ಕುಣಿಕೆ



8ನೇ ಪುಟದಿಂದ...

ಏಕಾಂಗಿತನ-ನಶೆಯ ವಸ್ತುಗಳು-ಹೆಚ್ಚುವ ಏಕಾಂಗಿತನ, ಇಂತಹ ಒಂದು ವಿಷವರ್ತುಲಕ್ಕೆ ಸಿಲುಕಿದಾಗ ಅಪಾಯಗಳನ್ನು ತಪ್ಪಿಸುವುದು ಅಸಾಧ್ಯ.

ಕೂಡಿ ಬಾಳುವ ದಾರಿಗಳು...

ಕಾಲವನ್ನು ಹಿಂತಿರುಗಿಸಿ ಬುಡಕಟ್ಟು ಜನಾಂಗದವರಂತೆ ಮತ್ತೆ ಬದುಕುವುದಂತೂ ಸಾಧ್ಯವಿಲ್ಲ. ಆದರೆ ಅವರ ಜೀವನಶೈಲಿಯಲ್ಲಿದ್ದ ವಿವೇಕವನ್ನು ಇವತ್ತಿನ ಬದುಕಿಗೆ ಅನ್ವಯಿಸಿಕೊಳ್ಳಲು ಸಾಧ್ಯವಿದೆ. ಅದಕ್ಕಾಗಿ ಜಾತಿ, ಧರ್ಮಗಳನ್ನು ಮನೆಯ ಗೋಡೆಯ ಒಳಗೆ ಸೀಮಿತಗೊಳಿಸಿ ಸಾಮಾಜಿಕ ಒಡನಾಟವನ್ನು ಹೆಚ್ಚಿಸಿಕೊಳ್ಳಬೇಕು. ಒಂದು ಹಳ್ಳಿ, ನಗರದ ಒಂದು ಬಡಾವಣೆ ಅಥವಾ ಬಹುಮಹಡಿ ಕಟ್ಟದ ವಾಸಿಗಳು ಗುಂಪು ಜೀವನದ ಸಾಧ್ಯತೆಗಳನ್ನು ಹುಡುಕಿಕೊಳ್ಳಬೇಕು. ವಾರಕ್ಕೊಮ್ಮೆಯಾದರೂ ಒಂದು ಕಡೆ ಸೇರುವುದು. ಮಕ್ಕಳ ಯೋಗಕ್ಷೇಮಕ್ಕೆ ಒಂದು ಸಾಮಾನ್ಯ ವ್ಯವಸ್ಥೆ ರೂಪಿಸಿಕೊಳ್ಳುವುದು, ಹಬ್ಬಗಳನ್ನು ಒಟ್ಟಾಗಿ ಆಚರಿಸುವುದು-ಹೀಗೆ ಹುಡುಕುತ್ತಾ ಹೋದರೆ ಹಲವಾರು ದಾರಿಗಳು ತೆರೆದುಕೊಳ್ಳುತ್ತವೆ. ಜನರನ್ನು ಒಡೆದು ಆಳುವುದನ್ನೇ ನೀತಿಯಾಗಿಸಿಕೊಂಡಿರುವ ಆಡಳಿತ ವ್ಯವಸ್ಥೆ ಮತ್ತು ಜನರ ವ್ಯಸನಗಳಿಂದ ಭರಪೂರ ಲಾಭ ಪಡೆಯುತ್ತಿರುವ ಕಾರ್ಪೊರೇಟ್‌ಗಳ ಬಿಗಿಹಿಡಿತದಿಂದ ಹೊರಬಂದು ಯೋಚಿಸಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ.

ಮುನ್ನೋಟ 07-01-2024 ರಿಂದ -13-01-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಗೌರವಯುತವಾಗಿ ಇರಲು ಬಹಳ ಪ್ರಯತ್ನ ಪಡುವಿರಿ. ಧನ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆ ನಿಮ್ಮ ಸ್ವಂತ ಅನುಕೂಲಕ್ಕೆ ತಕ್ಕಂತೆ ಇರುತ್ತದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಹೊಟ್ಟೆಯಲ್ಲಿ ಅಜೀರ್ಣ ಆಗುವ ಸಾಧ್ಯತೆ ಇದೆ. ಸಂಗಾತಿಯು ತಮ್ಮ ಕಾರ್ಯ ಸಾಧನೆಗಾಗಿ ನಿಮ್ಮನ್ನು ಓಲೈಸುವರು. ಸಂಸಾರಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ಬುದ್ಧಿವಂತಿಕೆಗೆ ಬೆಲೆ ದೊರೆಯುತ್ತದೆ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ. ಸಮೂಹದಲ್ಲಿ ಮಾತನಾಡುವಾಗ ಹೆಚ್ಚು ಎಚ್ಚರ ಇರಲಿ. ನಿಮ್ಮ ತಾಯಿಗಾಗಿ ಹೆಚ್ಚು ಹಣ ಖರ್ಚು ಮಾಡುವಿರಿ. ಸ್ವಂತ ಪ್ರತಿಷ್ಠೆಗಾಗಿ ಸಂಸಾರದಲ್ಲಿ ಗೊಂದಲಗಳು ಏಳುವ ಸಾಧ್ಯತೆಗಳಿವೆ. ಸಂಗಾತಿಯು ನಡೆಸುವ ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ. ಹಿರಿಯರ ಆಸ್ತಿ ಸಿಗುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭದಲ್ಲಿ ಆಲಸ್ಯವು ನಿಮ್ಮನ್ನು ಆವರಿಸಿಕೊಳ್ಳುತ್ತದೆ. ಉಪನ್ಯಾಸಕರಿಗೆ, ಸಂಗೀತಗಾರರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ನಡವಳಿಕೆಯಿಂದ ಜನರನ್ನುಗೆಲ್ಲುವಿರಿ. ನರ ದೌರ್ಬಲ್ಯ ಇರುವವರು ಹೆಚ್ಚು ಎಚ್ಚರಿಕೆ ವಹಿಸಿರಿ. ಸಂಗಾತಿಗೆ ಉತ್ತಮ ಕೆಲಸ ದೊರೆಯುವ ಸಾಧ್ಯತೆ ಇದೆ. ಕೃಷಿಕರಿಗೆ ಅನಿರೀಕ್ಷಿತ ಲಾಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕುಟುಂಬದ ಬಗ್ಗೆ ಹೆಚ್ಚು ಕಾಳಜಿ ವಹಿಸುವಿರಿ. ಹಿರಿಯರಿಗಾಗಿ ಹೆಚ್ಚು ಹಣ ಖರ್ಚು ಮಾಡುವಿರಿ, ಇಲ್ಲವೇ ಸರ್ಕಾರಕ್ಕೆ ದಂಡದ ರೀತಿಯಲ್ಲಿ ಹಣವನ್ನು ಕಟ್ಟಬೇಕಾಗಬಹುದು. ಧಾರ್ಮಿಕ ಕಾರ್ಯಗಳ ಬಗ್ಗೆ ಹಾಗೂ ಧಾರ್ಮಿಕ ಚಿಂತನೆಗಳ ಬಗ್ಗೆ ಹೆಚ್ಚು ಒಲವು ಮೂಡುತ್ತದೆ. ಕೃಷಿಕರಿಗೆ ಮಧ್ಯಮ ಗತಿಯ ಆದಾಯವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಆದಾಯವಿಲ್ಲದಿದ್ದರೂ, ನಷ್ಟವಿರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕ್ರೀಡಾಪಟುಗಳಿಗೆ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗ ಅಥವಾ ಗೌರವ ದೊರೆಯುತ್ತದೆ. ನಿಮ್ಮ ಆತ್ಮಗೌರವವೂ ಹೆಚ್ಚಾಗಿರುತ್ತದೆ. ಧನ ಆದಾಯ ಮಂದಗತಿಯಲ್ಲಿರುತ್ತದೆ. ಅತ್ಯಂತ ಚುರುಕಾಗಿ ಓಡಾಡಿ ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ಭೂಮಿಯ ವ್ಯವಹಾರವನ್ನು ಮಾಡುವವರಿಗೆ ಹೆಚ್ಚಿನ ಆದಾಯ ವಿರುತ್ತದೆ. ಜೀವ ವಿಜ್ಞಾನ ಮತ್ತು ಕ್ರೀಡೆ ಕಲಿಸುವವರಿಗೆ ಅಗತ್ಯ ಸೌಲಭ್ಯ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸೂಕ್ತ ನಿರ್ಧಾರಗಳಿಲ್ಲದೆ ಗೊಂದಲಕ್ಕೆ ಗುರಿಯಾಗುವಿರಿ. ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ತಕ್ಕಂತೆ ಇರುತ್ತದೆ. ಬಹಳ ಬುದ್ಧಿವಂತಿಕೆಯಿಂದ ವರ್ತಿಸಿ ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳುವಿರಿ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರವಾಗುತ್ತದೆ. ಸಿಗಬೇಕಾದ ಗೌರವಗಳು ಕೈತಪ್ಪಿ ಹೋಗುವ ಸಾಧ್ಯತೆಗಳಿವೆ. ಶತ್ರುಗಳನ್ನು ಜಯಿಸುವ ಸಾಧ್ಯತೆಗಳು ಹೆಚ್ಚಾಗಿವೆ. ವೃತ್ತಿಯಲ್ಲಿ ನಿರೀಕ್ಷಿತ ಏಳಿಗೆ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭ ಆನಂದದಾಯಕವಾಗಿ ಇದ್ದರೂ ಮನಸ್ಸಿನ ಒಳಗಡೆ ಸಾಕಷ್ಟು ತುಮುಲಗಳಿರುತ್ತವೆ. ಆಶ್ವಾಸನೆ ಮಾತುಗಳನ್ನಾಡಿ ಹಣ ಗಳಿಸುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಸ್ಥಾನವನ್ನು ಹೆಚ್ಚು ಮಾಡಿಕೊಳ್ಳಲು ಸಾಕಷ್ಟು ಪ್ರಯತ್ನ ಪಡುವಿರಿ. ಕೃಷಿ ಭೂಮಿಯನ್ನು ಖರೀದಿ ಮಾಡುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಸಿಗುವುದು ಕಡಿಮೆ. ವೃತ್ತಿಯಲ್ಲಿದ್ದ ಗೊಂದಲಗಳು ದೂರವಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವ್ಯಾಪಾರ ವ್ಯವಹಾರಗಳಲ್ಲಿ ಸಾಕಷ್ಟು ಹಿಡಿತ ಸಾಧಿಸುವಿರಿ. ಅದಿರು ಉತ್ಪಾದಕರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಧನ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ಕೃಷಿಯಿಂದ ಆದಾಯ ಬರುವ ಸಾಧ್ಯತೆ ಇದೆ. ಆಹಾರ ವಸ್ತುಗಳನ್ನು ತಯಾರಿಸುವವರಿಗೆ ಲಾಭವಿದೆ. ಶತ್ರುಗಳನ್ನು ಮಣಿಸಲು ಹೊಸ ತಂತ್ರಗಳನ್ನು ಹೂಡುವಿರಿ. ಕೆಲವು ರಾಜಕಾರಣಿಗಳಿಗೆ ಮನಸ್ಸಿನಲ್ಲಿ ಇದ್ದ ಗೊಂದಲಗಳು ದೂರವಾಗುತ್ತವೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಮಾಜದಿಂದ ಹೆಚ್ಚು ಗೌರವ ದೊರೆಯುವ ಸಾಧ್ಯತೆಗಳಿವೆ. ವಿದೇಶದಲ್ಲಿ ಉನ್ನತ ಶಿಕ್ಷಣವನ್ನು ಪಡೆಯಬೇಕೆನ್ನುವವರಿಗೆ ಅವಕಾಶಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ದೊರೆಯುತ್ತದೆ. ಮೂತ್ರ ಸಂಬಂಧಿ ಕಾಯಿಲೆಗಳಿರುವವರು ಹೆಚ್ಚು ಎಚ್ಚರ ವಹಿಸಿರಿ. ಸಂಗಾತಿಯು ನಡೆಸುವ ವ್ಯವಹಾರಗಳಲ್ಲಿ ಅಷ್ಟು ಅಭಿವೃದ್ಧಿ ಇರುವುದಿಲ್ಲ. ವೃತ್ತಿಯಲ್ಲಿ ಗೌರವ ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಧರ್ಮ ಕರ್ಮ ಅರಿತು ನಡೆಯುವಿರಿ. ಹೆಚ್ಚು ಮಾತನಾಡದೆ ಕೆಲಸ ಸಾಧಿಸುವಿರಿ. ಬಂಧುಗಳು ನಿಮ್ಮನ್ನು ನೋಡಿ ಹೊಟ್ಟೆಕಿಚ್ಚು ಪಡುವರು. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಸ್ಥಿರಾಸ್ತಿಯನ್ನು ಮಾಡಬೇಕೆನ್ನುವವರಿಗೆ ಈಗ ಉತ್ತಮ ಕಾಲ. ಕೆಲವರಿಗೆ ಮೂಳೆಯ ತೊಂದರೆ ಅಥವಾ ಹೊಟ್ಟೆಯಲ್ಲಿನ ತೊಂದರೆ ಕಾಣಿಸಬಹುದು. ಸರ್ಕಾರಿ ಕಚೇರಿಯ ಕೆಲಸಕಾರ್ಯಗಳಲ್ಲಿ ನಿಧಾನಗತಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರು ಅವರ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಆಮದು ಮತ್ತು ರಫ್ತು ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ವಿದೇಶಿ ಭಾಷೆಗಳನ್ನು ಕಲಿಯುವವರಿಗೆ ಹೆಚ್ಚಿನ ಸವಲತ್ತುಗಳು ದೊರೆಯುತ್ತವೆ. ಗುರು ಸ್ಥಾನದಲ್ಲಿರುವವರಿಗೆ ಅಥವಾ ಪೀಠಾಧಿಪತಿಗಳಿಗೆ ಹೆಚ್ಚಿನ ಗೌರವ ಮನ್ನಣೆ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಹಣ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಲೇವಾದೇವಿ ವ್ಯವಹಾರಗಳು ಅಷ್ಟು ಒಳಿತಲ್ಲ. ಕೆಲವು ಹಿರಿಯರನ್ನು ಓಲೈಸಿ ಹಣ ಪಡೆದುಕೊಳ್ಳಲು ಪ್ರಯತ್ನ ಮಾಡುವಿರಿ. ಆಸ್ತಿ ಖರೀದಿ ಮಾಡಿದರೂ ದಾಖಲೆಗಳ ಬಗ್ಗೆ ಸರಿಯಾಗಿ ಪರಿಶೀಲಿಸಿರಿ. ವಿದ್ಯಾರ್ಥಿಗಳಿಗೆ ಸಂಪೂರ್ಣ ಯಶಸ್ಸು ಇರುವುದಿಲ್ಲ. ಉದ್ಯೋಗದಲ್ಲಿ ಹಿರಿಯ ಅಧಿಕಾರಿಗಳು ನಿಮ್ಮ ಬಗ್ಗೆ ಕೋಪೋದ್ರಿಕ್ತ ಆಗುವವರು. ಹೈನುಗಾರಿಕೆ ಮಾಡುವವರಿಗೆ ಲಾಭ ಇರುತ್ತದೆ.

ಪದಬಂಧ 2823



ಮೇಲಿನಿಂದ ಕೆಳಕ್ಕೆ

1. ಸತ್ಕರ್ಮದ ಒಳ್ಳೆಯ ದಿವಸ 4
2. ಕಿವಿಗೆ ಇಂಪಾದ ಸವಿ ಮಾತು 5
3. ದಾನವರಿಗೆ ಸಮಾನರಾದ ಮಂದಿ 5
4. ಊರಿನಲ್ಲಿ ತೇರು ಸಂಚರಿಸುವ ರಸ್ತೆ 4
5. ವಿಷಯ ಅರ್ಥಂಬರ್ಥವಾದಾಗ ಸಿಗುವ ಗರಲ 2
7. ತಲೆಕೆಳಗಾದ ಶಕ್ತಿ 2
9. ಜೈಲುವಾಸಕ್ಕೀಡು ಮಾಡುತ್ತಿರುವ ವ್ಯಾಘ್ರ ನಖ 5
12. ಯಾವುದೇ ಆಡಂಬರ, ಡಂಬಾಚಾರವಿಲ್ಲದೆ ಬದುಕು ನಡೆಸುತ್ತಿರುವ ವ್ಯಕ್ತಿ 5
15. ಏನೇ ಅಡೆತಡೆಗಳು ಬಂದರೂ ಹಿನ್ನಡೆಯದ ಬಲವಾದ ಸಂಕಲ್ಪ 5
16. ಮಾರ್ಗದರ್ಶಕನಿಗಾಗಿ ಚಂದ್ರ ಪೂರ್ಣನಾಗುತ್ತಾನೆ 5
17. ಚುಚ್ಚಿ ನೋವುಂಟು ಮಾಡುವ ಕಠಿಣ ಹಾದಿ 4
18. ಆನೆಯನ್ನು ಅಳೆಯುವಾಗ ಸಿಗುವ ಮೂರಡಿ 2
20. ಇದೀಗ ಬಲವರ್ಧನೆಗೆ ಪ್ರಚಲಿತವಾಗಿರುವ ಸಿರಿಧಾನ್ಯಗಳ ಪೇಯ 2
21. ಅರಸನಿಗೆ ಬರುವ ತೀವ್ರವಾದ ಸಿಟ್ಟು 4

ಎಡದಿಂದ ಬಲಕ್ಕೆ

1. ಮಾನವರಲ್ಲೇ ಅತಿ ಶ್ರೇಷ್ಠನೆನಿಸಿ ದೈವತ್ವ ಪಡೆದವ 5
3. ಅಯೋಧ್ಯೆಯಲ್ಲಿ ಸಂಕಲ್ಪದ ನಿರ್ಮಾಣ 5
5. ಆಚಾರದ ಜೊತೆ ಸೇರುವ ವಿಷಯ 3
6. ಎಲ್ಲವೂ ಸೇರಿದಂತೆ 3
8. ಇಂದ್ರ ಗದ್ದುಗೆಯನ್ನು ಆಸೆಪಟ್ಟು ಅಗಸ್ತ್ಯನ ಶಾಪಕ್ಕೊಳಗಾದ ಚಕ್ರವರ್ತಿ 3
10. ನೀರಿನಲ್ಲಿ ಹುಟ್ಟಿದವಳು 3
11. ಜೈನರ ವಸತಿ 3
13. ಚಾಂದ್ರಮಾನದ ಹೊಸವರ್ಷ 3
14. ಎಲ್ಲೋ ಅಲ್ಲೊಂದು ಇಲ್ಲೊಂದು ಅಪರೂಪವಾದದ್ದು 3
17. ತಮಿಳುನಾಡಿನ ಜನರ ಆರಾಧ್ಯ ದೈವ ಸುಬ್ರಹ್ಮಣ್ಯ 3
19. ಶಿವನ ಕೈಯಲ್ಲಿ ಸದ್ದು ಮಾಡುವ ಚರ್ಮ ವಾದ್ಯ 3
20. ಪ್ರಾಣಧಾರಕ ಜೀವ 3
22. ಜಗತ್ತಿನ ಮಂದಿಗೆ ತಾಯಿ 3
23. ಬಾಲಕೃಷ್ಣನಿಗೆ ಹಾಲುಣಿಸಲು ಬಂದವಳು 3
24. ಅಶ್ವದಳದ ಅಧಿಪತಿ 5
25. ಭೂಮಿಗಿಳಿದ ಭಗವಂತ ತಳೆಯುವ ಆಕಾರ 5


ಪದಬಂಧ ಉತ್ತರ -2822

ಮೇಲಿಂದ ಕೆಳಕ್ಕೆ


1.ದೈವಾಂಶ 2. ನಮನ 3.ಉಳುಕು 4.ನಗಾರಿ 7.ಮಾಧವ 9.ರಿಸರಿ 10,ನವಮ 11.ಗದರು 12.ಕುರುಕು 14.ಸುಮತಿ. 19.ಹಡಪ 21.ಪವಿತ್ರ 22.ಪವನ 23.ದೇವತೆ 24.ಪರಶು 25.ಮಲಯ

ಎಡದಿಂದ ಬಲಕ್ಕೆ

1. ದೈನಂದಿನ 3.ಉತ್ತೇಜನ 5.ಮದುಮಗಳು 6.ಶತಮಾನ 8.ಕುರಿಮರಿ 10.ನವಯುಗ 12.ಕುದುರಿಸು 15.ಭಾವ 16.ದರ್ಬಾರು 17.ಮತ್ತು 18.ಮಹಜರು 20.ಕುಲಪತಿ 22.ಪದೇಪದೇ 24.ಪತ್ರಪ್ರೇಮ 26.ವಸ್ತ್ರಾಲಂಕಾರ 27.ನವಗೀತೆ 28.ಶುಭೋದಯ


ಕಲಾವಿದ: ಮೊಹಮ್ಮದ್ ಫಕ್ರುಲ್ ಇಸ್ಲಾಂ ಮಜುಂದಾರ್, ಬಾಂಗ್ಲಾದೇಶ, ವಿಧಾನ: ವುಡ್‌ಕಟ್


ಕಲಾವಿದ: ಜುಲಿಅನ್ ಸೆಬಾಸ್ಟಿಯನ್ ಕಾರ್ನೆರೊ, ಅರ್ಜೆಂಟೀನಾ, ವಿಧಾನ: ಲಿನೋಕಟ್


ಕಲಾವಿದ: ಸ್ಪಂದನ್ ಎಸ್. ಮುಂಡೆ, ಭಾರತ, ವಿಧಾನ: ಎಚಿಂಗ್

ಬೈಬಲ್ ಅನ್ನು ಅಚ್ಚು ಮಾಡುವುದಕ್ಕೆ ಶೋಧಿಸಿದ ಪ್ರಿಂಟ್‌ಮೇಕಿಂಗ್ ತಂತ್ರಜ್ಞಾನ ಬಳಸಿ ಜನರು ಚಿತ್ರವನ್ನೂ ಅಚ್ಚು ಮಾಡತೊಡಗಿದರು. ಈ ಕಲಾಪ್ರಕಾರ ಏಸ್ತಟಿಕ್‌ನ ಕಾರಣಕ್ಕಾಗಿ ಜಗತ್ತಿನಾದ್ಯಂತ ಹೆಚ್ಚು ಮನ್ನಣೆಯನ್ನು ಪಡೆದುಕೊಂಡಿತು.

ಚಿತ್ರಾನುಭವದ 'ಪ್ರಿಂಟ್‌ಮೇಕಿಂಗ್' ಚಮತ್ಕಾರ



ಕಲೆ

ಸುಕೃತ ಎಸ್.

ಚೌಕಟ್ಟಿನೊಳಗೆ ಉಬ್ಬು-ತಗ್ಗುಗಳ ಕೆತ್ತನೆ. ಅದರ ಮೇಲೆ ಬಣ್ಣ ತೀಡಿದರೆ ಉಬ್ಬು ಇದ್ದ ಜಾಗದಲ್ಲಿ ಕೂರುತ್ತದೆ. ತಗ್ಗಿನ ಜಾಗಕ್ಕೆ ಬಣ್ಣ ಮೆತ್ತಿಕೊಳ್ಳುವುದಿಲ್ಲ. ಎಷ್ಟು ಜಾಗದಲ್ಲಿ ಬಣ್ಣ ಇರಬೇಕು, ಎಷ್ಟು ಜಾಗದಲ್ಲಿ ಬಣ್ಣ ಇರಬಾರದು ಎಂಬ ಸ್ಪಷ್ಟ ಕಲ್ಪನೆಯೇ ಕಲಾಕೃತಿಗೆ ಆಕಾರ ನೀಡುತ್ತದೆ. ಚೌಕಟ್ಟಿನಲ್ಲಿ ಮೂಡಿದ ಈ ಆಕಾರವನ್ನು ಕ್ಯಾನ್ವಾಸ್ (ಹಾಳೆ ಅಥವಾ ಬಟ್ಟೆ) ಮೇಲೆ ಅಚ್ಚು ಮಾಡಬೇಕು. ಹೀಗೆ ಬಣ್ಣ ಇರುವ, ಇಲ್ಲದಿರುವ ಜಾಗಗಳೇ ಚಿತ್ರವಾಗಿ ಮೂಡುತ್ತದೆ.

ಪ್ರಿಂಟ್‌ಮೇಕಿಂಗ್ ಒಂದು ಕರಕುಶಲ ಕಲೆ. ಇಲ್ಲಿ ಚಿತ್ರಗಳನ್ನು ಬರೆಯುವುದಲ್ಲ, ಮೂಡಿಸಬೇಕು. ಕೊರೆಯುವ ಮೂಲಕ, ಕೆತ್ತುವ ಮೂಲಕ ಚಿತ್ರಗಳನ್ನು ಸೃಷ್ಟಿಸಬೇಕು. ಹೀಗೆ ಚಿತ್ರಗಳನ್ನು ಸೃಷ್ಟಿಸಲು ಹಲವು ವಿಧಾನಗಳಿವೆ. ಲೀನೊಕಟ್, ಮೆಜೋಟಿಂಟ್, ವುಡ್‌ಕಟ್, ಸ್ಕ್ರೀನ್‌ಪ್ರಿಂಟ್, ಎಚಿಂಗ್, ಅಕ್ವಾಟಿಂಟ್...

ವುಡ್‌ಕಟ್ ಎಂದರೆ, ಮರದ ತುಂಡಿನ ಮೇಲೆ ಕಲಾಕೃತಿಗಳನ್ನು ಕೆತ್ತುವುದು. ಲೀನೊಕಟ್ ಎಂದರೆ, ಲೀನೊಲಿಯಂ ಅಥವಾ ರಬ್ಬರ್‌ಶೀಟ್‌ನ ಮೇಲೆ ಕೊರೆಯುವುದು. ಎಚ್ಚಿಂಗ್, ಅಕ್ವಾಟಿಂಟ್, ಮೆಜೊಟಿಂಟ್ ಅಂದರೆ, ಲೋಹ ಅದರಲ್ಲೂ ತಾಮ್ರದ ಪ್ಲೇಟಿನ ಮೇಲೆ ಕೊರೆಯುವುದು. ಹೀಗೆ ಕೆತ್ತಿದ, ಕೊರೆದ ಚಿತ್ರವನ್ನು ಕ್ಯಾನ್ವಾಸ್ ಮೇಲೆ ಅಚ್ಚು ಮಾಡಲಾಗುತ್ತದೆ. ಮರ ಅಥವಾ ತಾಮ್ರದ ಪ್ಲೇಟ್‌ಗಳ ಮೇಲೆ ಮತ್ತೊಮ್ಮೆ ಬಣ್ಣಗಳನ್ನು ಮೆತ್ತಿ ಕಲಾಕೃತಿಯ ಇನ್ನೂ ಹಲವು ಪ್ರತಿಗಳನ್ನು ಪಡೆದುಕೊಳ್ಳಬಹುದು. ಇದೇ ಈ ಚಿತ್ರಕಲಾ ಪ್ರಕಾರದ ವೈಶಿಷ್ಟ್ಯ.

ಈ ಚಿತ್ರಕಲಾ ಪ್ರಕಾರ ಭಾರತಕ್ಕೆ ಹೊಸತೇನೂ ಅಲ್ಲ; ಇಲ್ಲಿ ಇದಕ್ಕೆ ದೊಡ್ಡ ಇತಿಹಾಸವೇ ಇದೆ. ಆದರೆ, ಈಗ ಜನರು ಇದನ್ನು ಮರೆತಿದ್ದಾರಷ್ಟೆ. ರಾಜಾ ರವಿವರ್ಮನ ಕಲಾಕೃತಿಗಳು ಯಾರಿಗೆ ನೆನಪಿಲ್ಲ ಹೇಳಿ. ಇವರು ಕೂಡ ಪ್ರಿಂಟ್‌ಮೇಕಿಂಗ್ ತಂತ್ರವನ್ನು ಬಳಸಿ ಕಲಾಕೃತಿಗಳನ್ನು ಮಾಡುತ್ತಿದ್ದರು. ಬಾಂಬೆಯಲ್ಲಿ 'ರವಿವರ್ಮ ಪ್ರೆಸ್' ಎಂಬ ಪ್ರೆಸ್ ತೆರೆದಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಕೋಲ್ಕತ್ತ ಪ್ರಿಂಟ್‌ಮೇಕಿಂಗ್‌ನ ಕೇಂದ್ರವಾಗಿತ್ತು. ಈಗ ದೇಶದಲ್ಲಿ ಕೆಲವು ಚಿತ್ರಕಲಾ ಕಾಲೇಜುಗಳಲ್ಲಿ 'ಪ್ರಿಂಟ್‌ಮೇಕಿಂಗ್' ಪಠ್ಯವಾಗಿದೆ.

ಬೆಂಗಳೂರಿನಲ್ಲಿ ಚಿತ್ರ ಪ್ರದರ್ಶನ

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಬಳಿಯ ಜಿಗಣಿಯಲ್ಲಿರುವ 'ಲಾವರು ಆರ್ಟ್ ಸೆಂಟರ್'ನಲ್ಲಿ ಪ್ರಿಂಟ್‌ಮೇಕಿಂಗ್ ಕಲಾಕೃತಿಗಳ 'ಬೆಂಗಳೂರು ಪ್ರಿಂಟ್ ಎಕ್ಸ್‌ಚೇಂಜ್ ಇಂಟರ್‌ನ್ಯಾಷನಲ್ 2023' ಪ್ರದರ್ಶನ ನಡೆಯುತ್ತಿದೆ. 2023ರ ಡಿಸೆಂಬರ್ 16ರಿಂದ ನಡೆಯುತ್ತಿರುವ ಈ ಪ್ರದರ್ಶನವು ಇದೇ ಜನವರಿ 15ರಂದು ಕೊನೆಗೊಳ್ಳಲಿದೆ. ಲಾವರು ಆರ್ಟ್ ಸೆಂಟರ್, ಕಳೆದ ಮೂರು ವರ್ಷಗಳಿಂದ ಇಂಥ ಕಲಾಕೃತಿಗಳ ಪ್ರದರ್ಶನ ನಡೆಸುತ್ತಿದೆ. ಪ್ರಿಂಟ್‌ಮೇಕಿಂಗ್ ಕಲೆಯನ್ನು ಹೆಚ್ಚು ಹೆಚ್ಚು ಜನರಿಗೆ ತಲುಪಿಸುವ ಗುರಿ ಈ ಸೆಂಟರ್‌ನದ್ದು.

ಈ ಪ್ರದರ್ಶನದಲ್ಲಿ ಸುಮಾರು 60 ಕಲಾವಿದರ ಕಲಾಕೃತಿಗಳು ಪ್ರದರ್ಶಿತವಾಗುತ್ತಿವೆ. ಇದರಲ್ಲಿ ಬೆಂಗಳೂರು ಸೇರಿದಂತೆ ಭಾರತದ ವಿವಿಧ ಭಾಗದ 34 ಕಲಾವಿದರ ಕಲಾಕೃತಿಗಳೂ ಇವೆ. ಪ್ರದರ್ಶನಕ್ಕೆ ಬರುವ ಕಲಾಕೃತಿಗಳನ್ನು, ಕಲಾವಿದರ ನಡುವೆಯೇ ಹಂಚಿಕೆ (ಎಕ್ಸ್‌ಚೇಂಜ್) ಮಾಡಲಾಗುತ್ತದೆ. ರಷ್ಯಾ, ಇಸ್ರೇಲ್, ಬಾಂಗ್ಲಾದೇಶ, ಕೆನಡಾ ಸೇರಿ 26 ದೇಶಗಳಿಂದ ತರಿಸಿಕೊಳ್ಳಲಾದ ಕಲಾಕೃತಿಗಳು ಪ್ರದರ್ಶನಗೊಳ್ಳುತ್ತಿವೆ.

> **ಒಂದೊಮ್ಮೆ ಚಿತ್ರ ಬಿಡಿಸುವಾಗ ತಪ್ಪಾಯಿತು ಎಂದುಕೊಳ್ಳಿ. ಅದನ್ನು ಬಣ್ಣಗಳ ಸಹಾಯದಿಂದ ಸರಿಪಡಿಸಬಹುದು. ಆದರೆ, ಪ್ರಿಂಟ್‌ಮೇಕಿಂಗ್‌ನಲ್ಲಿ ತಪ್ಪಿಗೆ ಅವಕಾಶವಿಲ್ಲ. ಒಂದು ಬಾರಿ ಚಿತ್ರವನ್ನು ಕೆತ್ತಿದರೆ ಅಥವಾ ಕೊರೆದರೆ ಮುಗಿಯಿತು. ತಪ್ಪಾದರೆ, ಮತ್ತೊಮ್ಮೆ ಹೊಸದಾಗಿಯೇ ಚಿತ್ರ ಕೆತ್ತಬೇಕಾಗುತ್ತದೆ. ಇದಕ್ಕಾಗಿಯೇ ಪ್ರಿಂಟ್‌ಮೇಕಿಂಗ್‌ಗೆ ಹೆಚ್ಚು ಏಕಾಗ್ರತೆ ಹಾಗೂ ಹಲವು ದಿನಗಳ ಪರಿಶ್ರಮ ಬೇಕಾಗುತ್ತದೆ**
> **ಸುರೇಶ್ ಕುಮಾರ್ ಮಹತೊ,** ಲಾವರು ಆರ್ಟ್ ಸೆಂಟರ್‌ನ ಕ್ಯುರೇಟರ್

> **ಕಲಾಕೃತಿಯ ಸ್ಪರ್ಶವೂ ಅನುಭವ ನೀಡುತ್ತದೆ. ಚಿತ್ರಕಲೆಯಲ್ಲಿನ ಒಂದು ರೇಖೆ, ಮರ ಅಥವಾ ಕಲ್ಲಿನ ಶಿಲ್ಪದಲ್ಲಿನ ಕೆತ್ತನೆ ನಮಗೆ ಅನುಭವ ನೀಡುತ್ತದೆ. ಆದರೆ, ಪ್ರಿಂಟ್‌ಮೇಕಿಂಗ್‌ನಲ್ಲಿ ನೋಡುವುದೇ ಅನುಭವ. ಇದು ಪ್ರಿಂಟ್‌ಮೇಕಿಂಗ್‌ನ ದೊಡ್ಡ ಶಕ್ತಿಯೂ ಹೌದು, ಕಲಾವಿದನಿಗೆ ದೊಡ್ಡ ಸವಾಲೂ ಹೌದು. ಕೆಲವೊಮ್ಮೆ ಇದು ಮಿತಿಯೂ ಆಗುತ್ತದೆ. ನೋಡುವವನಿಗೆ ನೋಟದಲ್ಲಿಯೇ ಅನುಭವ ದಾಟಿಸಬೇಕು. ಆದ್ದರಿಂದಲೇ, ಪ್ರಿಂಟ್‌ಮೇಕಿಂಗ್ ಕಲಾವಿದರ ಸೃಜಶೀಲತೆಗೆ ಎಲ್ಲೆ ಇಲ್ಲ**
> **ಸುನೀಲ್ ರಾಮಕೃಷ್ಣ,** ಲಾವರು ಆರ್ಟ್ ಸೊಸೈಟಿಯ ಟ್ರಸ್ಟಿ

ರಂಗನಟಿಯರ ದಾರುಣ ಬದುಕಿಗೆ ಕನ್ನಡಿ

ಒಳನೋಟ

ಅರುಣ್ ಜೋಳದಕೂಡ್ಲಿಗಿ

ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದಲ್ಲಿ ಜನಪದ ರಂಗಭೂಮಿಯನ್ನು ಹೊರತುಪಡಿಸಿ 'ಹವ್ಯಾಸಕ್ಕೆ' ಹಳ್ಳಿಗಳಲ್ಲಿ ಹಬ್ಬ, ಜಾತ್ರೆಗಳಿಗೆ ಸಾಮಾಜಿಕ ನಾಟಕ ಆಡುವ ಪರಂಪರೆ ಇದೆ. ಹೀಗೆ ಪುರುಷರ ನಾಟಕ ಆಡುವ ಹವ್ಯಾಸದಿಂದಾಗಿ ನಟನೆಯನ್ನೇ ವೃತ್ತಿಯನ್ನಾಗಿಸಿಕೊಂಡ ಮಹಿಳೆಯರೂ ಇದ್ದಾರೆ. ವಿಜಯನಗರ ಜಿಲ್ಲೆಯ ಕೂಡ್ಲಿಗಿ ಇಂತಹ ನಟಿಯರ ತವರೂರು. ಆದರೆ ಈ ನಟಿಯರನ್ನು ಸಮಾಜವು ಕಲಾವಿದೆಯರು ಎನ್ನುವ ಗೌರವಕ್ಕಿಂತ ಅವಮಾನಕಾರಿ ನುಡಿಗಟ್ಟುಗಳಲ್ಲಿ ಗುರುತಿಸುವುದೇ ಹೆಚ್ಚು. ಹೀಗಾಗಿ ಇವರನ್ನು ಕಲಾವಿದೆಯರನ್ನಾಗಿ ಸರ್ಕಾರ ಗುರುತಿಸಿದ್ದು ತುಂಬಾ ಕಡಿಮೆ. ಇಂತಹ ಅಲಕ್ಷಿತ ನಟಿಯರ ಪುಟ್ಟ ಜೀವನ ಚರಿತ್ರೆಗಳನ್ನು ಪತ್ರಕರ್ತ ಭೀಮಣ್ಣ ಗಜಾಪುರ 'ಬಣ್ಣ ಮಾಸಿದ ಬದುಕು' ಕೃತಿಯಲ್ಲಿ ದಾಖಲಿಸಿದ್ದಾರೆ.

ಸುಜಾತ ಅಕ್ಕಿ ಅವರ 'ಬಳ್ಳಾರಿ ಜಿಲ್ಲೆಯ ರಂಗನಟಿಯರು' ಸಂಶೋಧನೆಯಲ್ಲಿ ಕೂಡ್ಲಿಗಿಯ ಆಯ್ದ ನಟಿಯರ ಪರಿಚಯ ಬಿಟ್ಟರೆ, ನಿರ್ದಿಷ್ಟವಾಗಿ ಕೂಡ್ಲಿಗಿ ಪರಿಸರದ ರಂಗನಟಿಯರ ಕಲೆ ಮತ್ತು ಬದುಕನ್ನು ಆಧರಿಸಿ ಬರೆದ ಮಹತ್ವದ ದಾಖಲೆ ಇದು.

ಈ ಕೃತಿಯಲ್ಲಿ 40 ರಂಗನಟಿಯರ ಸಂಕ್ಷಿಪ್ತ ಪರಿಚಯವಿದೆ. ಉಳಿದ 40 ನಟಿಯರ ಹೆಸರುಗಳಿವೆ. ಕಾರಣ, ಇವರು ತಮ್ಮ ಪರಿಚಯ ಹೇಳಿಕೊಳ್ಳಲು ಹಿಂಜರಿದಿರುವುದು. ನಟಿಯರ ಪರಿಚಯದಲ್ಲಿ ಗಮನಸೆಳೆಯುವುದು, ಅವರು ಅಭಿನಯಿಸಿದ ನಾಟಕಗಳ ಸಂಖ್ಯೆ ಕನಿಷ್ಠ ಮುನ್ನೂರರಿಂದ 2 ಸಾವಿರ ಪ್ರದರ್ಶನ ದಾಟುತ್ತದೆನ್ನುವುದು. ಇದರಲ್ಲಿನ ಬಹುತೇಕ ನಟಿಯರು ಕೆಳಸ್ತರದ ಪರಿಶಿಷ್ಟ ಜಾತಿ/ಪಂಗಡ ಹಿಂದುಳಿದ ವರ್ಗಗಳಿಗೆ ಸೇರಿದವರು. ಕೆಲವರು ದೇವದಾಸಿಯರು. ಓದುವ ವಯಸ್ಸಿನಲ್ಲಿಯೇ ನಟಿಯರಾಗುವುದರಿಂದ ರಂಗಭೂಮಿ ಪಾಠಶಾಲೆಯಾಗಿ, ಇವರ ಶಾಲಾ ವಿದ್ಯಾಭ್ಯಾಸ ಕಡಿಮೆ. ನಾಟಕಕ್ಕೆ ಸಿಗುವ ಸಂಭಾವನೆ ದಿನದ ಬದುಕಿಗೆ ಸಾಕಾಗಿ ಉಳಿತಾಯ ಆಗುವುದಿಲ್ಲ. ವಯಸ್ಸಾದಂತೆ ನಾಟಕಗಳಿಗೆ ಬೇಡಿಕೆ ಕುಗ್ಗುತ್ತಲೂ ಅಕಾಲಿಕ ಮುಪ್ಪು ಆವರಿಸಿ ಬದುಕು ದುಸ್ತರವಾಗುತ್ತದೆ. ಕೆಲವರಿಗೆ ಮದುವೆಯೂ ಆಗದೆ ಮಾತೃಪ್ರಧಾನ ಕುಟುಂಬದ ಭಾರ ಹೊರುತ್ತಾರೆ. ಮುಂದುವರಿದು ಈ ನಟಿಯರ ಮಕ್ಕಳ ಶಿಕ್ಷಣ/ಉದ್ಯೋಗದ ಮಟ್ಟ ಕೂಡ ಕೆಳಸ್ತರದ್ದಾಗಿದೆ. ಅಂತಹ ಕಷ್ಟದ ಬದುಕನ್ನೇ ಲೇಖಕರು 'ಬಣ್ಣ ಮಾಸಿದ ಬದುಕು' ಎಂದಿದ್ದಾರೆ. ಮುನ್ನುಡಿಯಲ್ಲಿ ಪತ್ರಕರ್ತೆ ಮಂಜುಶ್ರೀ ಕಡಕೋಳ ರಂಗಭೂಮಿಯಲ್ಲಿ ನಟಿಯರ ಬದುಕಿನ ಚಾರಿತ್ರಿಕ ಪಲ್ಲಟಗಳನ್ನು ಗುರುತಿಸಿದ್ದಾರೆ.

ಈ ಸಾಮಾಜಿಕ ನಾಟಕಗಳ ಒಂದೆಳೆ ಊರಿನ ಗೌಡ ಅಥವಾ ಶ್ರೀಮಂತರ ದಬ್ಬಾಳಿಕೆ-ಒಳ್ಳೆಯ ಜನರಿಗೆ ಒದಗುವ ಕಷ್ಟದ ಸರಮಾಲೆ, ಕೆಡುಕಿಗೆ ಶಿಕ್ಷೆ, ಒಳಿತಿಗೆ ರಕ್ಷೆ ಎನ್ನುವ ಮುಕ್ತಾಯ. ಇಲ್ಲಿನ ಬಹುಪಾಲು ನಟಿಯರು ಸಾಮಾಜಿಕ ನಾಟಕಗಳಿಗೆ ಸೀಮಿತವಾಗದೆ ಪೌರಾಣಿಕ-ಐತಿಹಾಸಿಕ ಬಯಲಾಟಗಳಲ್ಲಿ ನಟಿಸಿರುವರು. ಸಾಮಾಜಿಕ ನಾಟಕಗಳಿಗೆ ಸಿಗದ ಗೌರವ ಬಯಲಾಟಗಳ ಅಭಿನಯಕ್ಕೆ ಸಿಕ್ಕಿರುವುದು ಅಚ್ಚರಿಯ ಸಂಗತಿ. ಬಯಲಾಟಗಳಲ್ಲಿ ಜನರ ಕಣ್ಣಲ್ಲಿ ದೇವರುಗಳಾದ ಅನೇಕ ಪೌರಾಣಿಕ ಪಾತ್ರಗಳು ಜೀವತಳೆದು ರಂಗಕ್ಕೆ ಬರುವುದೂ ಒಂದು ಕಾರಣವಾಗಿರಬೇಕು. ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಕೈಗೊಳ್ಳಬೇಕಾದ ಕೂಡ್ಲಿಗಿ ರಂಗನಟಿಯರ ಬದುಕಿನ ವಿದ್ಯಮಾನವನ್ನು ಪತ್ರಕರ್ತರೊಬ್ಬರು ಕೈಗೆತ್ತಿಗೊಂಡಿರುವುದು ಮೆಚ್ಚತಕ್ಕ ಸಂಗತಿ. ಹಾಗೆಯೇ ಪತ್ರಿಕಾ ಬರಹಕ್ಕಿರುವ ಚೌಕಟ್ಟನ್ನು ಮೀರಲಾಗದ್ದು ಮತ್ತು ನಟಿಯರ ಸಂಕೀರ್ಣ ಅನುಭವವನ್ನು ಸರಳರೇಖೆಯಂತೆ ಕಟ್ಟಿಕೊಟ್ಟಿರುವುದು ಈ ಕೃತಿಯ ಮಿತಿ. ಗಂಡಿನೆದುರು ನಟಿಯರು ಕೆಲವು ಸಂಗತಿಗಳನ್ನು ಹೇಳಿಕೊಂಡಂತಿಲ್ಲ. ಹಾಗಾಗಿ ಇದೊಂದು ಅಪೂರ್ಣ ಕಥನ. ಈ ಪುಸ್ತಕದಿಂದ ಉತ್ಸುಕರಾಗಿ ಪರಿಚಿತ ನಟಿಯರು ಮತ್ತಷ್ಟು ಮುಕ್ತವಾಗಿ ಮಾಹಿತಿ ನೀಡಿದರೆ, ದಾಖಲೆಗೆ ಹಿಂಜರಿದವರು ಮಾಹಿತಿ ನೀಡಲು ಮುಂದಾದರೆ ಪರಿಷ್ಕೃತ ಮುದ್ರಣದಲ್ಲಿ ಕೃತಿಯನ್ನು ವಿಸ್ತರಿಸಬಹುದಾಗಿದೆ. ಆದಾಗ್ಯೂ ಕೂಡ್ಲಿಗಿ ಪರಿಸರದ ರಂಗನಟಿಯರ ಹಲವು ನೆಲೆಗಳ ಅಧ್ಯಯನಕ್ಕೆ ಈ ಕೃತಿ ನೆರವಾಗುತ್ತದೆ.


ಪು: 128 ₹175

ಬಣ್ಣ ಮಾಸಿದ ಬದುಕು
ಲೇ: ಲೇ: ಭೀಮಣ್ಣ ಗಜಾಪುರ
ಪ್ರ: ಕಾವ್ಯ ಪ್ರಕಾಶನ, ಗಜಾಪುರ
ಸಂ:9901589218

ಆಟೊಗಳ ಸಿಂಗಾರ ಸಿರಿ

8ನೇ ಪುಟದಿಂದ...

ಕಳೆದ ಒಂದೂವರೆ ದಶಕದಿಂದ ಈಚೆಗೆ ಈ ಖಯಾಲಿ ಅನೇಕ ಆಟೊ ಚಾಲಕರಲ್ಲಿ ಕಂಡುಬರುತ್ತಿದೆ. ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ, ತಮ್ಮ ಆಟೊ ಎದ್ದು ಕಾಣಬೇಕೆಂಬ ಹಂಬಲವೇ ಇದಕ್ಕೆ ಪ್ರೇರಣೆ' ಎಂದು 35 ವರ್ಷಗಳಿಂದ ನಗರದಲ್ಲಿ ಆಟೊ ಚಾಲನೆಯ ವೃತ್ತಿಯಲ್ಲಿರುವ ಸನಾವುಲ್ಲಾ ಶೇಖ್ ಅನುಭವ ಹಂಚಿಕೊಂಡರು.

ದಾವಣಗೆರೆ ಹೊರತುಪಡಿಸಿದರೆ ಪಕ್ಕದ ಚಿತ್ರದುರ್ಗ ನಗರ ಮತ್ತು ಚನ್ನಗಿರಿ ಪಟ್ಟಣಗಳಲ್ಲಿ ಇದೇ ರೀತಿ ಆಟೊಗಳ ಅಲಂಕಾರಕ್ಕೆ ಪ್ರಾಶಸ್ತ್ಯ ನೀಡಲಾಗುತ್ತದೆ. ಆದರೆ, ಅಂಥ ಆಟೊಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಸಂಕ್ರಾಂತಿ ಹಾಗೂ ಕಾರಹುಣ್ಣಿಮೆಗೆ ಅಣಿಯಾಗುವ ಹೋರಿಯಂತೆ, ಜಾತ್ರೆಗೆ ಸಿದ್ಧಗೊಳ್ಳುವ ತೇರಿನಂತೆ ಆಟೊಗಳನ್ನು ಸಿಂಗರಿಸುವ ಆಟೊ ಚಾಲಕರಿಗೆ ಈ ವಿಷಯದಲ್ಲಿ ಹಿಂಜರಿಕೆಯೇ ಇಲ್ಲ ಎಂದೂ ಅವರು ಮಾತು ಸೇರಿಸಿದರು.

ತರಹೇವಾರಿ ಅಲಂಕಾರ

ಆಟೊ ಒಳಾಂಗಣದ ಅಂದ ಹೆಚ್ಚಿಸಲು ಪ್ಲೈವುಡ್ ಪಿಒಪಿ (ಒಳ ಚಾವಣಿಯ ವಿನ್ಯಾಸಕ್ಕೆ ಈ ಪದ ಪರ್ಯಾಯವೇ ಆಗಿದೆ) ಅಳವಡಿಸಿ


ಭಿನ್ನ ವಿನ್ಯಾಸದ ಆಟೊದೊಂದಿಗೆ ಸನಾವುಲ್ಲಾ ಶೇಖ್

ಅದರಲ್ಲೂ ಲೈಟಿಂಗ್‌ಗೆ ಆದ್ಯತೆ ನೀಡಲಾಗುತ್ತದೆ. ಹೊರಮೈ ಮತ್ತು ಒಳಮೈಗೆ ಎಲ್‌ಇಡಿ ಲೈಟ್‌ಗಳನ್ನು ಬಳಸುವುದು ಇತ್ತೀಚಿನ ಶೋಕಿ.

ಒಳಗೆ ಸೌಂಡ್ ಸಿಸ್ಟಂ ಅಳವಡಿಕೆಯೂ ಖರ್ಚಿನ ಬಾಬತ್ತು. ಅವರವರ ಸಾಮರ್ಥ್ಯಕ್ಕೆ ಅನುಗುಣವಾದ ಸ್ಪೀಕರ್‌ಗಳು ಲಭ್ಯವಿದ್ದು, ಡಿ.ಜೆ. ಅನುಭವ ನೀಡುವ ಸ್ಪೀಕರ್‌ಗಳಿಗೆ ಈಗ ಆದ್ಯತೆ. ಜೊತೆಗೆ ಆಟೊದ ಹ್ಯಾಂಡಲ್ ಮೇಲೆ ಸ್ಟೀರಿಂಗ್ ಅಳವಡಿಕೆ ಹೊಸ ಸೇರ್ಪಡೆಯಾಗಿದೆ. ಸೆಲ್ಫ್ ಸ್ಟಾರ್ಟರ್ ಸೌಲಭ್ಯ ಬೇಕೆಂದರೆ ಈ ಸ್ಟೀರಿಂಗ್ ಬೇಕೇಬೇಕು. ಅದರ ಮೇಲೆ ಸ್ವಲ್ಪ ಜಾಗವನ್ನು ಮೊಬೈಲ್ ಸ್ಟ್ಯಾಂಡ್‌ಗೆ ಮೀಸಲಿಡಲಾಗುತ್ತದೆ. ಸಿ.ಸಿ.ಟಿ.ವಿ ಕ್ಯಾಮೆರಾ, ಡಿಜಿಟಲ್ ಪೇಮೆಂಟ್ ಕ್ಯೂಆರ್ ಕೋಡ್ ಶೀಟ್‌ಗಳನ್ನೂ ಕೆಲವರು ಹಾಕಿಸಿದ್ದಾರೆ.

ಇನ್ನು ಸೀಟಿಂಗ್‌ನಲ್ಲಿ ವಿವಿಧ ಬಗೆಯುಂಟು. ಐಷಾರಾಮಿ ಕಾರ್‌ಗಳಲ್ಲಿ ಇರುವಂತೆಯೇ ಆಟೊಗಳ ಸೀಟಿಂಗ್‌ಗೆ ಕುಷನ್ ಹಾಕಿಸುವವರೂ ಇದ್ದಾರೆ.

ಚಕ್ರ (ವ್ಹೀಲ್)ಗಳಿಗೆ ಸ್ಟೀಲ್ ಅಥವಾ ಅಲ್ಯುಮಿನಿಯಂ ಕ್ಯಾಪ್ ಬಳಸಲಾಗುತ್ತದೆ. ಅದೂ ಆಟೊಗಳನ್ನು ಮಿರಮಿರ ಮಿಂಚುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ಮೆಕ್ಯಾನಿಕ್‌ಗಳ ಹೇಳಿಕೆ. ಇದರ ಜೊತೆಜೊತೆಗೇ ಕನ್ನಡಿಗಳ (ಸೈಡ್, ಫ್ರಂಟ್, ಬ್ಯಾಕ್ ಮಿರರ್) ಜೋಡಣೆ ಕೂಡ ಮೆರುಗನ್ನು ನೀಡುತ್ತದೆ.

ಆಟೊಗಳ ಔಟ್‌ಲುಕ್‌ಗೆ ಆ್ಯಂಟೆನಾಗಳನ್ನು ಬಳಸಲಾಗುತ್ತದೆ. ಅದರಲ್ಲಿ 'ಜಿಂಕೆ ಕೊಂಬು' ಎಂಬುದು ಲುಕ್ ಮತ್ತು ಖದರ್ ಹೆಚ್ಚಿಸಲು ಪ್ರಮುಖವಾದದ್ದು ಎಂಬ ನಂಬಿಕೆಯೂ ಇಲ್ಲಿನ ಚಾಲಕರಲ್ಲಿದೆ. ಈ ಕೊಂಬು ಅಸಲಿ ಜಿಂಕೆಯದ್ದಲ್ಲ; ಅಲ್ಯುಮಿನಿಯಂ ಅಥವಾ ಸ್ಟೀಲ್ ಲೋಹದಿಂದ ಸಿದ್ಧವಾದದ್ದಾಗಿರುತ್ತದೆ. ಕೆಲವರು ಕಾರ್‌ಗಳ ಲೋಗೊಗಳ ನಕಲಿ ಮಾದರಿಗಳನ್ನು ಅಳವಡಿಸುತ್ತಾರೆ. ಜಾಗ್ವಾರ್‌ನ ಲೋಗೊ ಅಂಥವುಗಳಲ್ಲಿ ಪ್ರಮುಖವಾದುದು.

ಆ್ಯಂಟೇನಾ ಔಟ್‌ಲುಕ್ ಎಂಬುದು ಮತ್ತೊಂದು ವಿಧದ ಅಲಂಕಾರ. ಇದಕ್ಕಾಗಿ ಹಲವು ಬಗೆಯ 'ಏರಿಯಲ್'ಗಳ ಬಳಕೆ ಮಾಡುತ್ತಾರೆ. ಅದರಲ್ಲಿ 'ಬುಲೆಟ್ ಏರಿಯಲ್'ಗೆ ಪ್ರಾಶಸ್ತ್ಯ. ಆಟೊಗಳ ಮೇಲೆ ಕಡ್ಡಿಯಂಥ ಹತ್ತಾರು ಏರಿಯಲ್‌ಗಳು ರಾರಾಜಿಸುತ್ತಿರುತ್ತವೆ. ಆದರೆ, ಯಾವುದೂ ತಾಂತ್ರಿಕವಾಗಿ ಏನೂ ಕೆಲಸ ಮಾಡುವುದಿಲ್ಲ.

ಶೋ ಹಾರ್ನ್, ಕಾರ್ ಬಂಪರ್, ಸ್ಟೀಲ್ ಮಡ್ ಗಾರ್ಡ್, ಸ್ಟೀಲ್ ಲ್ಯಾಡರ್, ಕ್ರೋಮಿಯಂ ಹಾರ್ನ್ ಅಳವಡಿಸುವಂತೆ ದುಂಬಾಲು ಬೀಳುವವರೇ ಅಧಿಕ ಎನ್ನುವುದನ್ನು ಅಂದಗಾಣಿಸುವ ಕಾಯಕದಲ್ಲಿ ನಿರತರಾದವರು ತಿಳಿಸುತ್ತಾರೆ.


ಮೊದಲ ಓದು

'ಹೈಕು'ಗಳಂಥ ಕಿರುನೋಟ; ಆಳ ಅರ್ಥ

ಕಲಾವಿದರಾಗಿ, ಕಲಾ ವಿಮರ್ಶಕರಾಗಿರುವ ಗಿರಿಧರ್ ಖಾಸನೀಸ್ ಅವರ ಚೊಚ್ಚಲ ಕೃತಿ ಇದಾಗಿದೆ. ಅನುಭವ, ಅನುಭಾವಗಳ ಗುಚ್ಛದಂತೆ ತೋರುವ ಸಣ್ಣಕಥೆಗಳು, ಗಪದ್ಯಗಳ ಹೆಣಿಗೆಯನ್ನು ಇಲ್ಲಿ ಕಾಣಬಹುದು.

'ಯಾರಿಗೆ ಯಾರುಂಟು', 'ಜಟಿಲ ಕಾನನದ ಕುಟಿಲ ಪಥಗಳಲಿ' ಹಾಗೂ 'ನೀ ಮಾಯೆಯೊಳಗೋ' ಎಂಬ ಮೂರು ಭಾಗಗಳಲ್ಲಿ ತಮ್ಮ ಬರವಣಿಗೆಯನ್ನು ಈ ಕೃತಿಯಲ್ಲಿ ಲೇಖಕರು ವಿಂಗಡಿಸಿದ್ದಾರೆ. ಒಂದು ರೀತಿಯಲ್ಲಿ 'ಹೈಕು'ಗಳಂತೆ ಕಾಣುವ ಇಲ್ಲಿನ ಬರವಣಿಗೆಯೊಳಗಿನ ಅರ್ಥ ಹಿರಿದು.


ಕೃತಿಯ ಶೀರ್ಷಿಕೆ ಹೊತ್ತ 'ಎಲ್ಲಿಂದಲೋ ಹಾರಿ ಬಂದು' ಇದಕ್ಕೆ ನಿದರ್ಶನ. ಇಲ್ಲಿ ಹೈಕು ಬರೆಯಲೆಂದೇ ಕುಳಿತ ಲೇಖಕನಿಗೆ ಗುಬ್ಬಕ್ಕ ಕೇಳುವ ಪ್ರಶ್ನೆಯೊಂದನ್ನಿಟ್ಟುಕೊಂಡು ಜಗತ್ತಿನ ವಾಸ್ತವ ಸ್ಥಿತಿಯನ್ನು ಉಲ್ಲೇಖಿಸುವಂತೆ ತೋರುತ್ತದೆ. ಪಕ್ಕದ ಮನೆ ಹುಡುಗಿ, ಹೇಳಿ ಮಿ.ಮಾರ್ಕಂಡೇಯ, ಮಂಗಳವಾರ ಮಧ್ಯಾಹ್ನದ ಶೋ, ಚಂಡಮಾರುತದ ಮುನ್ಸೂಚನೆ, ನೀನು ನನ್ನನ್ನು ಕೊಲ್ಲಬೇಕು... ಹೀಗೆ ಒಂದೊಂದು ಸಣ್ಣಕಥೆ, ಗಪದ್ಯಗಳೂ ಭಿನ್ನ ವಿಷಯವನ್ನು ಇಟ್ಟುಕೊಂಡು ಹೆಣೆದ ಆಳವಾದ ಅರ್ಥವುಳ್ಳ ಬರವಣಿಗೆಗಳಾಗಿವೆ. ಅವುಗಳ ಒಳನೋಟ ಹಲವು. ಈ ರಚನೆಗಳನ್ನು ಸಾಹಿತ್ಯದ ಒಂದು ಪ್ರಕಾರಕ್ಕೆ ಸೇರಿಸುವುದು ಅಸಾಧ್ಯ. ಶೀರ್ಷಿಕೆಯೇ ರಚನೆಗಳ ಭಾಗವಾಗಿರುವ ಭಿನ್ನ ಪ್ರಯೋಗ, ನವಿರಾದ ಹಾಸ್ಯ, ಅನಿರೀಕ್ಷಿತ ಅಂತ್ಯ ಈ ರಚನೆಗಳ ವಿಶೇಷತೆ.



ಪು: 160 ₹195

ಎಲ್ಲಿಂದಲೋ ಹಾರಿ ಬಂದು
ಲೇ: ಗಿರಿಧರ್ ಖಾಸನೀಸ್
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900

ಗ್ರಾಮೀಣ ಬದುಕಿನ ಅನುಭವದ ಕೃತಿ



ಪು: 88 ₹120

ಪೋಸ್ಟಾಫೀಸಿನಲಿ ಅಕ್ಕನ ಜಡ್ಜಮೆಂಟು
ಲೇ: ಅಮರೇಶ ಗಿಣಿವಾರ
ಪ್ರ: ಮೇಘನಾ ಪ್ರಕಾಶನ
ಸಂ : 7338180848


ಗ್ರಾಮ್ಯ ಜೀವನವನ್ನು ಬಿಂಬಿಸುವ ಈ ಲಲಿತ ಪ್ರಬಂಧಗಳ ವಸ್ತು ವಿಷಯದಲ್ಲಿ ವೈವಿಧ್ಯವಿದೆ. ದಟ್ಟ ಅನುಭವದ ಜತೆಗೆ ಲೇಖಕರ ಸೂಕ್ಷ್ಮ ಒಳನೋಟಗಳು ಸೇರಿಕೊಂಡಿರುವುದರಿಂದ ಕೆಲವು ಕಡೆಗಳಲ್ಲಿ ವಿಶ್ಲೇಷಣಾತ್ಮಕ ಶೈಲಿಯನ್ನು ನೋಡಬಹುದು. ಎಲ್ಲರ ಬದುಕಿನ ಕನವರಿಕೆಯ ಭಾಗವಾಗಿರುವ, ಆಹ್ಲಾದ ಭಾವವನ್ನು ತುಂಬಿಕೊಡುವ ಬಾಲ್ಯದ ಸವಿರುಚಿಯನ್ನು ಲೇಖಕರು ಇಲ್ಲಿ ಉಣಬಡಿಸಿದ್ದಾರೆ. ಜೀರಂಡಗಿಯ ಮೇಲಿನ ಆಕರ್ಷಣೆ, ರೇಡಿಯೊದ ಬಗೆಗಿನ ವಿಸ್ಮಯ ಭಾವ, ಕರಡಿಯಾಟ, ಹಗಲುವೇಷಗಾರರ ಮೋಡಿ ಇವೆಲ್ಲದರ ಅನುಭವ ಓದುತ್ತಾ ಹೋದಂತೆ ಓದುಗರನ್ನು ಆವರಿಸಿಕೊಳ್ಳುತ್ತದೆ ಮತ್ತು ತಮ್ಮ ಬಾಲ್ಯದ ಅನುಭವಗಳನ್ನು ನೆನಪಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ರಾಯಚೂರು ಸುತ್ತಲ ಗ್ರಾಮೀಣ ಭಾಷೆಯ ಸೊಗಡಿನ ಸಂಭಾಷಣೆಗಳಿರುವ ಈ ಪ್ರಬಂಧಗಳಿಗೆ ದೇಸಿತನವಿದೆ.

ಆರೋಗ್ಯ ರಕ್ಷಣೆ ಮಾಹಿತಿಯ ಕಣಜ

ನಾಡಿನ ವಿವಿಧ ವೈದ್ಯರು ಆರೋಗ್ಯದ ಕುರಿತಾಗಿ ಈವರೆಗೆ ಬರೆದ ಪ್ರಮುಖ ಲೇಖನಗಳನ್ನು ಒಳಗೊಂಡ ಕೃತಿ 'ಸಮಗ್ರ ಆರೋಗ್ಯಕ್ಕೆ ಸಮೃದ್ಧ ವೈದ್ಯ ಸಾಹಿತ್ಯ'. ಕೃತಿಯಲ್ಲಿ 120 ವೈದ್ಯರ ಲೇಖನಗಳಿದ್ದು, ಡಾ.ಸಿ.ಆರ್. ಚಂದ್ರಶೇಖರ್, ಡಾ.ನಾ. ಸೋಮೇಶ್ವರ ಒಟ್ಟಾಗಿ ಈ ಕೃತಿಯನ್ನು ಸಂಪಾದಿಸಿದ್ದಾರೆ.

'ಕನ್ನಡದಲ್ಲಿ 2000ಕ್ಕೂ ಹೆಚ್ಚು ಆರೋಗ್ಯ ಪುಸ್ತಕಗಳು ಪ್ರಕಟಗೊಂಡಿದ್ದರೂ, ಮಾರುಕಟ್ಟೆಯಲ್ಲಿ ದೊರೆಯುವ ಪುಸ್ತಕಗಳ ಸಂಖ್ಯೆ 500 ದಾಟುವುದಿಲ್ಲ. ಏಕೆಂದರೆ ಹಿರಿಯರ ಪುಸ್ತಕಗಳು ಮತ್ತೆ ಮತ್ತೆ ಮರುಮುದ್ರಣವಾಗುತ್ತಿಲ್ಲ. ಹೀಗಾಗಿ ಕನ್ನಡ ವೈದ್ಯಕೀಯ ಸಾಹಿತ್ಯ ಪ್ರಮುಖ ಲೇಖನಗಳನ್ನು ಒಂದೆಡೆ ತರುವುದು ಕೃತಿಯ ಉದ್ದೇಶ. ಆದಾಗ್ಯೂ ಇದು ಸಮಗ್ರವಾಗಿಲ್ಲ. ಹಲವು ವೈದ್ಯರ ಲೇಖನಗಳು ದೊರೆತಿಲ್ಲ' ಎಂದು ಸಂಪಾದಕರು ಕೃತಿಯ ಪ್ರಾರಂಭದಲ್ಲಿಯೇ ಹೇಳಿದ್ದಾರೆ.

ಕನ್ನಡ ವೈದ್ಯ ಸಾಹಿತ್ಯದ ಅವಲೋಕನದಿಂದ ಹಿಡಿದು ಆರೋಗ್ಯದ ಕುರಿತಾದ ಅನೇಕ ಮಾಹಿತಿಪೂರ್ಣ ಲೇಖನಗಳು ಈ ಕೃತಿಯಲ್ಲಿವೆ. ದೇಹದಲ್ಲಿನ ವಿವಿಧ ಆರೋಗ್ಯ ಸಮಸ್ಯೆಗಳ ಕುರಿತಾಗಿ ಆಯಾ ವಿಭಾಗದ ತಜ್ಞರೇ ಮಾಹಿತಿ ನೀಡಿರುವುದು ಅರ್ಥಪೂರ್ಣವಾಗಿದೆ. ಬರಹಗಳು ಸರಳ ಭಾಷೆಯಲ್ಲಿ ಅರ್ಥವಾಗುವಂತಿವೆ.



ಪು: 583 ₹600

ಸಮಗ್ರ ಆರೋಗ್ಯಕ್ಕೆ ಸಮೃದ್ಧ ವೈದ್ಯ ಸಾಹಿತ್ಯ
ಸಂ: ಡಾ.ಸಿ.ಆರ್.ಚಂದ್ರಶೇಖರ್, ಡಾ.ನಾ.ಸೋಮೇಶ್ವರ
ಪ್ರ: ವಿಕ್ರಮ್ ಪ್ರಕಾಶನ
ಸಂ:8971091760

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೀಳ್ವರಿಜು

ಕೀಳ್ವರಿಜು (ನಾ). ಹೀನವಾದ ರೂಪ (ಕೀಳಾದ ರೂಪ)

(ಕೀಳ್ + ಪರಿಜು)

ವಾಲ್ಮೀಕಿಯ ಮಂಥರೆ ಪಾತ್ರವು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆಯಲ್ಲಿ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಗಳ ವಿಶಾಲ ನೆಲೆಯಲ್ಲಿ ಮರುಸೃಷ್ಟಿಗೊಂಡಿದೆ. ಅವರಿಗೆ ಮಂಥರೆ ಪಾತ್ರದ ಬಗ್ಗೆ ವಿಶೇಷ ಒಲವು. ಅವರು ಮಂಥರೆಗೆ ಕಾವ್ಯ ಕರುಣಾರಸದ ಲಹರಿಯ ಹರಿಯ ಸಿರಿ ಕೈಗಳ ಸ್ಪರ್ಶದಿಂದ ಹೀನವಾದ ರೂಪ ಇಲ್ಲವಾಗುತ್ತದೆ ಎಂದು ಹೇಳಿ, ಅವಳ ಆತ್ಮ ಸೌಂದರ್ಯವನ್ನು ಪ್ರಕಾಶಿಸಿದ್ದಾರೆ. ಆ ಸಂದರ್ಭದಲ್ಲಿ 'ಕೀಳ್ವರಿಜು' ಪದ ಸೃಷ್ಟಿಸಿದ್ದಾರೆ. ಪಾತ್ರಕ್ಕೆ ಅಂಟಿದ ಕಳಂಕವನ್ನು ತೊಡೆದು ಮಮತೆಯ ಮಂಥರೆಯನ್ನಾಗಿಸಿದ್ದಾರೆ

ಕಾವ್ಯ ಕರುಣಾರಸದ ಲಹರಿಯ ಹರಿಯ ಸಿರಿಯ
ಕರಪದ್ಮ ಚುಂಬನಕೆ ನಿನ್ನ ಕೀಳ್ವರಿಜಳಿದು
ಮತ್ತೆ ಹೃದಯದ ಲಸದ್ರೂಪಂ ಮೆರೆಯದಿಹುದೆ?

ಕೆಟ್ಟಾಸೆಬೀಡು

ಕೆಟ್ಟಾಸೆಬೀಡು (ನಾ). ದುರಾಸೆಯ ನೆಲೆ; ಕೆಟ್ಟ ಆಶೆಯ ಆಶ್ರಯ

(ಕೆಟ್ಟಾಸೆ + ಬೀಡು)

ಭರತನಿಗೆ ಗುರುವಸಿಷ್ಠರು 'ರೋದಿಸಿ ಫಲವಿಲ್ಲ; ದಶರಥನ ಪಿತೃಕಾರ್ಯವನ್ನು ಕೈಗೊಳ್ಳು' ಎಂದು ತಿಳಿಸುವರು. ಜಡವಾಗಿ ಜೀವವನ್ನು ಅಣಕಿಸುವಂತೆ ನಿಷ್ಪಂದವಾಗಿ ತಂದೆ ಸಾರ್ವಭೌಮನ ಚಟ್ಟದ ಮೇಲಿನ ಕಳೇಬರವನ್ನು ಕಂಡಾಗ ಅವನಲ್ಲಿ ಉಂಟಾದ ಭಾವ ತುಮುಲವನ್ನು ಕವಿಯು 'ಕೆಟ್ಟಾಸೆ ಬೀಡು' ಎಂಬ ಪದ ಸೃಷ್ಟಿಸಿ ಬಣ್ಣಿಸಿದ್ದಾರೆ. ಅದು ಈ ನೆಲದ ಎಲ್ಲ ಅಹಂ, ಸ್ವಾರ್ಥ, ದುರಾಸೆಗಳ ಅರ್ಥರಹಿತ ಜೀವನವನ್ನು ಧ್ವನಿಸುತ್ತದೆ.

ಸಂತೋಷನಂದನದ ಕಲ್ಪತರುವಿಂ ಜೋಲ್ವ
ವಾತ್ಸಲ್ಯ ಭಾವದಾ ಹೆಜ್ಜೇನು ಹುಟ್ಟಿಯೋಲ್
ಸುಖದ ಮಾಗಿರ್ದತ್ತೊ ತಾನದೆ ಇಂದು ಸೂಡಿನೊಲ್
ಕೆಟ್ಟಾಸೆ ಬೀಡಿನೊಲ್, ಬಾಳ್‌ಗನಸುಗಳಿಗೆಲ್ಲ
ಕೊನೆಯ ಸುಡುಗಾಡಿನೊಲ್ ಕಾಣುತಿರೆ.

ಕಳೆದ ಕಾಲದ ಸಾಕ್ಷಿ



ಮೀರ್ ಪುರ್ ಖಾಸ್-ಸಿಂಧ್-ಸ್ತೂಪ ಉತ್ಖನನದಲ್ಲಿ ದೊರೆತ ಬುದ್ಧ

ಡಾ. ಎಚ್. ಎಸ್. ಅನುಪಮಾ

ಋತು ಹೊರಳುತ್ತಿದೆ. ಪ್ರತಿ ಬಾರಿ ಒಂದಷ್ಟು ಹೊಸದನ್ನು ಹೊತ್ತು ತರುತ್ತಿದೆ. ಹಳೆಯದರ ಕುರುಹು ಉದುರಿದ ಎಲೆಯ ತೊಟ್ಟು ಅಂಟಿದ ಗುರುತಿನಲ್ಲಿ, ಮರದ ಕಾಂಡದೊಳಗೆ ಸೇರಿಹೋದ ವರ್ತುಲದಲ್ಲಿ ಕಾಣದಂತೆ ಅಡಗಿರುತ್ತವೆ. ಕಾಣದ ಕಾಲ ಸಾಕ್ಷಿಗಳ ಕಾಣುವ ಹಂಬಲದಿಂದ ಚರಿತ್ರೆಯ ಪುಟಗಳಲ್ಲಿ ನಡೆದಾಡಿ ಬಂದೆ. ಮುಂಬೈನ ಗೇಟ್ ವೇ ಆಫ್ ಇಂಡಿಯಾದ ಬಳಿಯಿರುವ 'ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ' ಅಥವಾ 'ಛತ್ರಪತಿ ಶಿವಾಜಿ ಮಹಾರಾಜ ವಸ್ತುಸಂಗ್ರಹಾಲಯ'ದ ನೆಲದೈವಗಳ ಭೇಟಿ ಮಾಡಿದೆ. 'ಹೇಗಿದ್ದ ನಾವು ಹೀಗಾದ' ಚರಿತ್ರೆಯ ಅರುಹತ್ತ, ಬಾಳಿಹೋದ ಕಾಲದ ವೈಭವ, ಸವಾಲು, ಅಚ್ಚರಿ, ದುಃಖಕ್ಕೆ ಸಾಕ್ಷಿಯಾದ 70 ಸಾವಿರ ವಸ್ತುಗಳನ್ನು ಒಡಲುಗೊಂಡ ವಸ್ತುಸಂಗ್ರಹಾಲಯವನ್ನು ಒಮ್ಮೆ ಸುತ್ತಿ ಬರಲು ದಿನವಿಡೀ ಬೇಕು. ಬರಿದೆ ನೋಡಲು ವಾರಗಳೇ ಬೇಕಾದಾವು. ಅದು ರೂಪುಗೊಂಡ ಕಥನವು ಇತಿಹಾಸದ ಒಂದು ಅಧ್ಯಾಯಕ್ಕೆ ಸರಿ ಮಿಗಿಲು.

> ಯುವ ಪೀಳಿಗೆಯನ್ನು ಕಲೆ, ಚರಿತ್ರೆಗಳ ಅಧ್ಯಯನ ಮಾಡುವಂತೆ ಪ್ರೋತ್ಸಾಹಿಸಲು, ಅಂತಾರಾಷ್ಟ್ರೀಯ ಕಲೆ, ಸಂಗೀತ, ಚರಿತ್ರೆಗಳನ್ನು ಭಾರತದ ಜೊತೆಯಿಟ್ಟು ಅರಿಯಲು ವಸ್ತುಸಂಗ್ರಹಾಲಯಗಳು ಅವಕಾಶ ಕಲ್ಪಿಸುತ್ತವೆ. ಅದಕ್ಕೆ 'ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ'ನಲ್ಲಿ ಅಡಿಗಡಿಗೂ ಪುಷ್ಟಿ ಸಿಗುತ್ತದೆ.

ಕ್ರಿ. ಶ. 1905ರಲ್ಲಿ ವೇಲ್ಸ್ ರಾಜಕುವರ ಮುಂಬೈಗೆ ಬಂದ ನೆನಪಿಗೆ ವಸ್ತುಸಂಗ್ರಹಾಲಯವನ್ನು ತೆರೆಯಬೇಕೆಂದು ನಾಗರಿಕರು ಯೋಚಿಸಿದರು. ಫಿರೋಜ್ ಶಾ ಮೆಹ್ತಾ, ಬದ್ರುದ್ದೀನ್ ತ್ಯಾಬ್ಜಿ, ಜಸ್ಟಿಸ್ ಚಂದಾವರ್ಕರ್, ಸಸೋನ್ ಡೇವಿಡ್, ನರೋತ್ತಮದಾಸ್ ಗೋಕುಲದಾಸ್ ಮುಂತಾದವರು 'ರಾಯಲ್ ವಿಸಿಟ್ ಮೆಮೊರಿಯಲ್ ಫಂಡ್' ಸ್ಥಾಪಿಸಿದರು. ಸಾರ್ವಜನಿಕ ದೇಣಿಗೆ ಮತ್ತು ಬಾಂಬೆ ಪ್ರೆಸಿಡೆನ್ಸಿ ಸರ್ಕಾರದ ನೆರವಿನಿಂದ ಯೋಜನೆ ಸಿದ್ಧವಾಯಿತು. ವಿನ್ಯಾಸ ರೂಪಿಸಲು ಮುಕ್ತ ಸ್ಪರ್ಧೆ ನಡೆದು (ಮುಂದೆ ಗೇಟ್ ವೇ ಆಫ್ ಇಂಡಿಯಾ ವಿನ್ಯಾಸಗೊಳಿಸಿದ) ಸ್ಕಾಟಿಶ್ ವಾಸ್ತುಶಿಲ್ಪಿ ಜಾರ್ಜ್ ವಿಟೆಟ್ ಯಶಸ್ವಿಯಾದನು. ದ್ವೀಪನಗರದ ತುತ್ತತುದಿಯಲ್ಲಿ ನಿವೇಶನ ದೊರೆಯಿತು. ವಿಜಯಪುರದ ಗೋಲ್‌ಗುಂಬಜ್, ಗೋಲ್ಕೊಂಡ ಕೋಟೆ, ಮುಘಲ್-ಮರಾಠಾ-ಜೈನ ವಾಸ್ತುಶಿಲ್ಪಗಳ ಮಿಶ್ರಣವಾದ ಇಂಡೋ-ಸಾರ್ಸೆನಿಕ್ ಶೈಲಿಯಲ್ಲಿ ಕಟ್ಟಡ ಕಟ್ಟಲಾಯಿತು.

1915ರ ಹೊತ್ತಿಗೆ ಸಿದ್ಧವಾದರೂ ಮೊದಲ ಮಹಾಯುದ್ಧದ ಕಾರಣ ಮಕ್ಕಳ ಕಲ್ಯಾಣ ಕೇಂದ್ರವಾಗಿ, ಮಿಲಿಟರಿ ಆಸ್ಪತ್ರೆಯಾಗಿ ಕಟ್ಟಡ ಬಳಕೆಯಾಯಿತು. 1920ರಲ್ಲಿ ಟ್ರಸ್ಟಿನ ಸುಪರ್ದಿಗೆ ಬಂತು. ಮುಂಬೈನ ಸಿರಿವಂತರು, ಕಲಾಸಕ್ತರು, ಸ್ಥಳೀಯ ನಿವಾಸಿಗಳು, ಪಾರ್ಸಿ ವ್ಯಾಪಾರಸ್ಥರು ದೇಣಿಗೆ, ತಮ್ಮ ಸಂಗ್ರಹದಲ್ಲಿದ್ದ ವಸ್ತುಗಳನ್ನು ಇಲ್ಲಿಗೆ ಉದಾರವಾಗಿ ನೀಡಿದರು. 1922ರಲ್ಲಿ ವೇಲ್ಸ್‌ನ ರಾಜಕುವರ ವಸ್ತುಸಂಗ್ರಹಾಲಯ ಉದ್ಘಾಟಿಸಿದನು.

ಅಲ್ಲಿ ಕಲೆ, ಪುರಾತತ್ವ, ನ್ಯಾಚುರಲ್ ಹಿಸ್ಟರಿಯ ಮೂರು ವಿಭಾಗಗಳಿವೆ. ಆರು ಭಾಷೆಗಳಲ್ಲಿ ಆಡಿಯೊ ವಿವರಣೆ ವ್ಯವಸ್ಥೆಯಿದೆ. ರಾಜ್ಯ ಸರ್ಕಾರ ಮತ್ತು ಮುಂಬೈ ಮುನಿಸಿಪಲ್ ಕಾರ್ಪೊರೇಶನ್ ಧನಸಹಾಯದೊಂದಿಗೆ ಇದು ನಡೆಯುತ್ತಿದ್ದು, 1998ರಲ್ಲಿ 'ಛತ್ರಪತಿ ಶಿವಾಜಿ ಮಹಾರಾಜ್ ವಸ್ತು ಸಂಗ್ರಹಾಲಯ' ಎಂದು ಹೆಸರು ಬದಲಾಯಿತು.



ಯಜ್ಞ ವರಾಹ

ಅಲೌಕಿಕ ಆವರಣ

ಒಳಹೊಕ್ಕ ಕೂಡಲೇ 9ನೆಯ ಶತಮಾನದ ಮಧ್ಯಪ್ರದೇಶದ ಬೃಹತ್ ಯಜ್ಞ ವರಾಹ ಎದುರುಗೊಳ್ಳುತ್ತದೆ. ಮುಖ್ಯ ಗುಂಬದ ಕೆಳಗಿನ ವಿಶಾಲ ಆವರಣದ ಮೂರು ಮೂಲೆಗಳಲ್ಲಿ ಬೋಧಿಸತ್ವ ಮೈತ್ರೇಯ ಮತ್ತು ಗ್ರೀಸ್‌ನ ಡಯೋನಿಸಸ್; ಈಜಿಪ್ಟಿನ ನದಿದೇವತೆ ಹಾಪಿ ಮತ್ತು ಭಾರತದ ಗಂಗೆ; ಈಜಿಪ್ಟಿನ ಸಿಂಹಮುಖಿ ದೇವ ಸೆಖ್ಮೆಟ್ ಮತ್ತು ಭಾರತದ ನರಸಿಂಹರು ವಿವರ, ವರ್ಣನೆ, ತುಲನೆಗಳೊಂದಿಗೆ ಜೊತೆಜೊತೆ ಕಾಣಿಸುತ್ತಾರೆ. ನಾಸಿಕ್‌ನ ಬೃಹತ್ ವಾಡೆಯೊಂದರ ಮರದ ಕಟಾಂಜನವನ್ನು ಅದಿರುವ ಹಾಗೆಯೇ ಆಕರ್ಷಕವಾಗಿ ಬಳಸಿ ಹತ್ತಿಹೋಗುವ ವ್ಯವಸ್ಥೆ ಮಾಡಲಾಗಿದೆ. ಮೂರು ಮಹಡಿಗಳಲ್ಲಿ ವಸ್ತುಗಳಿವೆ. ವಸ್ತುಗಳ ಹಿನ್ನೆಲೆ, ಬಣ್ಣ, ಸ್ಥಳ, ಮೌನ ಎಲ್ಲವೂ ಅವುಗಳ ಪ್ರಾಚೀನತೆ, ಗಹನತೆ, ಮೌಲ್ಯವನ್ನು ತಿಳಿಸುವಂತಿವೆ. ಪುರಾತನ ಶಿಲ್ಪಗಳಿರುವ ಕಡೆ ಕತ್ತಲನ್ನು ಸೃಷ್ಟಿಸಿ, ಶಿಲ್ಪಗಳ ಮೇಲಷ್ಟೇ ಬೆಳಕು ಬೀಳುವಂತೆ ಮಾಡಿ ದೇಶಕಾಲದಾಚೆಯ ಅಲೌಕಿಕ ಆವರಣದ ಭಾಸವಾಗುತ್ತದೆ.

ಶಿಲಾಯುಗದಿಂದ ಇಂದಿನವರೆಗೆ ಭಾರತ ರೂಪುಗೊಂಡ ಚರಿತ್ರೆಯನ್ನು ಪ್ರಸ್ತುತಪಡಿಸುವ ಶಿಲೆ, ಟೆರ್ರಾಕೋಟಾ, ಕಂಚು, ಮರದ ಸಾವಿರಾರು ವಿಗ್ರಹಗಳು; ಜಪಾನ್, ಚೀನಾದ ಆನೆದಂತ ಹಾಗೂ ಪಿಂಗಾಣಿ ವಸ್ತುಗಳು; ಗುಪ್ತ, ಮೌರ್ಯ, ಚಾಲುಕ್ಯ, ರಾಷ್ಟ್ರಕೂಟರ ವಸ್ತುಗಳು; ಕರ್ನಾಟಕದ ದುರ್ಗಾ, ಶೇಷಶಾಯಿ ವಿಷ್ಣು, ಉಮಾಮಹೇಶ್ವರ, ಬ್ರಹ್ಮ, ನಾಗರ, ವರುಣ; ಸ್ಥಳೀಯ ದೈವಗಳು, ವೈದಿಕ-ಬೌದ್ಧ-ಜೈನ-ಆದಿವಾಸಿ ಶಿಲ್ಪಗಳು; ಸಿಂಧೂ ನಾಗರಿಕತೆಯ ಉತ್ಖನನದ ವಸ್ತುಗಳು; ಆಲಂಕಾರಿಕ ಕಲಾಪ್ರಕಾರಗಳು, ಕಿರುವರ್ಣ ಚಿತ್ರಗಳು; ಅಕ್ಬರನ ಶಿರಸ್ತ್ರಾಣ, ಕವಚ; ಹಲವು ರಾಜ್ಯ-ದೇಶ-ಕಾಲಮಾನದ ನಾಣ್ಯಗಳು; ಖ್ಯಾತನಾಮರ ವರ್ಣಚಿತ್ರಗಳು; ಓಲೆಗರಿ, ಶಿಲ್ಪದ ಪ್ರತಿಕೃತಿಗಳು; ನ್ಯಾಚುರಲ್ ಹಿಸ್ಟರಿ ವಿಭಾಗದಲ್ಲಿ ಮೈದುಂಬಿಕೊಂಡ ಜೀವಿಗಳು; ಮುಂಬಾದೇವಿಯ ಮುಂಬಯಿಯು ಬಂಬಯ್ (ಪೋರ್ಚುಗೀಸ್ ಭಾಷೆಯಲ್ಲಿ ಗುಡ್ ಹಾರ್ಬರ್) ಆಗಿ ಮತ್ತೀಗ ಮುಂಬೈ ಮಹಾನಗರವಾಗಿ ಬೆಳೆದ ಪರಿ; ಮನುಷ್ಯ ಸಮಾಜವನ್ನು ಬಾಧಿಸಿದ ರೋಗರುಜಿನ ಯುದ್ಧಗಳ ಚಿತ್ರ – ಓಹ್, ಏನುಂಟು ಏನಿಲ್ಲ!

ಬುದ್ಧ ಸಂಬಂಧಿ ವಸ್ತುವಿಷಯಗಳು

ಸಾವಿರಾರು ವಸ್ತುಗಳಲ್ಲಿ ಬುದ್ಧ ಸಂಬಂಧಿ ವಸ್ತುವಿಷಯಗಳು ಗಮನ ಸೆಳೆಯುತ್ತವೆ. ಪ್ರವೇಶ ದ್ವಾರದಲ್ಲೇ ಹಸಿರು ಹುಲ್ಲುಹಾಸಿನ ಮೇಲೆ ಮಲಗಿರುವ ಬುದ್ಧನ ತಲೆಯ ಬೃಹತ್ ಶಿಲ್ಪ ಕೈಬೀಸಿ ಕರೆಯುತ್ತದೆ. ಕೆಳಮಹಡಿಯಲ್ಲಿ ಪತನಗೊಂಡ/ನಾಶಗೊಳಿಸಲಾದ ಸ್ತೂಪಗಳ ಉತ್ಖನನದಲ್ಲಿ ದೊರೆತ ಪ್ರಾಚೀನ ಬೌದ್ಧ ಶಿಲ್ಪಗಳ ನೆರವಿಯೇ ಇದೆ. ಜಾನ್ ಲಾಕ್‌ವುಡ್ ಕಿಪ್ಲಿಂಗ್ (ರುಡ್ಯಾರ್ಡ್ ಕಿಪ್ಲಿಂಗ್ ತಂದೆ) ರೂಪಿಸಿದ, ಪಾಕಿಸ್ತಾನದ ತಖ್ತ್-ಇ-ಬಹಿಯ ಗಾಂಧಾರ ಶೈಲಿಯ ಮೀಸೆಯಿರುವ ಬುದ್ಧನ (ಕ್ರಿ.ಶ. 1-3ನೆಯ ಶತಮಾನ) ತದ್ರೂಪವಿದೆ. ಆಂಧ್ರದ ಅಮರಾವತಿಯ 2ನೆಯ ಶತಮಾನದ ಸ್ತೂಪವೊಂದರ ಪದ್ಮಪೀಠವಿದೆ. ಕನ್ಹೇರಿ ಗುಹೆಯ ಕ್ರಿ.ಶ. 1ನೆಯ ಶತಮಾನದ ಮಹಾಸುತಸೋಮ ಜಾತಕ ಶಿಲ್ಪವಿದೆ. ಮಹಾರಾಷ್ಟ್ರದ ಭಂಡಾರಾ ಜಿಲ್ಲೆಯ ಪೌನಿಯಲ್ಲಿ ದೊರೆತ ಕ್ರಿ. ಶ. 1ನೆಯ ಶತಮಾನದ ಸ್ತೂಪವೊಂದರ ಸುಂದರ ಶಿಲಾಸ್ತಂಭವು ಬುದ್ಧನನ್ನು ಚಕ್ರ, ಸ್ತೂಪ, ಬೋಧಿವೃಕ್ಷದಿಂದ ಚಿತ್ರಿಸಿ ಹೀನಾಯಾನದ ಪ್ರಭಾವವನ್ನು ತಿಳಿಸುತ್ತದೆ. 3ನೆಯ ಶತಮಾನದ ಗಾಂಧಾರದ ಬೋಧಿಸತ್ವ, 5ನೆಯ ಶತಮಾನದ ಕಿರೀಟವಿರುವ ಚಕ್ರವರ್ತಿ ಬುದ್ಧರಿದ್ದಾರೆ. ಒಡಿಶಾದ 12ನೆಯ ಶತಮಾನದ 'ಭೂಮಿಸ್ಪರ್ಶ ಮುದ್ರೆ'ಯ ಕರಿಕಲ್ಲ ಬುದ್ಧನಿದ್ದಾನೆ. ಬಲಗೈಯಲ್ಲಿ ಭೂಮಿ ಮುಟ್ಟುವಂತೆ ಪದ್ಮಾಸನದಲ್ಲಿ ಕುಳಿತ ಶಿಲ್ಪವು ಬುದ್ಧ ಸಾಕ್ಷಾತ್ಕಾರ ಪಡೆದ ಕ್ಷಣವನ್ನು ಪ್ರತಿನಿಧಿಸುವ ಭಂಗಿಯಾಗಿದೆ.



ಕಿರೀಟವಿರುವ ಗಾಂಧಾರ ಬುದ್ಧ

ಮಹಾರಾಷ್ಟ್ರದ ನಾಲಾಸೊಪಾರಾದಲ್ಲಿ ದೊರೆತ ಮೌರ್ಯ ಬ್ರಾಹ್ಮಿಲಿಪಿಯಲ್ಲಿ ಕೆತ್ತಲಾಗಿರುವ ಅಶೋಕನ ಒಂಬತ್ತನೆಯ ಶಿಲಾಶಾಸನವಿದೆ. ಎಲ್ಲ ದಮ್ಮಗಳನ್ನೂ ಗೌರವಿಸಿ ಪ್ರೋತ್ಸಾಹಿಸುತ್ತಿದ್ದ ಸಾಮ್ರಾಟ ಅಶೋಕನು ದಮ್ಮ ಮತ್ತು ವಿನಯಗಳನ್ನು ಕರತಲಾಮಲಕ ಮಾಡಿಕೊಂಡಿದ್ದ 12 ಭಿಕ್ಕುಗಳನ್ನು ಕಾಶ್ಮೀರ-ಗಾಂಧಾರ, ಮಹಿಷ ಮಂಡಲ(ಮೈಸೂರು), ಬನವಾಸಿ, ಅಪರಾಂತಕ(ಪಶ್ಚಿಮ ಭಾರತದ ಗುಜರಾತ್, ಕಛ್, ಸಿಂಧ್), ಮಹಾರಾಷ್ಟ್ರ, ಯವನ(ಗ್ರೀಸ್), ಹಿಮಾಲಯ(ಟಿಬೆಟ್), ಸುವರ್ಣಭೂಮಿ(ಥಾಯ್ಲೆಂಡ್, ಬರ್ಮಾ) ಮತ್ತು ಶ್ರೀಲಂಕಾ ಎಂಬ ಒಂಬತ್ತು ದೇಶಗಳಿಗೆ ಕಳಿಸಿದ. ಕೊಂಕಣ ಪ್ರದೇಶದ ಮುಖ್ಯ ಬಂದರು ಸೊಪಾರಾ (ಶೂರ್ಪರಕ, ಈಗ ನಾಲಾಸೋಪಾರಾ)ಗೆ ದಮ್ಮರಕ್ಖಿತ ಎಂಬ ಭಿಕ್ಕುವನ್ನು ಕಳಿಸಿದ್ದ. ನಾಲಾಸೊಪಾರಾದಲ್ಲಿ ಕುಸಿದ ಬೌದ್ಧ ಸ್ತೂಪದ ಅವಶೇಷಗಳಿವೆ. ಜಗನ್ನಾಥ ಮಂದಿರದ ಅಡಿಪಾಯ, ಸುತ್ತಮುತ್ತೆಲ್ಲ ಬೌದ್ಧ ವಸ್ತುಗಳು ಸಿಕ್ಕಿವೆ. ಸನಿಹದ ಹಳ್ಳಿಯೊಂದರ ಮುಸ್ಲಿಂ ರುದ್ರಭೂಮಿಯಲ್ಲಿ ಅಶೋಕನ 8, 9ನೇ ಶಿಲಾಶಾಸನಗಳು ದೊರೆತಿವೆ.

ಫ್ರಾನ್ಸಿಸ್ ಬೇಕನ್, 'ಇತಿಹಾಸವೆಂದರೆ ತೇಲುವ ಹಲಗೆಯ ಕಂಡು ಮುಳುಗಿದ ಹಡಗನ್ನು ಕಲ್ಪಿಸುವುದು' ಎನ್ನುತ್ತಾನೆ. ತೇಲುವ ಹಲಗೆಗಳನ್ನು ಅವಿರುವಂತೆ ನೋಡುವುದು, ಎಲ್ಲಿ ಹೇಗೆ ಯಾವ ಸ್ಥಿತಿಯಲ್ಲಿ ಸಿಕ್ಕಿದವೆಂದು ಅರಿಯುವುದು ಹಡಗನ್ನು ಕಲ್ಪಿಸಲು, ಅದರಲ್ಲಿ ಕಾಲಯಾನ ಕೈಗೊಳ್ಳಲು ತುಂಬ ಮುಖ್ಯ ಅಲ್ಲವೇ? ಎಂದೇ, ಹೊರಡಿ ಮುಂಬೈಗೆ. ವಸ್ತುಸಂಗ್ರಹಾಲಯದ ದಾರಿ ಮರೆಯದಿರಿ ಮತ್ತೆ.



ಉತ್ಖನನದ ವಸ್ತುಗಳ ಹೊಸಲೋಕ

5-6ನೆಯ ಶತಮಾನದ ಸಿಂಧ್ ಪ್ರಾಂತ್ಯದ 'ಕಹುಜೊದಾರೊ ಸ್ತೂಪ' (ಇಂದಿನ ಪಾಕಿಸ್ತಾನದ ಮಿರ್‌ಪುರ್‌ಖಾಸ್) ಉತ್ಖನನದ ವಸ್ತುಗಳು ಹೊಸಲೋಕಕ್ಕೆ ಕರೆದೊಯ್ಯುತ್ತವೆ. 30 ಎಕರೆ ಜಾಗದಲ್ಲಿ ಗುಪ್ಪೆಬಿದ್ದ ಇಟ್ಟಿಗೆ ರಾಶಿಯನ್ನು ಸಿಂಧ್‌ನ ರೈಲುರಸ್ತೆ ಕಾಮಗಾರಿ ನಡೆಯುವಾಗ ಗಮನಿಸಲಾಯಿತು. ಬ್ರಿಟಿಷ್ ಕಮಿಷನರ್ ಜಾನ್ ಜೇಕಬ್ ಆರ್ಕಿಯಾಲಜಿಕಲ್ ಸರ್ವೇ ಆಫ್ ಇಂಡಿಯಾದ ಸೂಪರಿಂಟೆಂಡೆಂಟ್ ಹೆನ್ರಿ ಕಸಿನ್ಸ್‌ಗೆ ವಿಷಯ ತಿಳಿಸಿದ. ಮಿರ್‌ಪುರ್‌ಖಾಸ್‌ಗೆ ಬಂದ ಕಸಿನ್ಸ್ ದಿಬ್ಬದ ಉತ್ಖನನ, ವಸ್ತುಗಳ ದಾಖಲೀಕರಣದಲ್ಲಿ ಮುಳುಗಿಯೇಹೋದ. ಸ್ಥಳದ ಚಿತ್ರ, ನಕಾಶೆ, ಫೋಟೊ, ವರದಿಗಳನ್ನು ಪ್ರಕಟಿಸಿ ಸಿಂಧ್ ಪ್ರಾಂತ್ಯದ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲಿದ.

ಅದೇ ಹೆನ್ರಿ ಕಸಿನ್ಸ್ ಮುಂಬೈ ವಸ್ತುಸಂಗ್ರಹಾಲಯದ ಆರಂಭದ ಬುನಾದಿ ರೂಪಿಸಿದವರಲ್ಲಿ ಒಬ್ಬ. ಎಂದೇ ಅಲ್ಲೀಗ ಮಿರ್‌ಪುರ್‌ಖಾಸ್‌ನ ಕುಳಿತ ಭಂಗಿಯ ಐದು ಬುದ್ಧ ಶಿಲ್ಪಗಳು, ಅನುಯಾಯಿಯ ಶಿಲ್ಪ, ಜಾಂಭುಲ, ಕುಬೇರ ಮೊದಲಾಗಿ 297 ಅಚ್ಚಿನ ಚಿತ್ರಗಳ ಹೊಂದಿದ ಟೆರ್ರಾಕೋಟ ಇಟ್ಟಿಗೆಗಳು, ಜಾತಕ ಕತೆಗಳಿರುವ ಕಲ್ಲಿನ ತುಂಡುಗಳಿವೆ. ಗುಪ್ತ-ಕುಶಾನರ ಕಾಲದ ಭಾರತ, ಬೌದ್ಧ ಧರ್ಮ, ಅರಬ್-ಗ್ರೀಸ್-ಸಿಂಧೂ ಸಂಸ್ಕೃತಿಗಳ ಕೊಡುಕೊಳ್ಳುವಿಕೆಗಳನ್ನು ಅರ್ಥ ಮಾಡಿಕೊಳ್ಳಲು ಅವು ಸಹಕಾರಿಯಾಗಿವೆ.



• ಎಂ.ಎಸ್.ಪೂಜಾರ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಇಂಗ್ಲಿಷ್‌ನ 40 ಅಕ್ಷರಗಳನ್ನು ಬಳಸಿಕೊಂಡು ಎರಡು ಅಕ್ಷರಗಳ 20 ಪದಗಳನ್ನು ರಚಿಸಿ

A	S	O	R	O	X	E	M
O	N	B	A	I	I	M	T
N	O	D	F	G	O	E	O
S	O	F	S	O	T	A	I
P	T	S	U	O	W	U	E


1		
2		
3		
4		
5		
6		
7		
8		
9		
10		

11		
12		
13		
14		
15		
16		
17		
18		
19		
20		

ಡಣ್ಣ ಚಿಕ್ಕು ಶ್ರೀಕೃಷ್ಣ ಕಥೆಯ — ಕಲ್ಲಂಗಡಿ ಕರಗಿತು!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ತನ್ನ ತೋಟದಲ್ಲಿ ಬೆಳೆದಿದ್ದ ಬೃಹತ್ ಕಲ್ಲಂಗಡಿ ಹಣ್ಣನ್ನು ವೆಂಕಟ ಮನೆಯತ್ತ ಹೊತ್ತೊಯ್ಯುತ್ತಿದ್ದ. ಆ ಹಣ್ಣನ್ನು ನೋಡಿದ ಹಕ್ಕಿಗಳಿಗೆ ಅದನ್ನು ತಿನ್ನುವ ಆಸೆಯಾಯಿತು. ವೆಂಕಟನಿಗೆ ತಿಳಿಯದಂತೆ ಮೆಲ್ಲನೆ ಹಾರಿಬಂದು ಕುಕ್ಕಿ ಕುಕ್ಕಿ ಹಣ್ಣನ್ನು ತಿನ್ನಲಾರಂಭಿಸಿದವು. ಇನ್ನೇನು ಮನೆ ಬಂತು ಎನ್ನುವಷ್ಟರಲ್ಲಿ ಹಣ್ಣಿನ ಭಾರ ಕಮ್ಮಿಯಾಗುತ್ತಿರುವುದು ವೆಂಕಟನ ಗಮನಕ್ಕೆ ಬಂದಿತು. ಅಷ್ಟರಲ್ಲಿ ಹಣ್ಣು ಮುಕ್ಕಾಲು ಭಾಗದಷ್ಟು ಖಾಲಿಯಾಗಿತ್ತು.



ಜಾಣಪದ ಆಟ

A. ಇಲ್ಲಿ ಕೊಟ್ಟಿರುವ 'ತ'ಕಾರದ ಅಕ್ಷರಗಳಲ್ಲಿ ಎರಡೆರಡು ಅಕ್ಷರ ತೆಗೆದುಕೊಂಡು ಅರ್ಥಬದ್ಧ ಐದು ಪದ ರಚಿಸಿ

ತೊ	ತು	ತೆ	ತ	ತ್ತು
ತ್ತು	ತ್ತು	ತು	ತ್ತೆ	ತ್ತಿ

1.____ 2.____ 3.____
4.____ 5.____

B. ಇಲ್ಲಿ ಕೊಟ್ಟಿರುವ 'ಕ'ಕಾರದ ಅಕ್ಷರಗಳಲ್ಲಿ ಎರಡೆರಡು ಅಕ್ಷರ ತೆಗೆದುಕೊಂಡು ಅರ್ಥಬದ್ಧ ಐದು ಪದ ರಚಿಸಿ

ಕ್ಕು	ಕ್ಕೆ	ಕ	ಕೊ	ಕು
ಕ್ಕೆ	ಕ್ಕ	ಕ	ಕು	ಕ್ಕು

1.____ 2.____ 3.____
4.____ 5.____

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಕಾರ   ಪರ   ಸವ
ಶಿರ   ಹರೆ   ಕೃತ

ಅಕ್ಷರ ಪಟ್ಟಿ

ಭೂ	ದ್ವಾ	ಪ್ರ	ಬ	ಚ	ಕ
ಸಿ	ಣ	ತಿ	ಡಿ	ಸು	ಯ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ವ್ಯಸನಿಹ 2.ಗೋಚರಣ 3.ಹೂರಣಜಿ 4.ಉಸುಳಿವು 5.ಭೋಜನನ 6.ಗಂಗರುಡು

ಜಾಣಪದ ಆಟ: 1.ಸಮರ 2.ಅಮರ 3.ಮಯೂರ 4.ಹರವಿ 5.ಬೆರಗು 6.ಧರಣಿ 7.ರಭಸ 8.ರಕ್ಕಸ 9.ರಸಿಕ

ಮೋಜಿನ ಇಂಗ್ಲಿಷ್: 1.BEE 2.DAY 3.FEE 4.KEY 5.LAY 6.OWE 7.PEA 8.RAY 9.SAY 10.SEA 11.TEA 12.YOU

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಸಂಸ್ಕೃತಿ ಎಂ.ಎಸ್. ಮೈಸೂರು



ಅಮೃತಾ ರಾಮಪ್ಪ ಮಿರ್ಜಿ, ಗೋಕಾಕ



ಅಧೀಕ್ಷಾ ಬಿ.ಎಂ. ಹೊಸದುರ್ಗ



ಹರ್ಷವರ್ಧನ್ ಕೆ.ಎಂ. ದಾವಣಗೆರೆ



ಸೋಹನ್ ಕೆ.ಅನಿಲ್ ಕೋಲಾರ



ಸೋನು ಸಂಕೀರ್ತ್ ದೊಡ್ಡಬಳ್ಳಾಪುರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಕ್ಯಾಲೆಂಡರ್ ರಹಸ್ಯ

ಹಿಂದಿನ ವಾರ 12 ಅಂಕಿಗಳನ್ನು ನೆನಪಿಟ್ಟುಕೊಂಡು ಇಡೀ ವರ್ಷದ ಯಾವ ದಿನ ಯಾವ ವಾರವೆಂದು ಹೇಳುವುದನ್ನು ಓದಿದ್ದೀರಿ. ಆದರೆ ಆ ಅಂಕಿಗಳನ್ನು ಪ್ರತಿವರ್ಷ ನೀವೇ ಕಂಡುಹಿಡಿಯುವ ರಹಸ್ಯವನ್ನು ಈ ವಾರ ತಿಳಿಸುವೆ. ಓದಿ. ನೀವು ವರ್ಷ ಇನ್ನೇನು ಮುಗಿಯುತ್ತದೆ ಎನ್ನುವಾಗಲೇ ಕೊನೆಯ ಡಿಸೆಂಬರ್ ತಿಂಗಳಿನ ನೆನಪಿನ ಸಂಖ್ಯೆಗೆ(6) ಡಿಸೆಂಬರ್ ತಿಂಗಳಿನ 31 ದಿನ ಅಂದರೆ ಆ ಸಂಖ್ಯೆಗೆ 31 ಕೂಡಿಸಿ 7ರಿಂದ ಭಾಗಿಸಿದಾಗ ಸಿಗುವ ಶೇಷವೇ ಮುಂದಿನ ವರ್ಷದ ಜನವರಿ ತಿಂಗಳಿನ ನೆನಪಿನ ಸಂಖ್ಯೆ ಆಗುತ್ತದೆ. ಮತ್ತೆ ಆ ಜನವರಿಗೆ 31 ದಿನ. ಅದಕ್ಕೆ ನೀನು ಕಂಡುಕೊಂಡಿರುವ ಜನವರಿ ನೆನಪಿನ ಸಂಖ್ಯೆ ಕೂಡಿಸಿ 7ರಿಂದ ಭಾಗಿಸಿದರೆ ಉಳಿಯುವ ಶೇಷವೇ ಫೆಬ್ರುವರಿ ನೆನಪಿನ ಸಂಖ್ಯೆಯಾಗುತ್ತದೆ.

ಉದಾ: 2024ರ ಡಿಸೆಂಬರ್ ನೆನಪಿನ ಸಂಖ್ಯೆ 6. ಇದಕ್ಕೆ 31 ಕೂಡಿಸಿದರೆ (ಡಿಸೆಂಬರ್‌ನಲ್ಲಿ 31 ದಿನ) = 37. 37/7 = 2 ಶೇಷ. ಇದೇ 2025ರ ಜನವರಿ ನೆನಪಿನ ಸಂಖ್ಯೆ. ಹೀಗೆ ಡಿಸೆಂಬರ್‌ವರೆಗೂ ಮುಂದುವರಿಸಿ.



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಡಲ್ಗಳ್ಳರ ಪತ್ತೆಗೆ ತಪಾಸಣೆ

ನವದೆಹಲಿ (ಪಿಟಿಐ): 'ಎಂವಿ ಲಿಲಾ ನಾರ್ಫೋಕ್' ಹಡಗು ಅಪಹರಣ ಕೃತ್ಯದಲ್ಲಿ ಭಾಗಿಯಾಗಿರುವ ಕಡಲ್ಗಳ್ಳರನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ಭಾರತೀಯ ನೌಕಾಪಡೆಯು ಅರಬ್ಬಿ ಸಮುದ್ರದಲ್ಲಿ ಶಂಕಿತ ಹಡಗುಗಳ ತಪಾಸಣೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರಬ್ಬಿ ಸಮುದ್ರದ ಸೊಮಾಲಿಯಾ ಕರಾವಳಿಯಲ್ಲಿ ಲೈಬೀರಿಯಾ ಧ್ವಜ ಹೊತ್ತಿದ್ದ 'ಎಂವಿ ಲಿಲಾ ನಾರ್ಫೋಕ್' ಸರಕು ಸಾಗಣೆ ಹಡಗನ್ನು ಗುರುವಾರ ಸಂಜೆ ಅಪಹರಿಸಲಾಗಿತ್ತು. ಹಡಗಿನಲ್ಲಿ 15 ಭಾರತೀಯರು ಸೇರಿ 21 ಮಂದಿ ಸಿಬ್ಬಂದಿ ಇದ್ದರು. ನೌಕಾಪಡೆಯು ಶುಕ್ರವಾರ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಸಿಬ್ಬಂದಿಯನ್ನು ರಕ್ಷಿಸಿದೆ.

ಅಮೆರಿಕ: ಅಲಾಸ್ಕಾ ಏರ್‌ಲೈನ್ಸ್‌ನ ಬೋಯಿಂಗ್ 737–9 ವಿಮಾನ ತುರ್ತು ಭೂಸ್ಪರ್ಶ

ಹಾರಾಟದಲ್ಲೇ ಕಳಚಿದ ವಿಮಾನದ ಕಿಟಕಿ

ಪೋರ್ಟ್‌ಲೆಂಡ್ (ಅಮೆರಿಕ) (ಎಪಿ): ಅಮೆರಿಕದ ಅಲಾಸ್ಕಾ ಏರ್‌ಲೈನ್ಸ್‌ನ ಬೋಯಿಂಗ್ 737–9 ಮ್ಯಾಕ್ಸ್ ವಿಮಾನವೊಂದು ಶುಕ್ರವಾರ ಹಾರಾಟ ನಡೆಸುತ್ತಿದ್ದ ವೇಳೆಯೇ ಅದರ ಒಂದು ಕಿಟಕಿ, ಮತ್ತೊಂದು ಭಾಗ ಹಾರಿಹೋಗಿದೆ. ವಿಮಾನವನ್ನು ಪೋರ್ಟ್‌ಲೆಂಡ್‌ನ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿಸಲಾಗಿದೆ.

ವಿಮಾನದಲ್ಲಿ 174 ಪ್ರಯಾಣಿಕರು ಮತ್ತು ಆರು ಸಿಬ್ಬಂದಿ ಇದ್ದರು. ಘಟನೆ ಬಳಿಕ ಅವರಿಗೆ ಆಮ್ಲಜನಕ ಮಾಸ್ಕ್‌ಗಳನ್ನು ನೀಡಿದ್ದು ಚಿತ್ರಗಳಲ್ಲಿ ಕಂಡುಬಂದಿದೆ. ಘಟನೆಗೆ ಕಾರಣ, ಯಾರಾದರೂ ಗಾಯಗೊಂಡಿದ್ದಾರೆಯೇ ಎಂಬ ಕುರಿತು ವಿಮಾನಯಾನ ಸಂಸ್ಥೆಯು ಸದ್ಯಕ್ಕೆ ಯಾವುದೇ ಮಾಹಿತಿ ನೀಡಿಲ್ಲ.

ಘಟನೆ ಬಳಿಕ ಅಲಾಸ್ಕಾ ಏರ್‌ಲೈನ್ಸ್ ಮುಂಜಾಗ್ರತಾ ಕ್ರಮವಾಗಿ ತನ್ನ ಎಲ್ಲಾ ಬೋಯಿಂಗ್ 737–9 ವಿಮಾನಗಳನ್ನು ತಾತ್ಕಾಲಿಕವಾಗಿ ಭೂಸ್ಪರ್ಶ ಮಾಡಿಸಿದೆ. ವಿಮಾನಗಳನ್ನು ಸಂಪೂರ್ಣವಾಗಿ ತಪಾಸಣೆಗೊಳಪಡಿಸಿದ ಬಳಿಕವೇ ಅವುಗಳನ್ನು ಸೇವೆಗೆ ಮರಳಿಸಲಾಗುತ್ತದೆ ಎಂದು ಸಂಸ್ಥೆಯ ಸಿಇಒ ಬೆನ್ ಮಿನುಕುಸಿ ಹೇಳಿದ್ದಾರೆ.



ಅಲಾಸ್ಕಾ ಏರ್‌ಲೈನ್ಸ್ ಲೋಗೊ

> ಟೇಕ್ ಆಫ್ ಆದ ಕೆಲವೇ ನಿಮಿಷಗಳಲ್ಲಿ ವಿಮಾನದ ಕಿಟಕಿ ಕಳಚಿಹೋಗಿದೆ. ಆಮ್ಲಜನಕದ ಮಾಸ್ಕ್‌ಗಳು ಹೊರಬರುವ ತನಕ ಅಲ್ಲಿ ಏನಾಗಿದೆ ಎಂದು ತಿಳಿದಿರಲಿಲ್ಲ
> **ಕೈಲ್ ರಿಂಕೆರ್**, ಪ್ರಯಾಣಿಕ

ಶುಕ್ರವಾರ ಸಂಜೆ 5.07ಕ್ಕೆ ವಿಮಾನವು ಪೋರ್ಟ್‌ಲೆಂಡ್ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆಗಿತ್ತು. ಟೇಕ್‌ಆಫ್ ಆದ ಆರು ನಿಮಿಷಗಳಲ್ಲಿ ಕಿಟಕಿ ಹಾರಿ, ವಿಮಾನದಲ್ಲಿಯ ಒತ್ತಡ ಇಳಿಕೆಯಾಯಿತು. ಈ ವೇಳೆ ಇದು 4,876 ಮೀಟರ್ ಎತ್ತರದಲ್ಲಿತ್ತು. ಕೂಡಲೇ ಪೈಲಟ್ ವಿಮಾನವನ್ನು ಪೋರ್ಟ್‌ಲೆಂಡ್ ವಿಮಾನ ನಿಲ್ದಾಣದೆಡೆಗೆ ತಿರುಗಿಸಿದರು. ಸಂಜೆ 5.26ಕ್ಕೆ ವಿಮಾನ ಭೂಸ್ಪರ್ಶ ಮಾಡಿದೆ ಎಂದು ಫ್ಲೈಟ್‌ಅವೇರ್ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗಿದೆ.

ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ. ಘಟನೆಗೆ ಕಾರಣವೇನೆಂದು ತಿಳಿದ ಕೂಡಲೇ ಮಾಹಿತಿ ನೀಡಲಾಗುವುದು ಎಂದು ಅಮೆರಿಕದ ದಿ ನ್ಯಾಷನಲ್ ಟ್ರಾನ್ಸ್‌ಪೋರ್ಟೇಷನ್ ಬೋರ್ಡ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ. ತನಿಖೆ ನಡೆಸುವುದಾಗಿ ಅಮೆರಿಕದ ನಾಗರಿಕ ವಾಯುಯಾನ ಪ್ರಾಧಿಕಾರ ತಿಳಿಸಿದೆ.

ವಿಮಾನಗಳ ಪರಿಶೀಲನೆಗೆ ಡಿಜಿಸಿಎ ಸೂಚನೆ


ನವದೆಹಲಿ (ಪಿಟಿಐ): ಎಲ್ಲಾ ಬೋಯಿಂಗ್ 737–8 ಮ್ಯಾಕ್ಸ್ ವಿಮಾನಗಳ ತುರ್ತು ನಿರ್ಗಮನ ದ್ವಾರಗಳು ಸುಸ್ಥಿತಿಯಲ್ಲಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ತಕ್ಷಣವೇ ಪರಿಶೀಲನೆ ನಡೆಸಬೇಕು ಎಂದು ದೇಶೀಯ ವಿಮಾನಯಾನ ಸಂಸ್ಥೆಗಳಿಗೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ನಿರ್ದೇಶನ ನೀಡಿದೆ.

ಅಲಾಸ್ಕಾ ಏರ್‌ಲೈನ್ಸ್‌ನ ಬೋಯಿಂಗ್ 737–9 ಮ್ಯಾಕ್ಸ್ ವಿಮಾನ ಹಾರಾಟ ವೇಳೆ ಕಿಟಕಿ ಕಳಚಿದ ಘಟನೆ ಬಳಿಕ ಮುನ್ನೆಚ್ಚರಿಕೆ ಕ್ರಮವಾಗಿ ಈ ಸೂಚನೆ ನೀಡಲಾಗಿದೆ.

'ತುರ್ತು ನಿರ್ಗಮನ ದ್ವಾರಗಳನ್ನು ಭಾನುವಾರದ ಮಧ್ಯಾಹ್ನದ ವೇಳೆಗೆ ಪರಿಶೀಲಿಸುವುದು ಕಡ್ಡಾಯ' ಎಂದು ಡಿಜಿಸಿಎ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಿಮಾನಗಳು ರಾತ್ರಿ ವೇಳೆ ತಂಗಿದ ಸಂದರ್ಭದಲ್ಲಿ ಈ ಪರಿಶೀಲನೆ ನಡೆಸಬೇಕು. ಇದರಿಂದ ವಿಮಾನ ವೇಳಾಪಟ್ಟಿ ಮೇಲೂ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ ಎಂದು ಅವರು ಹೇಳಿದ್ದಾರೆ.

ದೇಶದಲ್ಲಿ ಈಗ ಆಕಾಸ ಏರ್, ಸ್ಪೈಸ್ ಜೆಟ್ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್– ಈ ಮೂರು ವಿಮಾನಯಾನ ಸಂಸ್ಥೆಗಳ 40ಕ್ಕೂ ಹೆಚ್ಚು ಬೋಯಿಂಗ್ 737–8 ಮ್ಯಾಕ್ಸ್ ವಿಮಾನಗಳನ್ನು ಕಾರ್ಯಾಚರಿಸುತ್ತಿವೆ.



ರಂಗೋಲಿ ಚಿತ್ತಾರ...

ಮೈಲಾಪುರ ಹಬ್ಬದ ಅಂಗವಾಗಿ ತಮಿಳುನಾಡಿನ ಚೆನ್ನೈನಲ್ಲಿ ಜನರು ರಂಗೋಲಿ ಚಿತ್ರಿಸಿ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಅಯೋಧ್ಯೆಯ ರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ: ಖರ್ಗೆ ಹೇಳಿಕೆ

ಕಾಂಗ್ರೆಸ್ ಭಾಗಿ: ಶೀಘ್ರವೇ ತೀರ್ಮಾನ

ನವದೆಹಲಿ (ಪಿಟಿಐ): 'ಅಯೋಧ್ಯೆಯ ರಾಮ ಮಂದಿರದಲ್ಲಿ ಇದೇ 22ರಂದು ನಡೆಯಲಿರುವ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಬಗ್ಗೆ ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಹೇಳಿದ್ದಾರೆ.



ಮಲ್ಲಿಕಾರ್ಜುನ ಖರ್ಗೆ

'ಪ್ರಧಾನಿ ಮೋದಿಯವರ ಮಾಜಿ ಪ್ರಧಾನ ಕಾರ್ಯದರ್ಶಿಯು ಟ್ರಸ್ಟ್‌ನ ಕಾರ್ಯದರ್ಶಿ ಜೊತೆ ಬಂದು ನನ್ನನ್ನು ಆಹ್ವಾನಿಸಿದ್ದಾರೆ. ಈ ಬಗ್ಗೆ ಶೀಘ್ರದಲ್ಲೇ ನಿರ್ಧರಿಸುವೆ' ಎಂದು ಎಐಸಿಸಿಯ ಪ್ರಧಾನ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಖರ್ಗೆ ಪ್ರತಿಕ್ರಿಯಿಸಿದರು.

ರಾಮ ಮಂದಿರದ ಧಾರ್ಮಿಕ ಕಾರ್ಯಕ್ರಮದ ಬಗ್ಗೆ ಕಾಂಗ್ರೆಸ್ ಮುಖ್ಯಮಂತ್ರಿಯೊಬ್ಬರು ನೀಡಿರುವ ಹೇಳಿಕೆ ಬಗ್ಗೆ ಕೇಳಿದ್ದಕ್ಕೆ ಪ್ರತಿಕ್ರಿಯಿಸಿದ ಖರ್ಗೆ, 'ಅದು ಅವರ ವೈಯಕ್ತಿಕ ಇಚ್ಛೆ. ಆಹ್ವಾನ ಇದ್ದರೆ ನೀವೂ ಹೋಗಬಹುದು, ಬೇರೆ ಯಾರಾದರೂ ಹೋಗಬಹುದು' ಎಂದರು.

ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯಲ್ಲಿ ಪಕ್ಷದ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಅವರಿಗೆ ಈ ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಆಹ್ವಾನ ನೀಡಲಾಗಿದೆ. 'ಸರಿಯಾದ ಸಮಯದಲ್ಲಿ ತಮ್ಮ ನಿರ್ಧಾರ ತಿಳಿಸುವುದಾಗಿ' ಕಾಂಗ್ರೆಸ್ ಈ ಹಿಂದೆ ಹೇಳಿತ್ತು.

'ಉದ್ಧವ್‌ಗಿಲ್ಲ ಆಹ್ವಾನ'

ಮುಂಬೈ (ಪಿಟಿಐ): 'ಅಯೋಧ್ಯೆಯ ರಾಮ ಮಂದಿರದಲ್ಲಿ ಇದೇ 22ರಂದು ನಡೆಯಲಿರುವ ಧಾರ್ಮಿಕ ಸಮಾರಂಭಕ್ಕೆ ನನಗೆ ಈವರೆಗೂ ಆಹ್ವಾನ ಬಂದಿಲ್ಲ' ಎಂದು ಶಿವಸೇನೆಯ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಶನಿವಾರ ಇಲ್ಲಿ ತಿಳಿಸಿದರು.

ತಮ್ಮ ತಾಯಿ ದಿ. ಮೀನಾ ಠಾಕ್ರೆ ಜನ್ಮದಿನದಂದು ಅವರಿಗೆ ಗೌರವ ಸಮರ್ಪಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಮ ಮಂದಿರಕ್ಕಾಗಿ ಶಿವಸೇನೆಯ ಕೊಡುಗೆಯೂ ಸಾಕಷ್ಟಿದೆ. ಅಯೋಧ್ಯೆಗೆ ಹೋಗಬೇಕು ಎಂದು ನನ್ನ ಮನಸ್ಸಿಗೆ ಅನ್ನಿಸಿದಾಗಲೆಲ್ಲಾ ಹೋಗುವೆ' ಎಂದರು.

'ಅಯೋಧ್ಯೆಯಲ್ಲಿನ ರಾಮಮಂದಿರ ನಮ್ಮ ಹೆಮ್ಮೆ ಮತ್ತು ಸ್ವಾಭಿಮಾನದ ವಿಷಯ. ಆ ದಿನ (ಜ. 22) ಸಂಜೆ 6.30ಕ್ಕೆ ನಾಸಿಕ್‌ನಲ್ಲಿರುವ ಕಾಲಾರಾಮ್ ದೇಗುಲಕ್ಕೆ ಪಕ್ಷದ ಮುಖಂಡರೊಂದಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸುವೆ. ಸಂಜೆ 7.30ಕ್ಕೆ ಗೋದಾವರಿ ನದಿ ತೀರದಲ್ಲಿ ಮಹಾ ಆರತಿ ನಡೆಸುತ್ತೇನೆ' ಎಂದು ಠಾಕ್ರೆ ಹೇಳಿದರು.

'ಶಿವಸೇನೆ ಸಂಸ್ಥಾಪಕ, ತಮ್ಮ ತಂದೆ ಬಾಳ ಠಾಕ್ರೆ ಜನ್ಮದಿನವಾದ ಜ. 23ರಂದು ನಾಸಿಕ್‌ನಲ್ಲಿ ಬೃಹತ್ ರ‍್ಯಾಲಿ ನಡೆಸಲಾಗುವುದು' ಎಂದು ಉದ್ಧವ್ ತಿಳಿಸಿದರು.

ಶಾಸಕ ಆವ್ಹಾಡ್ ವಿರುದ್ಧ ಮುಂಬೈನಲ್ಲೂ ಎಫ್‌ಐಆರ್

ಮುಂಬೈ (ಪಿಟಿಐ): ಶ್ರೀರಾಮ ಮಾಂಸಾಹಾರಿ ಎಂಬ ಹೇಳಿಕೆ ನೀಡಿದ್ದ ಎನ್‌ಸಿಪಿ ಶಾಸಕ ಜಿತೇಂದ್ರ ಆವ್ಹಾಡ್ ಅವರ ವಿರುದ್ಧ ಮುಂಬೈನಲ್ಲಿಯೂ ಎಫ್‌ಐಆರ್ ದಾಖಲಾಗಿದೆ. ಈ ಮೊದಲು ಪುಣೆಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಅಂಧೇರಿಯ ಎಂಐಡಿಸಿ ಠಾಣೆಯಲ್ಲಿ ಶುಕ್ರವಾರ ರಾತ್ರಿ ಎಫ್‌ಐಆರ್ ದಾಖಲಿಸಲಾಗಿದೆ. ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿ) ಪದಾಧಿಕಾರಿ ಗೌತಮ್ ರಾವ್ರಿಯಾ ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ಶ್ರೀರಾಮ ಮಾಂಸಾಹಾರಿ. ಬೇಟೆಯಾಡಿ ತಿನ್ನುತ್ತಿದ್ದರು. ಅವರು ನಮ್ಮವರು. ಬಹುಜನ ಸಮುದಾಯದವರು' ಎಂದು ಜಿತೇಂದ್ರ ಆವ್ಹಾಡ್ ಕಳೆದ ಬುಧವಾರ ಶಿರಡಿಯಲ್ಲಿ ನಡೆದಿದ್ದ ಎನ್‌ಸಿಪಿ ಸಮಾವೇಶದಲ್ಲಿ ಹೇಳಿದ್ದರು. ಬಳಿಕ ಈ ಹೇಳಿಕೆಗಾಗಿ ವಿಷಾದ ವ್ಯಕ್ತಪಡಿಸಿದ್ದರು.

ಬಿಜೆಪಿಯ ಪುಣೆ ಘಟಕದ ಅಧ್ಯಕ್ಷ ಧೀರಜ್ ಘಾಟೆ ಅವರ ದೂರಿನನ್ವಯ ಈ ಮೊದಲು ಪುಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಹ್ಯಾಲೊ ಆರ್ಬಿಟ್‌ನಲ್ಲಿ 'ಆದಿತ್ಯ'

ಬೆಂಗಳೂರು (ಪಿಟಿಐ): ಭಾರತದ ಮಹತ್ವಾಕಾಂಕ್ಷೆಯ 'ಆದಿತ್ಯ ಎಲ್1' ವೀಕ್ಷಣಾಲಯವು ಅಂತರಿಕ್ಷದಲ್ಲಿ ನಿಗದಿತ ತಾಣ ಲಗ್ರಾಂಜ್ 1 ಪಾಯಿಂಟ್‌ಗೆ ತಲುಪಿದೆ. ಇದನ್ನು ಎಲ್1 ಸುತ್ತ ಪರಿಭ್ರಮಿಸಲಿರುವ ಹ್ಯಾಲೊ ಆರ್ಬಿಟ್‌ಗೆ ಸೇರಿಸುವ ಕಾರ್ಯವನ್ನು ಇಸ್ರೊ ಕೈಗೊಳ್ಳುತ್ತಿದೆ.

ಎಲ್1 ಸುತ್ತಲು ಪರಿಭ್ರಮಿಸುವ ಹ್ಯಾಲೊ ಆರ್ಬಿಟ್‌ಗೆ ವೀಕ್ಷಣಾಲಯವನ್ನು ಸೇರಿಸುವುದರಿಂದ ಗ್ರಹಣ ಸೇರಿದಂತೆ ಯಾವುದೇ ಸಂದರ್ಭದಲ್ಲಿ ಸೂರ್ಯನ ವಾತಾವರಣವನ್ನು ನಿರಂತರವಾಗಿ ಗಮನಿಸುವುದು ಸಾಧ್ಯವಾಗಲಿದೆ ಎಂದು ಇಸ್ರೊ ಅಧಿಕಾರಿಗಳು ತಿಳಿಸಿದ್ದಾರೆ.

'ವೀಕ್ಷಣಾಲಯವು ಈಗ ಹ್ಯಾಲೊ ಆರ್ಬಿಟ್‌ನತ್ತ ಸಾಗುತ್ತಿದೆ. ಅದನ್ನು ಸೂಕ್ತ ಸ್ಥಳದಲ್ಲಿ ನೆಲೆಗೊಳಿಸುವ ಕಾರ್ಯವನ್ನು ಮಾಡಬೇಕಾಗಿದೆ. ಸರಿಯಾದ ಸ್ಥಳ ತಲುಪಲು ಪ್ರತಿ ಕ್ಷಣಕ್ಕೆ 31 ಮೀಟರ್ ವೇಗದಲ್ಲಿ ಕ್ರಮಿಸುವಂತೆ ಮಾಡುವ ಕೆಲಸ ನಡೆದಿದೆ' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಸುದ್ದಿಗಾರರಿಗೆ ತಿಳಿಸಿದರು.

ಹ್ಯಾಲೊ ಆರ್ಬಿಟ್ ಕಾರ್ಯವಿವರಿಸಿದ ಅವರು, ಇದು ಎಲ್1 ಪಾಯಿಂಟ್ ಸುತ್ತಲೂ ಒಂದು ಆಯಾಮದಲ್ಲಿ 6 ಲಕ್ಷ ಕಿ.ಮೀ ಗಾತ್ರದಲ್ಲಿ ಪರಿಭ್ರಮಿಸಲಿದೆ. ಇನ್ನೊಂದು ಆಯಾಮದಲ್ಲಿ 2 ಲಕ್ಷ ಕಿ.ಮೀ ಗಾತ್ರ ಹಾಗೂ ಮತ್ತೊಂದು ಆಯಾಮದಲ್ಲಿ 1 ಲಕ್ಷ ಕಿ.ಮೀ ಗಾತ್ರದಲ್ಲಿ ಚಲಿಸಿ, ಅಂಡಾಕಾರದ ಕಕ್ಷೆಯನ್ನು ರೂಪಿಸಲಿದೆ ಎಂದರು.

ಹೊಸದಾದ ಈ ಕಕ್ಷೆಯಲ್ಲಿ ವೀಕ್ಷಣಾಲಯವನ್ನು ಹೆಚ್ಚು ನಿಖರವಾಗಿ ನೆಲೆಗೊಳಿಸಬೇಕಿದೆ. ಆ ಕಾರ್ಯವನ್ನು ನೆರವೇರಿಸದಿದ್ದರೆ, ವೀಕ್ಷಣಾಲಯವು ಎಲ್1 ಪಾಯಿಂಟ್‌ನಿಂದಲೇ ವಿಮುಖವಾಗುವ ಸಾಧ್ಯತೆಗಳಿವೆ. ಇದು ಆಗದಂತೆ ನಿಖರವಾಗಿ ನೆಲೆಗೊಳಿಸಬೇಕಿದೆ ಎಂದು ಹೇಳಿದರು.

ವೀಕ್ಷಣಾಲಯದ ಪ್ರಯಾಣದ ಹಾದಿ

- **ಸೆ.2,2023:** ಇಸ್ರೊದಿಂದ ಆದಿತ್ಯ ಎಲ್1 ವೀಕ್ಷಣಾಲಯ ಹೊತ್ತ ಪಿಎಸ್‌ಎಲ್‌ವಿ –ಸಿ57 ಉಡಾವಣೆ.
- **ಸೆ.5–15, 2023:** ನಾಲ್ಕು ಹಂತದಲ್ಲಿ ಕಕ್ಷೆಯ ವಿವಿಧ ಹಂತಕ್ಕೆ ತಲುಪಿಸುವ ಕಾರ್ಯ ಸೇರ್ಪಡೆ.
- **ಸೆ.18,2023:** ಆದಿತ್ಯ ಎಲ್1ನಿಂದ ವೈಜ್ಞಾನಿಕ ಅಂಕಿ ಅಂಶ ಸಂಗ್ರಹಣ ಕಾರ್ಯ ಆರಂಭ.
- **ಸೆ.30,2023:** ಭೂಮಿಯ ಗುರುತ್ವಾಕರ್ಷಣೆ ವಲಯದಿಂದ ಬೇರ್ಪಟ್ಟು ಭೂಮಿ–ಸೂರ್ಯನ ಲಗ್ರಾಂಜ್ ಪಾಯಿಂಟ್1 ನತ್ತ ಚಲನೆ.
- **ಅ.6,2023:** 16 ಸೆಕೆಂಡ್‌ಗಳ ಅವಧಿಯಲ್ಲಿ ವೀಕ್ಷಣಾಲಯದ ಚಲನೆಯ ಪಥ ಸರಿಪಡಿಸುವ ಕಾರ್ಯ ಯಶಸ್ವಿ.
- **ನ.7,2023:** ಹೆಲಿಯೊಸ್ ಪೇಲೋಡ್‌ನಿಂದ ಮೊದಲ ಬಾರಿಗೆ ಹೈ ಎನರ್ಜಿಯ ಎಕ್ಸ್‌ರೇ ದೃಶ್ಯಾವಳಿ ಸೆರೆ.
- **ಡಿ.1,2023:** ಆ್ಯಸ್ಪೆಕ್ಸ್ ಪೇಲೋಡ್‌ನಲ್ಲಿದ್ದ ಸೋಲಾರ್ ವಿಂಡ್ ಐಯಾನ್ ಸ್ಪೆಕ್ಟ್ರೋಮೀಟರ್ ಕಾರ್ಯಾರಂಭ
- **ಡಿ.10,2023:** ಎಸ್‌ಯುಐಟಿ ಪೇಲೋಡ್‌ನಿಂದ ಸೂರ್ಯನ ಪೂರ್ಣಮುದ್ರಿಕೆಯ ಚಿತ್ರದ ಸೆರೆ.
- **ಜ.6,2024:** ಲಗ್ರಾಂಜ್ 1 ನೆಲೆ ತಲುಪಿಸಿದ ಆದಿತ್ಯ ಎಲ್1 ವೀಕ್ಷಣಾಲಯ.

ಗಮ್ಯ ಸೇರಿದ ಆದಿತ್ಯ –ಎಲ್1

ಒಂದನೇ ಪುಟದಿಂದ

ಧ್ರುವೀಯ ಉಪಗ್ರಹ ಉಡ್ಡಯನ ವಾಹನ (ಪಿಎಸ್‌ಎಲ್‌ವಿ-ಸಿಎಸ್7) ಮೂಲಕ ಆದಿತ್ಯ ಎಲ್1 ಉಪಗ್ರಹವನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ 2023ರ ಸೆಪ್ಟೆಂಬರ್ 2ರಂದು ಉಡಾವಣೆ ಮಾಡಲಾಗಿತ್ತು.

63 ನಿಮಿಷ 20 ಸೆಕೆಂಡ್ ಪ್ರಯಾಣದ ಬಳಿಕ ನೌಕೆಯು ಭೂಮಿಯ ದೀರ್ಘವೃತ್ತಾಕಾರದ ಕಕ್ಷೆಯನ್ನು ಸೇರಿತ್ತು. ನಂತರ, ಹಲವು ಕಾರ್ಯಾಚರಣೆಗಳ ಮೂಲಕ ಭೂಮಿಯ ಗುರುತ್ವಾಕರ್ಷಣೆಯಿಂದ ಉಪಗ್ರಹ ತಪ್ಪಿಸಿಕೊಳ್ಳುವಂತೆ ಮಾಡಲಾಯಿತು. ಬಳಿಕ, ನೌಕೆಯು ಎಲ್1 ಬಿಂದುವಿನತ್ತ ಸಾಗಿತು.

ಪ್ರಭಾಗೋಳ, ವರ್ಣಮಂಡಲ ಮತ್ತು ಸೂರ್ಯನ ಅತ್ಯಂತ ಹೊರ ವಲಯವಾದ ಪ್ರಭಾ ವಲಯವನ್ನು ಅಧ್ಯಯನ ನಡೆಸುವ ಏಳು ಉಪಕರಣಗಳು ಈ ನೌಕೆಯಲ್ಲಿ ಇವೆ. ಕಣಗಳು, ವಿದ್ಯುತ್ಕಾಂತೀಯ ಕ್ಷೇತ್ರ ಮತ್ತು ಕಾಂತೀಯ ಕ್ಷೇತ್ರಗಳನ್ನು ಗುರುತಿಸುವ ಉಪಕರಣಗಳು ಇದರಲ್ಲಿ ಸೇರಿವೆ.

'ನಾಲ್ಕು ಉಪಕರಣಗಳು ನೇರವಾಗಿ ಸೂರ್ಯನ ವೀಕ್ಷಣೆ ನಡೆಸಲಿವೆ. ಕಣಗಳು ಮತ್ತು ಕಾಂತೀಯ ಕ್ಷೇತ್ರಗಳನ್ನು ಇತರ ಮೂರು ಉಪಕರಣಗಳು ಅಧ್ಯಯನ ನಡೆಸಲಿವೆ. ಖಗೋಳದಲ್ಲಿ ಸೌರ ವಿದ್ಯಮಾನಗಳ ಪರಿಣಾಮಗಳೇನು ಎಂಬುದರ ಅಧ್ಯಯನಕ್ಕೆ ಅಗತ್ಯವಾದ ದತ್ತಾಂಶಗಳನ್ನು ಈ ಉಪಕರಣಗಳು ನೀಡಲಿವೆ' ಎಂದು ಇಸ್ರೊ ಹೇಳಿದೆ.

ಲಗ್ರಾಂಜಿಯನ್ ಬಿಂದು

ಭೂಮಿ ಮತ್ತು ಸೂರ್ಯನ ನಡುವೆ ಇರುವ ಅಂತರದಲ್ಲಿ ಭೂಮಿಯಿಂದ ಶೇ ಒಂದರಷ್ಟು ದೂರದಲ್ಲಿ ಲಗ್ರಾಂಜಿಯನ್ ಬಿಂದು ಇದೆ.

ಲಗ್ರಾಂಜಿಯನ್ ಬಿಂದುವಿನ ಸುತ್ತಲಿನ ಪ್ರಭಾ ವಲಯದ ಕಕ್ಷೆಯಲ್ಲಿ ಇರುವ ಉಪಗ್ರಹಕ್ಕೆ ಒಂದು ಮಹತ್ವದ ಅನುಕೂಲ ಇದೆ. ಯಾವುದೇ ರೀತಿಯ ಗ್ರಹಣ ಉಂಟಾದರೂ ಅದರಿಂದ ಬಾಧಿತವಾಗದೆ, ಸೂರ್ಯನನ್ನು ನಿರಂತರವಾಗಿ ಗಮನಿಸುವುದು ಉಪಗ್ರಹಕ್ಕೆ ಸಾಧ್ಯವಾಗುತ್ತದೆ. ಸೌರ ಚಟುವಟಿಕೆಗಳು ಮತ್ತು ಬಾಹ್ಯಾಕಾಶ ವಾತಾವರಣದ ಮೇಲೆ ಅದರ ಪರಿಣಾಮಗಳನ್ನು ಅದು ನಡೆಯುತ್ತಿರುವಾಗಲೇ ಗಮನಿಸಲು ಇದರಿಂದ ಸಾಧ್ಯವಾಗುತ್ತದೆ ಎಂದು ಇಸ್ರೊದ ವಿಜ್ಞಾನಿಗಳು ಹೇಳಿದ್ದಾರೆ.

> ಚಂದ್ರನ ಮೇಲಿನ ನಡಿಗೆಯಿಂದ ಸೂರ್ಯನೊಂದಿಗೆ ನರ್ತನದ ವರೆಗೆ.... ಎಂತಹ ಭವ್ಯ ವರ್ಷವೊಂದು ಭಾರತದ ಮುಂದಿದೆ
> **ಜಿತೇಂದ್ರ ಸಿಂಗ್**, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯ ಸಚಿವ

ಅಧ್ಯಯನ ಏನೇನು?

1. ಸೂರ್ಯನ ಮೇಲ್ಮೈ ವಾತಾವರಣ (ಪ್ರಭಾ ಗೋಳ ಮತ್ತು ಪ್ರಭಾ ವಲಯ)
2. ಪ್ರಭಾ ಗೋಳ ಮತ್ತು ಪ್ರಭಾ ವಲಯದ ತಾಪ ಏರಿಕೆ ಹೇಗೆ?
3. ಪ್ರಭಾ ವಲಯದಿಂದ ಭಾರಿ ಪ್ರಮಾಣದ ಹೊರಸೂಸುವಿಕೆ ಮತ್ತು ಬೆಂಕಿಯ ಜ್ವಾಲೆಗಳು
4. ಸೂರ್ಯನಿಂದ ಹೊರಹೊಮ್ಮುವ ಕಣಗಳು
5. ಸೌರ ಪ್ರಭಾ ವಲಯ ಮತ್ತು ಅದರ ಬಿಸಿ ಏರುವಿಕೆ ವ್ಯವಸ್ಥೆ
6. ಪ್ರಭಾ ವಲಯದಲ್ಲಿ ಕಾಂತೀಯ ಕ್ಷೇತ್ರದ ವ್ಯವಸ್ಥೆ ಮತ್ತು ಗಾತ್ರ
7. ಬಾಹ್ಯಾಕಾಶ ವಾತಾವರಣದಲ್ಲಿ ಸೌರ ಮಾರುತದ ಉಗಮ ಮತ್ತು ಇತರ ವಿದ್ಯಮಾನಗಳು

ನಾಸಾದ ಎಸ್‌ಒಎಚ್‌ಒಗೆ 'ಆದಿತ್ಯ' ಪರ್ಯಾಯ?

ನವದೆಹಲಿ: ಆದಿತ್ಯ ಎಲ್1 ಸೂರ್ಯ ವೀಕ್ಷಣಾಲಯವು 'ನಾಸಾ'ದ ಇಎಸ್ಎ ಸೂರ್ಯ ಮತ್ತು ಸೌರಮಾರುತ ವೀಕ್ಷಣಾಲಯಕ್ಕೆ (ಎಸ್‌ಒಎಚ್‌ಒ) ಪರ್ಯಾಯವಾಗಬಹುದು ಎಂದು ಹೇಳಲಾಗಿದೆ.

ಆದಿತ್ಯ ಎಲ್1ನ ಸೂರ್ಯನ ಹೊರಮೇಲ್ಮೈಯ ವಾತಾವರಣವನ್ನು ನಿರಂತರವಾಗಿ ನಿಗಾವಹಿಸುವ ಮತ್ತು ದೂರಸಂವೇದಿ ಸಮೀಕ್ಷೆ ಸಾಮರ್ಥ್ಯ ಇದಕ್ಕೆ ಕಾರಣ ಎನ್ನುತ್ತಾರೆ ಈ ಯೋಜನೆಯಲ್ಲಿ ಭಾಗಿಯಾಗಿರುವ ವಿಜ್ಞಾನಿಗಳು.

ಅಂತಿಮ ಗಮ್ಯ ಸ್ಥಾನದಲ್ಲಿ ಆದಿತ್ಯ ಎಲ್1 ಅಲ್ಲದೇ ಇತರೆ ನಾಲ್ಕು ವೀಕ್ಷಣಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಗಾತ್ರದಲ್ಲಿ ಸಣ್ಣದಾಗಿರುವ ಮೂರು ವೀಕ್ಷಣಾಲಯಗಳು 'ನಾಸಾ'ಗೆ ಸೇರಿದ್ದಾಗಿದ್ದು, ಸೀಮಿತ ಕಾರ್ಯವ್ಯಾಪ್ತಿ ಹೊಂದಿವೆ.

ಎಸ್‌ಒಎಚ್‌ಒ ವೀಕ್ಷಣಾಲಯವು ಬೃಹತ್ ಗಾತ್ರದ್ದಾಗಿದ್ದು, ಅಮೆರಿಕ ಮತ್ತು ಐರೋಪ್ಯ ಬಾಹ್ಯಾಕಾಶ ಏಜೆನ್ಸಿಯ ಜಂಟಿ ಸಹಭಾಗಿತ್ವದಲ್ಲಿದೆ. ಇದರಲ್ಲಿ ಸದ್ಯ ಕೊರೊನಾಗ್ರಾಫ್ಸ್ ಮಾತ್ರವೇ ಕಾರ್ಯನಿರತವಾಗಿದೆ.

ಸೌರಮಾರುತ ಮತ್ತು ಕಣಗಳ ಅಧ್ಯಯನ ಸಾಮರ್ಥ್ಯದಿಂದಾಗಿ ಆದಿತ್ಯ ಎಲ್1 ಈಗ ಎಸ್‌ಒಎಚ್‌ಒಗೆ ಪರ್ಯಾಯ ಆಗಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಸೌರ ಭೌತಶಾಸ್ತ್ರಜ್ಞ ದಿಬಯೇಂದು ನಂದಿ ಅವರು ತಿಳಿಸಿದರು.

ಎಸ್‌ಒಎಚ್‌ಒ 15 ನಿಮಿಷಕ್ಕೆ ಒಂದು ಚಿತ್ರ ಸೆರೆಹಿಡಿಯಲಿದೆ. ಆದಿತ್ಯದ ವಿಎಲ್‌ಸಿ ಉಪಕರಣ 15 ಸೆಕೆಂಡ್‌ಗೆ ಒಂದು ಚಿತ್ರ ಸೆರೆಹಿಡಿವ ಸಾಮರ್ಥ್ಯವೊಂದಿದ್ದು, ನಿತ್ಯ 5,760 ಚಿತ್ರಗಳನ್ನು ಸೆರೆಹಿಡಿಯಲಿದೆ ಎಂದು ಐಐಎ ಅಧಿಕಾರಿ ಆರ್.ರಮೇಶ್ ಹೇಳಿದರು.

ಭಾನುವಾರದ ಪುರವಣಿ ಓದಿರಿ...

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ

ಚರ್ಚೆಗೆ ಅವಕಾಶ ಸಿಗದಿದ್ದಕ್ಕೆ ಯಾತ್ರೆ

ನವದೆಹಲಿ (ಪಿಟಿಐ): 'ಸಂಸತ್ತಿನಲ್ಲಿ ವಿಷಯಗಳನ್ನು ಪ್ರಸ್ತಾಪಿಸಲು ಕೇಂದ್ರ ಸರ್ಕಾರ ಅವಕಾಶ ನೀಡಲಿಲ್ಲ ಎಂಬ ಕಾರಣದಿಂದಲೇ ಕಾಂಗ್ರೆಸ್ ಪಕ್ಷವು ಈಗ ಭಾರತ್ ಜೋಡೊ ನ್ಯಾಯಯಾತ್ರೆ ಕೈಗೊಳ್ಳುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ರಾಹುಲ್‌ಗಾಂಧಿ ನೇತೃತ್ವದಲ್ಲಿ ಯಾತ್ರೆಯು ಇದೇ 14ರಂದು ಆರಂಭವಾಗಲಿದ್ದು, ಮಣಿಪುರದಿಂದ ಮಹಾರಾಷ್ಟ್ರದವರೆಗೆ ನಡೆಯಲಿದೆ. ಬಸ್ಸು ಮತ್ತು ಕಾಲ್ನಡಿಗೆಯಲ್ಲಿ ಈ ಯಾತ್ರೆ ನಡೆಯಲಿದ್ದು, ಒಟ್ಟು 6,713 ಕಿ.ಮೀ ಕ್ರಮಿಸುವ ಗುರಿಯನ್ನು ಹೊಂದಲಾಗಿದೆ.

ದೇಶವು ಎದುರಿಸುತ್ತಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳತ್ತ ಜನರ ಗಮನವನ್ನು ಯಾತ್ರೆ ಮೂಲಕ ಸೆಳೆಯಲಾಗುವುದು ಎಂದೂ ಖರ್ಗೆ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಯಾತ್ರೆಯಲ್ಲಿ ಪಾಲ್ಗೊಳ್ಳಬೇಕು ಎಂದು 'ಇಂಡಿಯಾ' ಮೈತ್ರಿಕೂಟದ ಮುಖಂಡರು ಹಾಗೂ ಸಮಾಜದ ಪ್ರಮುಖರನ್ನೂ ಪಕ್ಷವು ಆಹ್ವಾನಿಸುತ್ತಿದೆ ಎಂದು ತಿಳಿಸಿದರು. ಈ ಯಾತ್ರೆಯ ಮೂಲಕ ಪಕ್ಷವು ಜನರ ಅಭಿಪ್ರಾಯಗಳನ್ನೂ ಆಲಿಸಲಿದೆ ಎಂದು ಹೇಳಿದರು.

ಪ್ರಚಾರ ಸಮಿತಿ

ಲೋಕಸಭೆ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷವು ಪ್ರಚಾರ ಸಮಿತಿಯನ್ನು ಶನಿವಾರ ರಚಿಸಿದೆ. ಎಐಸಿಸಿ ಖಜಾಂಚಿ ಅಜಯ್ ಮಾಕೆನ್ ಅವರನ್ನು ಈ ಸಮಿತಿಯ ಸಂಚಾಲಕರಾಗಿ ನೇಮಿಸಲಾಗಿದೆ ಎಂದು ಪಕ್ಷದ ಪ್ರಕಟಣೆಯಲ್ಲಿ ಹೇಳಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಈ ಸಮಿತಿ ರಚಿಸಿದ್ದಾರೆ. ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಜೈರಾಮ್ ರಮೇಶ್ ಮತ್ತು ಕೆ.ಸಿ. ವೇಣುಗೋಪಾಲ್, ಎಐಸಿಸಿ ಆಡಳಿತ ಉಸ್ತುವಾರಿ ಗುರುದೀಪ್ ಸಿಂಗ್ ಸಪ್ಪಲ್, ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಮತ್ತು ಸಾಮಾಜಿಕ ಮಾಧ್ಯಮ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್ ಅವರು ಸಮಿತಿಯ ಸದಸ್ಯರಾಗಿದ್ದಾರೆ.

ಸಮಿತಿ ಜೊತೆಗೆ, ಕೇಂದ್ರ ವಾರ್ ರೂಂ ಅನ್ನು ಕೂಡಾ ಪಕ್ಷ ನಿಯೋಜಿಸಿದೆ. ಸಂವಹನ ವಾರ್ ರೂಂ ಅನ್ನು ವೈಭವ್ ವಾಲಿಯಾ ಮತ್ತು ಸಂಘಟನೆ ವಾರ್ ರೂಂ ಅನ್ನು ಶಶಿಕಾಂತ್ ಸೆಂಥಿಲ್ ಎಸ್. ಮುನ್ನಡೆಸಲಿದ್ದಾರೆ. ವರುಣ್ ಸಂತೋಷ್, ಗೋಕುಲ್ ಬುಟೇಲ್, ನವೀನ್ ಶರ್ಮಾ ಮತ್ತು ಕ್ಯಾಪ್ಟನ್ ಅರವಿಂದ್ ಕುಮಾರ್ ಅವರು ಸಂಘಟನೆ ವಾರ್ ರೂಂನ ಉಪಾಧ್ಯಕ್ಷರಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಲೋಕಸಭೆ ಚುನಾವಣೆಗಾಗಿ ಅಭ್ಯರ್ಥಿಗಳ ಪಟ್ಟಿ ತಯಾರಿಸಲು ಐದು ಸ್ಕ್ರೀನಿಂಗ್ ಸಮಿತಿಯನ್ನು ರಚಿಸಿದ ಮರುದಿನವೇ ಪ್ರಚಾರ ಸಮಿತಿ ರಚಿಸಲಾಗಿದೆ.

'ಸೀಟು ಹಂಚಿಕೆಗೆ ಮುಕ್ತ ಮನಸ್ಸು'

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷದೊಂದಿಗೆ ಸೀಟು ಹಂಚಿಕೆ ಕುರಿತಂತೆ ಪಕ್ಷವು ಮುಕ್ತ ಮನಸ್ಸಿನಿಂದ ಇದೆ. ಮಾತುಕತೆ ವಿಫಲವಾದಲ್ಲಿ ಏಕಾಂಗಿಯಾಗಿ ಚುನಾವಣೆ ಎದುರಿಸಲು ಸಿದ್ಧವಿದೆ' ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶನಿವಾರ ಪ್ರಕಟಿಸಿದೆ.

ಲೋಕಸಭೆಯಲ್ಲಿ ಪಕ್ಷದ ನಾಯಕರಾಗಿರುವ ಸುದೀಪ್ ಬಂಡೋಪಾಧ್ಯಾಯ ಅವರು, 'ಸೀಟು ಹಂಚಿಕೆ ಕುರಿತಂತೆ ಪಕ್ಷದ ಉನ್ನತ ನಾಯಕರ ನಿರ್ಧಾರವೇ ಅಂತಿಮ. ಹೀಗಾಗಿ, ಸ್ಥಳೀಯ ನಾಯಕರ ಚಿಂತನೆಗಳು ಅಪ್ರಸ್ತುತ' ಎಂದು ಸುದ್ದಿ ಸಂಸ್ಥೆಗೆ ತಿಳಿಸಿದರು.

ಪಕ್ಷ ಮುಕ್ತ ಮನಸ್ಸಿನಿಂದ ಇದೆ ಎಂದು ಪಕ್ಷದ ನಾಯಕ ಮಮತಾ ಬ್ಯಾನರ್ಜಿ ಅವರು ಈಗಾಗಲೇ ಹೇಳಿದ್ದಾರೆ. ಮುಂದಿನ ತೀರ್ಮಾನ ಕಾಂಗ್ರೆಸ್‌ನದ್ದಾಗಿದೆ. ಸೋನಿಯಾ ಗಾಂಧಿ ಮತ್ತು ಮಮತಾ ಬ್ಯಾನರ್ಜಿ ಈ ಬಗ್ಗೆ ನಿರ್ಧರಿಸುತ್ತಾರೆ ಎಂದರು.

ಎರಡು ದಿನಗಳ ಹಿಂದಷ್ಟೇ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು, ಸೀಟುಗಳಿಗಾಗಿ ಪಕ್ಷವು ಟಿಎಂಸಿ ಎದುರು ಅಂಗಲಾಚುವುದಿಲ್ಲ ಎಂದು ಹೇಳಿದ್ದರು.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹152.50
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹131.50

(ಪ್ರತಿ ಕೆ.ಜಿಗೆ)

ಕಾಫಿ ಮೂಡಿಗೆರೆ

ಮುದ್ರಮನೆ (50 ಕೆಜಿಗೆ)



ಎಪಿ	₹13750
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹6880

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹570
12 ಮೊಟ್ಟೆಗೆ	₹78

ಮೈಸೂರು

100 ಮೊಟ್ಟೆಗೆ	₹570

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹321-480

ದ್ವಿತಳಿ (ಬಿ.ವಿ) ₹111-578

ಮುಂಬೈ ಧಾರಣೆ

ಶೇಂಗಾ

06-01-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11300-11400
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	845 (845)
ಪಾಮ್ ವಾರದ ಡೆಲಿವರಿ	824 (825)
ಸೂರ್ಯಕಾಂತಿ ಎಣ್ಣೆ ಕಚ್ಚಾ	835 (835)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 62,150 (61,575)

ಬೆಳ್ಳಿ ಕೆ.ಜಿ 71,900 (71,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊಸ ಕಾನೂನು ಹಿಂಪಡೆಯಲು ಕೇಂದ್ರ ಸರ್ಕಾರಕ್ಕೆ ಒತ್ತಾಯ

17ರಿಂದ ಲಾರಿ ಚಾಲಕರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಘಾತ ನಡೆಸಿ ಪರಾರಿ'ಯಾದ (ಹಿಟ್ ಅಂಡ್ ರನ್) ಪ್ರಕರಣಗಳಿಗೆ ಸಂಬಂಧಿಸಿದಂತೆ ಜಾರಿಯಾಗಲಿರುವ ಹೊಸ ಕಾನೂನು ಹಿಂಪಡೆಯುವಂತೆ ಆಗ್ರಹಿಸಿ ಇದೇ 17ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು' ಎಂದು ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ರಾಜ್ಯ ಘಟಕದ ಅಧ್ಯಕ್ಷ ಸಿ. ನವೀನ್ ರೆಡ್ಡಿ, 'ಕೇಂದ್ರ ಸರ್ಕಾರ ಕಾನೂನು ತಜ್ಞರು, ಸಾರಿಗೆ ವಲಯದ ಪ್ರತಿನಿಧಿಗಳೊಂದಿಗೆ ಯಾವುದೇ ರೀತಿಯ ಸಮಾಲೋಚನೆ ನಡೆಸದೇ ಈ ಕಾನೂನು ಜಾರಿಗೊಳಿಸಲು ತಯಾರಿ ನಡೆಸಿದೆ' ಎಂದು ದೂರಿದರು.

'ಹೊರ ರಾಜ್ಯಗಳಲ್ಲಿ ಅಪಘಾತ ಸಂಭವಿಸಿದಾಗ ಚಾಲಕರ ಚಾಲನಾ ಪರವಾನಗಿ ಅನ್ನು ವಶಪಡಿಸಿಕೊಳ್ಳಲಾಗುತ್ತದೆ. ಲಾರಿ ಚಾಲಕರಿಗೆ ಜಾಮೀನು ನೀಡಲು ಸ್ಥಳೀಯ ಭದ್ರತೆ ಕೇಳುವ ಅಂಶವನ್ನು ಈ ಕಾನೂನಿನಿಂದ ಕೈಬಿಡಬೇಕು ಎಂದು ಆಗ್ರಹಿಸಿದರು.

'ದೇಶದ ಸಾರಿಗೆ ವಲಯವು ಶೇ 27ರಷ್ಟು ಚಾಲಕರ ಕೊರತೆ ಎದುರಿಸುತ್ತಿದೆ. ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ಕಾನೂನಿನಿಂದ ಹೊಸಬರು ಯಾರು ಈ ವೃತ್ತಿಗೆ ಪ್ರವೇಶಿಸಲು ಇಷ್ಟಪಡುವುದಿಲ್ಲ.

ಮುಖ್ಯಾಂಶಗಳು

- ಸಾರಿಗೆ ವಲಯದಲ್ಲಿ ಶೇ 27ರಷ್ಟು ಚಾಲಕರ ಕೊರತೆ
- ದಿನಬಳಕೆ ವಸ್ತುಗಳ ಸರಬರಾಜು ವಾಹನಗಳಿಗೆ ವಿನಾಯಿತಿ
- ಹೊಸ ಕಾನೂನು ಜಾರಿ ಕೇಂದ್ರ ಸರ್ಕಾರದ ತರಾತುರಿ



ಭಾರಿ ಮತ್ತು ಚಿಕ್ಕ ವಾಹನಗಳ ಮಧ್ಯೆ ಸಂಭವಿಸುವ ಅಪಘಾತಗಳಲ್ಲಿ ಯಾವುದೇ ರೀತಿಯ ತನಿಖೆ ನಡೆಸದೇ ಭಾರಿ ವಾಹನಗಳ ಚಾಲಕರದ್ದೇ ತಪ್ಪು ಎಂದು ಪ್ರಕರಣ ದಾಖಲಿಸುವ ಪರಿಪಾಟ ಸದ್ಯ ಜಾರಿಯಲ್ಲಿದೆ' ಎಂದು ಅವರು ಹೇಳಿದರು.

'ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ನಿಯಮಗಳನ್ನು ಸಡಿಲಗೊಳಿಸುವಂತೆ ಜ. 17ರವರೆಗೆ ಗಡುವು ನೀಡಲಾಗಿದೆ. ಇಲ್ಲದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ ಪ್ರಾರಂಭಿಸುತ್ತೇವೆ. ಆದರೆ, ದಿನನಿತ್ಯದ ವಸ್ತುಗಳನ್ನು ಸರಬರಾಜು ಮಾಡುವ ವಾಹನಗಳು ಎಂದಿನಂತೆ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ' ಎಂದು ವಿವರಿಸಿದರು.

ತಮಿಳುನಾಡಿನಲ್ಲಿ ವಿನ್‌ಫಾಸ್ಟ್ ಕಾರು ಘಟಕ

ವಿಯೆಟ್ನಾಂ ಕಂಪನಿಯಿಂದ ಬಂಡವಾಳ

ಪ್ರಜಾವಾಣಿ ವಾರ್ತೆ

ಚೆನ್ನೈ: ಉದ್ಯಮಿ ಇಲಾನ್ ಮಸ್ಕ್ ಒಡೆತನದ ಟೆಸ್ಲಾ ಕಂಪನಿಯು ಗುಜರಾತ್‌ನಲ್ಲಿ ತನ್ನ ಪ್ರಥಮ ಕಾರು ತಯಾರಿಕಾ ಘಟಕ ಆರಂಭಿಸಲು ಮುಂದಾಗಿರುವ ಬೆನ್ನಲ್ಲೇ, ವಿಯೆಟ್ನಾಂ ಮೂಲದ ವಿನ್‌ಫಾಸ್ಟ್ ಆಟೊ ಲಿಮಿಟೆಡ್ ಕೂಡ ಭಾರತದಲ್ಲಿ ಎಲೆಕ್ಟ್ರಿಕ್ ಕಾರುಗಳ ತಯಾರಿಕೆಗೆ ಮುಂದಾಗಿದೆ.

ತಮಿಳುನಾಡಿನ ತೂತ್ತುಕುಡಿಯಲ್ಲಿ ತನ್ನ ಮೊದಲ ಎಲೆಕ್ಟ್ರಿಕ್ ಕಾರು ಮತ್ತು ಬ್ಯಾಟರಿ ಉತ್ಪಾದನಾ ಘಟಕ ಆರಂಭಿಸಲು ನಿರ್ಧರಿಸಿದೆ. ಇದಕ್ಕಾಗಿ ಮುಂದಿನ ಐದು ವರ್ಷಗಳಲ್ಲಿ ₹16,000 ಕೋಟಿ ಬಂಡವಾಳ ಹೂಡಲಿದೆ. ಪ್ರಥಮ ಹಂತದಲ್ಲಿ ₹4,000 ಕೋಟಿ ಹೂಡಿಕೆಗೆ ತೀರ್ಮಾನಿಸಿದ್ದು, ಈ ವರ್ಷದಲ್ಲಿಯೇ ಘಟಕದ ಕಾರ್ಯಾರಂಭಕ್ಕೆ ಸಿದ್ಧತೆ ನಡೆಸಿದೆ ಎಂದು ಹೇಳಲಾಗಿದೆ.

ವಿನ್‌ಫಾಸ್ಟ್ ಘಟಕದ ಸ್ಥಾಪನೆಯಿಂದ 3,500ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿವೆ. ಇದು ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಲಿದೆ

ಎಂ.ಕೆ. ಸ್ಟಾಲಿನ್, ಮುಖ್ಯಮಂತ್ರಿ, ತಮಿಳುನಾಡು

ಚೆನ್ನೈನಲ್ಲಿ ಭಾನುವಾರದಿಂದ ಜಾಗತಿಕ ಹೂಡಿಕೆದಾರರ ಸಮಾವೇಶ ಆರಂಭವಾಗಲಿದೆ. ಈ ಸಮಾವೇಶದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರದ ಜೊತೆಗೆ ಕಂಪನಿಯು ಒಡಂಬಡಿಕೆಗೆ ಸಹಿ ಹಾಕುವ ನಿರೀಕ್ಷೆ ಇದೆ.

ಕಂಪನಿಯು ವಾರ್ಷಿಕವಾಗಿ 1.5 ಲಕ್ಷ ಕಾರುಗಳ ತಯಾರಿಕೆಯ ಗುರಿ ಹೊಂದಿದೆ. ಇದರಿಂದ ದೇಶದ ಇ.ವಿ ವಲಯಕ್ಕೆ ಮತ್ತಷ್ಟು ಉತ್ತೇಜನ ಸಿಗಲಿದೆ.



ಎತ್ತಿನಬಂಡಿ ಸ್ಪರ್ಧೆ ಚಿಕ್ಕಮಗಳೂರು ಬಳಿಯ ಮಾಗಡಿಯಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಎತ್ತಿನ ಬಂಡಿ ಓಟದ ಸ್ಪರ್ಧೆಯಲ್ಲಿ ಸ್ಪರ್ಧಾಳುಗಳು ಉತ್ಸಾಹದಿಂದ ಪಾಲ್ಗೊಂಡರು –ಪಿಟಿಐ ಚಿತ್ರ

ಜವಳಿ ಉದ್ಯಮಕ್ಕೆ ಸಂಕಷ್ಟ

ಆರ್ಥಿಕ ನೆರವಿಗೆ ಗಿರಣಿಗಳ ಸಂಘದಿಂದ ಕೇಂದ್ರದ ಮೊರೆ

ಮುಂಬೈ (ಪಿಟಿಐ): ರಫ್ತು ವಹಿವಾಟು ಮಂದಗತಿಯಲ್ಲಿ ಇರುವುದರಿಂದ ದೇಶದಲ್ಲಿ ಜವಳಿ ಉದ್ಯಮವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ ಎಂದು ಜವಳಿ ಗಿರಣಿಗಳ ಸಂಘ ಹೇಳಿದೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಕದನ, ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಯುದ್ಧವು ಹತ್ತಿ ಆಧಾರಿತ ತಯಾರಿಕಾ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ರಫ್ತು ಮಂದಗತಿಯಲ್ಲಿ ಸಾಗಲು ಇದೇ ಕಾರಣ. ಕೂಡಲೇ, ಕೇಂದ್ರ ಸರ್ಕಾರವು ಆರ್ಥಿಕ ನೆರವು ಘೋಷಿಸಬೇಕು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಂಘವು ಒತ್ತಾಯಿಸಿದೆ.

ಅಲ್ಲದೇ, ಹತ್ತಿ ಆಮದಿನ ಮೇಲೆ ಶೇ 11ರಷ್ಟು ಸುಂಕ ವಿಧಿಸಲಾಗುತ್ತಿದೆ. ಕೈಯಿಂದ ತೆಗೆದ ಹತ್ತಿ ನೂಲಿನ ಗುಣಮಟ್ಟ ಕಾಯ್ದುಕೊಳ್ಳುವಂತೆ ಸರ್ಕಾರ ಕಟ್ಟುನಿಟ್ಟಾಗಿ ಸೂಚಿಸಿದೆ ಎಂದು ಹೇಳಿದೆ.

ಸರ್ಕಾರದ ಈ ಆದೇಶ ಹಾಗೂ ಜಾಗತಿಕ ವಿದ್ಯಮಾನಗಳಿಂದ ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿವೆ. ಪ್ರತಿದಿನ ಬಳಸುವ ವಿದ್ಯುತ್ ಶುಲ್ಕವನ್ನೂ ಪಾವತಿಸಲು ಆಗುತ್ತಿಲ್ಲ. ಜತೆಗೆ, ಸಾಲದ ಅಸಲು ಹಾಗೂ ಬಡ್ಡಿದರ ಪಾವತಿಸಲೂ ಅವುಗಳಿಗೆ ಸಾಧ್ಯವಾಗುತ್ತಿಲ್ಲ ಎಂದು ಹೇಳಿದೆ.

ಮುಖ್ಯಾಂಶಗಳು

- ಹತ್ತಿ ಆಮದಿನ ಮೇಲೆ ಶೇ 11ರಷ್ಟು ಸುಂಕ
- ಮಂದಗತಿಯಲ್ಲಿ ಜವಳಿ ರಫ್ತು
- ಸಾಲದ ಮೇಲಿನ ಅಸಲು ಮರುಪಾವತಿಸುವ ಅವಧಿ ವಿಸ್ತರಿಸಲು ಮನವಿ

ಬಿಕ್ಕಟ್ಟಿಗೆ ಸಿಲುಕಿರುವ ಜವಳಿ ಕ್ಷೇತ್ರದ ನೆರವಿಗೆ ಸರ್ಕಾರ ಕ್ರಮವಹಿಸಬೇಕು. ಆ ಮೂಲಕ ಲಕ್ಷಾಂತರ ಜನರು ಉದ್ಯೋಗ ಕಳೆದುಕೊಳ್ಳುವುದನ್ನು ತಪ್ಪಿಸಬೇಕು

ರಾಕೇಶ್ ಮೆಹ್ತಾ, ಅಧ್ಯಕ್ಷ, ಭಾರತೀಯ ಜವಳಿ ಉದ್ಯಮದ ಒಕ್ಕೂಟ

ಬೇಡಿಕೆ ಏನು?: ಆರ್ಥಿಕ ಸಂಕಷ್ಟದಿಂದ ನರಳುತ್ತಿರುವ ಜವಳಿ ಉದ್ಯಮದ ನೆರವಿಗೆ ಸರ್ಕಾರ ಬರಬೇಕು. ಹಣಕಾಸಿನ ನೆರವಿನ ಕ್ರಮಗಳನ್ನು ವಿಸ್ತರಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೆ ಸೂಚಿಸಬೇಕು. ಸಾಲದ ಮೇಲಿನ ಅಸಲು ಮರುಪಾವತಿಸುವ ಅವಧಿಯನ್ನು ಒಂದು ವರ್ಷ ವಿಸ್ತರಿಸಬೇಕು ಎಂದು ಒತ್ತಾಯಿಸಿದೆ.

ತುರ್ತು ಸಾಲ ಖಾತರಿ ಯೋಜನೆಯಡಿ (ಇಸಿಎಲ್‌ಜಿಎಸ್) ಮೂರು ವರ್ಷದವರೆಗೆ ನೀಡಿರುವ ಸಾಲದ ಅವಧಿಯನ್ನು ಆರು ವರ್ಷಗಳಿಗೆ ವಿಸ್ತರಿಸಬೇಕು. ತೊಂದರೆಗೆ ಸಿಲುಕಿರುವ ಗಿರಣಿಗಳಿಗೆ ಆರ್ಥಿಕ ನೆರವಿನ ಸೌಲಭ್ಯವನ್ನು ನೀಡಬೇಕು ಎಂದು ಕೋರಿದೆ.

'ಎನ್‌ಪಿಎಸ್: ಚರ್ಚಿಸಿ ತೀರ್ಮಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವ ಸಂಪುಟ ಸದಸ್ಯರೊಂದಿಗೆ ಚರ್ಚಿಸಿ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದತಿ ಕುರಿತು ತೀರ್ಮಾನಿಸಲಾಗುವುದು' ಎಂದು ಎನ್‌ಪಿಎಸ್ ನೌಕರರ ಸಂಘದ ಪದಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮುಖ್ಯಮಂತ್ರಿಯವರನ್ನು ಎನ್‌ಪಿಎಸ್ ನೌಕರರ ಸಂಘದ ಪದಾಧಿಕಾರಿಗಳು ಶನಿವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

'ಎನ್‌ಪಿಎಸ್ ರದ್ದುಪಡಿಸಿದ ಇತರ ರಾಜ್ಯಗಳಲ್ಲಿ ಅನುಸರಿಸಿರುವ ಕ್ರಮಗಳ ಕುರಿತು ಕೂಡ ಪರಿಶೀಲಿಸಲಾಗುವುದು. ಆರ್ಥಿಕ ಇಲಾಖೆ ಕೂಡ ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಿದೆ. ಆ ಬಳಿಕ ರದ್ದತಿಯ ಸಾಧ್ಯಾಸಾಧ್ಯತೆ ಕುರಿತು ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು' ಎಂದು ಭರವಸೆ ನೀಡಿದರು.

'ಬಿಐಎಸ್‌ಗೆ ಉತ್ಪನ್ನ ಸೇರ್ಪಡೆ ಗುರಿ'

ನವದೆಹಲಿ (ಪಿಟಿಐ): 'ಉತ್ಪನ್ನಗಳು ಮತ್ತು ಸೇವೆಯಲ್ಲಿ ಉತ್ಕೃಷ್ಟ ಗುಣಮಟ್ಟ ಕಾಯ್ದುಕೊಂಡರೆ ಮಾತ್ರ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯ' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಪ್ರತಿಪಾದಿಸಿದ್ದಾರೆ.

ಭಾರತೀಯ ಗುಣಮಟ್ಟ ಮಾಪನ ಸಂಸ್ಥೆಯ (ಬಿಐಎಸ್) 77ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ವರ್ಚುವಲ್ ಆಗಿ ಮಾತನಾಡಿದ ಅವರು, '2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿಸುವ ಗುರಿ ಹೊಂದಲಾಗಿದೆ. ಇದಕ್ಕೆ ಪೂರಕವಾಗಿ ಹಲವು ಉತ್ಪನ್ನಗಳನ್ನು ಬಿಐಎಸ್ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು.

2014ಕ್ಕೂ ಮೊದಲು ದೇಶದಲ್ಲಿ 106 ಉತ್ಪನ್ನಗಳಷ್ಟೇ ಬಿಐಎಸ್ ಮಾನದಂಡಕ್ಕೆ ಒಳಪಟ್ಟಿದ್ದವು. ಸದ್ಯ 672 ಉತ್ಪನ್ನಗಳು ಈ ಮಾನದಂಡಕ್ಕೆ ಒಳಪಟ್ಟಿವೆ. ಮುಂದಿನ ದಿನಗಳಲ್ಲಿ 2,000ದಿಂದ 2,500 ಉತ್ಪನ್ನಗಳನ್ನು ಇದರ ವ್ಯಾಪ್ತಿಗೆ ಸೇರ್ಪಡೆಗೊಳಿಸಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1600)
ಸೋಯಾ (ರಿಫೈನ್ಡ್)	₹880 (885)
ಸೂರ್ಯಕಾಂತಿ (ರಿಫೈನ್ಡ್)	₹910 (902)
ಪಾಮೋಲಿನ್	₹824 (827)

ಮಾ. 1ರಿಂದ ಇ–ಇನ್‌ವಾಯ್ಸ್ ಕಡ್ಡಾಯ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ ನೋಂದಣಿ ಮಾಡಿಕೊಂಡು ವಾರ್ಷಿಕವಾಗಿ ₹5 ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಉದ್ದಿಮೆಗಳು, ಬಿ2ಬಿ ವಹಿವಾಟಿಗೆ ಇ-ಇನ್‌ವಾಯ್ಸ್ ಸೃಷ್ಟಿಸುವುದನ್ನು ಮಾರ್ಚ್ 1ರಿಂದ ಕಡ್ಡಾಯಗೊಳಿಸಲಾಗಿದೆ.

₹50 ಸಾವಿರಕ್ಕೂ ಹೆಚ್ಚು ಮೌಲ್ಯದ ಸರಕುಗಳ ಅಂತರರಾಜ್ಯ ಸಾಗಾಟಕ್ಕೆ ಜಿಎಸ್‌ಟಿ ಅಡಿಯಲ್ಲಿ ಇ-ವೇ ಬಿಲ್ ಪಡೆಯುವುದು ಕಡ್ಡಾಯವಾಗಿದೆ.

ಆದರೆ, ಕೆಲವು ಜಿಎಸ್‌ಟಿ ತೆರಿಗೆದಾರರು ಬಿ2ಬಿ ಹಾಗೂ ಬಿ2ಇ ವಹಿವಾಟಿಗೆ ಇ-ಇನ್‌ವಾಯ್ಸ್ ಸೇರ್ಪಡೆ ಮಾಡದೆಯೇ ಇ-ವೇ ಬಿಲ್ ಸೃಷ್ಟಿಸುತ್ತಿರುವುದು ಕಂಡುಬಂದಿದೆ ಎಂದು ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ತಿಳಿಸಿದೆ.

ಅಲ್ಲದೇ, ಕೆಲವು ಪ್ರಕರಣಗಳಲ್ಲಿ ಇನ್‌ವಾಯ್ಸ್ ಮಾಹಿತಿಯನ್ನು ಇ-ವೇ ಬಿಲ್‌ನಲ್ಲಿ ಪ್ರತ್ಯೇಕವಾಗಿ ನಮೂದಿಸುತ್ತಿದ್ದಾರೆ. ಆದರೆ, ಇಂತಹ ಇ-ವೇ ಬಿಲ್ ಮತ್ತು ಇ-ಇನ್‌ವಾಯ್ಸ್‌ಗಳು ತಾಳೆ ಆಗುತ್ತಿಲ್ಲ ಎಂದು ಹೇಳಿದೆ.

ತೆರಿಗೆದಾರರು ಎಸಗುತ್ತಿರುವ ಈ ಪ್ರಮಾದಕ್ಕೆ ನಿಯಂತ್ರಣ ಹೇರಲು ನಿರ್ಧರಿಸಲಾಗಿದೆ. ಹಾಗಾಗಿ, ಮಾರ್ಚ್ ಒಂದರಿಂದ ಇ-ಇನ್‌ವಾಯ್ಸ್ ಇಲ್ಲದೆ ಸೃಷ್ಟಿಸುವ ಇ-ವೇ ಬಿಲ್‌ಗಳನ್ನು ಸ್ವೀಕರಿಸುವುದಿಲ್ಲ. ಹಾಗಾಗಿ, ಕೇಂದ್ರ ಸರ್ಕಾರವು ಜಿಎಸ್‌ಟಿ ಅಡಿಯಲ್ಲಿ ಸೂಚಿಸಿರುವ ಮಾನದಂಡವನ್ನು ಪಾಲಿಸಬೇಕಿದೆ ಎಂದು ಸೂಚಿಸಿದೆ.

ಬಿ2ಸಿ ಸೇರಿದಂತೆ ಇತರೆ ವಹಿವಾಟುಗಳಿಗೆ ಇ-ವೇ ಬಿಲ್ ಪಡೆಯುವುದಕ್ಕೆ ಸಂಬಂಧಿಸಿದಂತೆ ಈಗಾಗಲೇ ನಿಗದಿಪಡಿಸಿರುವ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದೆ.

ರಣಜಿ ಟ್ರೋಫಿ; ದ್ವಿಶತಕ ತಪ್ಪಿಸಿಕೊಂಡ ದೇವದತ್ತ ಪಡಿಕ್ಕಲ್ • ಮನೀಷ್ ಪಾಂಡೆ ಆಕರ್ಷಕ ಶತಕ

ಭರ್ಜರಿ ಮುನ್ನಡೆ ಗಳಿಸಿದ ಕರ್ನಾಟಕ

• ಸತೀಶ ಬಿ.

ಹುಬ್ಬಳ್ಳಿ: ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ಇಲ್ಲಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶನಿವಾರ ಸೂರ್ಯನ ಪ್ರಖರತೆ ಇರಲಿಲ್ಲ. ಆದರೆ, ದೇವದತ್ತ ಪಡಿಕ್ಕಲ್, ಮನೀಷ್ ಪಾಂಡೆ ಜೋಡಿಯ ಅಬ್ಬರದ ಆಟದ ಮೂಲಕ ಫಳ ಫಳ ಹೊಳೆದರು.

ಏಳು ರನ್‌ಗಳಿಂದ ದ್ವಿಶತಕ ವಂಚಿತರಾದ ದೇವದತ್ತ ಮತ್ತು ಮನೀಷ್ ಅವರ ಆಕರ್ಷಕ ಶತಕದ ನೆರವಿನಿಂದ ಕರ್ನಾಟಕ, ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಪಂಜಾಬ್ ಮೇಲೆ 309 ರನ್‌ಗಳ ಬೃಹತ್ ಮುನ್ನಡೆ ಗಳಿಸಿತು.

ಮೂರು ವಿಕೆಟ್‌ಗೆ 142 ರನ್‌ಗಳಿಂದ ಶನಿವಾರ ಆಟ ಮುಂದುವರಿಸಿದ ಕರ್ನಾಟಕ ತಂಡ ಎರಡನೇ ದಿನದಾಟದ ಅಂತ್ಯಕ್ಕೆ 123 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 461 ರನ್ ಗಳಿಸಿದ್ದು ಗೆಲುವಿನ ಅವಕಾಶ ಹೊಂದಿದೆ.

ದೇವದತ್ತ ಮತ್ತು ಮನೀಷ್ ಜೋಡಿ ಊಟದ ವಿರಾಮದವರೆಗೂ ಪಂಜಾಬ್ ಬೌಲರ್‌ಗಳ ಬೆವರಿಳಿಸಿತು. ಈ ಜೋಡಿ ಸ್ಪಿನ್ನರ್, ವೇಗಿಗಳನ್ನು ಲೀಲಾಜಾಲವಾಗಿ ಎದುರಿಸಿತು.

ಪಂಜಾಬ್ ತಂಡದ ನಾಯಕ ಮನದೀಪ್ ಅವರು ಬೌಲಿಂಗ್‌ನಲ್ಲಿ ಮಾಡಿದ ಯಾವ ಬದಲಾವಣೆಯೂ ಫಲಿಸಲಿಲ್ಲ.

ವೇಗದ ಆಟಕ್ಕೆ ಒತ್ತು ನೀಡಿದ ದೇವದತ್ತ, ವೇಗಿ ಬಲ್ತೇಜ್ ಸಿಂಗ್ ಎಸೆದ ಇನಿಂಗ್ಸ್‌ನ 42ನೇ ಓವರ್‌ನ ಎರಡನೇ ಎಸೆತವನ್ನು ಬೌಂಡರಿ ಗೆರೆ ದಾಟಿಸಿ, 102 ಎಸೆತಗಳಲ್ಲಿ ಶತಕ ಪೂರೈಸಿದರು.

ದೇವದತ್ತ ಪಡಿಕ್ಕಲ್	
ರನ್	193
ಎಸೆತ	216
ಬೌಂಡರಿ	24
ಸಿಕ್ಸರ್	4



ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂಜಾಬ್ ಎದುರಿನ ಪಂದ್ಯದಲ್ಲಿ ಕರ್ನಾಟಕ ತಂಡದ ದೇವದತ್ತ ಪಡಿಕ್ಕಲ್ ಅವರು ಶತಕ ಗಳಿಸಿದ ಸಂಭ್ರಮ. ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರಿಗೆ ಮೂರನೇ ಶತಕ. ನಂತರ 150ರ ಗಡಿ ದಾಟಲು ಕೇವಲ 68 ಎಸೆತ ತೆಗೆದುಕೊಂಡರು.

ಇವರಿಗೆ ಸೂಕ್ತ ಸಾಥ್ ನೀಡಿದ ಅನುಭವಿ ಮನೀಷ್, ಆಕರ್ಷಕ ಪುಲ್ ಹೊಡೆತ, ಕವರ್ ಡ್ರೈವ್‌ಗಳ ಮೂಲಕ ಮಿಂಚಿದರು.

ಎಡಗೈ ಸ್ಪಿನ್ನರ್ ಪ್ರೇರಿತ್ ಎಸೆದ 76ನೇ ಓವರ್‌ನ ಎರಡನೇ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದ ಅವರು, ನಂತರ ಎಸೆತದಲ್ಲಿ ಚುರುಕಿನ ಒಂದು ರನ್ ಗಳಿಸಿ ಶತಕ ಗಳಿಸಿದರು.

ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 24ನೇ ಶತಕ.

ದ್ವಿಶತಕದ ಸನಿಹದಲ್ಲಿದ್ದ ದೇವದತ್ತ, ಪ್ರೇರಿತ್ ದತ್ತಾ ಎಸೆತವನ್ನು ಎಕ್ಸ್‌ಟ್ರಾ ಕವರ್‌ನಲ್ಲಿ ಬಾರಿಸಿದರು. ಚೆಂಡು ನೇರವಾಗಿ ಬಲ್ತೇಜ್ ಸಿಂಗ್ ಕೈಸೇರಿತು. ಅವರು 193 (216ಎ, 4x24, 6x4) ರನ್ ಗಳಿಸಿ ಇನಿಂಗ್ಸ್ ಮುಗಿಸಿದರು. ಮನೀಷ್ (118; (165ಎ, 4X13, 6x3) ಅರ್ಷದೀಪ್ ಬೌಲಿಂಗ್‌ನಲ್ಲಿ ಎರಡನೇ ಸ್ಲಿಪ್‌ನಲ್ಲಿದ್ದ ಅಭಿಷೇಕ್ ಶರ್ಮಾ ಹಿಡಿದ ಆಕರ್ಷಕ ಕ್ಯಾಚ್‌ಗೆ ನಿರ್ಗಮಿಸಿದರು.

ದೇವದತ್ತ ಮತ್ತು ಮನೀಷ್ ಜೋಡಿ ನಾಲ್ಕನೇ ವಿಕೆಟ್ ಪಾಲುದಾರಿಕೆಯಲ್ಲಿ 234 (295ಎ) ರನ್ ಗಳಿಸಿದರು. ತಾಳ್ಮೆಯ ಆಟವಾಡಿದ ಎಸ್.ಶರತ್ ಅರ್ಧಶತಕ (55; 158ಎ, 4x5) ಗಳಿಸಿ ಮುನ್ನಡೆಯನ್ನು ಇನ್ನಷ್ಟು ಹೆಚ್ಚಿಸಿದರು. ಅವರು ಶುಭಾಂಗ್ ಹೆಗಡೆ (27) ಜತೆ ಆರನೇ ವಿಕೆಟ್ ಜತೆಯಾಟದಲ್ಲಿ 59 ರನ್ (174) ಸೇರಿಸಿ, ತಂಡ ಕುಸಿಯಂತೆ ತಡೆದರು. ದಿನದಾಟದ ಅಂತ್ಯಕ್ಕೆ ಶರತ್ ಜತೆ ವೈಶಾಖ್ ವಿಜಯಕುಮಾರ್ (15) ಕ್ರೀಸ್‌ನಲ್ಲಿದ್ದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಪಂಜಾಬ್ 152 (46.5 ಓವರ್)
ಕರ್ನಾಟಕ: 6ಕ್ಕೆ 461 (123 ಓವರ್)
(ಶುಕ್ರವಾರ: 33 ಓವರ್‌ಗಳಲ್ಲಿ 3ಕ್ಕೆ142)
ದೇವದತ್ತ ಸಿ ಬಲ್ತೇಜ್ ಬಿ ಪ್ರೇರಿತ್ 193 (216ಎ, 4X24, 6X4)
ಮನೀಷ್ ಸಿ ಅಭಿಷೇಕ್ ಬಿ ಅರ್ಷದೀಪ್ 118 (165ಎ, 4X13. 6x3)
ಶರತ್ ಔಟಾಗದೆ 55 (158ಎ, 4x5)
ಶುಭಾಂಗ್ ಸಿ ಮನದೀಪ್ ಬಿ ನಮನ್ 27 (77ಎ, 4x2)
ವೈಶಾಕ್ ಔಟಾಗದೆ 15 (27ಎ, 4x3)
ಇತರೆ: 7 (ಲೆಗ್‌ಬೈ 6, ನೋಬಾಲ್ 1)
ವಿಕೆಟ್ ಪತನ: 4–344 (ದೇವದತ್ತ; 75.4), 5–382 (ಮನೀಷ್ ಪಾಂಡೆ 87.3), 6–441 (ಶುಭಾಂಗ್ ಹೆಗಡೆ, 116.3)
ಬೌಲಿಂಗ್: ಬಲ್ತೇಜ್ ಸಿಂಗ್ 21–3–56–0, ಅರ್ಷದೀಪ್ ಸಿಂಗ್ 21–1–71–2 , ಸಿದ್ದಾರ್ಥ್ ಕೌಲ್ 18–0–79–0, ಪ್ರೇರಿತ್ ದತ್ತಾ 22–1–84–2, ನಮನ್ ಧೀರ್ 12–1–46–2, ಮಯಂಕ್ ಮಾರ್ಕಂಡೆ 20–1–73–0, ಅಭಿಷೇಕ್ ಶರ್ಮಾ 9–0–46–0.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶತಕ ಗಳಿಸುವುದು ಸ್ಮರಣೀಯವಾದದ್ದು. ದ್ವಿಶತಕ ಕೈತಪ್ಪಿದ್ದಕ್ಕೆ ಬೇಸರವಿದೆ.
ದೇವದತ್ತ ಪಡಿಕ್ಕಲ್, ಕರ್ನಾಟಕ ತಂಡದ ಬ್ಯಾಟರ್

ಆಸ್ಟ್ರೇಲಿಯಾಕ್ಕೆ 8 ವಿಕೆಟ್ ಜಯ, 3–0 ಸರಣಿ

ವಿದಾಯ ಟೆಸ್ಟ್: ಮಿಂಚಿದ ವಾರ್ನರ್

ಸಿಡ್ನಿ (ಎಪಿ): ಡೇವಿಡ್ ವಾರ್ನರ್ 57 ರನ್ ಹೊಡೆದು, ತಮ್ಮ ವಿದಾಯದ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಎಂಟು ವಿಕೆಟ್‌ಗಳಿಂದ ಪಾಕಿಸ್ತಾನ ತಂಡದ ಮೇಲೆ ಜಯಗಳಿಸಲು ನೆರವಾದರು. ಈ ದೈತ್ಯ ಆರಂಭ ಆಟಗಾರ 112 ಟೆಸ್ಟ್ ಜೀವನವನ್ನು ತವರು ನೆಲ–ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ (ಎಸ್‌ಸಿಜಿ) ಗೆಲುವಿನೊಡನೆ ಅಂತ್ಯಗೊಳಿಸಿದರು.

ಮೂರನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ತಂಡ ಗೆಲ್ಲಲು 12 ರನ್ ಬೇಕಿದ್ದಾಗ ಅವರು ಸಾಜಿದ್ ಖಾನ್ ಬೌಲಿಂಗ್‌ನಲ್ಲಿ ಎಲ್‌ಬಿ ತೀರ್ಪನ್ನು ಪಡೆದರು. 75 ಎಸೆತಗಳ ಅವರ ಇನಿಂಗ್ಸ್‌ನಲ್ಲಿ ಏಳು ಬೌಂಡರಿಗಳಿದ್ದವು. ಪ್ರೇಕ್ಷಕರ ಹರ್ಷೋದ್ಗಾರಗಳಿಗೆ ಕೈಬೀಸಿ ಪ್ರತಿಕ್ರಿಯಿಸಿದರು.

ಇದಕ್ಕೆ ಮೊದಲು ಶುಕ್ರವಾರ 7 ವಿಕೆಟ್‌ಗೆ 68 ರನ್ ಗಳಿಸಿದ್ದ ಪಾಕಿಸ್ತಾನ 115 ರನ್‌ಗಳಿಗೆ ಆಲೌಟ್ ಆಯಿತು. ಮೊಹಮ್ಮದ್ ರಿಜ್ವಾನ್ (28) ಮತ್ತು ಅಮೀರ್ ಜಮಾಲ್ (18) ಕೆಲಕಾಲ ಪ್ರತಿರೋಧ ತೋರಿಸಿ ಎಂಟನೇ ವಿಕೆಟ್‌ಗೆ 42 ರನ್ ಸೇರಿಸಿದ್ದರು. ಈ ಜೊತೆಯಾಟವನ್ನು ಮುರಿದಿದ್ದು ಸ್ಪಿನ್ನರ್ ನೇಥನ್ ಲಯನ್ (36ಕ್ಕೆ3). ನಂತರ ಅವರು ಹಸನ್ ಅಲಿ ಅವರನ್ನು ಬೌಲ್ಡ್ ಮಾಡಿ ಪ್ರವಾಸಿ ತಂಡದ ಪತನ ತ್ವರಿತಗೊಳಿಸಿದರು.



ವಿದಾಯ ಪಂದ್ಯವಾಡಿದ ನಂತರ ಡೇವಿಡ್ ವಾರ್ನರ್ ತಮ್ಮ ಪುತ್ರಿಯರನ್ನು ತಬ್ಬಿಕೊಂಡರು. ಎಎಫ್‌ಪಿ ಚಿತ್ರ

ಗೆಲುವಿಗೆ ಬೇಕಾಗಿದ್ದ 130 ರನ್‌ಗಳ ಗುರಿ ಎದುರಿಸಿದ ಆಸ್ಟ್ರೇಲಿಯಾ ಖ್ವಾಜಾ ಅವರನ್ನು ಮೊದಲ ಓವರ್‌ನಲ್ಲೇ ಕಳೆದುಕೊಂಡಿತು. ಆದರೆ ವಾರ್ನರ್ ಮತ್ತು ಲಾಬುಷೇನ್ (ಔಟಾಗದೇ 62, 73ಎ, 9x4) ಎರಡನೇ ವಿಕೆಟ್‌ಗೆ 119 ರನ್ ಸೇರಿಸಿ ತಂಡವನ್ನು ವಿಜಯಪಥದಲ್ಲಿ ಮುನ್ನಡೆಸಿದರು.

ಆಲ್‌ರೌಂಡ್ ಆಟವಾಡಿದ್ದ ಪಾಕಿಸ್ತಾನ ಆಟಗಾರ ಅಮೀರ್ ಜಮಾಲ್ ಪಂದ್ಯಶ್ರೇಷ್ಠ ಪುರಸ್ಕಾರಕ್ಕೆ ಪಾತ್ರರಾದರೆ, ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಸರಣಿ ಶ್ರೇಷ್ಠ ಗೌರವಕ್ಕೆ ಭಾಜನರಾದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಪಾಕಿಸ್ತಾನ: 313, ಆಸ್ಟ್ರೇಲಿಯಾ: 299; ಎರಡನೆ ಇನಿಂಗ್ಸ್: ಪಾಕಿಸ್ತಾನ: 43.1 ಓವರುಗಳಲ್ಲಿ 115 (ರಿಜ್ವಾನ್ 28; ಹ್ಯಾಜಲ್‌ವುಡ್ 16ಕ್ಕೆ4, ನೇಥನ್ ಲಯನ್ 36ಕ್ಕೆ3); ಆಸ್ಟ್ರೇಲಿಯಾ: 25.5 ಓವರುಗಳಲ್ಲಿ 2 ವಿಕೆಟ್‌ಗೆ 130 (ವಾರ್ನರ್ ಔಟಾಗದೇ 57, ಮಾರ್ನಸ್ ಲಾಬುಷೇನ್ ಔಟಾಗದೇ 62; ಸಾಜಿದ್ ಖಾನ್ 49ಕ್ಕೆ2).

ವಿಶ್ವಕಪ್ ಗೆದ್ದ ತಂಡದಲ್ಲಿ ಆಡಿದ್ದ ಆಟಗಾರ– ಕೋಚ್

ಫುಟ್‌ಬಾಲ್ ದಿಗ್ಗಜ ಮಾರಿಯೊ ಇನ್ನಿಲ್ಲ

ರಿಯೊ ಡಿ ಜನೇರೊ (ರಾಯಿಟರ್ಸ್): ಆಟಗಾರ ಮತ್ತು ನಂತರ ಕೋಚ್ ಆಗಿ ಒಟ್ಟು ನಾಲ್ಕು ಸಲ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಗೆದ್ದ ಬ್ರೆಜಿಲ್ ತಂಡದ ದಿಗ್ಗಜ ಮಾರಿಯೊ ಝಗಾಲೊ ನಿಧನರಾಗಿದ್ದಾರೆ ಎಂದು ಅವರ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಶನಿವಾರ ಪ್ರಕಟಿಸಲಾಗಿದೆ.

ಅವರಿಗೆ 92 ವರ್ಷವಾಗಿತ್ತು. 1958ರಲ್ಲಿ ಬ್ರೆಜಿಲ್ ತಂಡ ಮೊದಲ ಬಾರಿ ವಿಶ್ವಕಪ್ ಗೆದ್ದಾಗ ಅವರು ಆಡಿದ್ದರು. ನಾಲ್ಕು ವರ್ಷಗಳ ನಂತರ ಚಿಲಿಯಲ್ಲಿ ನಡೆದ ವಿಶ್ವಕಪ್‌ನಲ್ಲೂ ತಂಡದಲ್ಲಿ ಸ್ಥಾನ ಉಳಿಸಿಕೊಂಡಿದ್ದರು. ದಂತಕತೆ ಪೆಲೆ ಅವರಿಗಿಂತ ಇವರು ಹತ್ತು ವರ್ಷದ ದೊಡ್ಡವರು.

1970 ರಲ್ಲಿ ಅವರು ತಂಡದ ತರಬೇತುದಾರನಾಗಿದ್ದರು. ಆ ತಂಡದಲ್ಲಿ ಘಟಾನುಘಟಿ ಆಟಗಾರರಾದ ಪೆಲೆ, ಜೈರ್ಝಿನೊ, ರಿವೆಲಿನೊ ಮತ್ತು ಟೊಸ್ಟಾವೊ ಮೊದಲಾದವರು ಆಡಿದ್ದು, ಇದನ್ನು ಸಾರ್ವಕಾಲಿಕ ಶ್ರೇಷ್ಠ ತಂಡವೆಂದು ಪರಿಗಣಿಸಲಾಗಿದೆ. ಈ ತಂಡ ಮೂರನೇ ಬಾರಿ ಬ್ರೆಜಿಲ್‌ಗೆ ವಿಶ್ವಕಪ್ ಗೆದ್ದುಕೊಟ್ಟಿತ್ತು. ಆಟಗಾರ ಮತ್ತು ಮ್ಯಾನೇಜರ್ ಆಗಿ ವಿಶ್ವಕಪ್ ಗೆದ್ದ ಮೊದಲ ಆಟಗಾರನೆಂಬ ಶ್ರೇಯ ಮಾರಿಯೊ ಅವರದಾಯಿತು.



ಮಾರಿಯೊ

1994 ರ ಅಟ್ಲಾಂಟಾ (ಅಮೆರಿಕ) ವಿಶ್ವಕಪ್‌ನಲ್ಲಿ ಬ್ರೆಜಿಲ್ ತಂಡ ನಾಲ್ಕನೇ ಬಾರಿ ಚಾಂಪಿಯನ್ ಆದಾಗ ಅವರು ಸಹಾಯಕ ಕೋಚ್ ಆಗಿದ್ದರು. ‘ಓಲ್ಡ್ ವೂಲ್ಫ್’ (ಹಿರಿ ತೋಳ) ಎಂಬ ಅಡ್ಡಹೆಸರು ಅವರಿಗಿತ್ತು. 2006ರಲ್ಲಿ ಫುಟ್‌ಬಾಲ್ ಕ್ಷೇತ್ರಕ್ಕೆ ನಿವೃತ್ತಿ ಹೇಳಿದ್ದರು.

1931ರಲ್ಲಿ ಬ್ರೆಜಿಲ್‌ನ ಈಶಾನ್ಯ ತೀರದ ಮಾಸಿಯೊದಲ್ಲಿ ಹುಟ್ಟಿದ ಅವರಿಗೆ ಒಂದು ವರ್ಷ ಆಗುವ ಮೊದಲೇ ಕುಟುಂಬ ರಿಯೊ ಡಿ ಜನೇರೊಗೆ ವಲಸೆ ಹೋಗಿತ್ತು. ಪೈಲಟ್ ಆಗಬೇಕೆಂಬ ಅವರ ಆಸೆ ಈಡೇರಿರಲಿಲ್ಲ. ಕಣ್ಣಿನ ದೃಷ್ಟಿ ಚುರುಕಾಗಿಲ್ಲ ಎಂಬುದು ಇದಕ್ಕೆ ಕಾರಣ. ನಂತರ ಅವರು ಅಕೌಂಟೆನ್ಸಿ ಓದಿದರು. ಫುಟ್‌ಬಾಲ್ ಆಟಗಾರನಾದರು. 1955ರಲ್ಲಿ ಅಲ್ಬಿನಾ ಡಿ ಕ್ಯಾಸ್ಟ್ರೊ ಅವರನ್ನು ವರಿಸಿದರು.

ಚೆಸ್: ಶರಣ್, ಧನುಷ್ ಮುನ್ನಡೆ

ಮಂಗಳೂರು: ಸ್ಥಳೀಯ ಆಟಗಾರರಾದ ಶರಣ್ ರಾವ್ ಮತ್ತು ಧನುಷ್ ರಾಮ್ ಎಂ. ಅವರು ಕುದುರೆಮುಖ ಕಬ್ಬಿಣ ಅದಿರು ಕಂಪನಿ (ಕೆಐಒಸಿಎಲ್) ಆಶ್ರಯದ ಫಿಡೆ ರೇಟಿಂಗ್ ಅಖಿಲ ಭಾರತ ಮುಕ್ತ ರ‍್ಯಾಪಿಡ್ ಚೆಸ್ ಟೂರ್ನಿಯ ಮೊದಲ ದಿನ ಇತರ ಐವರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಕಳೆದ ವರ್ಷ ಐಎಂ ಪಟ್ಟ ಪಡೆದಿದ್ದ ಶರಣ್ ರಾವ್ ಮತ್ತು ಪುತ್ತೂರಿನ ಧನುಷ್ (ರೇಟಿಂಗ್: 1785) ಐದು ಸುತ್ತುಗಳಿಂದ ಸಂಭವನೀಯ ಐದು ಪಾಯಿಂಟ್ಸ್ ಗಳಿಸಿದ್ದಾರೆ.

ಕರ್ನಾಟಕದ ಪ್ರೀತಂ ಶರ್ಮಾ, ತಮಿಳುನಾಡಿನ ಸೆಂಥಿಲ್ ಮಾರನ್, ಸೈಯದ್ ಅನ್ವರ್ ಶಾಜುಲಿ, ಗೋವಾದ ಪ್ರದೀಪ್ ಮಂದಾರ್ ಲಾಡ್ ಮತ್ತು ಋತ್ವಿಜ್ ಪರಬ್ ಕೂಡ 5 ಪಾಯಿಂಟ್ಸ್ ಕಲೆಹಾಕಿದ್ದಾರೆ.

ಕರ್ನಾಟಕದ ರವಿಗೋಪಾಲ್ ಹೆಗ್ಡೆ, ಅರ್ಜುನ್ ಪ್ರಭು, ಪ್ರಶಾಂತ್ ನಾಯ್ಕ್, ಗಹನ್ ಎಂ.ಜಿ, ಆರುಷಿ ಹೆಲೆನ್ ಡಿ‘ಸಿಲ್ವಾ, ಗೋವಾದ ಅನಿಕೇತ್ ತಮಿಳುನಾಡಿನ ಮಣಿಕಂಠನ್ ತಲಾ 4.5 ಪಾಯಿಂಟ್ ಸಂಗ್ರಹಿಸಿದರು. 2150 ರೇಟಿಂಗ್ ಹೊಂದಿರುವ ಶರಣ್ ದಿನದ ಕೊನೆಯ ಸುತ್ತಿನಲ್ಲಿ ಕರ್ನಾಟಕದ ಸುದರ್ಶನ್ ಭಟ್ಟ ವಿರುದ್ಧ ಜಯ ಗಳಿಸಿದರು. ಧನುಷ್ ರಾಮ್ ತಮಗಿಂತ ಹೆಚ್ಚು ರೇಟಿಂಗ್ ಪಾಯಿಂಟ್ (2047) ಹೊಂದಿರುವ ತಮಿಳುನಾಡಿನ ಶ್ಯಾಮ್ ಆರ್. ಎದುರು ಗೆದ್ದರು.

ರಣಜಿ: ಬಿಹಾರದ ಎರಡು ತಂಡ ಕಣಕ್ಕೆ!

ಕ್ರಿಕೆಟ್ ಸಂಸ್ಥೆ ಪದಾಧಿಕಾರಿಗಳ ಜಟಾಪಟಿ; ವಿಳಂಬವಾಗಿ ಆರಂಭವಾದ ಪಂದ್ಯ

ನವದೆಹಲಿ (ಪಿಟಿಐ): ಬಿಹಾರ ಕ್ರಿಕೆಟ್ ಸಂಸ್ಥೆ ಈಗ ಮತ್ತೊಂದು ಅವಾಂತರ ಸೃಷ್ಟಿಸಿ ಗಮನ ಸೆಳೆದಿದೆ.

ಪಟ್ನಾದಲ್ಲಿ ಶುಕ್ರವಾರ ರಣಜಿ ಟೂರ್ನಿಯ ಬಿ ಗುಂಪಿನ ಪಂದ್ಯವು ಮುಂಬೈ ವಿರುದ್ಧ ಆರಂಭವಾಗಿದೆ. ಆದರೆ ಈ ಮುಂಬೈ ತಂಡವನ್ನು ಎದುರಿಸಲು ಬಿಹಾರದಿಂದ ಎರಡು ತಂಡಗಳು ಮೈದಾನದಲ್ಲಿ ಜಮಾಯಿಸಿದ್ದು ಗೊಂದಲಕ್ಕೆ ಕಾರಣವಾಯಿತು. ಇದರಿಂದಾಗಿ ಪಂದ್ಯವು ಸುಮಾರು ಮೂರು ತಾಸು ತಡವಾಗಿ ಆರಂಭವಾಯಿತು.

ಬಿಹಾರ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಅಮಿತ್ ಕುಮಾರ್ ಮತ್ತು ಅಧ್ಯಕ್ಷ ರಾಕೇಶ್ ತಿವಾರಿ ಅವರು ಬೆಂಬಲಿತರು ಪ್ರತ್ಯೇಕ ತಂಡ ಆಯ್ಕೆ ಮಾಡಿ ಕಳಿಸಿದ್ದು ಈ ಅವಾಂತರಕ್ಕೆ ಕಾರಣವಾಯಿತು.

ಮಾತುಕತೆ ನಂತರ ತಿವಾರಿ ಅವರ ಕಡೆಯಿಂದ ಆಯ್ಕೆಯಾದ ತಂಡಕ್ಕೆ ಆಡಲು ಅನುಮತಿ ನೀಡಲಾಯಿತು. ಅನುಭವಿ ಎಡಗೈ ಸ್ಪಿನ್ನರ್ ಆಶುತೋಷ್ ಅಮನ್ ತಂಡದ ನಾಯಕತ್ವ ವಹಿಸಿದ್ದಾರೆ. ಆದರೆ ಈ ಬೆಳವಣಿಗೆಯು ಕ್ರಿಕೆಟ್ ವಲಯದಲ್ಲಿ ಬಹಳಷ್ಟು ಟೀಕೆಗಳಿಗೆ ಕಾರಣವಾಯಿತು.

‘ಇಂತಹ ಪ್ರಕರಣಗಳಿಂದಾಗಿ ರಾಜ್ಯದ ಕ್ರಿಕೆಟ್ ಹದಗೆಟ್ಟು ಹೋಗುತ್ತಿದೆ. ಪ್ರತಿಭಾವಂತ ಆಟಗಾರರು ಬೇರೆಡೆ ವಲಸೆ ಹೋಗುತ್ತಿದ್ದಾರೆ’ ಎಂದು ಬಿಸಿಎ ಮಾಜಿ ಅಧ್ಯಕ್ಷ ಆದಿತ್ಯ ವರ್ಮಾ ಟೀಕಿಸಿದ್ದಾರೆ. ವರ್ಮಾ ಅವರು 2013ರ ಐಪಿಎಲ್ ಸ್ಪಾಟ್ ಫಿಕ್ಸಿಂಗ್ ಪ್ರಕರಣದ ತನಿಖೆಗೆ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು.

‘ಈ ಸಂಸ್ಥೆಗೆ ಪದಾಧಿಕಾರಿಗಳಾಗಲು ಬರುವವರಿಗೆ ಕ್ರಿಕೆಟ್ ಬಗ್ಗೆ ಯಾವುದೇ ಪ್ರೀತಿ ಇಲ್ಲ. ಅವರಿಗೆ ರಾಜಕಾರಣವೇ ಮುಖ್ಯ. ಅಲ್ಲದೇ ದುಡ್ಡು ಬಾಚಿಕೊಳ್ಳುವುದರ ಮೇಲೆ ಕಣ್ಣು. ತಿವಾರಿ ಅವರ ಅಧ್ಯಕ್ಷತೆಯಲ್ಲಿ ಆಡಳಿತ ಸಂಪೂರ್ಣ ನೆಲಕಚ್ಚಿದೆ. ನಾವು ಕಾನೂನು ಹೋರಾಟ ಮಾಡಲು ನಿರ್ಧರಿಸಿದ್ದೇವೆ. ಬಿಹಾರ ಕ್ರಿಕೆಟ್ ಸಂಸ್ಥೆಯ ಎಲ್ಲ ಅವ್ಯವಸ್ಥೆಗಳನ್ನು ಕಿತ್ತು ಹಾಕುವುದು ನಮ್ಮ ಗುರಿ’ ಎಂದು ಹೆಸರು ಗೌಪ್ಯವಾಗಿಡುವ ಶರತ್ತಿನ ಮೇರೆಗೆ ಹಿರಿಯ ಕೋಚ್ ಒಬ್ಬರು ಹೇಳಿಕೆ ನೀಡಿದ್ದಾರೆ.

ಬಿಹಾರ ಮೂಲದ ಇಶಾನ್ ಕಿಶನ್ ಅವರು ಈ ಹಿಂದೆ ಜಾರ್ಖಂಡ್ ಮತ್ತು ಬೌಲರ್ ಮುಕೇಶ್ ಕುಮಾರ್ ಬಂಗಾಳ ತಂಡಕ್ಕೆ ವಲಸೆ ಹೋಗಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 76.2 ಓವರ್‌ಗಳಲ್ಲಿ 251 (ಭೂಪೇನ್ ಲಾಲ್‌ವಾನಿ 65, ಸುವೇದ್ ಪಾರ್ಕರ್ 50, ಶಿವಂ ದುಬೆ 41, ತನುಷ್ ಕೋಟ್ಯಾನ್ 50, ವಿ. ಪ್ರತಾಪ್ ಸಿಂಗ್ 45ಕ್ಕೆ5, ಶಕೀಬುಲ್ ಗಣಿ 60ಕ್ಕೆ2, ಹಿಮಾಂಶು ಸಿಂಗ್ 21ಕ್ಕೆ2) ಬಿಹಾರ: 37 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 89 (ಆಕಾಶ್ ರಾಜ್ ಬ್ಯಾಟಿಂಗ್ 26, ಶಕೀಬುಲ್ ಗಣಿ 22, ಮೋಹಿತ್ ಅವಸ್ತಿ 22ಕ್ಕೆ4, ಶಿವಂ ದುಬೆ 13ಕ್ಕೆ2)

ಸರಣಿ ಕೈವಶದತ್ತ ಹರ್ಮನ್‌ಪ್ರೀತ್ ಪಡೆ ಚಿತ್ತ

ನವೀ ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯನ್ನು ಕೈವಶ ಮಾಡಿಕೊಳ್ಳುವ ವಿಶ್ವಾಸದಲ್ಲಿದೆ.

ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದಿದ್ದ ಸರಣಿಯ ಮೊದಲ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿದರುವ ಆತಿಥೇಯ ತಂಡವು ಈಗ ಭರ್ತಿ ಆತ್ಮವಿಶ್ವಾಸದಲ್ಲಿದೆ. ಆದ್ದರಿಂದ ಭಾನುವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಗೆಲ್ಲುವ ಛಲದಲ್ಲಿದೆ.ಆದ್ದರಿಂದ ಭಾನುವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಗೆಲ್ಲುವ ಛಲದಲ್ಲಿದೆ.

ಏಕದಿನ ಸರಣಿಯಲ್ಲಿ ಸೋತಿದ್ದ ಮುಯ್ಯಿ ತೀರಿಸಿಕೊಳ್ಳಲು ಹರ್ಮನ್ ಬಳಗ ತುದಿಗಾಲಿನಲ್ಲಿ ನಿಂತಿದೆ. ಮೊದಲ ಟಿ20 ಪಂದ್ಯದಲ್ಲಿ ಯುವ ಆಟಗಾರ್ತಿ ತಿತಾಸ್ ಸಾಧು ಅವರ ಅಮೋಘ ಬೌಲಿಂಗ್‌ನಿಂದಾಗಿ ಭಾರತಕ್ಕೆ ಜಯ ಒಲಿದಿತ್ತು. ಶ್ರೇಯಾಂಕಾ ಪಾಟೀಲ, ದೀಪ್ತಿ ಶರ್ಮಾ ಹಾಗೂ ಪೂಜಾ ವಸ್ತ್ರಾಕರ್ ಅವರೂ ಪರಿಣಾಮಕಾರಿ ಬೌಲಿಂಗ್ ಮಾಡಿದ್ದರು. ಆ ಪಂದ್ಯದಲ್ಲಿ ಬ್ಯಾಟರ್‌ಗಳಾದ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ಅರ್ಧಶತಕ ಗಳಿಸಿದ್ದರು. ಅದೇ ಲಯವನ್ನು ಮುಂದುವರಿಸಿದರೆ ಆಸ್ಟ್ರೇಲಿಯಾ ಎದುರು ಜಯಿಸುವುದು ಸರಳವಾಗಲಿದೆ. ಆದರೆ 6 ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಿರುಗೇಟು ನೀಡಲು ಕಾದಿದೆ. ಅಲಿಸಾ ಹೀಲಿ ನಾಯಕತ್ವದ ತಂಡದಲ್ಲಿ ಅನುಭವಿ ಆಟಗಾರ್ತಿಯರು ಇದ್ದಾರೆ. ಅವರು ಕೂಡ ಕಠಿಣ ಪೈಪೋಟಿಯೊಡ್ಡುವ ಛಲದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7ರಿಂದ, ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಹಾಕಿ: ಕರ್ನಾಟಕ ನಿರ್ಗಮನ

ಸೋಮವಾರಪೇಟೆ (ಕೊಡಗು ಜಿಲ್ಲೆ): ಕರ್ನಾಟಕ ತಂಡ, ಇಲ್ಲಿ ನಡೆಯುತ್ತಿರುವ 17 ವರ್ಷದೊಳಗಿನವರ ರಾಷ್ಟ್ರ ಮಟ್ಟದ 67ನೇ ಬಾಲಕಿಯರ (ಶಾಲೆಗಳ) ಹಾಕಿ ಟೂರ್ನಿಯಲ್ಲಿ ಶನಿವಾರ ಕ್ವಾರ್ಟರ್ ಫೈನಲ್‌ನಲ್ಲಿ ನಿರ್ಗಮಿಸಿತು.

ಚಂಡೀಗಢ ತಂಡ 8–2 ಗೋಲುಗಳಿಂದ ಕರ್ನಾಟಕ ಮೇಲೆ ಸುಲಭ ಜಯಗಳಿಸಿತು.

ಇನ್ನುಳಿದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಜಾರ್ಖಂಡ್ ತಂಡವು 8–1 ಗೋಲುಗಳಿಂದ ಒಡಿಶಾ ತಂಡವನ್ನು, ಮಧ್ಯಪ್ರದೇಶ ತಂಡವು 2–0 ಗೋಲುಗಳಿಂದ ಪಂಜಾಬ್ ತಂಡವನ್ನು ಹಾಗೂ ಮಣಿಪುರ ತಂಡ 5–0 ಗೋಲುಗಳಿಂದ ಕೇರಳವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದವು.

ಭಾನುವಾರ ಜಾರ್ಖಂಡ್ ಮತ್ತು ಮಧ್ಯಪ್ರದೇಶ, ಮಣಿಪುರ ಮತ್ತು ಚಂಡೀಗಢ ತಂಡಗಳ ನಡುವೆ ಸೆಮಿಫೈನಲ್ ಪಂದ್ಯಗಳು ನಡೆಯಲಿವೆ.

ದೇಶ್ವಾಲ್ ಅಮೋಘ ರೈಡಿಂಗ್: ಪಿಂಕ್ ಪ್ಯಾಂಥರ್ಸ್‌ಗೆ ಗೆಲುವು

ಮುಂಬೈ: ಅರ್ಜುನ್ ದೇಶ್ವಾಲ್ ಅವರ ಅಮೋಘ ರೈಡಿಂಗ್ (17 ಪಾಯಿಂಟ್ಸ್) ನೆರವಿನಿಂದ ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಶನಿವಾರ 41–31 ಪಾಯಿಂಟ್‌ಗಳಿಂದ ಯು ಮುಂಬಾ ತಂಡಕ್ಕೆ ತವರಿನಲ್ಲಿ ಸೋಲುಣಿಸಿತು.

ಯು ಮುಂಬಾ ಪರ ಗುಮನ್ ಸಿಂಗ್ 13 ಪಾಯಿಂಟ್ಸ್ ಗಳಿಸಿದರು. ಆದರೆ ಮುಂಬೈ ರಕ್ಷಣಾ ವಿಭಾಗ ದುರ್ಬಲವಾಗಿದ್ದರಿಂದ ದೇಶ್ವಾಲ್, ಅಜಿತ್ (6) ಸಾಕಷ್ಟು ಪಾಯಿಂಟ್ಸ್ ಹೆಕ್ಕಿದರು.

ಪಿಂಕ್ ಪ್ಯಾಂಥರ್ಸ್ ಮೂರನೇ ಸ್ಥಾನದಲ್ಲಿದೆ.

ಪ್ರಬಲ ಗುಜರಾತ್ ಜೈಂಟ್ಸ್ ಇನ್ನೊಂದು ಪಂದ್ಯದಲ್ಲಿ, ತಳದಲ್ಲಿರುವ ತೆಲುಗು ಟೈಟನ್ಸ್ ಮೇಲೆ 37–30 ಪಾಯಿಂಟ್ಸ್ ಅಂತರದ ಜಯ ಗಳಿಸಿತು. ಜೈಂಟ್ಸ್ ಪರ ರಾಕೇಶ್ (10) ರೈಡಿಂಗ್‌ನಲ್ಲಿ ಮಿಂಚಿದರೆ, ರಕ್ಷಣಾ ವಿಭಾಗದಲ್ಲಿ ರೈಟ್ ಕವರ್ ಆಟಗಾರ ದೀಪಕ್ 9 ಪಾಯಿಂಟ್ಸ್ ಗಳಿಸಿದರು. ಜೈಂಟ್ಸ್ ಈಗ 39 ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನದಲ್ಲಿದೆ.

ಟೈಟನ್ಸ್ ಪರ ಪವನ್ ಶೆರಾವತ್ 8 ಪಾಯಿಂಟ್ಸ್ ಗಳಿಸಲಷ್ಟೇ ಶಕ್ತರಾದರು. ಈ ತಂಡಕ್ಕೆ 10 ಪಂದ್ಯಗಳಲ್ಲಿ ಇದು ಒಂಬತ್ತನೇ ಸೋಲು.

ಸಂಕ್ಷಿಪ್ತ ಸುದ್ದಿ

ಸಂಸ್ಕೃತ ಪಂಡಿತರಿಗೆ ಕ್ರಿಕೆಟ್

ಭೋಪಾಲ್ (ಪಿಟಿಐ): ಸಂಸ್ಕೃತ ಉತ್ತೇಜಿಸುವ ಉದ್ದೇಶದಿಂದ ವಾರ್ಷಿಕ ಪಂದ್ಯಾವಳಿಯ ಭಾಗವಾಗಿ ವಿಶಿಷ್ಟವಾದ ಸಾಂಪ್ರದಾಯಿಕ ಉಡುಗೆ ಧರಿಸಿದ ಮತ್ತು ಹಣೆಯ ಮೇಲೆ ನಾಮಧಾರಣೆ ಮಾಡಿದ ವೈದಿಕ ಪಂಡಿತರು ಭೋಪಾಲ್ ಕ್ರಿಕೆಟ್ ಪಿಚ್‌ನಲ್ಲಿ ಮುಖಾಮುಖಿ ಆಗುತ್ತಿದ್ದಾರೆ.

ಪಾಶ್ಚಿಮಾತ್ಯರಿಗೆ ಅತೀಂದ್ರಿಯ ಧ್ಯಾನದ ಅಭ್ಯಾಸ ಪರಿಚಯಿಸಿದ ಮಹರ್ಷಿ ಮಹೇಶ್ ಯೋಗಿ ಅವರ ಜನ್ಮದಿನದ ಅಂಗವಾಗಿ ಆಯೋಜಿಸಲಾಗಿರುವ ಈ ಕಾರ್ಯಕ್ರಮದ ವಿಜೇತರು ಜನವರಿ 22 ರಂದು ರಾಮ ದೇವಾಲಯದ ಪ್ರತಿಷ್ಠಾಪನೆ ನಡೆಯಲಿರುವ ಅಯೋಧ್ಯೆಗೆ ಭೇಟಿ ನೀಡುವ ಅವಕಾಶ ದೊರೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ರಾಜಧಾನಿಯ ಅಂಕುರ್ ಮೈದಾನದಲ್ಲಿ ಶುಕ್ರವಾರ ನಾಲ್ಕು ದಿನಗಳ ಪಂದ್ಯಾವಳಿ ಪ್ರಾರಂಭವಾಗಿದ್ದು, ಆಟಗಾರರು ಮತ್ತು ಅಂಪೈರ್‌ಗಳು ನಿರರ್ಗಳವಾಗಿ ಸಂಸ್ಕೃತದಲ್ಲಿ ಸಂವಹನ ನಡೆಸಿದರು.

ವೀಕ್ಷಕ ವಿವರಣೆಗಾರರು ಸಹ ಮೈದಾನದಲ್ಲಿ ಹಿಟ್ಸ್, ಮಿಸ್ ಮತ್ತು ಕ್ಯಾಚ್‌ಗಳನ್ನು ಪ್ರಾಚೀನ ಭಾಷೆಯಲ್ಲಿ ನಿರೂಪಿಸಿದ್ದಾರೆ.

ಮಹರ್ಷಿ ಮೈತ್ರಿ ಮ್ಯಾಚ್ ಕಮಿಟಿ ಸದಸ್ಯ ಅಂಕುರ್ ಪಾಂಡೆ ಪ್ರಕಾರ, ‘ವಿಜೇತ ತಂಡವನ್ನು ಜನವರಿ 22 ರ ಬಳಿಕ ಅಯೋಧ್ಯೆಗೆ ಕಳುಹಿಸಲಾಗುವುದು. ವಿಜೇತರಿಗೆ ₹21,000 ನಗದು, ರನ್ನರ್ ಅಪ್ ತಂಡಕ್ಕೆ ₹ 11,000 ನಗದು ಬಹುಮಾನ ನೀಡಲಾಗುವುದು. ಕ್ರಿಕೆಟ್ ಪಂದ್ಯಾವಳಿಯ ನಾಲ್ಕನೇ ಆವೃತ್ತಿಯಲ್ಲಿ ಭೋಪಾಲ್‌ನ ನಾಲ್ಕು ತಂಡ ಸೇರಿದಂತೆ ಒಂದು ಡಜನ್ ತಂಡಗಳು ಭಾಗವಹಿಸುತ್ತಿವೆ’ ಎಂದು ಹೇಳಿದರು. ವೈದಿಕ ಕುಟುಂಬದಲ್ಲಿ ಸಂಸ್ಕೃತ ಮತ್ತು ಕ್ರೀಡಾ ಮನೋಭಾವ ಉತ್ತೇಜಿಸುವ ಗುರಿ ಈ ಕಾರ್ಯಕ್ರಮ ಹೊಂದಿದೆ ಎಂದು ಮತ್ತೊಬ್ಬ ಸಂಘಟಕರು ತಿಳಿಸಿದ್ದಾರೆ.

ಡಬ್ಲ್ಯುಎಫ್‌ಐ ಮೇಲೆ ಐಒಎ ನಿಯಂತ್ರಣ ಸಾಧ್ಯವಿಲ್ಲ: ಸಿಂಗ್

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕುಸ್ತಿ ಸಂಸ್ಥೆ ನಿಯಮಗಳು ಹಾಗೂ ಐಒಸಿ ಸನದು ಪ್ರಕಾರ, ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಹೊಸದಾಗಿ ಆಯ್ಕೆಯಾದ ಭಾರತ ಕುಸ್ತಿ ಫೆಡರೇಷನ್ ಆಡಳಿತ ಮಂಡಳಿ ಮೇಲೆ ಯಾವುದೇ ನಿಯಂತ್ರಣ ಹೇರುವಂತಿಲ್ಲ ಎಂದು ಅಮಾನತುಗೊಂಡಿರುವ ಮಂಡಳಿಯ ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದ್ದಾರೆ. ಫೆಡರೇಷನ್ (ಡಬ್ಲ್ಯುಎಫ್‌ಐ) ಮೇಲಿನ ಅಮಾನತು ಆದೇಶವನ್ನು ತೆಗೆದುಹಾಕುವಂತೆಯೂ ವಿಶ್ವ ಕುಸ್ತಿ ಸಂಸ್ಥೆಗೆ (ಯುಡಬ್ಲ್ಯುಡಬ್ಲ್ಯು) ಮನವಿ ಮಾಡಿದ್ದಾರೆ.

ಡಬ್ಲ್ಯುಎಫ್‌ಐನ ದೈನಂದಿನ ಚಟುವಟಿಕೆಯನ್ನು ಅಡ್‌ಹಾಕ್ ಸಮಿತಿ ನಿರ್ವಹಿಸುತ್ತಿದೆ. ಕುಸ್ತಿಯಲ್ಲಿ ಐಒಎಯ ಯಾವುದೇ ಪ್ರಭಾವವನ್ನು ಕಾನೂನುಬಾಹಿರ ಎಂದು ಪರಿಗಣಿಸಬೇಕು. ಕಳೆದ ವರ್ಷ ಡಬ್ಲ್ಯುಎಫ್‌ಐ ಮೇಲೆ ವಿಧಿಸಿದ ತಾತ್ಕಾಲಿಕ ಅಮಾನತು ತೆಗೆದುಹಾಕಬೇಕು ಎಂದು ಯುಡಬ್ಲ್ಯುಡಬ್ಲ್ಯು ಅಧ್ಯಕ್ಷ ನೆನಾಡ್ ಲಾಲೋವಿಕ್ ಅವರಿಗೆ ಬರೆದ ಪತ್ರದಲ್ಲಿ ಸಿಂಗ್ ಹೇಳಿದ್ದಾರೆ.

‘ಯುಡಬ್ಲ್ಯುಡಬ್ಲ್ಯುನ ಅಂಗಸಂಸ್ಥೆ ಸದಸ್ಯರಾಗಿ ಮುಂದುವರಿಯುತ್ತೇವೆ ಎಂದು ನಾವು ಅರ್ಥಮಾಡಿಕೊಂಡಿದ್ದೇವೆ. ಆದಾಗ್ಯೂ, 2023 ಆಗಸ್ಟ್ 23ರ ವಿಶ್ವ ಕುಸ್ತಿ ಸಂಸ್ಥೆ ಪತ್ರದಲ್ಲಿ ಉಲ್ಲೇಖಿಸಿದಂತೆ ಡಬ್ಲ್ಯುಎಫ್‌ಐ ಚುನಾವಣೆ ನಡೆಸಿದ ನಂತರ ಅಮಾನತು ತೆಗೆದು ಹಾಕಬೇಕಿತ್ತು. ರಾಷ್ಟ್ರೀಯ ಕ್ರೀಡಾ ಫೆಡರೇಶನ್ (ಎನ್‌ಎಸ್‌ಎಫ್) ಮೇಲೆ ಐಒಎ ಯಾವುದೇ ಅಧಿಕಾರ ಚಲಾಯಿಸಲು ಸಾಧ್ಯವಿಲ್ಲ ಎಂದು 2023 ರ ಆಗಸ್ಟ್ 6 ರಂದು ಐಒಎ ವಿರುದ್ಧ ದೆಹಲಿ ಹೈಕೋರ್ಟ್ ನೀಡಿದ ತೀರ್ಪಿನ ಬಗ್ಗೆಯೂ ಗಮನ ಸೆಳೆಯಲು ಬಯಸುತ್ತೇವೆ’ ಎಂದು ವಿವರಿಸಿದ್ದಾರೆ.

ಭಾರತ ‘ಎ’ ತಂಡಕ್ಕೆ ವಿದ್ವತ್

ಮುಂಬೈ (ಪಿಟಿಐ): ಬಂಗಾಳ ತಂಡದ ಅನುಭವಿ ಆಟಗಾರ ಅಭಿಮನ್ಯು ಈಶ್ವರನ್ ಅವರು ಇಂಗ್ಲೆಂಡ್ ಲಯನ್ಸ್ ವಿರುದ್ಧ ಆಡಲಿರುವ ಭಾರತ ‘ಎ’ ತಂಡಕ್ಕೆ ಕ್ಯಾಪ್ಟನ್ ಆಗಿ ನೇಮಕಗೊಂಡಿದ್ದಾರೆ. 13 ಆಟಗಾರರ ತಂಡದಲ್ಲಿ ಕರ್ನಾಟಕದ ಮಧ್ಯಮ ವೇಗದ ಬೌಲರ್ ವಿದ್ವತ್ ಕಾವೇರಪ್ಪ ಸ್ಥಾನ ಪಡೆದಿದ್ದಾರೆ.



ತಂಡವು ಅಹಮದಾಬಾದಿನಲ್ಲಿ ಜನವರಿ 12 ಮತ್ತು 13ರಂದು ಎರಡು ಅಭ್ಯಾಸ ಪಂದ್ಯಗಳನ್ನು ಆಡಲಿದೆ. ನಂತರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಜನವರಿ 17 ರಿಂದ 20ರವರೆಗೆ ನಾಲ್ಕು ದಿನಗಳ ಪಂದ್ಯವನ್ನು ಆಡಲಿದೆ. ತಂಡದಲ್ಲಿ ಸಾಯಿ ಸುದರ್ಶನ್, ರಜತ್ ಪಾಟೀದಾರ್, ಕೆ.ಎಸ್.ಭರತ್, ನವದೀಪ್ ಸೈನಿ ಮೊದಲಾದ ಅನುಭವಿಗಳಿದ್ದಾರೆ. ‘ಎ’ ತಂಡದೊಡನೆ ದಕ್ಷಿಣ ಆಫ್ರಿಕಾ ಪ್ರವಾಸ ಹೋಗಿದ್ದ ಬ್ಯಾಟರ್ ಪ್ರದೋಶ್ ರಂಜನ್ ಪಾಲ್ ಮೇಲೆ ಭರವಸೆ ಇಡಲಾಗಿದೆ. ಅವರು ಅಲ್ಲಿ ನಡೆದ ‘ಟೆಸ್ಟ್’ ಪಂದ್ಯದಲ್ಲಿ 163 ರನ್ ಗಳಿಸಿದ್ದರು.

ಭಾರತ ‘ಎ’ ತಂಡ: ಅಭಿಮನ್ಯು ಈಶ್ವರನ್ (ನಾಯಕ), ಸಾಯಿ ಸುದರ್ಶನ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ಪ್ರದೋಶ್ ರಂಜನ್ ಪಾಲ್, ಕೆ.ಎಸ್.ಭರತ್ (ವಿಕೆಟ್ ಕೀಪರ್), ಮಾನವ್ ಸುತಾರ್, ಪುಲ್ಕಿತ್ ನಾರಂಗ್, ನವದೀಪ್ ಸೈನಿ, ತುಷಾರ್ ದೇಶಪಾಂಡೆ, ವಿದ್ವತ್ ಕಾವೇರಪ್ಪ, ಧ್ರುವ್ ಜುರೆಲ್ (ವಿಕೆಟ್ ಕೀಪರ್) ಮತ್ತು ಆಕಾಶ್ ದೀಪ್.

ಯೂಕಿ– ಹಾಸೆ ಜೋಡಿಗೆ ಸೋಲು

ಬ್ರಿಸ್ಬೇನ್ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ಅವರ ಡಚ್ ಜೊತೆಗಾರ ರಾಬಿನ್ ಹಾಸೆ ಅವರು ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಎಟಿಪಿ ಟೂರ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ ಸೋಲನುಭವಿಸಿದರು.

ಎರಡನೇ ಶ್ರೇಯಾಂಕ ಪಡೆದಿದ್ದ ಇಂಗ್ಲೆಂಡ್‌ನ ಲಾಯ್ಡ್ ಗ್ಲಾಸ್‌ಪೂಲ್– ನೆದರ್ಲೆಂಡ್ಸ್‌ನ ಜೀನ್ ಜೂಲಿಯನ್ ರೋಜರ್ ಜೋಡಿ 6–3, 6–7, 11–9 ರಿಂದ ಎಂಟನೇ ಶ್ರೇಯಾಂಕದ ಯೂಕಿ– ಹಾಸೆ ಜೋಡಿಯನ್ನು ನೂರು ನಿಮಿಷಗಳ ಹೋರಾಟದಲ್ಲಿ ಸೋಲಿಸಿತು. ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ– ನೆದರ್ಲೆಂಡ್ಸ್ ಆಟಗಾರರ ಜೋಡಿ 7–6 (5), 7–6 (7–6) ರಿಂದ ಅಮೆರಿಕದ ನಥಾನಿಯಲ್ ಲಮೋನ್ಸ್– ಜಾಕ್ಸನ್ ವಿತ್ರೊ ಜೋಡಿಯನ್ನು ಸೋಲಿಸಿತ್ತು.